ಮಂಗಳೂರು
ಸೋಮವಾರ, 8 ಜೂನ್ 2026
ಸಂಪುಟ 48, ಸಂಚಿಕೆ 81, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಂದು ದಿಲ್ಲಿಯಲ್ಲಿ ಇಂಡಿ ಕೂಟ ಸಭೆ | ೦೨
ಭಾರತಕ್ಕೆ ಪಾಶ್ಚಾತ್ಯ ಒತ್ತಡ ಫಲಿಸಲ್ಲ: ಪುಟಿನ್ | ೦೨
ನಮೋ ಆಡಳಿತ, ವಿಕಸಿತ ಭಾರತ | ೦೨

ಕನಕಪುರದಲ್ಲಿ ಸಿಎಂ ಡಿಕೆಶಿಗೆ ಅಭೂತಪೂರ್ವ ಸ್ವಾಗತ

ನಿಮ್ಮನೆ ಮಗ ನಾನು



ರಾಮನಗರ: ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಸ್ವಕ್ಷೇತ್ರ ಕನಕಪುರ ತಾಲ್ಲೂಕಿಗೆ ಭೇಟಿ ನೀಡಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿಮಾನಿಗಳಿಂದ ಅಭೂತಪೂರ್ವ ಸ್ವಾಗತ ದೊರೆಯಿತು. ಅಭಿಮಾನಿಗಳ ಹರ್ಷೋದ್ಗಾರದಲ್ಲಿ ಡಿ.ಕೆ. ಶಿವಕುಮಾರ್ ಮಿಂದೆದ್ದರು. ಡಿಕೆ, ಡಿಕೆ ಎನ್ನುವ ಘೋಷಣೆ ಮುಗಿಲು ಮುಟ್ಟುತ್ತಿದ್ದಂತೆ ಮುಖ್ಯಮಂತ್ರಿಯವರು ಭಾವುಕರಾದರು. ಕನಕಪುರ ರಸ್ತೆಯ ರೇಷ್ಮೆ ಸಂಸ್ಥೆ ಮೆಟ್ರೋ ನಿಲ್ದಾಣದಿಂದಲೇ ರಸ್ತೆಯ ಇಕ್ಕೆಲಗಳಲ್ಲಿ ಕಿಕ್ಕಿರಿದು ನಿಂತಿದ್ದ ಸಾರ್ವಜನಿಕರು ಡಿ.ಕೆ.ಶಿವಕುಮಾರ್ ಅವರಿಗೆ ಜೈಕಾರ ಹಾಕಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದರು. ದಾರಿಯುದ್ದಕ್ಕೂ ಶುಭಾಶಯ ಕೋರುವ ಬ್ಯಾನರ್‌ಗಳು, ಫ್ಲೆಕ್ಸ್‌ಗಳು ಕಾಂಗ್ರೆಸ್ ಪಕ್ಷದ ಬಾವುಟಗಳು ರಾರಾಜಿಸಿದವು.

ಕನಕಪುರಕ್ಕೆ ಸಿಎಂ ಡಿಕೆಶಿ ಮೊದಲ ಭೇಟಿ

ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ: ಈ ವೇಳೆ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಶಿವಕುಮಾರ್ ಅವರು, ನಿಮ್ಮ ಪ್ರೀತಿಗೆ ಆಭಾರಿ. ನಿಮ್ಮಿಂದ ನಾನು ವಿಧಾನಸೌಧದ ಮೂರನೇ ಮಹಡಿಯಲ್ಲಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ನಿಮಗೆಲ್ಲರಿಗೂ ಕೋಟಿ, ಕೋಟಿ ವಂದನೆಗಳು ಎಂದರು.

ಪುಟ ೪

ನನ್ನ ಶಕ್ತಿ ನೀವೇ

ನನ್ನ ಶಕ್ತಿ ನೀವೇ, ಬದುಕು ನೀವೇ, ಉಸಿರು ನೀವೇ. ಕಷ್ಟ ಕಾಲದಲ್ಲಿ ನೀವು ನನಗೆ ನೆರಳಾಗಿದ್ದೀರಿ. ನಿಮ್ಮ ಸೇವಕನಾಗಿ ಮುಂದುವರಿದು ಋಣ ತೀರಿಸುತ್ತೇನೆ ಎಂದರು. ನಾನು ಚುನಾವಣಾ ಪ್ರಚಾರಕ್ಕೆ ಬರದೇ ಇದ್ದರೂ 1.23 ಲಕ್ಷ ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿದ್ದೀರಿ ಎಂದು ಸ್ಮರಣೆ ಮಾಡಿದರು.

ಟ್ರಾಫಿಕ್ ಸಮಸ್ಯೆ ತಪ್ಪಿಸಲು ಸಿಎಂ ಮೆಟ್ರೋ ಪ್ರಯಾಣ

ಬೆಂಗಳೂರು: ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರದ ಜನರ ಭೇಟಿಗೆ ಹೊರಟ ಸಂದರ್ಭದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರು, ವಿಧಾನಸೌಧದಿಂದ ಬಳಿಯಿಂದ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣಿಸಿದರು. ಬೆಳಗ್ಗೆ ಡಾ. ಬಿ.ಆರ್.ಅಂಬೇಡ್ಕರ್ ಮೆಟ್ರೋ ನಿಲ್ದಾಣದಲ್ಲಿ ಕೆಲ ಹೊತ್ತು ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿದ ಸಿಎಂ ನಂತರ ಮೆಟ್ರೋ ಪ್ರಯಾಣಿಕರಿಗೆ ಹಸ್ತಲಾಘವ ಮಾಡಿದರು.

ಪುಟ ೪



ನನಗೆ ಜಾತಿ, ಧರ್ಮ ಭೇದವಿಲ್ಲ

2028ಕ್ಕೆ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಕ್ಷೇತ್ರದ ಜನ ಪ್ರಾರ್ಥನೆ ಮಾಡಬೇಕು. ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ. ನನಗೆ ಆ ಧರ್ಮ ಈ ಧರ್ಮ, ಆ ಜಾತಿ ಈ ಜಾತಿ ಎನ್ನುವ ಭೇದವಿಲ್ಲ ಎಂದರು. ಮನುಷ್ಯ ಹುಟ್ಟುವಾಗ ನಾಲ್ಕು ಋಣದಲ್ಲಿ ಹುಟ್ಟುತ್ತಾನೆ. ತಂದೆ ತಾಯಿ, ಗುರು, ದೇವರು ಹಾಗೂ ಸಮಾಜ. ನಾನು ನಿಮ್ಮ ಋಣದಲ್ಲಿದ್ದೇನೆ. ನಿಮ್ಮ ಋಣ ತೀರಿಸುವ ಕೆಲಸ ಮಾಡುತ್ತೇನೆ. ನಿಮ್ಮ ತಾಲ್ಲೂಕಿನ ಮಗ, ನಿಮ್ಮ ಸೇವಕ. ಈಗ 136 ಸ್ಥಾನಗಳನ್ನು ಗೆಲ್ಲಿಸಿ 2028 ಕ್ಕೆ ಪಕ್ಷವು ಮತ್ತೊಮ್ಮೆ ಅಧಿಕಾರಕ್ಕೆ ಏರುವಂತೆ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರು.

ಪುಟ ೪

ಮಾತುಕತೆಯೇ ಪರಿಹಾರ: ಶಿಶಿರ್

ನೇಪಾಳ-ಭಾರತ ಗಡಿ ಸಚಿವದ್ವಯರ ಚರ್ಚೆ

ಹೊಸದಿಲ್ಲಿ: ಭಾರತ ಮತ್ತು ನೇಪಾಳ ನಡುವಿನ ದೀರ್ಘಕಾಲದ ಗಡಿ ವಿವಾದಗಳನ್ನು ಈಗಿರುವ ದ್ವಿಪಕ್ಷೀಯ ವ್ಯವಸ್ಥೆಗಳ ಮೂಲಕವೇ ಬಗೆಹರಿಸಬಹುದು ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಹೇಳಿದ್ದಾರೆ. ಮುಕ್ತ ಮನಸ್ಸು, ತಾರ್ಕಿಕ ಚಿಂತನೆ ಹಾಗೂ ಪರಸ್ಪರ ಗೌರವದಿಂದ ಮಾತುಕತೆ ನಡೆಸಿದರೆ ಯಾವುದೇ ಸಮಸ್ಯೆಯೂ ದೊಡ್ಡದಾಗುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ನಡೆದ ವ್ಯಾಪಕ ಮಾತುಕತೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಖನಾಲ್, ಭಾರತವನ್ನು ಭೂರಾಜಕೀಯ ದೃಷ್ಟಿಕೋನದ ಅತಿಸೂಕ್ಷ್ಮ ಕಣ್ಣಿನಿಂದ ನೋಡದೆ, ನೇಪಾಳದ ಆರ್ಥಿಕ ಪರಿವರ್ತನೆಗೆ ಸಹಭಾಗಿಯಾಗುವ ನೆರೆ ರಾಷ್ಟ್ರವಾಗಿ ಕಾಣುತ್ತಿದ್ದೇವೆ ಎಂದು ಹೇಳಿದರು.

ಪುಟ ೪

- ಗಡಿ ವಿವಾದಕ್ಕೆ ಮೂರನೇ ಪಕ್ಷ ಬೇಡ: ನೇಪಾಳ ಸಚಿವ ಖನಾಲ್
- ಭೂತಕಾಲದ ಆತಂಕಗಳಲ್ಲ, ಭವಿಷ್ಯದ ಆಶಯಗಳತ್ತ ಗಮನ
- ಗಡಿ ವಿವಾದಕ್ಕೆ ದ್ವಿಪಕ್ಷೀಯ ಮಾರ್ಗವೇ ಪರಿಹಾರ

ನೇಪಾಳ ಸಂಬಂಧಕ್ಕೆ ಮತ್ತಷ್ಟು ಬಲ: ಜೈಶಂಕರ್

ಭಾರತ ಮತ್ತು ನೇಪಾಳದ ನಡುವಿನ ದೀರ್ಘಕಾಲದ ಸ್ನೇಹಪೂರ್ಣ ಸಂಬಂಧವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಅಪೂರ್ವ ಅವಕಾಶ ಈಗ ಲಭ್ಯವಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಹೊಸದಿಲ್ಲಿಯಲ್ಲಿ ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರೊಂದಿಗೆ ನಡೆದ ಮಾತುಕತೆಯಲ್ಲಿ ಜೈಶಂಕರ್ ಮಾತನಾಡಿದರು.

ಪುಟ ೪

ಒಂದೇ ನಾಗರಿಕ ಪರಂಪರೆಯ ಮಕ್ಕಳು

ನಾವು ಕೇವಲ ನಕ್ಷೆಯಲ್ಲಿನ ಗಡಿಗಳಿಂದ ಬೇರ್ಪಟ್ಟ ನೆರೆ ರಾಷ್ಟ್ರಗಳಲ್ಲ. ಒಂದೇ ನದಿಗಳು, ಒಂದೇ ಪರ್ವತಗಳು ಮತ್ತು ಒಂದೇ ನಾಗರಿಕ ಪರಂಪರೆಯ ಮಕ್ಕಳು ಎಂದು ಹೇಳುವ ಮೂಲಕ ಭಾರತ-ನೇಪಾಳ ಬಾಂಧವ್ಯದ ಐತಿಹಾಸಿಕ ಹಿನ್ನೆಲೆಯನ್ನು ಖನಾಲ್ ಅವರು ವಿವರಿಸಿದರು. ಭಾರತವನ್ನು ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಮತ್ತು ಆರ್ಥಿಕ ಶಕ್ತಿಯಾಗಿ ಬಣ್ಣಿಸಿದ ಖನಾಲ್, ಆಕಾಂಕ್ಷೆಗಳ ಭಾರತ ಮತ್ತು ಆಕಾಂಕ್ಷೆಗಳ ನೇಪಾಳ ಒಟ್ಟಾಗಿ ಭವಿಷ್ಯ ನಿರ್ಮಿಸಬೇಕು ಎಂದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಶತಭಿಷೆ

ದಿನದ ಮಾತು

ಬದುಕಿನಲ್ಲಿ ಯಶಸ್ಸನ್ನು ಪಡೆಯಬೇಕಾದರೆ ಸ್ವಲ್ಪವಾಗಿ ಮಾತಾಡಿ, ಕೆಲಸದಲ್ಲಿ ಹೆಚ್ಚಾಗಿ ತೊಡಗಿಕೊಳ್ಳಿ.

▲ ಶಿವಾನಂದ

ಮಮತಾ ದೀದಿ ಕೋಟೆ ಈಗ ಛಿದ್ರಛಿದ್ರ

ನೇರ ನೋಟ

ದು.ಗು. ಲಕ್ಷ್ಮಣ

ಪುಟ ೬

ಕಿರುಸುದ್ದಿ

ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳ

ಹೊಸದಿಲ್ಲಿ: ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರ 29 ರೂ. ಹೆಚ್ಚಿಸಿದ್ದು, ಜೂ.7ರಿಂದ ದಿಲ್ಲಿಯಲ್ಲಿ ಸಿಲಿಂಡರ್ ಬೆಲೆ 913 ರೂ.ಗಳಿಂದ 942 ರೂ.ಗೆ ಏರಿಕೆಯಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಜಾಗತಿಕ ಇಂಧನ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ದರ ಹೆಚ್ಚಳ ಮಾಡಲಾಗಿದೆ. ದರ ಏರಿಕೆ ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಭಾರತದಲ್ಲಿ ವಿಶ್ವದಲ್ಲೇ ಕಡಿಮೆ ದರದಲ್ಲಿ ಅನಿಲ ಪೂರೈಸಲಾಗುತ್ತಿದೆ ಎಂದು ತಿಳಿಸಿದೆ.

ಪುಟ ೨

ಆನ್‌ಲೈನ್ ಗೇಮಿಂಗ್ ಹುಚ್ಚಾಟ: ತಂದೆ, ಅಕ್ಕನ ಕೊಲೆಗೈದ ಬಾಲಕ!

ಕೊಪ್ಪಳ: ಗಂಗಾವತಿ ತಾಲೂಕಿನ ಹೊಸ ಅಯೋಧ್ಯ ಗ್ರಾಮದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ಸಹೋದರಿಗೆ ಚಾಕು ಇರಿದಿದ್ದು, ತಂದೆ ವೆಂಕಟನಾಯ್ಡು (45) ಹಾಗೂ ಅಕ್ಕ ಪ್ರಗತಿ (19) ಮೃತಪಟ್ಟಿದ್ದಾರೆ. ತಾಯಿ ಸೌಜನ್ಯ ಸ್ಥಿತಿ ಗಂಭೀರವಾಗಿದ್ದು, ಆ ಬಾಲಕ ಕೂಡ ಕೊನೆಯಲ್ಲಿ ತನ್ನ ಕುತ್ತಿಗೆಗೆ ಚಾಕುವಿನಿಂದ ಇರಿದು ಕೊಂಡಿದ್ದಾನೆ. ಇವರಿಬ್ಬರಿಗೂ ಬಳ್ಳಾರಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಪುಟ ೪

ಮೀನು, ಮಾಂಸ ಮಳಿಗೆ ವಾರಾಣಸಿಯಿಂದ ಆಚೆಗೆ

ಪುಟ ೦೨

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಲೀಂ ಕುಮಾರ್ ವಿಧಿವಶ

ಪುಟ ೦೨



ಅಂಡಮಾನ್ ಸಮುದ್ರದಲ್ಲಿ ಭಾರೀ ಪ್ರಮಾಣದ ನೈಸರ್ಗಿಕ ಅನಿಲ ಪತ್ತೆ

ಇಂಧನ ಭದ್ರತೆಗೆ ಹೊಸ ಭರವಸೆ

ಪುಟ ೦೨

ಸುದ್ದಿ ಸಮಗ್ರ

ಎಸ್‌ಐಆರ್: ರಾಜ್ಯಗಳಿಗೆ ಕೇಂದ್ರ ಚು. ಆಯೋಗ ಸೂಚನೆ

ವಿದೇಶಿಯರಿದ್ದರೆ ಮಾಹಿತಿ ನೀಡಿ

ಹೊಸದಿಲ್ಲಿ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಸಂದರ್ಭದಲ್ಲಿ ಕಂಡುಬರುವ ಶಂಕಿತ ವಿದೇಶಿ ಪ್ರಜೆಗಳ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಸ್ತಾಂತರಿಸುವಂತೆ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಕಚೇರಿಗೆ ನಿರ್ದೇಶನ ನೀಡಿದೆ. ಪೌರತ್ವ ಕಾಯ್ದೆ 1955ರ ಅನ್ವಯ ಈ ಕ್ರಮ ಕೈಗೊಳ್ಳಲು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.



ಕರ್ನಾಟಕ ಸೇರಿದಂತೆ ದೇಶದ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೇ 30ರಿಂದ ಹಂತ-ಹಂತವಾಗಿ 3ನೇ ಹಂತದ ವಿಶೇಷ ತೀವ್ರ ಪರಿಷ್ಕರಣೆ ಆರಂಭವಾಗಿದ್ದು, ಇದು ಒಟ್ಟು 36.73 ಕೋಟಿ ಮತದಾರರನ್ನು ಒಳಗೊಂಡಿದೆ. ಇದಕ್ಕಾಗಿ 3.94 ಲಕ್ಷಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು(ಬಿಎಲ್‌ಒ) ಮನೆ-ಮನೆಗೆ ಭೇಟಿ ನೀಡಲಿದ್ದಾರೆ. ರಾಜಕೀಯ ಪಕ್ಷಗಳು ನೇಮಿಸಿದ 3.42 ಲಕ್ಷ ಬೂತ್ ಮಟ್ಟದ ಏಜೆಂಟರು ಇವರಿಗೆ ಸಹಾಯ ಮಾಡಲಿದ್ದಾರೆ. ಲಭ್ಯವಾಗದ ಮತದಾರರ ಬಗ್ಗೆ ನೆರೆಹೊರೆಯವರಿಂದ ವಿಚಾರಣೆ ನಡೆಸಿ ವಲಸೆ ಹೋಗಿದ್ದಾರೆಯೇ ಅಥವಾ ಮೃತಪಟ್ಟಿದ್ದಾರೆಯೇ ಎಂಬುದನ್ನು ಬಿಎಲ್‌ಒಗಳು ಗುರುತಿಸಲಿದ್ದಾರೆ.

ಪುಟ ೪

ಪ್ರಮುಖಾಂಶಗಳು

- 16 ರಾಜ್ಯಗಳು, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ಹಂತ-3 ಜಾರಿ
- ಒಟ್ಟು 36.73 ಕೋಟಿ ಮತದಾರರ ಮನೆಮನೆಗೆ ಭೇಟಿ ನೀಡಿ ಪರಿಶೀಲನೆ
- 3.94 ಲಕ್ಷ ಬಿಎಲ್‌ಒಗಳು, 3.42 ಲಕ್ಷ ರಾಜಕೀಯ ಪಕ್ಷಗಳ ಏಜೆಂಟರು ಪ್ರಕ್ರಿಯೆಯಲ್ಲಿ ಭಾಗಿ
- ಕರ್ನಾಟಕ, ತೆಲಂಗಾಣ, ಪಂಜಾಬ್ ಹಾಗೂ ಜಾರ್ಖಂಡ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಪರಿಷ್ಕರಣೆ
- ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ, ಲಡಾಖ್‌ನಲ್ಲಿ ಹವಾಮಾನ ಪರಿಸ್ಥಿತಿ ಗಮನಿಸಿ ವೇಳಾಪಟ್ಟಿ ಪ್ರಕಟ

ರಾಜ್ಯದ ಹಲವೆಡೆ ಭಾರೀ ಮಳೆ

ಬೆಂಗಳೂರು: ಕರ್ನಾಟಕದ ಅರ್ಧಕ್ಕಿಂತ ಹೆಚ್ಚು ಭಾಗಕ್ಕೆ ಮುಂಗಾರು ಮಾರುತಗಳು ಆವರಿಸಿದ್ದು, ಮುಂದಿನ ಒಂದು ವಾರ ರಾಜ್ಯದ ವಿವಿಧೆಡೆ ಗುಡುಗು, ಮಿಂಚು ಮತ್ತು ಬಿರುಗಾಳಿಸಹಿತ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಮಳೆ ಅಬ್ಬರಕ್ಕೆ ಮರಗಳು ಉರುಳಿದ್ದು, ಸೇತುವೆಗಳು ಕುಸಿದಿವೆ.



ಪುಟ ೪

ಚಂದ್ರಗುಪ್ತ ಗುಪ್ತಚರ, ಪ್ರಣಬ್ ಮೊಹಾಂತಿಗೆ ಸಿಐಡಿ ಜವಾಬ್ದಾರಿ

ಬೆಂಗಳೂರು: ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶಿಸಿದ್ದು, ಪ್ರಣಬ್ ಮೊಹಾಂತಿ ಅವರನ್ನು ಸಿಐಡಿಗೆ ನೂತನ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ. ಡಾ.ಚಂದ್ರಗುಪ್ತ ಅವರನ್ನು ನೇರವಾಗಿ ಮುಖ್ಯಮಂತ್ರಿ ವ್ಯಾಪ್ತಿಗೆ ಬರುವ ಗುಪ್ತಚರ ಇಲಾಖೆಯ ಐಜಿಪಿಯನ್ನಾಗಿ ನೇಮಿಸಿ ಸರ್ಕಾರ ಆದೇಶಿಸಿದೆ.

ಈ ಹಿಂದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ, ಹುದ್ದೆ ನಿರೀಕ್ಷೆಯಲ್ಲಿದ್ದ ಹಿರಿಯ ಐಎಎಸ್ ಅಧಿಕಾರಿ ಅಂಜುಂ ಪರ್ವೇಜ್ ಅವರನ್ನು ಅರಣ್ಯ ಹಾಗೂ ಪರಿಸರ, ಜೀವಿಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಲಾಗಿದೆ.

- 6 ಐಎಎಸ್ ಅಧಿಕಾರಿಗಳ ವರ್ಗ

ಪುಟ ೪

81 ಅಡಿಗಿಳಿದ ಕೆಆರ್‌ಎಸ್ ಮಟ್ಟ

ಮಂಡ್ಯ: ಕೃಷ್ಣರಾಜಸಾಗರ ಜಲಾಶಯದ (ಕೆಆರ್‌ಎಸ್) ನೀರಿನ ಮಟ್ಟ 81 ಅಡಿಗೆ ಕುಸಿದಿದೆ. ಮೂರು ವರ್ಷಗಳ ಹಿಂದೆ ಜೂನ್ ತಿಂಗಳಲ್ಲಿ ಇದೇ ಪ್ರಮಾಣದ ನೀರಿನ ಮಟ್ಟ ದಾಖಲಾಗಿತ್ತು. ಮುಂಗಾರು ವಿಳಂಬವಾದರೆ ಜಲಾಶಯದ ನೀರಿನ ಮಟ್ಟ ಅಪಾಯದ ಮಟ್ಟ ತಲುಪುವ ಆತಂಕ ಎದುರಾಗಿದೆ. ಪ್ರಸ್ತುತ ಜಲಾಶಯದಲ್ಲಿ 81.35 ಅಡಿ ನೀರಿದ್ದು, ಅಣೆಕಟ್ಟೆಗೆ 474 ಕ್ಯುಸೆಕ್ ನೀರು ಹರಿದುಬರುತ್ತಿದೆ. ಜಲಾಶಯದಿಂದ ಹೊರಕ್ಕೆ ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದ್ದು, ಅಣೆಕಟ್ಟೆಯಲ್ಲಿ 11.394 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಪುಟ ೫

12 ವರ್ಷಗಳ ಮೋದಿ ಆಳ್ವಿಕೆ ಪಾರದರ್ಶಕ: ಸಚಿವ

ನಮೋ ಆಡಳಿತ ವಿಕಸಿತ ಭಾರತ

ಹೊಸದಿಲ್ಲಿ: ಪ್ರಧಾನಿ ಮೋದಿ ನೇತೃತ್ವದ 12 ವರ್ಷಗಳ ಆಡಳಿತವು ಭಾರತವನ್ನು ಅವಕಾಶ, ನಾವೀನ್ಯತೆ, ಆತ್ಮವಿಶ್ವಾಸದಿಂದ ಮುನ್ನಡೆ ಯುವ ಮಹತ್ವಾಕಾಂಕ್ಷೆಯ ರಾಷ್ಟ್ರವಾಗಿ ಪರಿವರ್ತಿಸಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಭಾನುವಾರ ಹೇಳಿದ್ದಾರೆ. ಆಡಳಿತಾತ್ಮಕ ಸುಧಾರಣೆಗಳು, ತಂತ್ರಜ್ಞಾನದ ಪ್ರಜಾಪ್ರಭುತ್ವೀಕರಣ ಮತ್ತು ನಾಗರಿಕ ಕೇಂದ್ರಿತ ನೀತಿಗಳು ಭಾರತೀಯರ ಭವಿಷ್ಯದ ದೃಷ್ಟಿಕೋನವನ್ನೇ ಬದಲಾಯಿಸಿವೆ ಎಂದು ಅವರು ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಗುರಿಯತ್ತ ದೇಶವು ಮುನ್ನಡೆಯುತ್ತಿದ್ದು, ಪ್ರಸ್ತುತ ಸುಮಾರು 9 ಬಿಲಿಯನ್ ಇರುವ ಭಾರತದ ಬಾಹ್ಯಾಕಾಶ ಆರ್ಥಿಕತೆಯು ಮುಂದಿನ 7-8 ವರ್ಷಗಳಲ್ಲಿ 45 ಬಿಲಿಯನ್‌ಗೆ ವಿಸ್ತರಿಸುವ ನಿರೀಕ್ಷೆಯಿದೆ ಎಂದರು.

ಬಾಹ್ಯಾಕಾಶ ಮತ್ತು ಸ್ಟಾರ್ಟ್‌ಅಪ್ ಕ್ಷೇತ್ರದಲ್ಲಿ ಕ್ರಾಂತಿ: ಪ್ರಧಾನಿ ನರೇಂದ್ರ ಮೋದಿ ಅವರು ಸತತವಾಗಿ 4,399 ದಿನಗಳ ಅಧಿಕಾರಾವಧಿ ಪೂರೈಸಿರುವುದನ್ನು ಉಲ್ಲೇಖಿಸಿದ ಡಾ. ಜಿತೇಂದ್ರ ಸಿಂಗ್, ಕಳೆದ ದಶಕದಲ್ಲಿ ಕಂಡುಬಂದ ಗಮನಾರ್ಹ ಸಾಧನೆಗಳನ್ನು ಪಟ್ಟಿ ಮಾಡಿದರು. ಕೆಲವು ವರ್ಷಗಳ ಹಿಂದೆ ಒಂಟಿ ಅಂಕಿಯಲ್ಲಿದ್ದ ದೇಶದ ಬಾಹ್ಯಾಕಾಶ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಇಂದು ಸುಮಾರು 400ಕ್ಕೆ ತಲುಪಿದೆ ಮತ್ತು ಇತ್ತೀಚೆಗೆ ಒಂದು ಸ್ಟಾರ್ಟ್‌ಅಪ್ ಯೂನಿಕಾರ್ನ್ ಸ್ಥಾನಮಾನವನ್ನು ಪಡೆದುಕೊಂಡಿದೆ ಎಂದು ಹೇಳಿದರು.

2014ರಲ್ಲಿ ಕೇವಲ 350-400 ರಷ್ಟಿದ್ದ ದೇಶದ ಒಟ್ಟಾರೆ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಇಂದು 2.3 ಲಕ್ಷ ದಾಟಿದ್ದು, ಸುಮಾರು 24-25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ. ವಿಶೇಷವೆಂದರೆ, ಇವುಗಳಲ್ಲಿ ಅರ್ಧದಷ್ಟು ಸ್ಟಾರ್ಟ್‌ಅಪ್‌ಗಳು ದ್ವಿತೀಯ ಮತ್ತು ತೃತೀಯ ದರ್ಜೆಯ ನಗರಗಳಲ್ಲಿದ್ದರೆ, ಶೇ.35 ರಿಂದ 39ರಷ್ಟು ಸ್ಟಾರ್ಟ್‌ಅಪ್‌ಗಳನ್ನು ಮಹಿಳೆಯರೇ ಮುನ್ನಡೆಸುತ್ತಿದ್ದಾರೆ.

ನಾಗರಿಕ ಕೇಂದ್ರಿತ ಸುಧಾರಣೆ: ಸರ್ಕಾರದ ಆರಂಭಿಕ ಸುಧಾರಣೆಗಳು ನಾಗರಿಕ ಕೇಂದ್ರಿತ ಆಡಳಿತ ಮಾದರಿಗೆ ಸಾಕ್ಷಿಯಾಗಿವೆ ಎಂದು ಸಚಿವರು ಹೇಳಿದರು. ಗೆಜೆಟೆಡ್ ಅಧಿಕಾರಿಗಳಿಂದ ದಾಖಲೆಗಳ ದೃಢೀಕರಣದ ಅಗತ್ಯವನ್ನು ಕೊನೆಗೊಳಿಸಿ, ಸ್ವಯಂ ದೃಢೀಕರಣಕ್ಕೆ ಅವಕಾಶ ನೀಡಿದ್ದು ನಾಗರಿಕರ ಮೇಲಿನ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ, ಸರ್ಕಾರಿ ನೇಮಕಾತಿ ಗಳಲ್ಲಿ ಸಂದರ್ಶನ ಪ್ರಕ್ರಿಯೆಯನ್ನು ರದ್ದುಗೊಳಿಸುವ ಮೂಲಕ ಸ್ವಜನಪಕ್ಷಪಾತ, ಭ್ರಷ್ಟಾಚಾರಕ್ಕೆ ಬ್ರೇಕ್ ಹಾಕಲಾಗಿದ್ದು, ಪ್ರತಿಭೆಗೆ ಆದ್ಯತೆ ನೀಡಲಾಗಿದೆ ಎಂದರು.

ನನ್ನಿಂದಲೂ ಸಾಧ್ಯ ಎಂಬ ಸಕಾರಾತ್ಮಕ ಮನಸ್ಥಿತಿ: ಕಳೆದ 12 ವರ್ಷಗಳಲ್ಲಿ ಭಾರತೀಯರಲ್ಲಿ ಉಂಟಾಗಿರುವ ಮಾನಸಿಕ ಬದಲಾವಣೆಯು ಮೋದಿ ಸರ್ಕಾರದ ದೊಡ್ಡ ಹೆಗ್ಗುರುತಾಗಿದೆ. ಇಂದು ಸಣ್ಣ ನಗರಗಳು ಮತ್ತು ಗ್ರಾಮೀಣ ಭಾಗದ ಯುವಕರು ನಾಗರಿಕ ಸೇವಾ ಪರೀಕ್ಷೆಗಳಲ್ಲಿ (ಯುಪಿಎಸ್‌ಸಿ) ಟಾಪರ್‌ಗಳಾಗಿ ಹೊರಹೊಮ್ಮುತ್ತಿದ್ದಾರೆ. ಇದು ತಂತ್ರಜ್ಞಾನ, ಪಾರದರ್ಶಕತೆಯಿಂದಾಗಿ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತಿರುವುದಕ್ಕೆ ಸಾಕ್ಷಿ ಎಂದು ಸಚಿವರು ಅಭಿಪ್ರಾಯಪಟ್ಟರು. ಚಂದ್ರಯಾನ ಯಶಸ್ಸನ್ನು ಉಲ್ಲೇಖಿಸಿದ ಅವರು, ವೈಜ್ಞಾನಿಕ ಹಿನ್ನಡೆಗಳ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ವಿಜ್ಞಾನಿಗಳನ್ನು ಪ್ರೋತ್ಸಾಹಿಸಿದ ರೀತಿ ಮತ್ತು ಯಶಸ್ಸನ್ನು ಸಂಭ್ರಮಿಸಿದ ರೀತಿ, ದೇಶದಲ್ಲಿ ವೈಜ್ಞಾನಿಕ ಆವಿಷ್ಕಾರಗಳನ್ನು ಸಾಮೂಹಿಕ ರಾಷ್ಟ್ರೀಯ ಪ್ರಯತ್ನವನ್ನಾಗಿ ನೋಡುವಂತೆ ಮಾಡಿದೆ ಎಂದರು.

ಖಾಸಗಿ ಭಾಗಿತ್ವ ಮತ್ತು ಸಮಾನ ಅಭಿವೃದ್ಧಿ



ಬಾಹ್ಯಾಕಾಶ ಮತ್ತು ಪರಮಾಣು ಶಕ್ತಿಯಂತಹ ಆಯಕಟ್ಟಿನ ವಲಯಗಳನ್ನು ಖಾಸಗಿ ಸಹಭಾಗಿತ್ವಕ್ಕೆ ಮುಕ್ತಗೊಳಿಸುವ ಮೂಲಕ ಉದ್ಯಮಶೀಲತೆಗೆ ಹೊಸ ವೇದಿಕೆ ಕಲ್ಪಿಸಲಾಗಿದೆ. ಸರ್ಕಾರದ ಕಲ್ಯಾಣ ಯೋಜನೆಗಳು ಮತ್ತು ವಸತಿ ಯೋಜನೆಗಳು ಯಾವುದೇ ಜಾತಿ, ಧರ್ಮದ ತಾರತಮ್ಯವಿಲ್ಲದೆ ಪಾರದರ್ಶಕವಾಗಿ ಫಲಾನುಭವಿಗಳನ್ನು ತಲುಪುತ್ತಿದ್ದು, ಇದು ಸಾರ್ವಜನಿಕ ಆಡಳಿತದ ಮೇಲಿನ ನಂಬಿಕೆಯನ್ನು ಹೆಚ್ಚಿಸಿದೆ ಎಂದು ಜಿತೇಂದ್ರ ಸಿಂಗ್ ತಿಳಿಸಿದರು.

3 ದಿನದ ಭೇಟಿಗಾಗಿ ಬಿಹಾರಕ್ಕೆ ಭಾಗವತ್

ಪಾಟ್ನಾ: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರು ಭಾನುವಾರ ಬಿಹಾರಕ್ಕೆ 3 ದಿನಗಳ ಭೇಟಿಗಾಗಿ ಪಾಟ್ನಾಗೆ ಆಗಮಿಸಿದರು. ಬಿಹಾರದ ಸಿಎಂ ಸಮ್ರಾಟ್ ಚೌಧರಿ ಸ್ವಾಗತಿಸಿದರು.

ಭಾಗವತ್ ಅವರು ಜೂನ್ 9ರವರೆಗೆ ಮುಂಗರ್‌ನಲ್ಲಿ ತಂಗಲಿದ್ದು, ಸಂಘದ ವಿವಿಧ ಸಂಘಟನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಪುರಾನಿಗಂಜ್‌ನ ಸರಸ್ವತಿ ವಿದ್ಯಾಮಂದಿರದಲ್ಲಿ ನಡೆಯುತ್ತಿರುವ 'ಸಂಘ ಶಿಕ್ಷಣ ವರ್ಗ'ದಲ್ಲಿ ಅವರು ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡಲಿದ್ದಾರೆ.

ಸುಮಾರು 700 ಸ್ವಯಂಸೇವಕರು ತರಬೇತಿ ಶಿಬಿರಗಳಲ್ಲಿ ಭಾಗವಹಿಸುತ್ತಿದ್ದು, ಸಂಘಟನಾ ಸಾಮರ್ಥ್ಯ ವೃದ್ಧಿ, ನಾಯಕತ್ವ ಕೌಶಲ ಅಭಿವೃದ್ಧಿ ಮತ್ತು ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯ ಪಾತ್ರ ವಹಿಸುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಸಂಘದ ಮೂಲಗಳು ತಿಳಿಸಿವೆ.



ಅಂಡಮಾನ್ ಸಮುದ್ರದಲ್ಲಿ ಭಾರೀ ಪ್ರಮಾಣದ ನೈಸರ್ಗಿಕ ಅನಿಲ ಪತ್ತೆಯಾಗಿರುವುದು ಇಂಧನ ಸ್ವಾವಲಂಬನೆಗಾಗಿ ಭಾರತ ನಡೆಸುತ್ತಿರುವ ಪ್ರಯತ್ನಕ್ಕೆ ಹೊಸ ಭರವಸೆ ದೊರೆತಂತಾಗಿದೆ. ಸಾರ್ವಜನಿಕ ವಲಯದ ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್), ಅಂಡಮಾನ್ ದ್ವೀಪಗಳ ಪೂರ್ವ ಕರಾವಳಿಯಿಂದ ಸುಮಾರು 15 ಕಿಮೀ ದೂರದಲ್ಲಿರುವ ಶ್ರೀ ವಿಜಯಪುರಂ-3 ಪರಿಶೋಧನಾ ಬಾವಿಯಲ್ಲಿ ನೈಸರ್ಗಿಕ ಅನಿಲ ಇರುವುದನ್ನು ಖಚಿತಪಡಿಸಿದೆ. ಈ ಮೈಲಿಗಲ್ಲು, ಕಡಲಾಚೆಯ ಪರಿಶೋಧನಾ ಕಾರ್ಯಕ್ರಮಕ್ಕೆ ದೊರೆತ ದೊಡ್ಡ ಯಶಸ್ಸಾಗಿದ್ದು, ಈ ಪ್ರದೇಶ ಇಂಧನ ವಲಯದ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುವ ಸಾಧ್ಯತೆ ಹೆಚ್ಚಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಸುದ್ದಿ ಸಮಗ್ರ

ಇಂಧನ ಭದ್ರತೆಗೆ ಹೊಸ ಭರವಸೆ

ಸಮುದ್ರ ಮಂಥನ ಮಿಷನ್ ಎಂದೂ ಕರೆಯಲ್ಪಡುವ ರಾಷ್ಟ್ರೀಯ ಆಳ ಸಮುದ್ರ ಪರಿಶೋಧನಾ ಮಿಷನ್‌ನಲ್ಲಿ ಭಾರತ ತನ್ನ ಪ್ರಯತ್ನಗಳನ್ನು ತೀವ್ರಗೊಳಿಸುತ್ತಿರುವ ನಿರ್ಣಾಯಕ ಸಮಯದಲ್ಲಿ ಈ ಆವಿಷ್ಕಾರ ನಡೆದಿದೆ. ಪ್ರಸ್ತುತ ಭಾರತ ಇಂಧನಕ್ಕಾಗಿ ವಿದೇಶಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ತನ್ನ ಕಚ್ಚಾ ತೈಲ ಅಗತ್ಯತೆಯ ಶೇ.85ಕ್ಕಿಂತ ಹೆಚ್ಚು ಭಾಗವನ್ನು ಮತ್ತು ಗಣನೀಯ ಪ್ರಮಾಣದ ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಆಮದು ಮಾಡಿಕೊಳ್ಳುತ್ತಿದೆ. ಈ ಹೊಸ ಆವಿಷ್ಕಾರ ರಾತ್ರೋರಾತ್ರಿ ಪರಿಸ್ಥಿತಿಯನ್ನು ಬದಲಾಯಿಸದಿದ್ದರೂ, ಆಮದು ಅವಲಂಬನೆಯನ್ನು ಕಡಿಮೆ ಮಾಡುವಲ್ಲಿ ಇದು ಒಂದು ಮಾರ್ಗವನ್ನು ತೋರಿಸಿದೆ. ಅಂಡಮಾನ್ ಜಲಾನಯನ ಪ್ರದೇಶದಲ್ಲಿ ವಾಣಿಜ್ಯಿಕವಾಗಿ ಲಾಭದಾಯಕ ಅನಿಲ ಸಂಗ್ರಹಣೆ ದೃಢಪಟ್ಟರೆ, ಅದು ಜಾಗತಿಕ ಇಂಧನ ಮಾರುಕಟ್ಟೆಯ ಬೆಲೆ ಏರಿಳಿತಗಳಿಂದ ಭಾರತೀಯ ಆರ್ಥಿಕತೆಯನ್ನು ರಕ್ಷಿಸಲಿದೆ.



ಆವಿಷ್ಕಾರದ ಪ್ರಮಾಣ

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಈ ಆವಿಷ್ಕಾರವನ್ನು ಇಂಧನ ಅವಕಾಶಗಳ ಸಾಗರ ಎಂದು ಬಣ್ಣಿಸಿದ್ದಾರೆ. ಸಮುದ್ರದ 355 ಮೀಟರ್ ಆಳದಲ್ಲಿ ಮತ್ತು ತಳದಿಂದ 1,900 ಮೀಟರ್‌ಗಿಂತಲೂ ಹೆಚ್ಚಿನ ಆಳದಲ್ಲಿ ಪ್ರಾಥಮಿಕ ಪರೀಕ್ಷೆಗಳನ್ನು ನಡೆಸಿದಾಗ ಅನಿಲ ಇರುವುದು ಪತ್ತೆಯಾಗಿದೆ. ಪರೀಕ್ಷೆಯ ಸಂದರ್ಭದಲ್ಲಿ ನಿರಂತರ ಜ್ವಾಲೆ ಉರಿದಿರುವುದು ಅನಿಲದ ಸ್ಥಿರ ಉಪಸ್ಥಿತಿಯನ್ನು ದೃಢಪಡಿಸಿದೆ. ಪ್ರಸ್ತುತ ಪರಿಶೋಧನಾ ಅಭಿಯಾನದಲ್ಲಿ ಅಂಡಮಾನ್ ಪ್ರದೇಶದಲ್ಲಿ ಕೊರೆಯಲಾದ ಮೂರು ಬಾವಿಗಳಲ್ಲಿ ಎರಡರಲ್ಲಿ ಹೈಡ್ರೋಕಾರ್ಬನ್ ಪತ್ತೆಯಾಗಿರುವುದು, ಈ ವಲಯದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ಸಿಗುವ ಭರವಸೆ ಮೂಡಿಸಿದೆ.

- ಆವಿಷ್ಕಾರದ ಸ್ಥಳ ಶ್ರೀ ವಿಜಯಪುರಂ-3 ಬಾವಿ
- ಅಂಡಮಾನ್ ಕರಾವಳಿಯಿಂದ 15 ಕಿಮೀ ದೂರ
- 1,900 ಪ್ಲಸ್ ಮೀಟರ್ ಆಳದಲ್ಲಿ ಅನಿಲ ಪತ್ತೆ
- ಸಮುದ್ರ ಮಂಥನ ಪರಿಶೋಧನಾ ಮಿಷನ್‌ನ ಭಾಗ
- ಸಾಮರ್ಥ್ಯ 370 ಎಂಎಂಟಿ ತೈಲದ ಅಂದಾಜು

ಸಮುದ್ರ ಮಂಥನಕ್ಕೆ ಸಿಕ್ಕ ಉತ್ತೇಜನ

ಈ ಆವಿಷ್ಕಾರ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ ಸಮುದ್ರ ಮಂಥನ ಯೋಜನೆಗೆ ಸಿಕ್ಕ ಪ್ರಮುಖ ಯಶಸ್ಸು ಎನ್ನಲಾಗುತ್ತಿದೆ. ಈ ಯೋಜನೆ, ಭಾರತದ ವಿಶೇಷ ಆರ್ಥಿಕ ವಲಯಗಳಲ್ಲಿ ಬಳಕೆಯಾಗದ ಸಂಪನ್ಮೂಲಗಳನ್ನು ಮಿಷನ್ ಮೋಡ್‌ನಲ್ಲಿ ಅನ್ವೇಷಿಸುವ ಗುರಿ ಹೊಂದಿದೆ. ಸರ್ಕಾರ ಅಂತಾರಾಷ್ಟ್ರೀಯ ತಜ್ಞರೊಂದಿಗೆ ಸಹಕರಿಸುವುದನ್ನು ಮುಂದುವರಿಸುತ್ತಿರುವುದರಿಂದ, ಶ್ರೀ ವಿಜಯಪುರಂ-3ರಲ್ಲಿ ಸಿಕ್ಕ ಯಶಸ್ಸು ಭಾರತದ ಆಳ ಸಮುದ್ರದ ಗಡಿಗಳಲ್ಲಿ ಹೆಚ್ಚಿನ ಹೂಡಿಕೆಯನ್ನು ಆಕರ್ಷಿಸಲು ಅಗತ್ಯ ವೇಗವನ್ನು ನೀಡುವ ನಿರೀಕ್ಷೆಯಿದೆ. ಪೆಟ್ರೋಲಿಯಂ ಸಚಿವಾಲಯದ ಮೂಲಗಳ ಪ್ರಕಾರ, ಅಂಡಮಾನ್ ಜಲಾನಯನ ಪ್ರದೇಶದ ಭೂವೈಜ್ಞಾನಿಕ ರಚನೆ ಅತ್ಯಂತ ಸಂಕೀರ್ಣವಾಗಿದೆ. ಈ ಭಾಗದಲ್ಲಿ ವಾಣಿಜ್ಯ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಆಯಿಲ್ ಇಂಡಿಯಾ ಲಿಮಿಟೆಡ್ ಅತ್ಯಾಧುನಿಕ 3D ಭೂಕಂಪನ ಸಮೀಕ್ಷೆಗಳನ್ನು ನಡೆಸಲು ಯೋಜಿಸಿದೆ. ಏನೇ ಆದರೂ, ಈ ಆವಿಷ್ಕಾರ, ಭಾರತದ ಇಂಧನ ಸ್ವಾವಲಂಬನೆಯ ಆತ್ಮನಿರ್ಭರ ಭಾರತದ ಕನಸಿಗೆ ಮತ್ತಷ್ಟು ಬಲ ತುಂಬಲಿದೆ ಎಂದು ನಿರೀಕ್ಷಿಸಲಾಗಿದೆ.



ಗಯಾನಾ ದೇಶಕ್ಕೆ ಹೋಲಿಕೆ

ಅಂಡಮಾನ್ ಜಲಾನಯನ ಪ್ರದೇಶದ ಸಾಮರ್ಥ್ಯವನ್ನು ಆಗಾಗ್ಗೆ ಗಯಾನಾ ದೇಶಕ್ಕೆ ಹೋಲಿಸಲಾಗುತ್ತಿದೆ. ಅಲ್ಲಿ ಇತ್ತೀಚೆಗೆ ಪತ್ತೆಯಾದ ಬೃಹತ್ ಕಡಲಾಚೆಯ ನಿಕ್ಷೇಪಗಳು ಆ ಸಣ್ಣ ರಾಷ್ಟ್ರವನ್ನು ಜಾಗತಿಕ ಇಂಧನ ಶಕ್ತಿಯಾಗಿ ಪರಿವರ್ತಿಸಿವೆ. ಪ್ರಾಥಮಿಕ ಸಮೀಕ್ಷೆಗಳ ಪ್ರಕಾರ, ಅಂಡಮಾನ್ ಪ್ರದೇಶ, 307ರಿಂದ 370 ಮಿಲಿಯನ್ ಮೆಟ್ರಿಕ್ ಟನ್ ತೈಲ-ಸಮಾನ ಹೈಡ್ರೋಕಾರ್ಬನ್ ಅನ್ನು ಹೊಂದಿರಬಹುದು ಎಂದು ಅಂದಾಜಿಸಲಾಗಿದೆ. ಇವು ಕೇವಲ ಪ್ರಾಥಮಿಕ ನಿಕ್ಷೇಪಗಳಾಗಿದ್ದರೂ, ಸರ್ಕಾರ ಭರವಸೆ ಹೆಚ್ಚಿಸಿದೆ. ಅಂಡಮಾನ್ ಸಮುದ್ರದಲ್ಲಿ ಮತ್ತೊಂದು ದೊಡ್ಡ ಗಯಾನಾ ಮಾದರಿಯ ನಿಕ್ಷೇಪವನ್ನು ಕಂಡುಹಿಡಿಯುವುದು ಕೇವಲ ಸಮಯದ ವಿಷಯ ಎಂದು ಸಚಿವ ಪುರಿ ಈ ಹಿಂದೆ ಹೇಳಿದ್ದರು.

ಮುಂದಿರುವ ಸುದೀರ್ಘ ಹಾದಿ

ಪ್ರಸ್ತುತ ಆವಿಷ್ಕಾರ ಉತ್ಸಾಹ ಮೂಡಿಸಿದ್ದರೂ, ಪರಿಶೋಧನಾ ಹಂತದಿಂದ ವಾಣಿಜ್ಯ ಉತ್ಪಾದನೆಗೆ ತಲುಪುವುದು ಹಲವು ವರ್ಷಗಳ ಸುದೀರ್ಘ ಹಾದಿ. ಆಯಿಲ್ ಇಂಡಿಯಾ ಸಂಸ್ಥೆ ಪ್ರಸ್ತುತ ಅನಿಲದ ಗುಣಮಟ್ಟ ಮತ್ತು ಮೂಲವನ್ನು ನಿರ್ಣಯಿಸಲು ಅನಿಲ ಮಾದರಿ, ಐಸೊಟೋಪ್ ಅಧ್ಯಯನ ಮತ್ತು ಕ್ಯಾಲೋರಿಫಿಕ್ ಮೌಲ್ಯದ ಮೌಲ್ಯಮಾಪನಗಳನ್ನು ನಡೆಸುತ್ತಿದೆ. ಗ್ರಾಹಕರಿಗೆ ಅನಿಲವನ್ನು ತಲುಪಿಸುವ ಮೊದಲು ವ್ಯಾಪಕ ಮೂಲಸೌಕರ್ಯ ಅಭಿವೃದ್ಧಿ, ಹಲವು ಪರವಾನಗಿಗಳು ಮತ್ತು ಹೆಚ್ಚಿನ ಇನ್ನಷ್ಟು ಭೂಮಿಯನ್ನು ಕೊರೆದು ಮೌಲ್ಯಮಾಪನ ಮಾಡುವ ಅಗತ್ಯವಿದೆ. ಈ ಪ್ರಮಾಣದ ಕಡಲಾಚೆಯ ಯೋಜನೆಗಳಿಗೆ ಮುಕ್ತ ಸಮುದ್ರದ ತಾಂತ್ರಿಕ ಸವಾಲುಗಳನ್ನು ಎದುರಿಸಲು ಜಾಗತಿಕ ಆಳ ಸಮುದ್ರ ತಜ್ಞರೊಂದಿಗೆ ಸಹಭಾಗಿತ್ವದ ಅಗತ್ಯವಿರುತ್ತದೆ.



ಕಿರು ಸುದ್ದಿ

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟ ಸಲೀಂ ಕುಮಾರ್ ವಿಧಿವಶ

ಕೊಚ್ಚಿ: ರಾಷ್ಟ್ರ ಪ್ರಶಸ್ತಿ ವಿಜೇತ ಖ್ಯಾತ ಮಲಯಾಳಂ ನಟ ಸಲೀಂ ಕುಮಾರ್ ಅವರು ಶನಿವಾರ ರಾತ್ರಿ ನಿಧನರಾದರು. ಅವರಿಗೆ 56 ವರ್ಷ ವಯಸ್ಸಾಗಿತ್ತು.



ಆರೋಗ್ಯ ಸಮಸ್ಯೆಯಿಂದ ಅವರನ್ನು ಶನಿವಾರ ಅಮೃತಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ಸಲೀಂ ಅವರ ನಿಧನಕ್ಕೆ ಕೇರಳ ಸರ್ಕಾರ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಮಲಯಾಳಂ ಚಿತ್ರರಂಗಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆಯನ್ನು ಸರ್ಕಾರ ಸ್ಮರಿಸಿದೆ. 2010ರಲ್ಲಿ ಆದಾಮಿಂಟೆ ಮಗನ್ ಅಬು ಚಿತ್ರದ ಅಭಿನಯಕ್ಕಾಗಿ ಅವರು ಅತ್ಯುತ್ತಮ ನಟ ವಿಭಾಗದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದರು. 2005ರಲ್ಲಿ ಅಚನುರಂಗಾತ್ತ ವೀಡು ಚಿತ್ರಕ್ಕಾಗಿ ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿಯ ದ್ವಿತೀಯ ಅತ್ಯುತ್ತಮ ನಟ ಪ್ರಶಸ್ತಿಯೂ ಅವರಿಗೆ ಲಭಿಸಿತ್ತು. ಎರ್ನಾಕುಳಂ ಜಿಲ್ಲೆಯ ಉತ್ತರ ಪಾರವೂರಿನಲ್ಲಿ ಅವರ ಅಂತ್ಯಕ್ರಿಯೆಯನ್ನುಭಾನುವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಗಿದೆ.

ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಳ

ಹೊಸದಿಲ್ಲಿ: ಗೃಹಬಳಕೆಯ 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ದರವನ್ನು ಕೇಂದ್ರ ಸರ್ಕಾರ 29 ರೂ. ಹೆಚ್ಚಿಸಿದ್ದು, ಜೂ.7ರಿಂದ ದಿಲ್ಲಿಯಲ್ಲಿ ಸಿಲಿಂಡರ್ ಬೆಲೆ 913 ರೂ.ಗಳಿಂದ 942 ರೂ.ಗೆ ಏರಿಕೆಯಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಜಾಗತಿಕ ಇಂಧನ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ದರ ಹೆಚ್ಚಳ ಮಾಡಲಾಗಿದೆ. ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಭಾರತದಲ್ಲಿ ವಿಶ್ವದಲ್ಲೇ ಕಡಿಮೆ ದರದಲ್ಲಿ ಅನಿಲ ಪೂರೈಸಲಾಗುತ್ತಿದೆ ಎಂದು ತಿಳಿಸಿದೆ. ಉದ್ಯಮ ಮೂಲಗಳ ಪ್ರಕಾರ, ಎಲ್‌ಪಿಜಿ ಮಾರಾಟದಲ್ಲಿ ಪ್ರತಿ ಸಿಲಿಂಡರಿಗೆ 700 ರೂ. ನಷ್ಟ ಉಂಟಾಗುತ್ತಿರುವುದನ್ನು ನಷ್ಟವನ್ನು ಭಾಗಶಃ ಸರಿದೂಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೂ ಮುನ್ನ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿಯೂ ಹೆಚ್ಚಳವಾಗಿತ್ತು. ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಕೇಂದ್ರ ಸರ್ಕಾರ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ವೆಚ್ಚ 1,600 ರೂ. ಮೀರಿದ್ದರೂ ಭಾರತದಲ್ಲಿ ಗ್ರಾಹಕರು ಕಡಿಮೆ ದರದಲ್ಲಿ ಅನಿಲ ಪಡೆಯುತ್ತಿದ್ದಾರೆ ಎಂದು ತಿಳಿಸಿದೆ. ಭಾರತದಲ್ಲಿನ ಎಲ್‌ಪಿಜಿ ದರವು ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ ಸೇರಿದಂತೆ ಹಲವು ದೇಶಗಳಿಗಿಂತ ಕಡಿಮೆಯಿದೆ ಎಂದು ಸರ್ಕಾರ ಹೇಳಿದೆ.

ಮೀನು, ಮಾಂಸ ಮಳಿಗೆ ವಾರಾಣಸಿಯಿಂದ ಆಚೆಗೆ

ವಾರಾಣಸಿ: ವಾರಾಣಸಿ ಮಹಾನಗರ ಪಾಲಿಕೆ, ನಗರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಾಂಸ ಮತ್ತು ಮೀನು ಮಾರಾಟ ಮಳಿಗೆಗಳನ್ನು ನಗರದ ಹೊರವಲಯದ ನಿಗದಿತ ಸ್ಥಳಗಳಿಗೆ ಸ್ಥಳಾಂತರಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ವಾರಾಣಸಿ ಮಹಾಪೌರ ಅಶೋಕ್ ಕುಮಾರ್ ತಿವಾರಿ ಅಧ್ಯಕ್ಷತೆಯಲ್ಲಿ ನಡೆದ ಕೌನ್ಸಿಲ್ ಸಭೆಯಲ್ಲಿ ಈ ನಿರ್ಧಾರವನ್ನು ಅಂತಿಮಗೊಳಿಸಲಾಗಿದೆ. ಸ್ಥಳಾಂತರದ ಮಾರ್ಗಸೂಚಿ ಸಿದ್ಧವಾಗಿದ್ದು, ಮುಂಬರುವ ದಿನಗಳಲ್ಲಿ ಮೊದಲ ಹಂತದ ಅನುಷ್ಠಾನ ಪ್ರಕ್ರಿಯೆ ಆರಂಭವಾಗಲಿದೆ, ಎಂದು ಪಾಲಿಕೆ ಅಧಿಕಾರಿಗಳು ದೃಢಪಡಿಸಿದ್ದಾರೆ. ಯೋಜನೆಯ ಆರಂಭಿಕ ಹಂತಕ್ಕಾಗಿ ನಗರದ ಗಡಿಯ ಸಮೀಪವಿರುವ ಐದು ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಹಿಮಾಂಶು ನಾಗ್ಪಾಲ್ ಸಭೆಗೆ ಮಾಹಿತಿ ನೀಡಿದ್ದಾರೆ. ಈ ನಿಗದಿತ ವಲಯಗಳನ್ನು ರಾಮನಗರ, ಸುಜಾಬಾದ್, ಗಣೇಶ್‌ಪುರ, ಅವಲೇಶ್‌ಪುರ ಮತ್ತು ಶಿವಪುರದಲ್ಲಿ ಗುರುತಿಸಲಾಗಿದೆ, ಎಂದು ತಿಳಿದುಬಂದಿದೆ.

ನಗರ ನಿರ್ವಹಣೆ, ನೈರ್ಮಲ್ಯ, ಸಂಚಾರ ದಟ್ಟಣೆಯ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ದಟ್ಟಣೆಯ ಜನಸಂಖ್ಯೆ ಇರುವ ಪ್ರದೇಶಗಳಿಂದ ಹೊರಗೆ ಇಂತಹ ಮಳಿಗೆಗಳನ್ನು ವ್ಯವಸ್ಥಿತ ಕ್ಲಸ್ಟರ್‌ಗಳಿಗೆ ಸ್ಥಳಾಂತರಿಸುವುದರಿಂದ ಸ್ವಚ್ಛತೆ ಕಾಪಾಡಲು ಮತ್ತು ಪಾಲಿಕೆ ಸೇವೆಗಳನ್ನು ಸುಗಮಗೊಳಿಸಲು ಸಹಾಯವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಹೊಸ ಸ್ಥಳಗಳಲ್ಲಿನ ಮೂಲಸೌಕರ್ಯ ಮತ್ತು ಸಂತ್ರಸ್ತ ಮಾಲೀಕರಿಗೆ ಮಾಡಲಾಗುವ ವ್ಯವಸ್ಥೆಗಳ ಕುರಿತಾದ ಹೆಚ್ಚಿನ ವಿವರಗಳನ್ನು ಮುಂಬರುವ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿದುಬಂದಿದೆ.

ಬಂಗಾಳದಲ್ಲಿ ಬೃಹತ್ ರೈಲ್ವೆ ಮೂಲಸೌಕರ್ಯ

ಕೋಲ್ಕತಾ: ಪಶ್ಚಿಮ ಬಂಗಾಳದ ಸಾರಿಗೆ ಜಾಲವನ್ನು ಸಂಪೂರ್ಣವಾಗಿ ನವೀಕರಿಸಲು ಕೇಂದ್ರ ಸರ್ಕಾರ 61 ಪ್ರಮುಖ ರೈಲ್ವೆ ಯೋಜನೆಗಳಿಗೆ ಅನುಮೋದನೆ ನೀಡಿದೆ.



ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರೊಂದಿಗೆ ಸಭೆ ನಡೆಸಿದ ಬಳಿಕ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಈ ಅಭಿವೃದ್ಧಿ ಕಾರ್ಯಗಳನ್ನು ಪ್ರಕಟಿಸಿದರು. ರಾಜ್ಯದಾದ್ಯಂತ ವಿವಿಧ ರೈಲ್ವೇ ಯೋಜನೆಗಳಿಗಾಗಿ ಕೇಂದ್ರ ಸರ್ಕಾರ 1 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ.

ಲಖನೌ, ವಾರಾಣಸಿ ಮತ್ತು ಪಾಟ್ನಾ ಮೂಲಕ ಹೊಸದಿಲ್ಲಿ ಹಾಗೂ ಸಿಲಿಗುರಿ ನಡುವೆ ಬುಲೆಟ್ ರೈಲು ಸೇವೆ ಸಂಪರ್ಕ ಕಲ್ಪಿಸಲಿದ್ದು, ಪ್ರಯಾಣದ ಸಮಯವನ್ನು ಆರು ಗಂಟೆಗಳಿಗೆ ಕಡಿತಗೊಳಿಸಲಿದೆ. ಒಂದು ಪ್ರತ್ಯೇಕ ಪೂರ್ವ-ಪಶ್ಚಿಮ ಸರಕು ಸಾಗಣೆ ಕಾರಿಡಾರ್, ಬಂಗಾಳದ ದಂಕುನಿಯನ್ನು ಗುಜರಾತ್‌ನ ಸೂರತ್‌ಗೆ ಜೋಡಿಸಲಿದೆ.

ಈ ವಿಸ್ತರಣೆಯಲ್ಲಿ, 538 ಹೊಸ ಫ್ಲೈಓವರ್‌ಗಳು ಮತ್ತು ಅಂಡರ್‌ಪಾಸ್‌ಗಳು ಹಾಗೂ 102 ಅಮೃತ್ ಭಾರತ್ ನಿಲ್ದಾಣಗಳ ಅಭಿವೃದ್ಧಿ ಒಳಗೊಂಡಿದೆ. ಮುಂದಿನ ಐದು ವರ್ಷಗಳಲ್ಲಿ, ರಾಜ್ಯ 60 ಹೊಸ ರೈಲು ಸೇವೆಗಳನ್ನು ಮತ್ತು 60 ಹೊಸ ಕೋಲ್ಕತಾ ಮೆಟ್ರೋ ರ್‍ಯಾಕ್‌ಗಳನ್ನುಪಡೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಸಹಕಾರ ಹಿಂದಿನ ಯೋಜನಾ ವಿಳಂಬಗಳನ್ನು ಬಗೆಹರಿಸಲಿದೆ. ರೈಲ್ವೆ ಜಾಲದ ವಿಸ್ತರಣೆ ಮತ್ತು ಭೂಸ್ವಾಧೀನ ಪ್ರಕ್ರಿಯೆಗಳಿಗೆ ರೈಲ್ವೆ ಮಂಡಳಿಗೆ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಮೈತ್ರಿ ದ್ರೋಹವೆಸಗಿದ ಕಾಂಗ್ರೆಸ್‌ನದು 'ವ್ಯಭಿಚಾರ'

ಪುದುಕೊಟ್ಟೈ(ತಮಿಳುನಾಡು): ಪಕ್ಷಕ್ಕೆ ದ್ರೋಹ ಬಗೆದ ಕಾಂಗ್ರೆಸ್ ಜತೆ ಭವಿಷ್ಯದಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಿರುವ ಡಿಎಂಕೆ ಹಿರಿಯ ನಾಯಕ ಆರ್‌ಎಸ್ ಭಾರತಿ, ಮೈತ್ರಿಕೂಟಕ್ಕೆ ದ್ರೋಹವೆಸಗಿ ಅಧಿಕಾರಕ್ಕಾಗಿ ಇನ್ನೊಂದು ಪಕ್ಷದ ಜತೆ ಹೋಗುವ ಕಾಂಗ್ರೆಸ್ ನಡೆಯನ್ನು 'ವ್ಯಭಿಚಾರ'ಕ್ಕೆ ಹೋಲಿಸಿದರು. ದ್ರಾವಿಡ ಪ್ರಮುಖ ಪಕ್ಷವು ಇಂತಹ ಮಿತ್ರದ್ರೋಹವನ್ನೆಂದಿಗೂ ಕ್ಷಮಿಸುವುದಿಲ್ಲ ಎಂದು ಸಾರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಇರುವ ಮೈತ್ರಿಕೂಟದಲ್ಲಿ ನಾವು ಇಲ್ಲ. ನಾನು ಅದನ್ನು ಸ್ಪಷ್ಟಪಡಿಸುತ್ತಿದ್ದೀನೆ.'ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿ ಇಲ್ಲದೆ ಒಂದೇ ಒಂದು ಮೇಯರ್ ಸ್ಥಾನವನ್ನು ಗೆದ್ದು ತೋರಿಸಲಿ ಕಾಂಗ್ರೆಸ್ ಎಂದು ಸವಾಲೊಡ್ಡಿದರು.

ಡಿಎಂಕೆಯ ಕಾರ್ಯಕ್ಷಮತೆ ಮತ್ತು ಮೈತ್ರಿ ಡೈನಾಮಿಕ್ಸ್ ಬಗ್ಗೆ ಕಾಂಗ್ರೆಸ್ ನಾಯಕ ಮಾಣಿಕ್ಕಂ ಟ್ಯಾಗೋರ್ ಅವರ ಟೀಕಾತ್ಮಕ ಹೇಳಿಕೆಗಳ ಬಗ್ಗೆ ಕೇಳಿದಾಗ, ಟ್ಯಾಗೋರ್‌ಗೆ ಮೊದಲು ತಮ್ಮ ಸ್ವಂತ ಗೆಲುವಿನ ಬಗ್ಗೆ ಯೋಚಿಸಲಿ. ಕೆಲವು ಬೇರ್ಪಡುವಿಕೆಗಳು ಪರಸ್ಪರ ಒಪ್ಪಿಗೆಯಿಂದ ಸಂಭವಿಸಿದರೂ, ಈ ವಿಘಟನೆಯು ಪಾಲುದಾರ 'ರಹಸ್ಯ ಸಂಬಂಧ'ದಲ್ಲಿ ತೊಡಗಿರುವಂತೆಯೇ ಇದೆ ಎಂದು ಲೇವಡಿಗೈದರು. ಸ್ಥಾನಮಾನಗಳಿಗಾಗಿ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುವ ಜನರು ಹೆಚ್ಚು ಕಾಲ ಉಳಿಯುವುದಿಲ್ಲ. ಆರು ತಿಂಗಳಲ್ಲಿ ಸರ್ಕಾರ ಪತನವಾದರೆ, ಅವರೆಲ್ಲರೂ ಮತ್ತೆ ಓಡಿ ಬರುತ್ತಾರೆ ಎಂದ ಅವರು, ವಿಜಯ್ ಅವರ ಟಿವಿಕೆ ಪಕ್ಷದ ಇತ್ತೀಚಿನ ಚುನಾವಣಾ ಗೆಲುವು ಸಿದ್ಧಾಂತದ ಅನುಮೋದನೆಗಿಂತ 'ಜಾಕ್‌ಪಾಟ್ ಲಾಟರಿ ಟಿಕೆಟ್' ಎಂದು ಬಣ್ಣಿಸಿದರು.

ಇಂದು ದಿಲ್ಲಿಯಲ್ಲಿ ಇಂಡಿ ಕೂಟ ಸಭೆ

ಹೊಸದಿಲ್ಲಿ: ಪ್ರತಿಪಕ್ಷಗಳ ಇಂಡಿ ಮೈತ್ರಿಕೂಟದ 23 ರಾಜಕೀಯ ಪಕ್ಷಗಳ ನಾಯಕರು ಸೋಮವಾರ ಹೊಸದಿಲ್ಲಿಯಲ್ಲಿ ಸಭೆ ಸೇರಿ ಬಿಜೆಪಿ ವಿರುದ್ಧದ ಮುಂದಿನ ರಾಜಕೀಯ ತಂತ್ರದ ಕುರಿತು ಚರ್ಚಿಸಲಿದ್ದಾರೆ. ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಹಾಗೂ ಡಿಎಂಕೆ ಹಿನ್ನಡೆ ಅನುಭವಿಸಿದ ಬಳಿಕ ಬದಲಾಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಈ ಸಭೆ ಮಹತ್ವ ಪಡೆದಿದೆ.

ಸಭೆಯಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್, ತೇಜಸ್ವಿ ಯಾದವ್ ಮತ್ತು ಉದ್ಧವ್ ಠಾಕ್ರೆ ಸೇರಿದಂತೆ ಹಲವು ನಾಯಕರು ಭಾಗವಹಿಸುವ ನಿರೀಕ್ಷೆಯಿದೆ.

ಡಿಎಂಕೆ ಮತ್ತು ಆಮ್ ಆದ್ಮಿ ಪಕ್ಷ ಸಭೆಗೆ ಗೈರಾಗುವ ಸಾಧ್ಯತೆ ಇದ್ದು, ತ.ನಾಡಿನ ಟಿವಿಕೆ ಪಕ್ಷವನ್ನು ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ಚರ್ಚೆಯಾಗಬಹುದು. ಮುಂದಿನ ರಾಜ್ಯ ಚುನಾವಣೆಗಳು, 2029ರ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಪಕ್ಷಗಳ ಒಗ್ಗಟ್ಟನ್ನು ಬಲಪಡಿಸುವುದು ಸಭೆಯ ಮುಖ್ಯ ಉದ್ದೇಶವಾಗಿದೆ.

ಆದಾಯಕ್ಕೂ ಮೀರಿದ ಆಸ್ತಿಗಳಿಸಿದ ಸರ್ಕಾರಿ ಇಂಜಿನಿಯರ್ | ತನಿಖೆ ಶುರು

₹6,000 ಸಂಬಳದ ನೌಕರ ಕೋಟ್ಯಧಿಪತಿ!

ಭುವನೇಶ್ವರ: ಒಡಿಶಾದ ವಿಜಿಲೆನ್ಸ್ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬೈಕುಂಠ ನಾಥ್ ಬೆಹೆರಾ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಕೋಟ್ಯಂತರ ರೂ. ಮೌಲ್ಯದ ಆಸ್ತಿಯನ್ನು ಪತ್ತೆಹಚ್ಚಿದ್ದು, ತನಿಖೆ ಆರಂಭಿಸಿದ್ದಾರೆ.



ಬೆಹೆರಾ, ತಮ್ಮ ಅಧಿಕೃತ ಆದಾಯದ ಮೂಲಗಳಿಗಿಂತ ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶನಿವಾರ ಒಂಬತ್ತು ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧ ಕಾರ್ಯ ನಡೆಸಲಾಯಿತು. ಭುವನೇಶ್ವರ, ಬಾಲಸೋರ್, ಜಾಜ್‌ಪುರ, ಬಾಲಿಗುಡಾದಲ್ಲಿರುವ ಅವರ ನಿವಾಸ, ಕಚೇರಿ ಮತ್ತು ಪೂರ್ವಜರ ಆಸ್ತಿಗಳ ಮೇಲೆ ಈ ದಾಳಿ ನಡೆದಿದೆ.

ಪತ್ತೆಯಾದ ಆಸ್ತಿ ವಿವರ: ವಿಜಿಲೆನ್ಸ್ ತಂಡಗಳು, ಬೆಹೆರಾ ಅವರ ಮನೆ ಮತ್ತು ಬ್ಯಾಂಕ್ ಲಾಕರ್‌ಗಳಿಂದ ಸುಮಾರು 2.4 ಕೋಟಿ ರೂ. ನಗದನ್ನು ವಶಪಡಿಸಿಕೊಂಡಿವೆ. ಪತ್ತೆಯಾದ ಆಸ್ತಿಗಳಲ್ಲಿ ಐದು ಮಹಡಿ ಕಟ್ಟಡಗಳು, ಭುವನೇಶ್ವರ ಮತ್ತು ಅದರ ಸುತ್ತಮುತ್ತಲಿನ 13ರಿಂದ 14 ನಿವೇಶನಗಳು, 341 ಗ್ರಾಂ ಚಿನ್ನದ ಆಭರಣಗಳು ಮತ್ತು 45 ಲಕ್ಷ ರೂ.ಗೂ ಹೆಚ್ಚಿನ ಬ್ಯಾಂಕ್ ಠೇವಣಿಗಳು ಸೇರಿವೆ. ಪತ್ತೆಯಾದ ಕಟ್ಟಡಗಳ ಅಧಿಕೃತ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿದೆ.



ವೃತ್ತಿ ಹಿನ್ನೆಲೆ: ಬೆಹೆರಾ, 1999ರಲ್ಲಿ ನಬರಂಗ್‌ಪುರ ಬ್ಲಾಕ್‌ನಲ್ಲಿ ಮಾಸಿಕ 6,000 ರೂ. ಸಂಬಳಕ್ಕೆ ಜೂನಿಯರ್ ಸಿವಿಲ್ ಇಂಜಿನಿಯರ್ ಆಗಿ ಸರ್ಕಾರಿ ಸೇವೆಗೆ ಸೇರಿದ್ದರು. ನಂತರ 2016ರಲ್ಲಿ ಇಂಟಿಗ್ರೇಟೆಡ್ ಟ್ರೈಬಲ್ ಡೆವಲಪ್‌ಮೆಂಟ್ ಏಜೆನ್ಸಿಯಲ್ಲಿ (ಐಟಿಡಿಎ) ಸಹಾಯಕ ಇಂಜಿನಿಯರ್ ಆಗಿ ಬಡ್ತಿ ಪಡೆಯುವ ಮುನ್ನ ಉಡಾಲಾ ಮತ್ತು ನಬರಂಗ್‌ಪುರದಲ್ಲಿ ಸೇವೆ ಸಲ್ಲಿಸಿದ್ದರು. ಇದೇ ವರ್ಷ ಫೆಬ್ರವರಿಯಲ್ಲಿ ಅವರು ಬಾಲಿಗುಡಾದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಬಡ್ತಿ ಪಡೆದಿದ್ದರು.

ತನಿಖೆ ಪೂರ್ಣಗೊಂಡ ನಂತರ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳಲಾಗುವುದು ಎಂದು ವಿಜಿಲೆನ್ಸ್ ಎಸ್‌ಪಿ ಸುಶಾಂತ್ ಕುಮಾರ್ ಬಿಸ್ವಾಲ್ ತಿಳಿಸಿದ್ದಾರೆ.

ಹೊಸದಿಲ್ಲಿ ನಿರ್ಧಾರಗಳನ್ನು ಯಾರೂ ನಿರ್ದೇಶಿಸಲು ಸಾಧ್ಯವಿಲ್ಲ: ಪುಟಿನ್

ಭಾರತ ಬಲಿಷ್ಠ; ಪಾಶ್ಚಾತ್ಯ ಒತ್ತಡ ಫಲಿಸಲ್ಲ

ಮಾಸ್ಕೋ/ಸೇಂಟ್ ಪೀಟರ್ಸ್‌ಬರ್ಗ್: ಭಾರತ-ರಷ್ಯಾ ನಡುವಿನ ದೀರ್ಘಕಾಲದ ಕಾರ್ಯತಂತ್ರದ ಪಾಲುದಾರಿಕೆಯನ್ನು ಯಾವುದೇ ಬಾಹ್ಯ ಶಕ್ತಿ ದುರ್ಬಲಗೊಳಿಸಲು ಸಾಧ್ಯವಿಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಶ್ಲಾಘಿಸಿದ ಅವರು, ಹೊಸದಿಲ್ಲಿಯ ನಿರ್ಧಾರಗಳನ್ನು ಯಾರೂ ನಿರ್ದೇಶಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸೇಂಟ್ ಪೀಟರ್ಸ್‌ಬರ್ಗ್ ಅಂತಾರಾಷ್ಟ್ರೀಯ ಆರ್ಥಿಕ ವೇದಿಕೆಯಲ್ಲಿ ಮಾತನಾಡಿದ ಪುಟಿನ್, ಭಾರತವನ್ನು ವಿಶ್ವಾಸಾರ್ಹ ಹಾಗೂ ನಂಬಿಕಸ್ಥ ಪಾಲುದಾರ ಎಂದು ಬಣ್ಣಿಸಿದರು. ರಷ್ಯಾ ವಿರುದ್ಧ ಜಾಗತಿಕ ನಿರ್ಬಂಧಗಳು ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆಯೂ ಉಭಯ ದೇಶಗಳ ಸಂಬಂಧ ಮತ್ತಷ್ಟು ವಿಸ್ತರಿಸುತ್ತಿದೆ ಎಂದು ಹೇಳಿದರು.

ಭಾರತದ ಸ್ವಾಯತ್ತ ನಿಲುವಿಗೆ ಬೆಂಬಲ: ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾರ್ವಭೌಮ ಹಕ್ಕು ಹೊಂದಿದೆ ಎಂದು ಪುಟಿನ್ ಹೇಳಿದರು. ಭಾರತ-ರಷ್ಯಾ ಸ್ನೇಹವು ಹಲವು ದಶಕಗಳ ಇತಿಹಾಸ ಹೊಂದಿದ್ದು, ಪಾಶ್ಚಾತ್ಯ ರಾಷ್ಟ್ರಗಳ ಒತ್ತಡದಿಂದ ಅದನ್ನು ದುರ್ಬಲಗೊಳಿಸಲು ಸಾಧ್ಯವಿಲ್ಲ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಹಕಾರ ವಿಸ್ತರಣೆ: ರಕ್ಷಣಾ, ಇಂಧನ, ವ್ಯಾಪಾರ, ತಂತ್ರಜ್ಞಾನ ಮತ್ತು ಮೂಲಸೌಕರ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳು ನಿಕಟ ಸಹಕಾರ ಮುಂದುವರಿಸಿವೆ. ಮಾಹಿತಿ ತಂತ್ರಜ್ಞಾನ, ಶಿಕ್ಷಣ, ವಿಜ್ಞಾನ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿಯೂ ಸಹಭಾಗಿತ್ವ ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ.



ಕಾರ್ಯತಂತ್ರದ ಪಾಲುದಾರಿಕೆ ಮುಂದುವರಿಕೆ: ಉಕ್ರೇನ್ ಸಂಘರ್ಷದ ಹಿನ್ನೆಲೆಯಲ್ಲಿ ರಷ್ಯಾ ಮೇಲೆ ಪಾಶ್ಚಾತ್ಯ ರಾಷ್ಟ್ರಗಳು ನಿರ್ಬಂಧ ಹೇರಿದ್ದರೂ, ಭಾರತ ತನ್ನ ಕಾರ್ಯತಂತ್ರದ ಸ್ವಾಯತ್ತತೆ ನೀತಿಯನ್ನು ಮುಂದುವರಿಸಿದೆ. ಪರಸ್ಪರ ಗೌರವ ಮತ್ತು ನಂಬಿಕೆಯ ಆಧಾರದ ಮೇಲೆ ನಿರ್ಮಿತವಾಗಿರುವ ಭಾರತ-ರಷ್ಯಾ ಸಂಬಂಧ ಮುಂದಿನ ದಿನಗಳಲ್ಲೂ ಮತ್ತಷ್ಟು ಬಲಗೊಳ್ಳಲಿದೆ ಎಂದು ಪುಟಿನ್ ವಿಶ್ವಾಸ ವ್ಯಕ್ತಪಡಿಸಿದರು.

ಕಿರುಸುದ್ದಿ

ಜೂ. 27 ರಿಂದ ಯಕ್ಷಲಹರಿಯ 36 ನೇ ವರ್ಷದ ಯಕ್ಷಗಾನ ಸಪ್ತಾಹ ಸಭೆ

• **ಕಿನ್ನಿಗೋಳಿ:** ಕಿನ್ನಿಗೋಳಿಯ ಯಕ್ಷಲಹರಿ – ಯುಗಪುರುಷ ಸಂಸ್ಥೆಯಲ್ಲಿ ಕಳೆದ 35 ವರ್ಷಗಳಿಂದ ಯಕ್ಷಗಾನದ ಕೈಂಕರ್ಯ ಕಲಾ ಮಾತೆಯ ನಿರಂತರ ನಡೆಯುತ್ತ ಬಂದಿದೆ. ಇದೀಗ 36 ನೇ ವರ್ಷದ ಕಲಾ ಪರ್ವ ಜೂ. 27 ರಿಂದ ಆ. 2 ರತನಕ ನಡೆಯಲಿದೆ ಎಂದು ಯಕ್ಷಲಹರಿ ಸಂಸ್ಥೆಯ ಅಧ್ಯಕ್ಷ ರಘುನಾಥ ಕಾಮತ್ ಕೆಂಚನಕೆರೆ ತಿಳಿಸಿದರು. ಅವರು ಕಿನ್ನಿಗೋಳಿ ಯುಗಪುರುಷ ಸಭಾಭವನದಲ್ಲಿ ನಡೆದ ಕಲಾ ಪರ್ವದ ಪೂರ್ವಭಾವಿಸಭೆಯಲ್ಲಿ ಮಾಹಿತಿ ನೀಡಿ, ಉಭಯ ಜಿಲ್ಲೆ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ ತಾಳಮದ್ದಳೆ ಪ್ರದರ್ಶನ ನಡೆಯಲಿದ್ದು ವಾರ್ಷಿಕೋತ್ಸವ ಸಂದರ್ಭದಲ್ಲಿ ಪ್ರತಿ ವರ್ಷ ಕಲಾವಿದರ ಸನ್ಮಾನ ಜತೆಗೆ ಕಲಾವಿದರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಸಹಕಾರ ನೀಡುವ ಯೋಜನೆ ನಡೆಯಲಿದೆ. ತಾಳಮದ್ದಳೆ ಸಪ್ತಾಹದಲ್ಲಿ ಪ್ರತಿದಿನ ಸಭಾಕಾರ್ಯಕ್ರಮದಲ್ಲಿ ಹವ್ಯಾಸಿ ಹಿರಿಯ ಕಲಾವಿದರಿಗೆ ಗೌರವ, ಅಗಲಿದ ಹವ್ಯಾಸಿ ಯಕ್ಷಗಾನ ಕಲಾವಿದರ ಸಂಸ್ಮರಣೆ, ವಿದ್ಯಾರ್ಥಿ ವೇತನ ವಿತರಣೆ, ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಪ್ರಧಾನ ಕಾರ್ಯದರ್ಶಿ ವಸಂತ ದೇವಾಡಿಗ ತಿಳಿಸಿದರು. ಉಪಾಧ್ಯಕ್ಷ ಪಶುಪತಿ ಶಾಸ್ತ್ರಿ ಕಾರ್ಯಕ್ರಮದ ರೂಪುರೇಷೆ ತಿಳಿಸಿದರು. ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ, ವಿನಯಾಚಾರ್ ಹೊಸಬೆಟ್ಟು, ಸುಧಾಕರ ಕುಲಾಲ್ ಮುಂಡ್ಕೂರು, ಅಶ್ವಥ ರಾವ್, ಉಮೇಶ್ ನೀಲಾವರ ವಂದಿಸಿದರು. ಶ್ರೀವತ್ಸ ಭಟ್ ನಿರೂಪಿಸಿದರು.

ಶ್ರೀ ಸುಬ್ರಹ್ಮಣ್ಯ ಮಠದ ನೇತೃತ್ವದಲ್ಲಿ ನಾಳೆ ಉಚಿತ ಶ್ರವಣ ತಪಾಸಣೆ

• **ಸುಬ್ರಹ್ಮಣ್ಯ:** ಶ್ರೀ ಸಂಪುಟ ನರಸಿಂಹ ಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠದ ನೇತೃತ್ವದಲ್ಲಿ ಸುಬ್ರಹ್ಮಣ್ಯ ಪ್ರೆಸ್ ಕ್ಲಬ್, ರೋಟರಿ ಕ್ಲಬ್ ಸುಬ್ರಹ್ಮಣ್ಯ, ರೋಟರಿ ಕ್ಲಬ್ ಸೆಂಟ್ರಲ್ ಮಂಗಳೂರು ಹಾಗೂ ಟೀಮ್ ಈಶ್ವರ್ ಮಲ್ಪೆ ಸಹಯೋಗದೊಂದಿಗೆ ಉಚಿತ ಶ್ರವಣ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಜೂ.9ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆ ತನಕ ಶ್ರೀ ಸುಬ್ರಹ್ಮಣ್ಯ ಮಠದ ಆವರಣದಲ್ಲಿ ನಡೆಯಲಿದೆ.

ಟೀಮ್ ಈಶ್ವರ್ ಮಲ್ಪೆಯವರು ಶ್ರವಣದ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಉಚಿತ ಶಿಬಿರವನ್ನು ಮಾಡುತ್ತಿದ್ದು ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳಿಗೆ ಟೀಮ್ ಈಶ್ವರ್ ಮಲ್ಪೆಯವರ ಸಂಸ್ಥೆಯಿಂದ ಶ್ರವಣ ಯಂತ್ರಕ್ಕೆ ಆಗುವ ವೆಚ್ಚದ ಶೇ.40 ಮೊತ್ತವನ್ನು ಭರಿಸಲಾಗುತ್ತಿದೆ.

ನೋಂದಣಿ ಕಡ್ಡಾಯ

ನೋಂದಣಿ ಕಡ್ಡಾಯವಾಗಿದ್ದು ಕರೆಮಾಡಿ ನೋಂದಾಯಿಸಿಕೊಳ್ಳಬೇಕು. ಹಿರಿಯರಿಗೆ ಮೊದಲ ಆದ್ಯತೆ ನೀಡಲಾಗುವುದು. ಶ್ರವಣ ಪರೀಕ್ಷೆಯ ಯಾವುದಾದರೂ ಹಳೆಯ ವರದಿ ಇದ್ದರೆ ತರಬೇಕು. ಮೊದಲು ನೋಂದಾಯಿಸುವ 30 ಜನರು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಅನುಭವ ಪಡೆದಿರುವ ವೈದ್ಯರು ಈ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಮೊಬೈಲ್ ಸಂಖ್ಯೆ 8951804399 ಕರೆ ಮಾಡಿ ಶಿಬಿರದ ಮಾಹಿತಿ ಪಡೆದು ನೋಂದಾಣಿ ಮಾಡಿಕೊಳ್ಳಬೇಕಾಗಿ ಆಯೋಜಕರು ವಿನಂತಿಸಿದ್ದಾರೆ.

ದ.ಕ. ಜಿಲ್ಲಾ ಜೆಡಿಎಸ್ ಮಹಿಳಾ ಘಟಕ ಅಧ್ಯಕ್ಷೆಯಾಗಿ ರಮೀಝಾ ಭಾನು ಆಯ್ಕೆ

• **ಮಂಗಳೂರು:** ಜನತಾದಳ ಜಾತ್ಯತೀತ (ಜೆಡಿಎಸ್) ಪಕ್ಷದ ಮಹಿಳಾ ಘಟಕದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆಯಾಗಿ, ಮಂಗಳೂರು ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯೆ, ರಮೀಝಾ ಭಾನು ಅವರನ್ನು ಆಯ್ಕೆ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಜಾಕೆ ಮಾಧವ ಗೌಡ ಅವರ ಶಿಫಾರಸಿನ ಮೇರೆಗೆ,



ಜೆಡಿಎಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ ಅವರು ಬೆಂಗಳೂರಿನ ಜೆ.ಪಿ. ಭವನದಲ್ಲಿ ನಡೆದ ರಾಜ್ಯ ಮಹಿಳಾ ಕಾರ್ಯಕರ್ತೆಯರ ಸಭೆಯಲ್ಲಿ ರಮೀಝಾ ಭಾನು ಅವರಿಗೆ ನೇಮಕಾತಿ ಆದೇಶ ಪತ್ರವನ್ನು ಹಸ್ತಾಂತರಿಸಿದರು. ಜೆಡಿಎಸ್ ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಕೆ. ಕೃಷ್ಣರೆಡ್ಡಿ, ಮಾಜಿ ಸಚಿವ ಲೀಲಾದೇವಿ ಆರ್. ಪ್ರಸಾದ್, ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ವಿ. ತಿಪ್ಪೇಸ್ವಾಮಿ, ರಾಜ್ಯ ನಾಯಕರಾದ ಕನ್ಯಾಕುಮಾರಿ, ಶ್ರೀಮಣಿ, ರಾಜೇಶ್ವರಿ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

728 ವಿದ್ಯಾರ್ಥಿಗಳಿಗೆ ಅಗ್ರಗಣ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟ್‌ಗೆ ಅರ್ಹತೆ


ಸಿಇಟಿ: ಆಳ್ವಾಸ್ ವಿದ್ಯಾರ್ಥಿಗಳ ಸಾಧನೆ

• **ಮೂಡುಬಿದಿರೆ:** ಮೂಡುಬಿದಿರೆಯ ಆಳ್ವಾಸ್ ಪದವಿ ಪೂರ್ವಕಾಲೇಜಿನ ವಿದ್ಯಾರ್ಥಿಗಳು ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ–2026ರಲ್ಲಿ ಮತ್ತೊಮ್ಮೆ ಶ್ರೇಷ್ಠ ಸಾಧನೆಯನ್ನು ಮೆರೆದಿದ್ದಾರೆ.

ಮೊದಲ 10 ರ್‍ಯಾಂಕ್‌ಗಳಲ್ಲಿ 03 ರ್‍ಯಾಂಕ್, ಮೊದಲ 50 ರ್‍ಯಾಂಕ್‌ಗಳಲ್ಲಿ 15 ರ್‍ಯಾಂಕ್, ಮೊದಲ 100 ರ್‍ಯಾಂಕ್‌ಗಳಲ್ಲಿ 18 ರ್‍ಯಾಂಕ್, ಮೊದಲ 200 ರ್‍ಯಾಂಕ್‌ಗಳಲ್ಲಿ 46 ರ್‍ಯಾಂಕ್, ಮೊದಲ 500 ರ್‍ಯಾಂಕ್‌ಗಳಲ್ಲಿ 187 ರ್‍ಯಾಂಕ್, ಮೊದಲ 1,000 ರ್‍ಯಾಂಕ್‌ಗಳಲ್ಲಿ 429, ಮೊದಲ 2000 ರ್‍ಯಾಂಕ್‌ಗಳಲ್ಲಿ 914 ರ್‍ಯಾಂಕ್‌ಗಳನ್ನು ಆಳ್ವಾಸ್ ವಿದ್ಯಾರ್ಥಿಗಳು ಪಡೆದುಕೊಂಡಿರುತ್ತಾರೆ.

ಪಿಸಿಬಿಯಲ್ಲಿ 8 ವಿದ್ಯಾರ್ಥಿಗಳು 180ರಲ್ಲಿ 170ಕ್ಕೂ ಅಧಿಕ ಅಂಕ, 51 ವಿದ್ಯಾರ್ಥಿಗಳು 160ಕ್ಕೂ ಅಧಿಕ, 145 ವಿದ್ಯಾರ್ಥಿಗಳು 150ಕ್ಕೂ ಅಧಿಕ, 951 ವಿದ್ಯಾರ್ಥಿಗಳು 120ಕ್ಕೂ ಅಧಿಕ, 1392 ವಿದ್ಯಾರ್ಥಿಗಳು 100ಕ್ಕೂ ಅಧಿಕ ಅಂಕಗಳನ್ನು ಪಡೆದುಕೊಂಡಿದ್ದಾರೆ.

ಪಿಸಿಎಮ್‌ನಲ್ಲಿ ಒರ್ವ ವಿದ್ಯಾರ್ಥಿ 180ರಲ್ಲಿ 170ಕ್ಕೂ ಅಧಿಕ ಅಂಕ, 11 ವಿದ್ಯಾರ್ಥಿಗಳು 160ಕ್ಕೂ ಅಧಿಕ, 35 ವಿದ್ಯಾರ್ಥಿಗಳು 150ಕ್ಕೂ ಅಧಿಕ, 568 ವಿದ್ಯಾರ್ಥಿಗಳು 120ಕ್ಕೂ ಅಧಿಕ, 937 ವಿದ್ಯಾರ್ಥಿಗಳು 100ಕ್ಕೂ ಅಧಿಕ ಅಂಕಗಳನ್ನು ಪಡೆದುಕೊಂಡಿದ್ದಾರೆ.



2000 ರ್‍ಯಾಂಕ್‌ಗಳಲ್ಲಿ 914 ರ್‍ಯಾಂಕ್

ಭಾವನಾ ಬಿ ಆರ್ ಕೃಷಿ, ಆಹಾರ ವಿಜ್ಞಾನ, ಸೆರಿಕಲ್ಚರ್ ವಿಷಯಗಳ ಪ್ರಾಯೋಗಿಕ ವಿಷಯಗಳಲ್ಲಿ 2ನೇ ರ್‍ಯಾಂಕ್, ಕ್ಲಾರೆನ್ಸ್ ಡಿಸೋಜಾ ಬಿಎಸ್ಸಿ ಅಗ್ರಿ, ಸೆರಿಕಲ್ಚರ್ ವಿಷಯದಲ್ಲಿ 14ನೇ ರ್‍ಯಾಂಕ್, ಬಿ. ಫಾರ್ಮ ಹಾಗೂ ಡಿ.ಫಾರ್ಮನಲ್ಲಿ 35ನೇ ರ್‍ಯಾಂಕ್, ನ್ಯಾಚುರೋಪತಿಯಲ್ಲಿ 20ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 42ನೇ ರ್‍ಯಾಂಕ್, ನರ್ಸಿಂಗ್‌ನಲ್ಲಿ 44ನೇ ರ್‍ಯಾಂಕ್, ಪಶುವೈದ್ಯಕೀಯದಲ್ಲಿ 44ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಸುಹರ್ಷ ಹರೀಶ್ ಹೆಗ್ಡೆ ನರ್ಸಿಂಗ್ ಹಾಗೂ ಪಶುವೈದ್ಯಕೀಯದಲ್ಲಿ 31ನೇ ರ್‍ಯಾಂಕ್, ಬಿಫಾರ್ಮ, ಫಾರ್ಮ ಡಿ 47ನೇ ರ್‍ಯಾಂಕ್, ರಕ್ಷಿತಾ ಮಂಜುನಾಥ್ ಸಂಗನಪೇಟ್ ಬಿಟಿಟಿ ಹಾಗೂ ಎಚ್‌ಎಸ್‌ನಲ್ಲಿ 39ನೇ ರ್‍ಯಾಂಕ್, ಪ್ರೀತಮ್ ಭೀಮಪ್ಪ ಕೊಣ್ಣೂರ್ ಪಶುವೈದ್ಯಕೀಯದಲ್ಲಿ 70ನೇ ರ್‍ಯಾಂಕ್, ಫುಡ್ ಸೈನ್ಸ್ ನಲ್ಲಿ 108ನೇ ರ್‍ಯಾಂಕ್, ಗಣೇಶ್ ಗೋಪಾಲ್ ಕುಂಬಾರ್ ಬಿಪಿಓದಲ್ಲಿ 97ನೇ ರ್‍ಯಾಂಕ್, ದಿಶಾ ಹೆಚ್ ಶೆಟ್ಟಿ ಬಿಪಿಓನಲ್ಲಿ 99ನೇ ರ್‍ಯಾಂಕ್, ಕುಶಾಲ್ ಕೆಯು ಅಗ್ರಿ ಹಾಗೂ ಫುಡ್ ಸೈನ್ಸ್‌ನಲ್ಲಿ 106ನೇ ರ್‍ಯಾಂಕ್, ಬಸವರಾಜ್ ಮಲ್ಲಪ್ಪ ಬಿಟಿಟಿ ಹಾಗೂ ಹೋಮ್ ಸೈನ್ಸ್‌ನಲ್ಲಿ 120ನೇ ರ್‍ಯಾಂಕ್, ವೈಭವಿ ಎಂ. ಫುಡ್ ಸೈನ್ಸ್, ಸೆರಿಕಲ್ಚರ್ ಹಾಗೂ ಬಿಎಸ್ಸಿ ಅಗ್ರಿಯಲ್ಲಿ 122ನೇ ರ್‍ಯಾಂಕ್ ಹಾಗೂ ನ್ಯಾಚುರೋಪಥಿಯಲ್ಲಿ 136ನೇ ರ್‍ಯಾಂಕ್, ವೈಭವಿ ಟಿ. ಎಚ್, ಅಗ್ರಿ ಹಾಗೂ ಫುಡ್‌ಸೈನ್ಸ್‌ನಲ್ಲಿ 149ನೇ ರ್‍ಯಾಂಕ್, ಮೆಲ್ರೋಯ್ ಕ್ಯಾಸ್ಟಲಿನೋ ಬಿಪಿಓ 161ನೇ ರ್‍ಯಾಂಕ್, ಸೂರ್ಯಕಾಂತ್ ಎಸ್. ಪಾಟೀಲ್ ಪಶುವೈದ್ಯಕೀಯ 172ನೇ ರ್‍ಯಾಂಕ್, ಬಿಎಸ್ಸಿ ನರ್ಸಿಂಗ್ 173ನೇ ರ್‍ಯಾಂಕ್, ಕಿರಣ್ ಕುಮಾರ್ ಪಶುವೈದ್ಯಕೀಯ 180 ನೇ ರ್‍ಯಾಂಕ್, ಸಾನ್ವಿ ಸುಧೀರ್ ಅಗ್ರಿ, ಫುಡ್ ಸೈನ್ಸ್ ಹಾಗೂ ಸೆರಿಕಲ್ಚರ್ ವಿಷಯಗಳಲ್ಲಿ 187ನೇ ರ್‍ಯಾಂಕ್, ಸುಮಿತ್ ವಿಕೆ ಅಗ್ರಿ, ಫುಡ್ ಸೈನ್ಸ್, ಸೆರಿಕಲ್ಚರ್ 196ನೇ ರ್‍ಯಾಂಕ್, ರಾಹುಲ್ ಜಂಭಗಿ ಪಶುವೈದ್ಯಕೀಯ 196ನೇ ರ್‍ಯಾಂಕ್, ನರ್ಸಿಂಗ್ 197ನೇ ರ್‍ಯಾಂಕ್‌ಗಳನ್ನು ಪಡೆದುಕೊಂಡಿದ್ದಾರೆ.

ಅಭಿನಂದನೆ

ಪ್ರಮುಖವಾಗಿ ಇಂಜಿನಿಯರಿಂಗ್ ವಿಭಾಗದಲ್ಲಿ ಆಳ್ವಾಸ್ ಪದವಿ ಪೂರ್ವಕಾಲೇಜಿನ ವಿದ್ಯಾರ್ಥಿಗಳು ಮೊದಲ 1000 ರ್‍ಯಾಂಕ್‌ಗಳಲ್ಲಿ 38 ವಿದ್ಯಾರ್ಥಿಗಳು, ಮೊದಲ 5000 ರ್‍ಯಾಂಕ್‌ಗಳಲ್ಲಿ 228 ವಿದ್ಯಾರ್ಥಿಗಳು, ಮೊದಲ 10,000 ರ್‍ಯಾಂಕ್‌ಗಳಲ್ಲಿ ಒಟ್ಟು 728 ವಿದ್ಯಾರ್ಥಿಗಳು ರ್‍ಯಾಂಕ್‌ನ್ನು ಪಡೆದಿದ್ದು, ಇವರೆಲ್ಲರೂ ರಾಜ್ಯದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಪಡೆಯಲು ಅರ್ಹತೆ ಪಡೆದಿದ್ದಾರೆ. ರ್‍ಯಾಂಕ್ ಪಡೆದ ಎಲ್ಲಾ ವಿದ್ಯಾರ್ಥಿಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಅಭಿನಂದಿಸಿದ್ದಾರೆ.



ರಾಜ್ಯದ ನೂತನ ಆರೋಗ್ಯ ಸಚಿವ ಯು.ಟಿ. ಖಾದರ್ ಭಾನುವಾರ ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ಸಂದರ್ಭ ಸಚಿವರನ್ನು ಗೌರವಿಸಿ, ಪ್ರಸಾದ ನೀಡಲಾಯಿತು. ದೇವಳದ ಆಡಳಿತ ಸಮಿತಿಯವರು ಸಚಿವರನ್ನು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

'ಉತ್ಥಾನ' ಕಟ್ಟಡ ಉದ್ಘಾಟನಾ ಸಮಾರಂಭದ ಸಮಾರೋಪ

ಹಲವು ತಲೆಮಾರುಗಳ ಸಹಕಾರ

• **ಉಜಿರೆ:** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸೇವಾ ಸಂಘದ ನೂತನ ಕಟ್ಟಡ ಉತ್ಥಾನದ ಉದ್ಘಾ ಟನಾ ಸಮಾರಂಭದ ಸಮಾರಂಭ ಸಾಂಸ್ಕೃ ತಿಕ ಕಾರ್ಯಕ್ರಮ ಜೂ. 6ರಂದು ಸಂಜೆ ನಡೆಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಂಗಳೂರು ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್ ಮಾತನಾಡಿ ಶತಮಾನ ಪೂರೈಸಿದ ಉಜಿರೆ ಪ್ಯಾಕ್ಸ್ ಹಿರಿಯ ಸಂಘವಾಗಿದ್ದು ಈ ಸಂಘದ ಅಭಿವೃದ್ಧಿಯಲ್ಲಿ ಹಲವು ತಲೆಮಾರುಗಳ ಸಹಕಾರ ಇದೆ. ಸುದೀರ್ಘಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಸುಂದರ ಗೌಡರ ಅವರ ಕನಸು ಈಗ ನನಸಾಗಿದೆ. ಈ ಸಂಘದ ಬೆಳವಣಿಗೆಯಲ್ಲಿ ಅವರ ಪ್ರಯತ್ನ ಬಹಳವಾಗಿದೆ ಎಂದು ಹೇಳಿದರು.

ಬೆಳ್ತಂಗಡಿ ತಾಲೂಕು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘದ ಅಧ್ಯಕ್ಷ ಶ್ರೀಧರ ಜಿ. ಭಿಡೆ ಮಾತನಾಡಿ ಉಜಿರೆ ಸಹಕಾರ ಸಂಘಕ್ಕೆ ಸುಧೀರ್ಘ ಇತಿಹಾಸ ಇದ್ದು ಗ್ರೀನ್ ಬ್ಯಾಂಕ್, ಟೌನ್ ಬ್ಯಾಂಕ್ ಪರಿವರ್ತನೆಗೊಂಡು ಸೇವಾ ಸಹಕಾರ ಸಂಘವಾಗಿ ಹಿರಿಯರು ಸೇರಿ ಪ್ರಾರಂಭ ಮಾಡಿದ್ದಾರೆ, ಈಗ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿದೆ ಎಂದರು. ಉಜಿರೆ ಸಂತ ಅಂತೋನಿ ಚರ್ಚ್ ಧರ್ಮಗುರು ಫಾ. ಅಬೆಲ್ ಲೋಬೊ ಮಾತನಾಡಿ ,ಸಹಕಾರ ಸಂಘವು ಎಲ್ಲಾ ಧರ್ಮದವರನ್ನು ಒಟ್ಟು ಸೇರಿ ನಡೆಸುವ ಸಂಸ್ಥೆ ಈ ಸಂಘಕ್ಕೆ 100 ವರ್ಷಕ್ಕೂ ಮಿಕ್ಕಿದ ಇತಿಹಾಸವಿದ್ದು ಇಲ್ಲಿ ದುಡಿದವರ ಕನಸು ನನಸಾಗಿದೆ ಎಂದರು.



ಉಜಿರೆಯಲ್ಲಿ ಸುಂದರ ವಾದ ದೊಡ್ಡ ಕಟ್ಟಡವಾಗಿ ಮೂಡಿ ಬಂದಿದೆ.ಸಂಘ ಸಂಸ್ಥೆ ಯಾವ ಉದ್ದೇಶಕ್ಕಾಗಿ ಪ್ರಾರಂಭವಾಗಿದೆ ಎಂಬುದನ್ನು ಎಲ್ಲರೂ ಅರಿತು ಸಾಮೂಹಿಕ ನಿರ್ಧಾರದಿಂದ ಒಮ್ಮತದಿಂದ ಮುನ್ನಡೆದಾಗ ಅಭಿವೃದ್ಧಿ ಸಾಧ್ಯ.
■ **ಪ್ರತಾಪಸಿಂಹ ನಾಯಕ್,**
ವಿಧಾನ ಪರಿಷತ್ ಸದಸ್ಯ

ಸಂಘದ ಅಧ್ಯಕ್ಷ ಕೇರಿಮಾರು ಬಾಲಕೃಷ್ಣ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಹಕಾರಿ ಕ್ಷೇತ್ರದ ಉದ್ದೇಶ ಲಾಭಕ್ಕೆ ಆಗದೇ ಜನರ ಸೇವೆಗೆ ಎಂದು ಎಲ್ಲಾ ಸದಸ್ಯರು ಒಟ್ಟು ಕೂಡಿ ಮುನ್ನಡೆದು ಅಭಿವೃದ್ಧಿ ಸಾಧ್ಯವಾಗಿದೆ. ಸುಂದರ ಗೌಡರ ಸಂಕಲ್ಪಶಕ್ತಿಯಾಗಿ ನೆರವೇರಿದೆ ಎಂದರು.

ಸಂಘದ ಮುಖ್ಯ ಕಾರ್ಯನಿರ್ವಹಣಾ ಧಿಕಾರಿ ಸರಸ್ವತಿ ಸಿ. ರೈ ಉಪಸ್ಥಿತರಿದ್ದರು. ಸಿಬ್ಬಂದಿ ಮೋಹನ ಗೌಡ ಸ್ವಾಗತಿಸಿ ಉಪಾಧ್ಯಕ್ಷ ಶ್ರೀಧರ ಪೂಜಾರಿ ವಂದಿಸಿದರು. ವಿಜಯ ಅತ್ತಾಜೆ ಕಾರ್ಯಕ್ರಮ ನಿರೂಪಿಸಿದರು.

ಸಭಾ ಕಾರ್ಯಕ್ರಮದ ಬಳಿಕ ಉಜಿರೆ ಹಿಪ್ ಬಾಯ್ಸ್ ಡ್ಯಾನ್ಸ್ ಕ್ರೀವ್ ತಂಡದಿಂದ ಗಾನ ನೃತ್ಯ, ರಾತ್ರಿ ಮಂಗಳೂರಿನ ಸಾಯಿಶಕ್ತಿ ಕಲಾ ಬಳಗ ಉರ್ವ ಚಿಲಿಂಬಿ ತಂಡದಿಂದ 'ಜೋಡು ಜೀಟಿಗೆ' ತುಳು ಜನಪದ ನಾಟಕ ಪ್ರದರ್ಶನಗೊಂಡಿತು.

ಕಾರ್ಯಕ್ರಮದ ಯಶಸ್ಸಿಗೆ ಸಂಘದ ನಿರ್ದೇಶಕರುಗಳಾದ ಅರುಣ್ ಕುಮಾರ್, ರಜತ್ ಗೌಡ, ಪುಷ್ಪಾವತಿ ಆರ್. ಶೆಟ್ಟಿ, ವಾರಿಜ ಎಸ್. ಗೌಡ, ಗುರುರಾಜ್, ಅರವಿಂದ ಕಾರಂತ್, ಅನಿಲ್ ಪ್ರಕಾಶ್ ಡಿ ಸೋಜಾ, ಅಣ್ಣು ನಾಯ್ಕ, ಸಾಧು ಎಂ. ಸುದರ್ಶನ್, ಸಿಬ್ಬಂದಿ ವರ್ಗದವರು, ಸದಸ್ಯರು ಸಹಕರಿಸಿದರು.

ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ಚಂದ್ರಶೇಖರ

ಬಡ ಕೂಲಿ ಕಾರ್ಮಿಕನ ಚಿಕಿತ್ಸೆಗೆ ನೆರವು

• **ಬದಿಯಡ್ಕ:** ಬದಿಯಡ್ಕ ಗ್ರಾಮ ಪಂಚಾಯತ್ ನೀರ್ಚಾಲು ವಾರ್ಡ್‌ನ ಕನ್ನೆಪ್ಪಾಡಿ ಕರ್ಕಟಪಳ್ಳದಲ್ಲಿ ವಾಸಿಸುತ್ತಿರುವ ಚಂದ್ರಶೇಖರ ಸಿ.ಎಚ್. ಎಂಬವರು ಪ್ರಸ್ತುತ ಕ್ಯಾನ್ಸರ್ ಕಾಯಿಲೆಯಿಂದಬಳಲುತ್ತಿದ್ದಾರೆ. ಅವರು ದಿನಗೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ಅತ್ಯಂತ ಬಡ ಕುಟುಂಬದ



ಏಕೈಕ ಆಧಾರ ಸ್ತಂಭವಾಗಿದ್ದಾರೆ. ಪ್ರಸ್ತುತ ಕಾಯಿಲೆಯ ತೀವ್ರತೆಯಿಂದಾಗಿ ಅವರು ಯಾವುದೇ ಕೆಲಸ ಮಾಡಲು ಸಾಧ್ಯವಾಗದೆ ದಿನನಿತ್ಯ ಆಸ್ಪತ್ರೆಯ ದಾರಿಯನ್ನು ಹಿಡಿಯುವಂತಾಗಿದೆ.

ಚಂದ್ರಶೇಖರ ಅವರ ದಿನಗೂಲಿ ಆದಾಯದಿಂದಲೇ ಇಡೀ ಕುಟುಂಬ ಸಾಗುತ್ತಿತ್ತು. ಸದ್ಯ ಅವರ ಆದಾಯ ಸಂಪೂರ್ಣ ನಿಂತುಹೋಗಿದೆ. ಅವರಿಗೆ ಪತ್ನಿ ಮತ್ತು ಮೂವರು ಹೆಣ್ಣು ಮಕ್ಕಳಿದ್ದಾರೆ. ಮಕ್ಕಳ ಶಿಕ್ಷಣ ಮತ್ತು ದೈನಂದಿನ ಜೀವನ ನಿರ್ವಹಣೆಗೆ ಸದ್ಯ ಯಾವುದೇ ದಾರಿಯಿಲ್ಲದಂತಾಗಿದೆ.

ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಯ ಚಿಕಿತ್ಸೆಗೆ ಅತ್ಯಂತ ದುಬಾರಿ ವೆಚ್ಚ ತಗಲುತ್ತಿದ್ದು, ನಿರಂತರ ತಪಾಸಣೆ, ಔಷಧಗಳು ಮತ್ತು ಕೀಮೋಥೆರಪಿ/ರೇಡಿಯೇಶನ್ ಚಿಕಿತ್ಸೆಗಳ ಅಗತ್ಯವಿದೆ. ಕೂಲಿ ಕೆಲಸ ಮಾಡಿ ಬದುಕುವ ಈ ಕುಟುಂಬಕ್ಕೆ ನಿತ್ಯದ ಊಟಕ್ಕೇ ಪರದಾಡುವ ಪರಿಸ್ಥಿತಿ ಇರುವಾಗ ಲಕ್ಷಾಂತರ ರೂಪಾಯಿಗಳ ವೈದ್ಯಕೀಯ ವೆಚ್ಚವನ್ನು ಭರಿಸುವುದು ಅಸಾಧ್ಯದ ಮಾತಾಗಿದೆ. ಹಿರಿಯ ಪುತ್ರಿಯ ವಿವಾಹ ಇತ್ತೀಚೆಗಷ್ಟೆ ಕಳೆದಿತ್ತು. ದ್ವಿತೀಯ ಪುತ್ರಿ ಐಟಿಐ ಕಲಿಯುತ್ತಿದ್ದು, ಮತ್ತೋರ್ವಳು ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದಾಳೆ.

ಮಾನವೀಯತೆಯ ದೃಷ್ಟಿಯಿಂದ ಸಹೃದಯಿ ಸಾರ್ವಜನಿಕರು, ಸಂಘ ಸಂಸ್ಥೆಗಳು ಮತ್ತು ದಾನಿಗಳು ಚಂದ್ರಶೇಖರ ಅವರ ಚಿಕಿತ್ಸಾ ನಿಧಿಗೆ ಶಕ್ತಿಮೀರಿ ಆರ್ಥಿಕ ಸಹಾಯವನ್ನು ಒದಗಿಸಬೇಕಾಗಿ ವಿನಂತಿಸುತ್ತೇನೆ. ನಮ್ಮ ಸಣ್ಣ ಸಹಾಯವೂ ಆ ಮೂವರು ಹೆಣ್ಣು ಮಕ್ಕಳ ತಂದೆಯ ಜೀವ ಉಳಿಸಲು ಮತ್ತು ಆ ಕುಟುಂಬಕ್ಕೆ ಹೊಸ ಭರವಸೆ ನೀಡಲು ಸಹಕಾರಿಯಾಗಬಲ್ಲದು.
■ **ಶ್ಯಾಮಪ್ರಸಾದ್ ಸರಳಿ,**
ಸದಸ್ಯರು, ಬದಿಯಡ್ಕ ಗ್ರಾಮ ಪಂಚಾಯತ್

ಒಂದು ಕಡೆ ಕಾಯಿಲೆಯ ಭೀತಿ, ಇನ್ನೊಂದೆಡೆ ಮೂವರು ಹೆಣ್ಣು ಮಕ್ಕಳ ಭವಿಷ್ಯದ ಆತಂಕದಿಂದ ಈ ಕುಟುಂಬವು ಅತ್ಯಂತ ಕರುಣಾಜನಕ ಸ್ಥಿತಿಯಲ್ಲಿದೆ. ಮಾನವೀಯತೆಯ ದೃಷ್ಟಿಯಿಂದ ಸ್ಥಳೀಯಾಡಳಿತ, ಕಾರುಣ್ಯ ನಿಧಿಗಳು, ಜನಪ್ರತಿನಿಧಿಗಳು ಮತ್ತು ಸಹೃದಯಿ ಸಾರ್ವಜನಿಕರು ಚಂದ್ರಶೇಖರ ಸಿ.ಎಚ್. ಅವರಿಗೆ ಗರಿಷ್ಠ ಮಟ್ಟದ ಧನಸಹಾಯವನ್ನು ಒದಗಿಸಿ ಅವರ ಜೀವ ಉಳಿಸಲು ಹಾಗೂ ಕುಟುಂಬಕ್ಕೆ ಆಸರೆಯಾಗಲು ವಿನಂತಿಸಿಕೊಳ್ಳಲಾಗುತ್ತಿದೆ.

ಸಹಾಯವನ್ನು ನೀಡುವ ದಾನಿಗಳು ಧನಸಹಾಯವನ್ನು ಈ ಕೆಳಗಿನ ಬ್ಯಾಂಕ್ ಖಾತೆಗೆ ನೀಡಬೇಕಾಗಿದೆ.

ಲೀಲಾವತಿ ಪಿ. (ಪತ್ನಿ), ಬ್ಯಾಂಕ್ ಖಾತೆ ಸಂಖ್ಯೆ 5322500101484901, ಐಎಫ್‌ಎಸ್‌ಸಿ : ಕೆಎಆರ್‌ಬಿ0000532, ಜಿಪೇ ಸಂಖ್ಯೆ : 9995176699.

ವಿನೂತನ ರೀತಿಯಲ್ಲಿ ನಾ.ಡಿ'ಸೋಜರವರ 89ನೇ ಹುಟ್ಟು ಹಬ್ಬ

ಮಕ್ಕಳಲ್ಲಿ ಕಥೆ, ಸಾಹಿತ್ಯದ ಕುರಿತು ಜಾಗೃತಿ

• **ಮಂಗಳೂರು:** ನಾಡಿನ ಖ್ಯಾತ ಸಾಹಿತಿ ಹಾಗೂ ಕತೆಗಾರರಾದ ನಾ.ಡಿಸೋಜ ಅವರ 89ನೇ ಹುಟ್ಟು ಹಬ್ಬದ ಅಂಗವಾಗಿ ಮಂಗಳೂರಿನ ಗಾಂಧಿನಗರ ಸರಕಾರಿ ಶಾಲೆಯಲ್ಲಿ ಮಕ್ಕಳಿಗೆ ನಾ.ಡಿಸೋಜರವರ ಕಥೆ ಮತ್ತು ಸಾಹಿತ್ಯದ ಬಗ್ಗೆ ತಿಳಿಹೇಳುವ ಕಾರ್ಯಕ್ರಮ ನಡೆಯಿತು.

ನಾ.ಡಿಸೋಜರವರು ಪ್ರಕೃತಿ, ಸಂಸ್ಕೃತಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವಾರು ಪುಸ್ತಕಗಳನ್ನು ಬರೆದು ಜನತೆಗೆಹತ್ತಿರವಾದವರು. ಅವರ ಕಥೆಗಳ ಸಾರವನ್ನು ತಿಳಿಸುವ ಕಾರ್ಯಕ್ರಮ ಇದಾಗಿತ್ತು. 'ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ' ಇದರ ಹೂರಣವನ್ನು ಮಕ್ಕಳಿಗೆ ತಿಳಿಸಿ ಅವರಲ್ಲಿ ಸಂವಾದ, ರಸ ಪ್ರಶ್ನೆ, ಕಥಾ ರೂಪಕ ಮುಂತಾದವುಗಳನ್ನು ಮಾಡಿ ಬಹುಮಾನಗಳನ್ನು ನೀಡಲಾಯಿತು. ನಾ.ಡಿಸೋಜರ ಕಾವ್ಯ ಪ್ರಕಾರಗಳು ಮತ್ತು ಕಥಾ ರೂಪಗಳ ಸಂದೇಶ,ಜಾಗೃತಿ ಸದಾ ಸಮಾಜದಲ್ಲಿ ಬೆಳಗಬೇಕೆಂದು ಮಕ್ಕಳಿಗೆ ತಿಳಿಸಲಾಯಿತು.



ನಾ.ಡಿಸೋಜರ ಮಗಳು ಶೋಭಾ ನರೇಶ್ ಈ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಕಲಾವಿದ ದಿನೇಶ್ ಹೊಳ್ಳ, ಹಿರಿಯ ಛಾಯಾಪತ್ರಕರ್ತ, ಬರಹಗಾರ ಚಂದ್ರಹಾಸ್ ಕೋಟೆಕಾರ್, ಶಾಲಾ ಮುಖ್ಯ ಶಿಕ್ಷಕಿ ಕೆ. ನಳಿನಿ ಅತಿಥಿಗಳಾಗಿ ಭಾಗವಹಿಸಿದ್ದರು. ಶಿಕ್ಷಕಿ ಲಾವಣ್ಯ ಗಣೇಶ್, ಬಿಂದಿಯಾ, ನಾ.ಡಿಸೋಜರವರ ಮಡದಿ ಫಿಲೋಮಿನ ಡಿಸೋಜ, ತಂಗಿ ಮೇರಿ ಡಿಸೋಜ ಉಪಸ್ಥಿತರಿದ್ದರು.

ಸಿಇಟಿ: ಮೊದಲ 50 ರ್‍ಯಾಂಕ್‌ಗಳಲ್ಲಿ 116 ಸ್ಥಾನ; ಎಕ್ಸ್‌ಪರ್ಟ್ ಕಾಲೇಜಿನ ವಿದ್ಯಾರ್ಥಿಗಳ ಪ್ರಾಬಲ್ಯ

• **ಮಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ಸಿಇಟಿ ಪರೀಕ್ಷೆಯ 12 ವಿಭಾಗದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಮೊದಲ 50 ರ್‍ಯಾಂಕ್‌ಗಳಲ್ಲಿ 116 ಸ್ಥಾನವನ್ನು ಪಡೆದು ಹೊಸ ಇತಿಹಾಸವನ್ನು ಸಂಸ್ಥೆಯು ನಿರ್ಮಾಣ ಮಾಡಿದೆ.

ಮೊದಲ 10 ರ್‍ಯಾಂಕ್‌ಗಳಲ್ಲಿ ಕಾಲೇಜಿನ ಮೂವರು ವಿದ್ಯಾರ್ಥಿಗಳು ಮೊದಲ 3ನೇ ರ್‍ಯಾಂಕ್, ಮೂವರು ವಿದ್ಯಾರ್ಥಿಗಳು ನಾಲ್ಕನೇ ರ್‍ಯಾಂಕ್, ಓರ್ವ ವಿದ್ಯಾರ್ಥಿ ಆರನೇ ರ್‍ಯಾಂಕ್, ಮೂವರು ವಿದ್ಯಾರ್ಥಿಗಳು ಏಳನೇ ರ್‍ಯಾಂಕ್, ಐವರು ವಿದ್ಯಾರ್ಥಿಗಳು ಎಂಟನೇ ರ್‍ಯಾಂಕ್ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.

ಮೊದಲ 100 ರ್‍ಯಾಂಕ್‌ನಲ್ಲಿ 246 ಸ್ಥಾನ, ಮೊದಲ 150ರಲ್ಲಿ 343 ಸ್ಥಾನ, ಮೊದಲ 200 ರ್‍ಯಾಂಕ್‌ಗಳಲ್ಲಿ 435, ಮೊದಲ 300 ರ್‍ಯಾಂಕ್‌ಗಳಲ್ಲಿ 572, ಮೊದಲ 400 ರ್‍ಯಾಂಕ್‌ಗಳಲ್ಲಿ 704, ಮೊದಲ 500 ರ್‍ಯಾಂಕ್‌ಗಳಲ್ಲಿ 855, ಮೊದಲ 1000 ರ್‍ಯಾಂಕ್‌ಗಳಲ್ಲಿ 1392 ಸ್ಥಾನಗಳನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ ಎಂದು ಎಕ್ಸ್‌ಪರ್ಟ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ.ನರೇಂದ್ರ ಎಲ್. ನಾಯಕ್ ತಿಳಿಸಿದ್ದಾರೆ.

ಸಮಯ್ ಎ.ಎಸ್ ಅವರು ಕೃಷಿ, ಫುಡ್ ಸೈನ್ಸ್ ಹಾಗೂ ಸೆರಿಕಲ್ಚರ್‌ನಲ್ಲಿ 3ನೇ ರ್‍ಯಾಂಕ್ ಮತ್ತು ಇಂಜಿನಿಯರಿಂಗ್‌ನಲ್ಲಿ 23ನೇ ರ್‍ಯಾಂಕ್ ಪಡೆದಿದ್ದಾರೆ. ರಿಶಿಕಾ ಕೆ.ಎಸ್. ಅವರು ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 4ನೇ ರ್‍ಯಾಂಕ್ ಮತ್ತು ಇಂಜಿನಿಯರಿಂಗ್‌ನಲ್ಲಿ 20, ನರ್ಸಿಂಗ್‌ನಲ್ಲಿ 26, ಪಶು ವೈದ್ಯಕೀಯದಲ್ಲಿ 26, ಬಿಎನ್‌ವೈಎಸ್‌ನಲ್ಲಿ 41ನೇ ರ್‍ಯಾಂಕ್ ಪಡೆದಿದ್ದಾರೆ. ಅಂಕಿತ್ ಅಶೋಕ್ ದೊಡವಾಳ ಅವರು ಕೃಷಿ, ಫುಡ್‌ಸೈನ್ಸ್ ಹಾಗೂ ಸೆರಿಕಲ್ಚರ್‌ನಲ್ಲಿ 6ನೇ ರ್‍ಯಾಂಕ್, ಬಿ ಫಾರ್ಮಾ, ನರ್ಸಿಂಗ್, ಫಾರ್ಮಾ ಡಿ, ಪಶುವೈದ್ಯಕೀಯದಲ್ಲಿ 11ನೇ ರ್‍ಯಾಂಕ್, ಬಿಎನ್‌ವೈಎಸ್‌ನಲ್ಲಿ 32, ಇಂಜಿನಿಯರಿಂಗ್‌ನಲ್ಲಿ 43ನೇ ರ್‍ಯಾಂಕ್ ಪಡೆದರೆ, ದೀಕ್ಷಾ ಶೆಣೈ ಅವರು ಬಿಎನ್‌ವೈಎಸ್‌ನಲ್ಲಿ 6ನೇ ರ್‍ಯಾಂಕ್, ಪಶುವೈದ್ಯಕೀಯ ಹಾಗೂ ನರ್ಸಿಂಗ್‌ನಲ್ಲಿ 14, ಬಿ–ಫಾರ್ಮಾ ಹಾಗೂ ಫಾರ್ಮಾ ಡಿಯಲ್ಲಿ 30ನೇ ರ್‍ಯಾಂಕ್ ಪಡೆದಿದ್ದಾರೆ. ಅರಳೆ ವಿರೂಪಾಕ್ಷಿ ಅವರು ಕೃಷಿ, ಫುಡ್‌ಸೈನ್ಸ್ ಹಾಗೂ ಸೆರಿಕಲ್ಚರ್‌ನಲ್ಲಿ 7ನೇ ರ್‍ಯಾಂಕ್, ಪಶುವೈದ್ಯಕೀಯ, ಬಿಎಸ್ಸಿ ನರ್ಸಿಂಗ್‌ನಲ್ಲಿ 33ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 36 ಹಾಗೂ ಬಿಎನ್‌ವೈಎಸ್‌ನಲ್ಲಿ 42ನೇ ರ್‍ಯಾಂಕ್ ಪಡೆದರೆ, ಕೃತಿಕಾ ಮಲ್ಲಿಕಾರ್ಜುನ ಪಾಟೀಲ್ ಅವರು ಕೃಷಿ, ಫುಡ್‌ಸೈನ್ಸ್ ಹಾಗೂ ಸೆರಿಕಲ್ಚರ್‌ನಲ್ಲಿ 8ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 40ನೇ ರ್‍ಯಾಂಕ್ ಪಡೆದಿದ್ದಾರೆ.



ರಿಷಬ್ ಎಂ. ಶೆಟ್ಟಿ ಅವರು ನರ್ಸಿಂಗ್ ಮತ್ತು ಪಶುವೈದ್ಯಕೀಯದಲ್ಲಿ 8ನೇ ರ್‍ಯಾಂಕ್, ಬಿಫಾರ್ಮಾ ಹಾಗೂ ಫಾರ್ಮಾ ಡಿಯಲ್ಲಿ 15ನೇ ರ್‍ಯಾಂಕ್ ಪಡೆದು ಅಭೂತಪೂರ್ವ ಸಾಧನೆ ಮಾಡಿದ್ದಾರೆ.

ಸಾಧನೆ ಮಾಡಿದ ಉಳಿದ ಪ್ರಮುಖ ವಿದ್ಯಾರ್ಥಿಗಳೆಂದರೆ ಧೀರಜ್ ಎನ್. (ಬಿಎನ್‌ವೈಎಸ್ – 12, ನರ್ಸಿಂಗ್ ಹಾಗೂ ಪಶುವೈದ್ಯಕೀಯ – 28, ಬಿಟಿಟಿ, ಫುಡ್‌ಸೈನ್ಸ್, ಡಿ ಫಾರ್ಮಾ, ಕೃಷಿ, ಸೆರಿಕಲ್ಚರ್, ಹಾಗೂ ಎಚ್‌ಎಸ್‌ನಲ್ಲಿ 50ನೇ ರ್‍ಯಾಂಕ್), ಪ್ರೇರಣಾ ಪಾಟೀಲ್ (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 13, ಬಿಎನ್‌ವೈಎಸ್‌ನಲ್ಲಿ 44ನೇ ರ್‍ಯಾಂಕ್), ಉಜ್ವಲ್ ಶಿವಾನಂದ್ ಬೂದಿಹಾಳ್ (ಎಂಜಿನಿಯರಿಂಗ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 15, ಬಿಎನ್‌ವೈಎಸ್‌ನಲ್ಲಿ 47ನೇ ರ್‍ಯಾಂಕ್), ತನ್ಮಯ್ ಆರ್. ಎಸ್. ಪಾಡಿಗಟ್ಟೆ (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 16ನೇ ರ್‍ಯಾಂಕ್, ಬಿ ಫಾರ್ಮಾ, ಫಾರ್ಮಾ ಡಿಯಲ್ಲಿ 38, ನರ್ಸಿಂಗ್, ಪಶುವೈದ್ಯಕೀಯ ಹಾಗೂ ಬಿಎನ್‌ವೈಎಸ್ 43ನೇ ರ್‍ಯಾಂಕ್), ದೀಪಕ್ ಗೌಡ ಎಂ. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 23ನೇ ರ್‍ಯಾಂಕ್), ಜಿ.ಸಿಂಚನ (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 24ನೇ ರ್‍ಯಾಂಕ್), ಶ್ರೀವತ್ಸ ಎಂ. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ – 26ನೇ ರ್‍ಯಾಂಕ್), ಸಾರ್ಥಕ್ ಆರ್. ಶೆಟ್ಟಿ (ಇಂಜಿನಿಯರಿಂಗ್‌ನಲ್ಲಿ 26, ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 37ನೇ ರ್‍ಯಾಂಕ್), ಕದಂ ಸಾತ್ವಿಕ್ ಸುನಿಲ್ (ನರ್ಸಿಂಗ್ ಹಾಗೂ ಪಶುವೈದ್ಯಕೀಯದಲ್ಲಿ 27ನೇ ರ್‍ಯಾಂಕ್), ಯಶಸ್ ಎನ್.ಎಂ. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 29ನೇ ರ್‍ಯಾಂಕ್), ಕೆ.ವೈ. ವೀಕ್ಷಿತ್ (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 30ನೇ ರ್‍ಯಾಂಕ್), ನಿತೀಶ್ ಗೋಪಾಲ್ (ಇಂಜಿನಿಯರಿಂಗ್ 31ನೇ ರ್‍ಯಾಂಕ್), ವರುಣ್ ಚಾಕೋಟೆ (ಫುಡ್ ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 32ನೇ ರ್‍ಯಾಂಕ್), ಮುಕ್ತಾ ಎಸ್. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 34ನೇ ರ್‍ಯಾಂಕ್), ಮಿಲನ್ ಮಾದೇಶ ಎಸ್. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 36ನೇ ರ್‍ಯಾಂಕ್), ಅಮೋಘ ವರ್ಷ ಜಿ. (ಬಿಎನ್ ವೈಎಸ್‌ನಲ್ಲಿ 26, ಬಿ ಫಾರ್ಮಾ ಹಾಗೂ ಫಾರ್ಮಾ ಡಿಯಲ್ಲಿ 37ನೇ ರ್‍ಯಾಂಕ್, ನರ್ಸಿಂಗ್ ಹಾಗೂ ಪಶುವೈದ್ಯಕೀಯದಲ್ಲಿ 42ನೇ ರ್‍ಯಾಂಕ್), ಅಮೋಘ್ ಬಿ. ಲೋಕ (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 39ನೇ ರ್‍ಯಾಂಕ್), ನಂದನ್ ನಾಯಕ್ (ಫುಡ್ ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 40ನೇ ರ್‍ಯಾಂಕ್), ರಾಜೀವ್ ಲೋಚನ್ ರೆಡ್ಡಿ ಟಿ. (ಬಿಪಿಓ– 40ನೇ ರ್‍ಯಾಂಕ್), ನರೆನ್ ವಿ. (ಇಂಜಿನಿಯರಿಂಗ್ – 44ನೇ ರ್‍ಯಾಂಕ್), ಪೊನ್ನೇಶ್ ಎ.ಸಿ. (ಫುಡ್‌ಸೈನ್ಸ್, ಕೃಷಿ ಹಾಗೂ ಸೆರಿಕಲ್ಚರ್‌ನಲ್ಲಿ 45ನೇ ರ್‍ಯಾಂಕ್), ಜೀವನ್ ಫ್ರಾನ್ಸಿಸ್ ಫೆರ್ನಾಂಡಿಸ್ (ಬಿಎನ್‌ವೈಎಸ್ – 45ನೇ ರ್‍ಯಾಂಕ್), ನಿಖಿಲ್ ಭೂಷಣ್ ಶ್ರೀನಿವಾಸ್ (ಬಿಎನ್ ವೈಎಸ್ – 46ನೇ ರ್‍ಯಾಂಕ್), ಡಿ. ನವನೀತ್ ಎನ್. ಪೈ (ಬಿಟಿಟಿ, ಡಿ–ಫಾರ್ಮಾ, ಎಚ್‌ಎಸ್‌ನಲ್ಲಿ 49ನೇ ರ್‍ಯಾಂಕ್), ಅರ್ನವ್ ಅಗರ್ವಾಲ್ (ಬಿಎನ್ ವೈಎಸ್ – 48ನೇ ರ್‍ಯಾಂಕ್) ಆಗಿದ್ದಾರೆ.

ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) 2026ರ ಫಲಿತಾಂಶದಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ಸಾಧಿಸಿರುವ ಅತ್ಯುತ್ತಮ ಯಶಸ್ಸು ಅವರ ನಿರಂತರ ಪರಿಶ್ರಮ, ಪೋಷಕರ ಪ್ರೋತ್ಸಾಹ ಹಾಗೂ ನಮ್ಮ ಶಿಕ್ಷಕರ ಸಮರ್ಪಿತ ಮಾರ್ಗದರ್ಶನದ ಪ್ರತಿಫಲವಾಗಿದೆ. ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ಪರಿಸರ, ಸರಿಯಾದ ಉತ್ತಮ ಮಾರ್ಗದರ್ಶನದಿಂದಾಗಿ ಈ ಸಾಧನೆ ಸಾಧ್ಯವಾಗಿದೆ. ಶೈಕ್ಷಣಿಕ ಗುಣಮಟ್ಟ, ಶಿಸ್ತು ಮತ್ತು ವಿದ್ಯಾರ್ಥಿ ಕೇಂದ್ರಿತ ತರಬೇತಿಗೆ ನಾವು ನೀಡಿರುವ ಆದ್ಯತೆಯು ಈ ಯಶಸ್ಸಿನ ಮೂಲಕ ಮತ್ತೊಮ್ಮೆ ಸಾಬೀತಾಗಿದೆ. ರಾಜ್ಯ ಮಟ್ಟದಲ್ಲಿ ಉನ್ನತ ರ್‍ಯಾಂಕ್ ಗಳಿಸಿದ ಎಲ್ಲಾ ವಿದ್ಯಾರ್ಥಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.
■ **ಪ್ರೊ. ನರೇಂದ್ರ ಎಲ್. ನಾಯಕ್,**
ಎಕ್ಸ್‌ಪರ್ಟ್ ಸಂಸ್ಥೆಯ ಅಧ್ಯಕ್ಷ

ಸೌಲಭ್ಯಕ್ಕಾಗಿ ಸಂಪನ್ಮೂಲ ಕ್ರೋಢೀಕರಣ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯ ಐದು ನಗರಪಾಲಿಕೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಹಾಗೂ ನಾಗರಿಕ ಸೌಲಭ್ಯಗಳ ವಿಸ್ತರಣೆಗೆ ಭಾರಿ ಮೊತ್ತದ ಹಣಕಾಸು ಸಂಪನ್ಮೂಲ ಕ್ರೋಢೀಕರಣಕ್ಕೆ ಮುಂದಾಗಿದೆ. ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಯೋಜನೆಗಳ ದೂರದರ್ಶಿತ್ವದ ಲಾಭವನ್ನು ಪಡೆದುಕೊಳ್ಳಲು ಮುಂದಾಗಿರುವ ಪಾಲಿಕೆಗಳು ಮುನ್ಸಿಪಲ್ ಬಾಂಡ್‌ಗಳ ಮೂಲಕ ಒಟ್ಟು 1,000 ಕೋಟಿ ರೂ. ಬೃಹತ್ ಸಾಲ ಪಡೆಯಲು ಸಕಲ ಸಿದ್ಧತೆಗಳನ್ನು ನಡೆಸಿವೆ.

ಮುನ್ಸಿಪಲ್ ಬಾಂಡ್‌ಗಳ ಮೂಲಕ ಸಂಗ್ರಹವಾಗುವ ನಿಧಿಯನ್ನು ನಗರದ ಸರ್ವತೋಮುಖ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತದೆ. ಸುಸಜ್ಜಿತ ರಸ್ತೆಗಳ ನಿರ್ಮಾಣ ಮತ್ತು ಚರಂಡಿ ವ್ಯವಸ್ಥೆಯ ಉನ್ನತೀಕರಣ, ಸಾರ್ವಜನಿಕರಿಗೆ ನಿರಂತರ ಹಾಗೂ ಶುದ್ಧ ಕುಡಿಯುವ ನೀರಿನ ಪೂರೈಕೆ, ನಗರದ ಜೀವನಾಡಿಯಾಗಿರುವ ಕೆರೆಗಳ ಅಭಿವೃದ್ಧಿ ಮತ್ತು ಸಾರ್ವಜನಿಕ ಮೂಲಸೌಕರ್ಯಗಳ ವೃದ್ಧಿಗೆ ಬಳಸಲು ಐದು ಪಾಲಿಕೆಗಳು ಚಿಂತನೆ ನಡೆಸಿವೆ.

ಕೇವಲ ಶೇ. 4ರ ಬಡ್ಡಿ ದರ ಈ ಬಾಂಡ್‌ಗಳ ಮೂಲಕ ಲಭ್ಯವಾಗುವ ಸಾಲದ ಮೇಲಿನ ವಾರ್ಷಿಕ ಬಡ್ಡಿದರವು ಆಡಳಿತಾತ್ಮಕವಾಗಿ ಅತ್ಯಂತ ಲಾಭದಾಯಕವಾಗಿದ್ದು, ಕೇಂದ್ರ ಸರ್ಕಾರದ ಪ್ರೋತ್ಸಾಹಕ ನಿಯಮಾವಳಿಗಳ ಪ್ರಕಾರ, ಪ್ರತಿ 100 ಕೋಟಿ ರೂ. ಸಾಲ ಕ್ರೋಢೀಕರಣಕ್ಕೆ ಶೇ. 15 ರಷ್ಟು ಪ್ರೋತ್ಸಾಹ ಧನ (ಸಬ್ಸಿಡಿ) ಸಿಗಲಿದೆ. 10 ವರ್ಷಗಳ ಅವಧಿಯೊಳಗೆ ಈ ಸಾಲವನ್ನು ನಿಯಮಬದ್ಧವಾಗಿ ಮರುಪಾವತಿಸಿದರೆ, ಪಾಲಿಕೆಗಳಿಗೆ ಹೆಚ್ಚುವರಿ ಹಣಕಾಸು ಸೌಲಭ್ಯ ಹಾಗೂ ಶೇ. 15 ರಷ್ಟು ಸಬ್ಸಿಡಿಯ ಪೂರ್ಣ ಲಾಭ ಸಿಗಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಮುಂಬರುವ ನಗರಪಾಲಿಕೆ ಚುನಾವಣೆಗಳ ಹಿನ್ನೆಲೆಯಲ್ಲಿ ನನೆಗುದಿಗೆ ಬಿದ್ದಿರುವ ಹಾಗೂ ಹೊಸ ಅಭಿವೃದ್ಧಿ ಕಾರ್ಯಗಳಿಗೆ ತ್ವರಿತ ಗತಿ ನೀಡಲು ಈ ಆರ್ಥಿಕ ಮಾದರಿಯು ಸಹಕಾರಿಯಾಗಲಿದೆ.

ರಾಮ ಬಾಣ



ಆನ್‌ಲೈನ್ ಗೇಮ್ ಹುಚ್ಚಾಟ ತಂದೆ, ಅಕ್ಕನ ಹತ್ಯೆಗೈದ ಬಾಲಕ

ಕೊಪ್ಪಳ: ಗಂಗಾವತಿ ತಾಲೂಕಿನ ಹೊಸ ಅಯೋಧ್ಯ ಗ್ರಾಮದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ಸಹೋದರಿಗೆ ಚಾಕು ಇರಿದಿದ್ದು, ತಂದೆ ವೆಂಕಟನಾಯ್ಡು (45) ಹಾಗೂ ಅಕ್ಕ ಪ್ರಗತಿ (19) ಮೃತಪಟ್ಟಿದ್ದಾರೆ. ತಾಯಿ ಸೌಜನ್ಯ ಸ್ಥಿತಿ ಗಂಭೀರವಾಗಿದ್ದು, ಆ ಬಾಲಕ ಕೂಡ ಕೊನೆಯಲ್ಲಿ ತನ್ನ ಕುತ್ತಿಗೆಗೆ ಚಾಕುವಿನಿಂದ ಇರಿದುಕೊಂಡಿದ್ದಾನೆ. ಇವರಿಬ್ಬರಿಗೂ ಬಳ್ಳಾರಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಪಿಯುಸಿ ದ್ವಿತೀಯ ವರ್ಷದ ವಿದ್ಯಾರ್ಥಿಯಾದ ಬಾಲಕ ಮೊಬೈಲ್ ದಾಸನಾಗಿದ್ದ. ಆನ್‌ಲೈನ್ ಗೇಮ್ ಆಡುವುದನ್ನು ವ್ಯಸನ ಮಾಡಿಕೊಂಡಿದ್ದ ಮಗನಿಗೆ ಬುದ್ದಿವಾದ ಹೇಳಿದ್ದಕ್ಕೆ ಕೃತ್ಯ ಎಸಗಿದ್ದಾನೆ ಎನ್ನುವುದು ಪ್ರಾಥಮಿಕ ಮಾಹಿತಿಯಿಂದ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಗಿದ್ದೇನು: ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಹೊಸ ಆಯೋಧ್ಯೆ ಗ್ರಾಮದ ವೆಂಕಟನಾಯ್ಡು ಖಾಸಗಿ ಶಾಲೆಯೊಂದರಲ್ಲಿ ಅಡುಗೆ ಭಟ್ಟನಾಗಿ ಕೆಲಸ ಮಾಡುತ್ತಿದ್ದು, ಅವರು ಪತ್ನಿ, ಇಬ್ಬರು ಮಕ್ಕಳು ಮತ್ತು ಅವರ ತಂದೆ ತಾಯಿ ಶನಿವಾರ ರಾತ್ರಿ ಒಟ್ಟಿಗೆ ಊಟ ಮಾಡಿದ್ದಾರೆ. ಬಳಿಕ ವೆಂಕಟನಾಯ್ಡು ಕುಟುಂಬದ ನಾಲ್ವರು ಒಂದು ಕೊಠಡಿಗೆ ಹಾಗೂ ಅವರ ಪೋಷಕರು ಒಂದು ಕೊಠಡಿಯಲ್ಲಿ ಮಲಗಿದ್ದಾರೆ. ರಾತ್ರಿ 10.30ರ ಸುಮಾರಿಗೆ ವೆಂಕಟನಾಯ್ಡು ಮಲಗಿದ್ದ ಕೊಠಡಿಯಲ್ಲಿ ಗಲಾಟೆಯಾಗುತ್ತಿದ್ದ ಸದ್ದು ಕೇಳಿದ್ದು ಬಾಗಿಲು ತೆರೆಯಿರಿ ಎಂದು ಅರಚಿದ್ದಾರೆ.

> **ಬಾಲಕ ಚಾಕು ಇರಿದಿದ್ದಾನೆ ಎಂದು ದೂರು ನೀಡಿದ್ದರಿಂದ ದಾಖಲಿಸಿಕೊಂಡಿದ್ದೇವೆ. ಆನ್‌ಲೈನ್ ಮೊಬೈಲ್ ಗೀಳು ಸೇರಿ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ.**
> ■ ಡಾ.ರಾಮ್ ಎಲ್. ಅರಸಿದ್ಧಿ, ಎಸ್ಪಿ

ಕಿಡಿ ನುಡಿ
ವಾಸುದೇವರಾವ್ ಕಕ್ಕೆನೇಜಿ

◈ ಜನಾಕ್ರೋಶ ಹತ್ತಿಕ್ಕಲು ಮೋದಿ ತುರ್ತು ಪರಿಸ್ಥಿತಿ ಹೇರಬಹುದು – ರಾಹುಲ್ ಗಾಂಧಿ
-ನೀವು ಹೇಳುತ್ತಿರೋದು ಇಂದಿರಾ ಗಾಂಧಿ ಮೋಡೆಲ್ ಕಾಲದ್ದು, ಈಗಿನದ್ದು ನರೇಂದ್ರ ಮೋದಿ ಮೋಡೆಲ್. ಹಾಗಾಗಿ ಹಾಗಾಗಲು ಸಾಧ್ಯವಿಲ್ಲ!

ದಿನ ಭವಿಷ್ಯ

ಮೇಷ ಹೊರಗಿನ ವ್ಯವಹಾರದಲ್ಲಿ ಹೆಚ್ಚು ವ್ಯಸ್ತ. ಆರ್ಥಿಕ ಸ್ಥಿರತೆ. ದಂಪತಿಗಳಿಗೆ ಶುಭ ಬೆಳವಣಿಗೆ. ಉಪಯುಕ್ತ ವಸ್ತು ಖರೀದಿ ಸಂಭವ.

ವೃಷಭ ಹೊಟ್ಟೆ ಕೆಡುವ ಸಾಧ್ಯತೆ. ಆಹಾರದಲ್ಲಿ ಎಚ್ಚರ ವಹಿಸಿ. ಸಂಗಾತಿ ಜತೆ ಭಿನ್ನಾಭಿಪ್ರಾಯ. ದೇಹಾಭ್ಯಾಸ ಅತಿಯಾಗಿ ಮಾಡಬೇಡಿ.

ಮಿಥುನ ನಿಲ್ಲಿಸಿದ್ದ ಯೋಜನೆ ಅಥವಾ ಕಾರ್ಯಕ್ಕೆ ಮರುಚಾಲನೆ ನೀಡಿ. ಅನ್ಯರ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರಿ. ಕೌಟುಂಬಿಕ ಸಾಮರಸ್ಯ.

ಕಟಕ ಇತರರ ಜತೆ ಮಾತನಾಡುವಾಗ ತಾಳ್ಮೆ ವಹಿಸಿ. ಸಣ್ಣ ವಿಷಯಕ್ಕೆ ರೇಗದಿರಿ. ಬಂಧುಗಳ ಜತೆ ಪ್ರವಾಸ ಹೋಗುವ ಅವಕಾಶ ಸಿಗಲಿದೆ.

ಸಿಂಹ ಮನಸ್ಥಿತಿ ಏರುಪೇರು ಮಾಡುವ ಬೆಳವಣಿಗೆ. ಎಲ್ಲವನ್ನು ಸರಿತೂಗಿಸಿಕೊಂಡು ಹೋಗಿ. ಅನ್ಯರ ಟೀಕೆಗೆ ಬೆಲೆ ಕೊಡಬೇಡಿ.

ಕನ್ಯಾ ಸಂಗಾತಿ ಜತೆ ಪ್ರಾಮಾಣಿಕತೆಯಿಂದ ವರ್ತಿಸಿ. ಮುಚ್ಚುಮರೆ ಬೇಡ. ವೃತ್ತಿಯಲ್ಲಿ ತೊಡಕು. ಗಮನವಿಟ್ಟು ಕಾರ್ಯ ನಿರ್ವಹಿಸಿ.

ತುಲಾ ವೃತ್ತಿಯಲ್ಲಿ ಹೊಸ ಸವಾಲು. ಧೃತಿಗೆಡಬೇಡಿ. ಆರ್ಥಿಕ ನಷ್ಟವಾದೀತು. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಬಂಧು ಜತೆ ವಿರಸವಾದೀತು.

ವೃಶ್ಚಿಕ ಆರ್ಥಿಕ ಸ್ಥಿರತೆ, ವ್ಯವಹಾರ ಹಿಗ್ಗಿಸಲು ಅವಕಾಶ. ಕೌಟುಂಬಿಕ ವಿಚಾರದಲ್ಲಿ ತುಸು ಚಿಂತೆ. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ.

ಧನು ಲಾಭವೂ ಇಲ್ಲದ ನಷ್ಟವೂ ಇಲ್ಲದ ದಿನ. ಹಣ ಗಳಿಕೆಯ ಸುಲಭ ದಾರಿಗೆ ಹೋಗದಿರಿ. ಆಪ್ತರೊಬ್ಬರು ಮನಸ್ಸಿಗೆ ನೆಮ್ಮದಿ, ಸಂತೋಷ ತರುವರು.

ಮಕರ ಸಹೋದ್ಯೋಗಿ ಜತೆ ಎಚ್ಚರದಿಂದ ವ್ಯವಹರಿಸಿ. ಜಗಳ, ಭಿನ್ನಮತ ಉಂಟಾದೀತು. ದೀರ್ಘಾವಧಿ ಯೋಜನೆಗೆ ಹಣ ಹೂಡಬೇಡಿ.

ಕುಂಭ ಸ್ವಂತ ವ್ಯವಹಾರ ಆರಂಭಿಸಲು ಕಾಲ ಸೂಕ್ತವಾಗಿದೆ. ಜಡತ್ವ ಬಿಟ್ಟು ಕೆಲಸ ಮಾಡಿ. ಆರ್ಥಿಕ ಒತ್ತಡ ನಿವಾರಣೆ, ಧನಾಗಮ.

ಮೀನ ಮನೆಯವರ ಜತೆ ಅನುನಯದಿಂದ ವರ್ತಿಸಿ. ಕೋಪತಾಪ ಬೇಡ. ಮಕ್ಕಳು ಹಠಮಾರಿ ಧೋರಣೆ ತೋರುವರು. ಸಂಯಮವಿರಲಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00
ಅದೃಷ್ಟ ಸಂಖ್ಯೆ: 3,9,4,7

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಬಣ್ಣನೆ
ಸಾಧನೆ ಮುಂದೆ ಸಂಪತ್ತು ಗೌಣ

ಬೆಂಗಳೂರು: ಹಣ, ಆಸ್ತಿ, ಸಂಪತ್ತುಗಳಿಕೆ ಖುಷಿ ಕೊಡುತ್ತದೆ ಎಂಬುದು ನಿಜ, ಆದರೆ ಸಾಧನೆಗಳ ಮುಂದೆ ಈ ಎಲ್ಲ ಸಂಪತ್ತುಗಳು ಗೌಣ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಬಣ್ಣಿಸಿದರು.

ವಿಶ್ವದ ಅತಿ ಎತ್ತರದ ಭೂಶಿಖರ ಮೌಂಟ್ ಎವರೆಸ್ಟ್ (8,848.86 ಮೀಟರ್) ಆರೋಹಣ ಮಾಡಿದ ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಸದಸ್ಯರಾದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರನ್ನು ಸಹಕಾರ ನಗರದ ವಿವಿಧ ಸಂಘ – ಸಂಸ್ಥೆಗಳ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಮಾತನಾಡಿದರು. ಸಂಪತ್ತು ಗಳಿಕೆಯಿಂದ ಚೆನ್ನಾಗಿರಬಹುದು. ಆದರೆ ಅದರ ಹೊರತಾಗಿಯೂ ಜೀವನ ಇದೆ. ಸಾಧನೆಗಳ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಂಡು ಮತ್ತೊಬ್ಬರಿಗೆ ಪ್ರೇರಣೆಯಾಗುವಂತೆ ಜೀವಿಸಬೇಕು. ಅಂತಹ ಬದುಕು ನೀಡುವ ಖುಷಿಗೆ ಮಿತಿ ಇರುವುದಿಲ್ಲ ಎಂದರು.

ಸಂತೋಷ ದೇವರಾಜಪ್ಪ ಕನ್ನಡಿಗರಷ್ಟೇ ಅಲ್ಲ, ಅವರು ನನ್ನ ಕ್ಷೇತ್ರದವರು ಎಂಬುದು ನನಗೆ ಇನ್ನೂ ಹೆಮ್ಮೆ. ಹೀಗಾಗಿ ನಾನೇ ಅವರನ್ನು ಗೌರವಿಸಬೇಕು ಎಂಬ ಆಶಯ ವ್ಯಕ್ತಪಡಿಸಿದೆ. ಆದರೆ ಸಹಕಾರ ನಗರದ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯಕ್ರಮ ಆಯೋಜನೆ ಮಾಡಿರುವುದು ತಿಳಿದ ನಂತರ ಅವರೊಟ್ಟಿಗೆ ನಾನೂ ಭಾಗಿಯಾದೆ ಎಂದು ಸಚಿವರು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದ ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ತ್ರಿಶೂಲಮೂರ್ತಿ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು . ಸಹಕಾರ ನಗರದ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ದೇವರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಕೆ. ಮೆಹತಾ ವೇದಿಕೆಯಲ್ಲಿದ್ದರು. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತ ಕೆ.ಸಿ. ವಿರೂಪಾಕ್ಷ ಅವರು ಸಂತೋಷ್ ದೇವರಾಜಪ್ಪ ಮತ್ತು ಡಾ. ಚಿನ್ಮಯಿ ಅವರ ಸಾಧನೆಯ ಹಾದಿಯನ್ನು ವಿವರಿಸಿದರು.



ಆಮ್ಲಜನಕ ಖಾಲಿಯಾಯ್ತು...
ಮೌಂಟ್ ಎವರೆಸ್ಟ್ ಆರೋಹಣ ಮಾಡಬೇಕು ಎಂಬ ಮಹದಾಸೆಯನ್ನೇನೋ ಈಡೇರಿಸಿಕೊಂಡೆವು. ಶಿಖರವನ್ನು ಇಳಿಯಬೇಕು ಎನ್ನುವ ಸಮಯದಲ್ಲಿ ನನ್ನ ಆಮ್ಲಜನಕ ಸಿಲಿಂಡರ್ ಖಾಲಿಯಾಯ್ತು. ಆಗ ನನಗೆ ನಿಜಕ್ಕೂ ಭಯವಾಯ್ತು. ದೇವರೇ ಎಂದು ಪ್ರಾರ್ಥಿಸಿದೆ. ಮೌಂಟ್ ಎವರೆಸ್ಟ್ ಶಿಖರ ಆರೋಹಣದ ಅನುಭವವನ್ನು ಹಂಚಿಕೊಳ್ಳುವ ವೇಳೆ ಈ ಸಂದರ್ಭವನ್ನು ನೆನೆದ ಸಂತೋಷ್ ದೇವರಾಜಪ್ಪ ಅವರು ಕೆಲ ಕ್ಷಣ ಭಾವುಕರಾದರು. ನನ್ನ ಜೊತೆಗಿದ್ದ ಶೆರ್ಪಾ ಅವರಿಗೆ ಆಮ್ಲಜನಕ ಖಾಲಿಯಾದ ವಿಷಯ ತಿಳಿಸಿದೆ. ಅವರು ಈಗ ಏನೂ ಮಾಡಲು ಸಾಧ್ಯವಿಲ್ಲ. ಮತ್ತೊಂದು ಸಿಲಿಂಡರ್ ಇರುವ ಸ್ಥಳಕ್ಕೆ ಇದೇ ಸ್ಥಿತಿಯಲ್ಲಿ ಹೋಗುವುದು ಅನಿವಾರ್ಯ ಎಂದು ಪರಿಸ್ಥಿತಿ ವಿವರಿಸಿದರು. ಆಮ್ಲಜನಕದ ಸಪೋರ್ಟ್ ಇಲ್ಲದೆ ಹೇಗೋ ಮತ್ತೊಂದು ಸಿಲಿಂಡರ್ ಇರುವ ಸ್ಥಳ ತಲುಪಿದ್ದಾಯ್ತು. ತಕ್ಷಣ ಸಿಲಿಂಡರ್ ಹಾಕಿಕೊಂಡೆ. ಅಷ್ಟರಲ್ಲಿ ನನ್ನ ದೇಹದಲ್ಲಿ ಆಮ್ಲಜನಕ ಕೊರತೆಯಿಂದ ಬದಲಾವಣೆಗಳು ಕಾಣಿಸತೊಡಗಿದ್ದವು. ಸಿಲಿಂಡರ್ ಹಾಕಿಕೊಳ್ಳುತ್ತಿದ್ದಂತೆ ಹೋದ ಜೀವ ಬಂದಂತೆ ಆಯಿತು ಎಂದು ಸ್ಮರಿಸಿದರು.

> **ಕರ್ನಾಟಕ ಮೌಂಟೇನೀರಿಂಗ್ ಅಸೋಸಿ ಯೇಷನ್ನ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನನ್ನನ್ನು ಮತ್ತು ಸಂತೋಷ್ ಅವರನ್ನು ಮೌಂಟ್ ಎವರೆಸ್ಟ್ ಆರೋಹಣಕ್ಕೆ ಆಯ್ಕೆ ಮಾಡಿದಾಗ ಇದು ಸಾಧ್ಯವೇ ಎಂಬ ಪ್ರಶ್ನೆ ಮೂಡಿತ್ತು.**
> ■ ಡಾ. ಚಿನ್ಮಯಿ ತ್ರಿಶೂಲಮೂರ್ತಿ, ಮೌಂಟ್ ಎವರೆಸ್ಟ್ ಏರಿದವರು

ಹಗರಣದ ರೋಚಕ ರಹಸ್ಯ ಬಿಚ್ಚಿಟ್ಟ ಸಿಐಡಿ

ಬೆಳಗಾವಿ: ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಬರೋಬ್ಬರಿ 4,500 ಕೋಟಿ ರೂಪಾಯಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ 'ಶಿವಂ ಅಸೋಸಿಯೇಟ್ಸ್' ಸಂಸ್ಥೆಯ ಮಾಲೀಕ ಶಿವಾನಂದ ನೀಲಣ್ಣನವರ್‌ನನ್ನು ಸಿಐಡಿ ಪೊಲೀಸರು ಬಂಧಿಸಿದ್ದು, ತನಿಖೆಯ ವೇಳೆ ವಂಚನೆ ನಡೆದಿರುವುದು ಸಾಕ್ಷ್ಯಸಮೇತ ಸಾಬೀತಾಗಿದೆ.



ಈ ಕುರಿತು ಬೆಳಗಾವಿಯಲ್ಲಿ ಮಹತ್ವದ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಸಿಐಡಿ ಡಿಐಜಿಪಿ ಡಾ. ಭೀಮಾಶಂಕರ್ ಗುಳೇದ್ ಅವರು ಪ್ರಕರಣದ ಸ್ಫೋಟಕ ಮಾಹಿತಿಗಳನ್ನು ಮಾಧ್ಯಮಗಳ ಮುಂದೆ ಬಿಚ್ಚಿಟ್ಟಿದ್ದಾರೆ. ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮೇಲೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯಿಂದ ಜಂಟಿ ದಾಳಿ ನಡೆದು, ಎಫ್‌ಐಆರ್ ದಾಖಲಾದ ಬಳಿಕವೂ ಸಾರ್ವಜನಿಕರು ಶಿವಂ ಅಸೋಸಿಯೇಟ್ಸ್‌ಗೆ ಮತ್ತೆ 5 ಕೋಟಿ ರೂಪಾಯಿ ಹೂಡಿಕೆ ಮಾಡಿದ್ದಾರೆ. ಹಾಗಾಗಿ, ಇನ್ಮುಂದೆ ಯಾದರೂ ಸಾರ್ವಜನಿಕರು ಎಚ್ಚೆತ್ತುಕೊಳ್ಳಲಿ ಮತ್ತು ಇಂತಹ ವಂಚನೆಗೆ ಬಲಿ ಬೀಳದಿರಲಿ ಎಂಬ ಆಗ್ರಹಿಸಿದ್ದಾರೆ.

ಹೊಸಬರ ಹಣ ಹಳಬರಿಗೆ ಬಡ್ಡಿ: ಪೊಂಜಿ ಸ್ಕೀಮ್'ರಹಸ್ಯ ಮುಖವಾಡ ಕಳಚಿದ ಸಿಐಡಿ ಸಿಐಡಿ ಡಿಐಜಿಪಿ ಮಾಹಿತಿ ನೀಡಿರುವ ಪ್ರಕಾರ, ಶಿವಾನಂದ ನೀಲಣ್ಣವರ್ ಈವರೆಗೆ ಸುಮಾರು 40,700 ಹೂಡಿಕೆದಾರರಿಂದ ಒಟ್ಟು 2,400 ಕೋಟಿ ರೂಪಾಯಿ ಸಂಗ್ರಹಿಸಿದ್ದಾನೆ. ಈ ಪೈಕಿ ಬಹುಪಾಲು ಹಣವನ್ನು ಸಾರ್ವಜನಿಕರಿಗೆ ಹಿಂದಿರುಗಿಸಿದ್ದಾನೆ. ಹೊಸದಾಗಿ ಬರುತ್ತಿದ್ದ ಹೂಡಿಕೆದಾರರ ಹಣವನ್ನು ಹಳಬರಿಗೆ ಬಡ್ಡಿಯ ರೂಪದಲ್ಲಿ ಹಂಚಲಾಗುತ್ತಿತ್ತು. ಆದರೆ, ಹೊಸದಾಗಿ ಸಂಗ್ರಹವಾಗುತ್ತಿದ್ದ ಹಣಕ್ಕಿಂತ ಹಳಬರಿಗೆ ಕೊಡಬೇಕಾದ ಬಡ್ಡಿಯ ಮೊತ್ತವೇ ಹೆಚ್ಚಾದಾಗ ಇಡೀ ವ್ಯವಸ್ಥೆ ಕುಸಿದು ಬಿದ್ದು, ವಂಚನೆಯ ರಹಸ್ಯ ಬಯಲಾಗಿದೆ.

ಷೇರು ಮಾರುಕಟ್ಟೆಯಲ್ಲಿ ನಷ್ಟ, ಸ್ವಂತಕ್ಕೆ ಬಳಕೆ: ಸಂಗ್ರಹಿಸಿದ ಹಣದಲ್ಲಿ 540 ಕೋಟಿ ರೂಪಾಯಿಯನ್ನು ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಲಾಗಿದ್ದು, ಅದರಲ್ಲಿ 170 ಕೋಟಿ ರೂಪಾಯಿ ನಷ್ಟ ಮಾಡಿಕೊಳ್ಳಲಾಗಿದೆ. ಸದ್ಯದ ತನಿಖೆಯಲ್ಲಿ 660 ಕೋಟಿ ರೂ. ಕೊರತೆ ಕಂಡು ಬಂದಿದ್ದು, ಇದರಲ್ಲಿ 330 ಕೋಟಿ ರೂ. ರಿಕವರಿ ಮಾಡಬಹುದು ಎಂದು ಅಂದಾಜಿಸಲಾಗಿದೆ. ಮಾಲೀಕ ನೀಲಣ್ಣವರ್ ಕಂಪನಿಯಿಂದ ಕಾನೂನು ಬಾಹಿರವಾಗಿ 55 ಕೋಟಿ ರೂ. ಹಣವನ್ನು ತನ್ನ ವೈಯಕ್ತಿಕ ಖಾತೆಗೆ ವರ್ಗಾಯಿಸಿಕೊಂಡಿದ್ದಾನಲ್ಲದೆ, ಪ್ರಕರಣದಲ್ಲಿ ಮತ್ತೊಬ್ಬ ಪಾಲುದಾರನೂ ಶಾಮೀಲಾಗಿದ್ದಾನೆ. ಆರೋಪಿಯಿಂದ ಈಗಾಗಲೇ 5 ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಲಾಗಿದೆ.

ಚಂದ್ರಗುಪ್ತ ಗುಪ್ತಚರ, ಪ್ರಣಬ್ ಮೊಹಾಂತಿಗೆ ಸಿಐಡಿ ಜವಾಬ್ದಾರಿ

ಪುಟ ೧➜ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಕಂದಾಯ ವಿಭಾಗದಲ್ಲಿ) ವಿಶೇಷ ಆಯುಕ್ತರಾಗಿರುವ ಮೌನಿಷ್ ಮೌದ್ಗಿಲ್ ಅವರನ್ನು ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಯನ್ನಾಗಿ (ಕಾರ್ಯಕ್ರಮ ಹಾಗೂ ಯೋಜನೆ ಜಾರಿ) ಹೊಸದಾಗಿ ಸೃಷ್ಟಿಸಿದ ಹುದ್ದೆಯ ಜವಾಬ್ದಾರಿ ನೀಡಲಾಗಿದೆ. ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆಯ ಕಾರ್ಯದರ್ಶಿಯನ್ನಾಗಿ ವರ್ಗಾವಣೆ ಮಾಡಲಾಗಿದೆ. ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಯನ್ನಾಗಿ ಬಿ.ಬಿ.ಕಾವೇರಿಯವರನ್ನು ನೇಮಿಸಲಾಗಿದೆ. ಯೋಜನೆ ಹಾಗೂ ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಯಾಗಿದ್ದ ಎಂ.ವಿ.ವೆಂಕಟೇಶ್ ಅವರನ್ನು ಸಹಕಾರ ಸಂಘಗಳ ಉಪನಿಬಂಧಕರ ಹುದ್ದೆಗೆ ವರ್ಗಾಯಿಸಲಾಗಿದೆ. ಆರ್. ಸೆಲ್ವಮಣಿ ಅವರನ್ನು ಸಾರಿಗೆ ಇಲಾಖೆ ಆಯುಕ್ತರನ್ನಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ.

ವಿದೇಶಿಯರಿದ್ದರೆ ಮಾಹಿತಿ ನೀಡಿ

ಪುಟ ೧➜ ಕಳೆದ ವರ್ಷ ಬಿಹಾರದಲ್ಲಿ ನಡೆದ ಪರಿಷ್ಕರಣೆ ವೇಳೆ ಬಾಂಗ್ಲಾದೇಶ, ನೇಪಾಳ ಮತ್ತು ಮ್ಯಾನ್ಮಾರ್‌ನ ಹಲವು ನಾಗರಿಕರು ಮತದಾರರ ಪಟ್ಟಿಯಲ್ಲಿದ್ದಾರೆ ಎಂದು ಅಧಿಕಾರಿಗಳು ಹೇಳಿಕೊಂಡಿದ್ದರು. ಆದರೆ, ಆಯೋಗವು ಯಾವುದೇ ನಿಖರ ಸಂಖ್ಯೆ ಅಥವಾ ಪುರಾವೆಗಳನ್ನು ಹಂಚಿಕೊಂಡಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಚುನಾವಣಾ ಆಯೋಗದ ಈ ಕ್ರಮವನ್ನು ತೀವ್ರವಾಗಿ ಟೀಕಿಸಿದ್ದವು.

ಕೋಟಿಗಟ್ಟಲೆ ಮತದಾರರ ಹೆಸರು ಕಡಿತ: ಈ ಹಿಂದೆ ನಡೆದ 2ನೇ ಹಂತದ ಪರಿಷ್ಕರಣೆಯಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ಮತದಾರರ ಪಟ್ಟಿಯಿಂದ ಬರೋಬ್ಬರಿ ಶೇ.10.2 ರಷ್ಟು ಹೆಸರುಗಳನ್ನು ಕೈಬಿಡಲಾಗಿದೆ. 50.99 ಕೋಟಿ ಇದ್ದ ಮತದಾರರ ಸಂಖ್ಯೆ 45.81 ಕೋಟಿಗೆ ಕುಸಿದಿದ್ದು, ಒಟ್ಟಾರೆ 5.18 ಕೋಟಿ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇದರಲ್ಲಿ 60 ಲಕ್ಷಕ್ಕೂ ಹೆಚ್ಚು ಮೃತ ಮತದಾರರು ಸೇರಿದ್ದಾರೆ.

ಈ ಹಿಂದೆ ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ ಸೇರಿದಂತೆ ಹಲವು ನಾಯಕರು ಈ ಪ್ರಕ್ರಿಯೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಹಿಮಾಚಲ ಪ್ರದೇಶ, ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನಲ್ಲಿ ಹವಾಮಾನ ವೈಪರೀತ್ಯ ಕಾರಣದಿಂದಾಗಿ ನಂತರದ ದಿನಗಳಲ್ಲಿ ಈ ಪ್ರಕ್ರಿಯೆ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

ಶಿಕ್ಷಕರ ಹುದ್ದೆ ಭರ್ತಿ

ಬೆಂಗಳೂರು: ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ತಂತ್ರಾಂಶದ ಮೂಲಕವೇ ನಡೆಸಲು ಶಾಲಾ ಶಿಕ್ಷಣ ಇಲಾಖೆ ತೀರ್ಮಾನಿಸಿದೆ. 2016 ರಿಂದ 2020 ರವರೆಗೆ ನಿವೃತ್ತಿ ಮತ್ತು ಅಕಾಲಿಕ ಮರಣದಿಂದಾಗಿ ತೆರವಾಗಿದ್ದ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಈ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಕಳೆದ 11 ವರ್ಷಗಳಿಂದ ಶಿಕ್ಷಕರ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗಲಿದೆ.ಸಂಪೂರ್ಣ ನೇಮಕಾತಿ ಪ್ರಕ್ರಿಯೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಮಾತುಕತೆ ಮೂಲಕ ಗಡಿ ವಿವಾದ ಇತ್ಯರ್ಥ

ಪುಟ ೧➜ **ಚೀನಾ-ಬ್ರಿಟನ್ ಮಧ್ಯಸ್ಥಿಕೆ ಕುರಿತ ಗೊಂದಲಕ್ಕೆ ಸ್ಪಷ್ಟನೆ:** ಇತ್ತೀಚೆಗೆ ನೇಪಾಳ ಪ್ರಧಾನಿ ಬಲೇನ್ ಶಾ ಅವರು ಗಡಿ ವಿವಾದ ಬಗೆಹರಿಸಲು ಚೀನಾ ಮತ್ತು ಬ್ರಿಟನ್ ಸಹಕಾರದ ಕುರಿತು ಹೇಳಿಕೆ ನೀಡಿದ್ದರಿಂದ ವಿವಾದ ಉಂಟಾಗಿತ್ತು. ಇದಕ್ಕೆ ಸ್ಪಷ್ಟನೆ ನೀಡಿದ ಖನಾಲ್, ಬ್ರಿಟನ್‌ನ ಪಾತ್ರ ಎಂದರೆ ಅಲ್ಲಿನ ಗ್ರಂಥಾಲಯಗಳು ಹಾಗೂ ವಸ್ತುಸಂಗ್ರಹಾಲಯಗಳಲ್ಲಿ ಇರುವ ಐತಿಹಾಸಿಕ ದಾಖಲೆಗಳನ್ನು ಪಡೆಯುವುದಷ್ಟೇ ಎಂದರು. ನಾವು ಮಧ್ಯಸ್ಥಿಕೆಯನ್ನು ಕೇಳಿಲ್ಲ. ವಿವಾದಗಳನ್ನು ರಾಜತಾಂತ್ರಿಕ ಮಾತುಕತೆಯ ಮೂಲಕವೇ ಬಗೆಹರಿಸಲು ಬಯಸುತ್ತೇವೆ. ಭಾವನಾತ್ಮಕ ರಾಷ್ಟ್ರವಾದದ ಬದಲಿಗೆ ದಾಖಲೆ ಹಾಗೂ ಸಾಕ್ಷ್ಯಾಧಾರಿತ ಚರ್ಚೆಗೆ ಒತ್ತು ನೀಡುತ್ತಿದ್ದೇವೆ ಎಂದು ಹೇಳಿದರು.

ಲಿಪುಲೇಖ್-ಕಾಲಾಪಾನಿ ವಿವಾದ ಮುಂದುವರಿಕೆ: ಲಿಪುಲೇಖ್, ಲಿಂಪಿಯಾಧುರಾ ಹಾಗೂ ಕಾಲಾಪಾನಿ ಪ್ರದೇಶಗಳ ಬಗ್ಗೆ ಭಾರತ ಮತ್ತು ನೇಪಾಳ ನಡುವೆ ಹಲವು ವರ್ಷಗಳಿಂದ ಗಡಿ ವಿವಾದವಿದೆ. ಈ ಪ್ರದೇಶಗಳು ಉತ್ತರಾಖಂಡದ ಭಾಗವೆಂದು ಭಾರತ ವಾದಿಸುತ್ತಿದ್ದು, ನೇಪಾಳ ತನ್ನ ಹಕ್ಕು ಪ್ರತಿಪಾದಿಸುತ್ತಿದೆ.

ಕೈಲಾಸ ಮಾನಸಸರೋವರ ಯಾತ್ರೆಗೆ ಲಿಪುಲೇಖ್ ಮಾರ್ಗ ಬಳಕೆಯ ಕುರಿತು ಭಾರತ ಮತ್ತು ಚೀನಾ ಮಾಡಿಕೊಂಡಿರುವ ಒಪ್ಪಂದಕ್ಕೆ ನೇಪಾಳ ಆಕ್ಷೇಪ ವ್ಯಕ್ತಪಡಿಸಿದೆ. ವಿವಾದಿತ ಪ್ರದೇಶದ ಬಗ್ಗೆ ನೇಪಾಳದ ಅನುಮತಿ ಇಲ್ಲದೆ ಯಾವುದೇ ಒಪ್ಪಂದ ಮಾಡಬಾರದು ಎಂಬುದನ್ನು ಎರಡೂ ದೇಶಗಳಿಗೆ ರಾಜತಾಂತ್ರಿಕವಾಗಿ ತಿಳಿಸಲಾಗಿದೆ ಎಂದು ಖನಾಲ್ ಹೇಳಿದರು.

ನೇಪಾಳ ಸಂಬಂಧಕ್ಕೆ ಮತ್ತಷ್ಟು ಬಲ: ಜೈಶಂಕರ್

ಪುಟ ೧➜ ಭಾರತ-ನೇಪಾಳ ಸಂಬಂಧವು ದಕ್ಷಿಣ ಏಷ್ಯಾದ ಅತ್ಯಂತ ಸ್ಥಿರ ಮತ್ತು ಬಲಿಷ್ಠ ಸಂಬಂಧಗಳಲ್ಲಿ ಒಂದಾಗಿದೆ ಎಂದರು. ಉಭಯ ದೇಶಗಳ ನಡುವಿನ ಮುಕ್ತ ಗಡಿ, ಜನರ ನಡುವಿನ ನಿಕಟ ಸಂಪರ್ಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಬಾಂಧವ್ಯಗಳು ಈ ಸಂಬಂಧದ ಭದ್ರ ಅಡಿಪಾಯವಾಗಿವೆ ಎಂದು ತಿಳಿಸಿದರು. ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ, ಹೂಡಿಕೆ, ಇಂಧನ, ಶಿಕ್ಷಣ, ಮೂಲಸೌಕರ್ಯ ಅಭಿವೃದ್ಧಿ, ವಿಪತ್ತು ನಿರ್ವಹಣೆ ಹಾಗೂ ಸಾಂಸ್ಕೃತಿಕ ವಿನಿಮಯ ಕ್ಷೇತ್ರಗಳಲ್ಲಿ ಸಹಕಾರ ಗಣನೀಯವಾಗಿ ವಿಸ್ತರಿಸಿದೆ ಎಂದು ಜೈಶಂಕರ್ ಹೇಳಿದರು. ಮುಂದಿನ ಹಂತದಲ್ಲಿ ಸ್ಟಾರ್ಟ್‌ಅಪ್‌ಗಳು, ಕೃತಕ ಬುದ್ಧಿಮತ್ತೆ (ಎಐ), ಮಾಹಿತಿ ತಂತ್ರಜ್ಞಾನ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸಲು ಎರಡೂ ದೇಶಗಳಿಗೆ ಉತ್ತಮ ಅವಕಾಶಗಳಿವೆ ಎಂದು ಅವರು ಅಭಿಪ್ರಾಯಪಟ್ಟರು. ಪಶ್ಚಿಮ ಏಷ್ಯಾದಲ್ಲಿನ ಅಸ್ಥಿರ ಪರಿಸ್ಥಿತಿಯ ನಡುವೆಯೂ ನೇಪಾಳದ ಇಂಧನ ಅಗತ್ಯಗಳನ್ನು ಪೂರೈಸಲು ಭಾರತ ನಿರಂತರ ಬೆಂಬಲ ನೀಡಿದೆ. ಅಲ್ಲದೆ ಗಡಿ ನಿರ್ವಹಣೆ ಮತ್ತು ಭದ್ರತಾ ಸಹಕಾರವೂ ಉಭಯ ರಾಷ್ಟ್ರಗಳ ಸಂಬಂಧದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನದಂತೆ, ನೇಪಾಳದೊಂದಿಗೆ ಮತ್ತಷ್ಟು ನಿಕಟವಾಗಿ ಕಾರ್ಯನಿರ್ವಹಿಸಿ ಉಭಯ ದೇಶಗಳ ಅಭಿವೃದ್ಧಿ, ಸಮೃದ್ಧಿ ಹಾಗೂ ಜನರ ಕಲ್ಯಾಣಕ್ಕಾಗಿ ಭಾರತ ಬದ್ಧವಾಗಿದೆ ಎಂದು ಜೈಶಂಕರ್ ಪುನರುಚ್ಚರಿಸಿದರು.

ರಾಜ್ಯದ ಹಲವೆಡೆ ಭಾರೀ ಮಳೆ

ಪುಟ ೧➜ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲೂ ಧಾರಾಕಾರ ಮಳೆ ಸುರಿಯುತ್ತಿದೆ. ಕರಾವಳಿ ಜಿಲ್ಲೆಗಳಾದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜೂ.8 ಮತ್ತು ಉತ್ತರ ಕನ್ನಡವೂ ಸೇರಿದಂತೆ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜೂ. 9ರಂದು ಅತಿ ಭಾರೀ ಮಳೆಯಾಗುವ ಮುನ್ಸೂಚನೆಯಿದೆ. ಈ ಹಿನ್ನೆಲೆಯಲ್ಲಿ ರೆಡ್ ಅಲರ್ಟ್ ನೀಡಲಾಗಿದೆ. ಜೂ. 10ರಂದು ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ ಹಾಗೂ ದಕ್ಷಿಣ ಒಳನಾಡಿನ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತಿ ಭಾರೀ ಮಳೆಯಾಗುವ ಮುನ್ಸೂಚನೆಯಿಂದ ರೆಡ್ ಅಲರ್ಟ್ ಘೋಷಿಸಲಾಗಿದೆ. ಜೂ.13ರವರೆಗೆ ಕರಾವಳಿ ಜಿಲ್ಲೆಗಳಲ್ಲಿ ಬಹುತೇಕ ಕಡೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯಿದ್ದು, ಆರೆಂಜ್ ಅಲರ್ಟ್ ನೀಡಲಾಗಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಕೆಲವು ಕಡೆಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕೆಲವು ಕಡೆ ಜೂ. 8 ಮತ್ತು 9ರಂದು ಭಾರೀ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ, ಹಾಸನ, ಕೊಡಗು ಜಿಲ್ಲೆಗಳಲ್ಲಿಯೂ ಹಲವೆಡೆ ಭಾರೀ ಮಳೆ ಸುರಿಯುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಿಮ್ಮ ಮನೆ ಮಗ ನಾನು

ಪುಟ ೧➜ ನಿಮ್ಮ ಪಾಲಿಗೆ ನಾನು ಸಿಎಂ ಅಲ್ಲ, ಸೇವಕ. ನನ್ನ ಕೊನೆಯುಸಿರು ಇರುವವರೆಗೂ ನಿಮ್ಮ ಮನೆ ಮಗನಾಗಿ ಸೇವೆ ಮಾಡುವೆ. ಸ್ವಂತ ಮಗನಂತೆ ನನ್ನನ್ನು ಬೆಳೆಸಿದ್ದೀರಿ. ನನ್ನ ಕ್ಷೇತ್ರದ ಪ್ರತಿಯೊಬ್ಬರಿಗೂ ಸಾಷ್ಟಾಂಗ ನಮಸ್ಕಾರಗಳು. ನಾನು ಈ ಕ್ಷೇತ್ರ ದಾಟಿ ಹೋದಾಗ ಮಾತ್ರ ಮುಖ್ಯಮಂತ್ರಿ. ಇಲ್ಲಿಗೆ ಬಂದಾಗ ನಿಮ್ಮ ಮನೆ ಸೇವಕ ಎನ್ನುವ ಮಾತನ್ನು ಭೇಟಿ ಕೊಟ್ಟ ಪ್ರತಿ ಊರಿನಲ್ಲೂ ಹೇಳಿದರು.

ಪ್ರಾರ್ಥನೆ ಫಲಿಸಿದೆ: ದುಃಖವನ್ನು ದೂರ ಮಾಡುವ ದೇವಿ ದುರ್ಗಾದೇವಿ. ಬೆಂಗಳೂರು ದಕ್ಷಿಣ ಜಿಲ್ಲೆಯ ಮಗನಾಗಿ ಜನರ ಮುಂದೆ ನಿಂತಿದ್ದೇನೆ. ಈ ಕ್ಷೇತ್ರದ ಜನ ನನ್ನ ಪರವಾಗಿ ಪ್ರಾರ್ಥನೆ ಮಾಡಿದ್ದೀರಿ. ನೋವು, ದುಃಖವನ್ನು ಅನುಭವಿಸಿದ್ದೀರಿ. ವಿಧಾನಸೌಧದ ಮೂರನೇ ಮಹಡಿಯಲ್ಲಿ ನಾನು ಕುಳಿತುಕೊಳ್ಳಬೇಕು ಎಂದು ನೀವು ಪ್ರಾರ್ಥನೆ ಮಾಡಿದ್ದರ ಫಲವಾಗಿ ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದೇನೆ. ಪ್ರಯತ್ನ ವಿಫಲವಾಗಬಹುದು. ಆದರೆ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದರು.

ಮೆಣಸಿನಕಾಯಿ, ಬೆಳ್ಳುಳ್ಳಿ ಹಾರ!

ನೂತನ ಸಿಎಂ ಅವರಿಗೆ ಯಾರ ದೃಷ್ಟಿಯೂ ತಾಕದಿರಲಿ ಎಂದು ಮೆಣಸಿನಕಾಯಿ ಹಾಗೂ ಬೆಳ್ಳುಳ್ಳಿ ಪೋಣಿಸಿ ಮಾಡಿದ್ದ ಬೃಹತ್ ಹಾರವನ್ನು ಹಾರೋಹಳ್ಳಿಯ ಜನರು ಹಾಕಿದ್ದು ವಿಶೇಷವಾಗಿತ್ತು. ಸುಮಾರು 50 ಕೆಜಿ ಒಣ ಮೆಣಸಿನಕಾಯಿ 70 ಕೆಜಿಗೂ ಹೆಚ್ಚು ಹಸಿಮೆಣಸಿನಕಾಯಿ ಮತ್ತು 50 ಕೆಜಿಗೂ ಹೆಚ್ಚು ಬೆಳ್ಳುಳ್ಳಿ ಬಳಸಲಾಗಿತ್ತು. ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಿ ಅಭಿಮಾನಿಗಳು ಸಂಭ್ರಮಿಸಿದರು.



500 ಕೆಜಿಗೂ ಹೆಚ್ಚು ತೂಕದ ಸೇಬಿನ ಹಾರಗಳು

ಕಗ್ಗಲೀಪುರ, ತುಂಗಣಿ, ನಾರಾಯಣಪುರಗಳಲ್ಲಿ ಅಭಿಮಾನಿಗಳು ಸುಮಾರು 500 ಕೆಜಿಗೂ ಹೆಚ್ಚು ಸೇಬು ಬಳಸಿ ಬೃಹತ್ ಹಾರಗಳನ್ನು ಮಾಡಿಸಿ ಡಿ.ಕೆ. ಶಿವಕುಮಾರ್ ಅವರ ಮೇಲಿನ ಅಭಿಮಾನ ಮೆರೆದರು. ತುಂಗಣಿಯಲ್ಲಿ 2 ಸೇಬಿನ ಹಾರಗಳು ಇದ್ದಿದ್ದು ವಿಶೇಷವಾಗಿತ್ತು. ಹೆರಿಂದ್ಯಾಪನಹಳ್ಳಿಯಲ್ಲಿ ಮಾಡಿದ್ದ ಸೇಬಿನ ಹಾರ 30 ಅಡಿಗೂ ಹೆಚ್ಚು ಉದ್ದವಾಗಿತ್ತು.

ಟ್ರಾಫಿಕ್ ಸಮಸ್ಯೆ ತಪ್ಪಿಸಲು ಸಿಎಂ ಮೆಟ್ರೋ ಪ್ರಯಾಣ

ಪುಟ ೧➜ ಯುವಕ ಯುವತಿಯರು ನಮ್ಮ ಸಿಎಂ ಎಂದು ಹುಮ್ಮಸ್ಸಿನಿಂದ ಮಾತನಾಡಿಸಿ ಹಸ್ತಲಾಘವ ಮಾಡಿದರು. ಅನೇಕರು ಮುಖ್ಯಮಂತ್ರಿಗಳ ಜತೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು. ಮೆಟ್ರೋ ಪ್ರಯಾಣ ಹೇಗೆನಿಸುತ್ತದೆ ಎಂದು ಸಿಎಂ ಯುವತಿಯೊಬ್ಬರನ್ನು ಕೇಳಿದಾಗ, ಮೆಟ್ರೋ ರೈಲು ಪ್ರಯಾಣದಿಂದ ಸಾಕಷ್ಟು ಸಮಯ ಉಳಿಯುತ್ತಿದೆ ಎಂದು ಉತ್ತರಿಸಿದರು. ಇದೇ ವೇಳೆ ಮಗುವಿಗೆ ಚಾಕೊಲೇಟ್ ನೀಡಿ ಅವರ ಪೋಷಕರ ಜೊತೆ ಸೆಲ್ಫಿ ತೆಗೆದುಕೊಂಡರು.

ನನಗೆ ಜಾತಿ, ಧರ್ಮ ಭೇದವಿಲ್ಲ

ಪುಟ ೧➜ ನಾರಾಯಣಪುರ, ಸಂತೆ ಕೋಡಿಹಳ್ಳಿ, ಹೆರಿಂದ್ಯಾಪನಹಳ್ಳಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ತಿಹಾರ್ ಜೈಲಿನಲ್ಲಿ ಇದ್ದಾಗ ನನ್ನ ಕ್ಷೇತ್ರದ ಜನರು ಕಣ್ಣೀರು ಸುರಿಸಿ ಪ್ರಾರ್ಥನೆ ಮಾಡಿದರು. ಆ ಪ್ರಾರ್ಥನೆ ನನ್ನನ್ನು ಕಾಪಾಡಿದೆ. ನೀವು ನನ್ನ ಪರವಾಗಿ ಕೊರಗಿದ್ದು ನನ್ನ ರಕ್ಷಿಸಿದೆ. ನನಗೆ ಹಣದ, ಅಧಿಕಾರದ ಅವಶ್ಯಕತೆ ಇಲ್ಲ. ನಿಮ್ಮ ಜೀವನದಲ್ಲಿ ಬದಲಾವಣೆ ಉಂಟಾಗಬೇಕು ಎಂಬುದೇ ನನ್ನ ಧ್ಯೇಯ ಎಂದರು.

ಸಿಎಂಗೆ ಪೂರ್ಣಕುಂಭ ಸ್ವಾಗತ

ನಾರಾಯಣಪುರದಲ್ಲಿ ಪೂಜಾಕುಣಿತ ಕಲಾವಿದರು ಸ್ವಾಗತಿಸಿದರೆ, ಕೊಳಗೊಂಡನಹಳ್ಳಿಯಲ್ಲಿ ನಂದಿಧ್ವಜ, ಪಟ ಕುಣಿತ, ನಂದಿಧ್ವಜ ಹೊತ್ತ ಕಲಾವಿದರು ಸ್ವಾಗತಿಸಿದರು. ಪ್ರತಿ ಊರಿನಲ್ಲೂ ತಮಟೆ, ನಗಾರಿ ಸದ್ದು ಮೇಳೈಸಿತ್ತು. ಬೇಕುಪ್ಪೆಯಲ್ಲಿ ಮನೆದೇವರು ಕೆಂಕೇರಮ್ಮನಿಗೆ ಹಾಗೂ ತುಂಗಣಿಯಲ್ಲಿ ಚಾಮುಂಡೇಶ್ವರಿ ದೇವಾಲಯದಲ್ಲಿ ಸಹೋದರ ಡಿ.ಕೆ.ಸುರೇಶ್ ಅವರ ಜತೆಗೂಡಿ ಶಿವಕುಮಾರ್ ಪೂಜೆ ಸಲ್ಲಿಸಿದರು. ಕ್ಷೇತ್ರದ ಗಡಿ ಭಾಗದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ಯುವ ಯುಗ ಘೋಷಣೆಗೆ ಸ್ವಕ್ಷೇತ್ರದಲ್ಲೇ ಶಕ್ತಿ: ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡಾಗ ಕರ್ನಾಟಕದಲ್ಲಿ ಯುವ ಯುಗ ಆರಂಭ ಎಂದು ಯುವಕರನ್ನು ಗಮನದಲ್ಲಿಟ್ಟು ಕೊಂಡು ಘೋಷಣೆ ಮಾಡಿದ್ದರು. ಪ್ರತಿ ಊರಿನಲ್ಲೂ ಯುವಕರು ನೀಡಿದ ಕೊಡುಗೆಗೆ ಧನ್ಯವಾದ ತಿಳಿಸಿದರು. ಪ್ರತಿ ಊರಿನಲ್ಲೂ ಯುವಕರೇ ಮುಂದೆ ನಿಂತು ಮುಖ್ಯಮಂತ್ರಿಗಳನ್ನು ಸ್ವಾಗತಿಸಿದರು.

ಸಂಪುಟ ವಿಸ್ತರಣೆ ಶೀಘ್ರ: ಸತೀಶ

ಗೋಕಾಕ: ರಾಜ್ಯ ಸಚಿವ ಸಂಪುಟದ ಎರಡನೇ ಹಂತದ ವಿಸ್ತರಣೆ ಶೀಘ್ರದಲ್ಲೇ ನಡೆಯಲಿದ್ದು, ಬೆಳಗಾವಿ ಜಿಲ್ಲೆಗೆ ಮತ್ತಷ್ಟು ಸಚಿವ ಸ್ಥಾನಗಳು ದೊರೆಯುವ ವಿಶ್ವಾಸವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟದಲ್ಲಿ ಇನ್ನೂ ಹಲವು ಸ್ಥಾನಗಳು ಖಾಲಿ ಇದ್ದು, ಅವುಗಳನ್ನು ಹೆಚ್ಚು ದಿನ ಖಾಲಿ ಇಡಲು ಸಾಧ್ಯವಿಲ್ಲ. ಈ ತಿಂಗಳೊಳಗೆ ಸಚಿವ ಸಂಪುಟ ವಿಸ್ತರಣೆ ನಡೆದರೆ ಉತ್ತಮ ಎಂದು ಅಭಿಪ್ರಾಯಪಟ್ಟರು. ಪಕ್ಷದಲ್ಲಿ ಒಬ್ಬರಿಗೆ ಒಂದು ಹುದ್ದೆ ಎಂಬ ನೀತಿಯನ್ನು ಅನುಸರಿಸುವ ಪ್ರಯತ್ನ ನಡೆಯುತ್ತಿರುವುದರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನ ಮತ್ತು ಸಚಿವ ಸ್ಥಾನ ಎರಡನ್ನೂ ಒಬ್ಬರಿಗೆ ನೀಡುವ ಸಾಧ್ಯತೆ ಕಡಿಮೆಯಾಗಿದೆ ಎಂದು ಅವರು ಹೇಳಿದರು. ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ ಎಂದರು.



ಮುಸ್ಲಿಂ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಕುರಿತು ಪಕ್ಷದ ವರಿಷ್ಠರು ಸೂಕ್ತ ನಿರ್ಧಾರ ಕೈಗೊಳ್ಳಲಿದ್ದು, ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು ಎಂದು ತಿಳಿಸಿದರು. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬ ನಿರ್ಣಯ ಅಂಗೀಕರಿಸುವಂತೆ ಕನ್ನಡಪರ ಸಂಘಟನೆಗಳು ನಡೆಸುತ್ತಿರುವ ಹೋರಾಟದ ಕುರಿತು ಪ್ರತಿಕ್ರಿಯಿಸಿದ ಅವರು, ವಿಷಯದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಆದಿತ್ಯರಾಜ್ ಕ್ಯಾಪಿಟಲ್ ಸೇರಿದಂತೆ ಹಣಕಾಸು ವಂಚನೆ ಪ್ರಕರಣಗಳ ಕುರಿತು ಮಾತನಾಡಿದ ಸಚಿವರು, ದೂರುಗಳು ಮತ್ತು ಕಾನೂನು ಪ್ರಕ್ರಿಯೆಗಳ ಆಧಾರದ ಮೇಲೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ತಮ್ಮ ಸಂಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ವಿಶೇಷ ಪೂಜೆ



ಕನಕಪುರದ ಬೇಕುಪ್ಪೆಯಲ್ಲಿ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ತಮ್ಮ ಮನೆದೇವರು ಕೆಂಕೇರಮ್ಮ ದೇವಿಗೆ ಭಾನುವಾರ ಪೂಜೆ ಸಲ್ಲಿಸಿದರು. ಸಹೋದರ, ಬಮುಲ್ ಅಧ್ಯಕ್ಷ ಡಿ. ಕೆ. ಸುರೇಶ್ ಜತೆಗಿದ್ದರು.

3,395 ಪೊಲೀಸ್ ಪೇದೆ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ

ಈ ನೇಮಕಾತಿಯ ಪ್ರಮುಖ ಪ್ರಕ್ರಿಯೆಯಾದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸಲಿದ್ದು, ಆಫ್‌ಲೈನ್-ಒಎಂಆರ್ ಮಾದರಿಯಲ್ಲಿ ಪರೀಕ್ಷೆಗಳು ಜರುಗಲಿವೆ. ಒಟ್ಟು 3,395 ಹುದ್ದೆಗಳಲ್ಲಿ ಪುರುಷ ಅಭ್ಯರ್ಥಿಗಳಿಗೆ 2266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ 37,500 ರೂ.ನಿಂದ 76,100 ರವರೆಗಿನ ವೇತನ ಶ್ರೇಣಿ ಅನ್ವಯವಾಗಲಿದ್ದು, ರಾಷ್ಟ್ರೀಯ ಪಿಂಚಣಿ ಯೋಜನೆ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಪಿಯುಸಿ ಅಥವಾ ಸಿಬಿಎಸ್‌ಇ, ಐಎಸ್‌ಸಿ, ಎನ್‌ಐಒಎಸ್ ಹಾಗೂ ಮೂರು ವರ್ಷಗಳ ಡಿಪ್ಲೊಮಾ ಸೇರಿದಂತೆ ಸರ್ಕಾರದ ನಿಯಮಾವಳಿಗ ಅನ್ವಯ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಜನ್ಮ ದಿನಾಂಕದ ಆಧಾರದ ಮೇಲೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕಾಗಿದ್ದು, ಸರ್ಕಾರವು ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದೆ ಎಂದು ತಿಳಿಸಿದ್ದಾರೆ. ಈ ಅನ್ವಯ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ 33 ವರ್ಷಗಳು, ಎಸ್‌ಸಿ/ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 35 ವರ್ಷಗಳು ಹಾಗೂ ಬುಡಕಟ್ಟು ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳ ವಯೋಮಿತಿಯನ್ನು ನಿಗದಿಪಡಿಸಲಾಗಿದೆ ಎಂದೂ ಹೇಳಿದ್ದಾರೆ.

ಕಿರುಸುದ್ದಿ

ವೈದ್ಯರ ಹುದ್ದೆ ಭರ್ತಿಗೆ ಕ್ರಮ: ಸಚಿವ ಖಾದರ್

ಮಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 900ರಷ್ಟು ಹುದ್ದೆಗಳು ಖಾಲಿ ಇದ್ದು, ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಗಮನದಲ್ಲಿದೆ. ಖಾಯಂ ನೇಮಕೆ ಪ್ರಕ್ರಿಯೆ ಆಗುವವರೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗುವುದು. ಹಂತ ಹಂತವಾಗಿ ಸರ್ಕಾರಿ ಆಸ್ಪತ್ರೆಗಳ ವಿವಿಧ ಸಮಸ್ಯೆಗಳನ್ನು ಬಗೆಹರಿಸಲು ಒತ್ತು ನೀಡುವುದಾಗಿ ತಿಳಿಸಿದರು. ಎಂಬಿಬಿಎಸ್ ಆದವರು ಸೇವೆ ಸಲ್ಲಿಸಲು ಬಂದರೆ ಅವರಿಗೆ ಡಿಎಚ್‌ಒಗಳು ಒಂದು ವಾರದೊಳಗೆ ತಾತ್ಕಾಲಿಕ ನೇಮಕಾತಿಯ ಆದೇಶ ಪತ್ರ ನೀಡಬೇಕು. ಇಲ್ಲದಿದ್ದಲ್ಲಿ ಡಿಎಚ್‌ಒಗಳನ್ನು ಅಮಾನತು ಮಾಡಲಾಗುವುದು. ನೇಮಕ ಆದವರಿಗೆ 60,000 ವೇತನ ನೀಡಲಾಗುವುದು ಎಂದು ಯು.ಟಿ.ಖಾದರ್ ತಿಳಿಸಿದರು. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳು ಯಾವ ರೀತಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದನ್ನು ಖುದ್ದಾಗಿ ಸ್ಥಳಕ್ಕೆ ತೆರಳಿ ಪರಿಶೀಲಿಸುತ್ತೇನೆ. ಈ ನಿಟ್ಟಿನಲ್ಲಿ ರಾತ್ರಿ ವೇಳೆ ಆಸ್ಪತ್ರೆಗಳಿಗೆ ಭೇಟಿ ನೀಡಲು ನಿರ್ಧರಿಸಿದ್ದುಹು, ಇದೇ ರೀತಿ ಜಿಲ್ಲೆ ಮತ್ತು ತಾಲೂಕು ಮಟ್ಟದ ಅಽಕಾರಿಗಳು ಕೂಡ ದಿಢೀರ್ ರಾತ್ರಿ ಪರಿಶೀಲಿಸಲು ಸೂಚಿಸುವುದಾಗಿ ಅವರು ತಿಳಿಸಿದರು.

ಮೋದಿಗೆ ಜನರ ಬಗ್ಗೆ ಕಾಳಜಿಯಿಲ್ಲ: ಯತೀಂದ್ರ

ವಿಜಯಪುರ: ಪ್ರಧಾನಿ ಮೋದಿ ಸರ್ಕಾರಕ್ಕೆ ಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು. ಗ್ಯಾಸ್ ಬೆಲೆ ಏರಿಕೆಗೆ ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಜನರು ಹೇಗಾದರೂ ಹಾಳಾಗಲಿ ಎಂದು ಬೆಲೆ ಏರಿಕೆ ಮಾಡಿದ್ದಾರೆ. ಬೆಲೆ ಏರಿಕೆಯಿಂದ ಜನತೆಗೆ ಹೊರೆ ಆಗುತ್ತದೆ. ಇದರಿಂದ ಆರ್ಥಿಕಕ್ಕೆ ಹೊಡೆತ ಬೀಳುತ್ತದೆ ಎಂದರು. ಆದರೆ, ಕೇಂದ್ರದಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಎಲ್ಲವೂ ಕಡಿಮೆ ಬೆಲೆ ಇತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಬಾಂಡ್‌ಗಳನ್ನು ಖರೀದಿ ಮಾಡಿ, ಬೆಲೆ ಇಳಿಕೆ ಮಾಡಲಾಗಿತ್ತು ಎಂದರು. ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆಗೆ ಪ್ರತಿಕ್ರಿಯಿಸಿ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಪ್ರತಿಭಟನೆ ಮಾಡುವ ಅವಕಾಶ ಇರುತ್ತದೆ ಎಂದರು.

ಡಿಕೆಶಿಗೆ ಸೇಬಿನ ಹಾರ: ಕ್ರೇನ್ ಬಸ್‌ಗೆ ತಗುಲಿ ಮಹಿಳೆಗೆ ಗಾಯ

ಕನಕಪುರ: ತಾಲೂಕಿನ ಕೋಡಿಹಳ್ಳಿಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಭಾನುವಾರ ನಡೆದ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮದಲ್ಲಿ ಡಿಕೆಶಿ ಅವರಿಗೆ ಸೇಬುಗಳಿಂದ ಮಾಡಿದ ಬೃಹತ್ ಹಾರ ಹಾಕಲು ತಂದಿದ್ದ ಕ್ರೇನ್ ಕೆಎಸ್‌ಆರ್‌ಟಿ ಬಸ್ಸಿಗೆ ತಾಗಿದ್ದರಿಂದ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ. ಕ್ರೇನ್ ತಾಗಿದ ರಭಸಕ್ಕೆ ಬಸ್ಸಿನ ಗಾಜು ಒಡೆದು ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೂಡಲೇ ಮಹಿಳೆಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಕೋಡಿಹಳ್ಳಿ ಬಸ್ ನಿಲ್ದಾಣ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರಿಗೆ ಸೇಬಿನ ಹಾರ ಹಾಕಿದ ಬಳಿಕ, ಅವರು ಅಲ್ಲಿಂದ ತೆರಳಿದರು. ಬಳಿಕ ಕ್ರೇನ್ ಚಾಲಕ ಹಾರವನ್ನು ಕೆಳಕ್ಕಿಳಿಸಿ ರಿವರ್ಸ್ ತೆಗೆದುಕೊಳ್ಳುವಾಗ, ಪಕ್ಕದಲ್ಲಿದ್ದ ಬಸ್ಸಿಗೆ ಹಿಂದಿನ ಗಾಜಿಗೆ ಕ್ರೇನ್ ತಾಗಿದೆ. ಮಹಿಳೆಗೆ ಸಣ್ಣಪುಟ್ಟ ಗಾಯವಾಗಿರುವುದು ಬಿಟ್ಟರೆ ಮತ್ಯಾರಿಗೂ ತೊಂದರೆಯಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಬಸವಕಲ್ಯಾಣ ಶಾಸಕ ಶರಣು ಸಲಗರ್‌ಗೆ ಬಂಧನದ ವಾರೆಂಟ್

ಬೀದರ್: ಜಿಲ್ಲೆಯ ಬಸವಕಲ್ಯಾಣ ಕ್ಷೇತ್ರದ ಶಾಸಕ ಶರಣು ಸಲಗಾರ ಬಂಧನಕ್ಕೆ ವಾರಂಟ್ ಜಾರಿಯಾಗಿದೆ. 2023ರಲ್ಲಿ ಬಕ್ರೀದ್ ಕುರ್ಬಾನಿ ವಿಚಾರದ ವಿವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವಕಲ್ಯಾಣದ ಬಿಜೆಪಿ ಶಾಸಕ ಶರಣು ಸಲಗರ್ ಸೇರಿದಂತೆ 9 ಜನರಿಗೆ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯ ಬಂಧನದ ವಾರೆಂಟ್ ಜಾರಿಗೊಳಿಸಿದೆ. ಪ್ರಕರಣದಲ್ಲಿ ಇನ್ನುಳಿದ ಆರೋಪಿಗಳಾದ ಲಿಂಗರಾಜ್, ಸಂತೋಷ್, ಶಿವಕುಮಾರ್, ವಿನೋದ್, ಸಚಿನ್, ರಾಜ ಕುಮಾರ್, ಶಂಬುಲಿಂಗ್ ಹಾಗೂ ಶರಣಬಸಪ್ಪ ಇವರುಗಳಿಗೆ ಬಂಧನದ ವಾರೆಂಟ್ ಹೊರಡಿಸಿದೆ.

ಪ್ರಕರಣದ ಹಿನ್ನೆಲೆ: 2023ರ ಜುಲೈ 1ರ ಬಕ್ರೀದ್ ದಿನದಂದು ಶಾಸಕ ಶರಣು ಸಲಗರ್ ಸೇರಿದಂತೆ ಹಲವರು ಬಸವಕಲ್ಯಾಣ ನಗರದ ಹಿರೇಮಠ ಕಾಲೋನಿಯ ವ್ಯಕ್ತಿಯೊಬ್ಬರ ಮನೆಗೆ ತೆರಳಿ, ಕುರ್ಬಾನಿ ನೀಡುತ್ತಿರುವ ನಿಮಗೆ ಮಾನ ಮರ್ಯಾದೆ ಇಲ್ಲ. ಕುರ್ಬಾನಿ ನೀಡುತ್ತಿರುವುದು ಬಂದ್ ಮಾಡಬೇಕು ಎಂದು ಆ ಕುಟುಂಬಸ್ಥರಿಗೆ ಬೆದರಿಕೆ ಹಾಕಿ, ದ್ವೇಷದ ಮಾತುಗಳನ್ನಾಡಿದ್ದರು ಎಂದು ಆರೋಪಿಸಿ ಬಸವಕಲ್ಯಾಣ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯವು ಬಂಧನದ ವಾರೆಂಟ್ ಜಾರಿಗೊಳಿಸಿದೆ.

ಮತದಾರರಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ: ಸಿಎಂ ಡಿ.ಕೆ ಶಿವಕುಮಾರ್

ಜನ ಸೇವೆ ನನ್ನ ಕರ್ತವ್ಯ

ಬೆಂಗಳೂರು: ನನ್ನ ಕ್ಷೇತ್ರದ ಜನಕ್ಕೆ ರಾಜಕೀಯ ತಿಳುವಳಿಕೆ, ಪ್ರಜ್ಞೆಯಿದೆ. ನನ್ನಿಂದ ಅಪೇಕ್ಷೆ ಮಾಡದೇ ಹೋದರೂ ನಾನು ಅವರ ಸೇವೆ ಮಾಡಬೇಕಿರುವುದು ನನ್ನ ಕರ್ತವ್ಯ ಎಂದು ಡಿ.ಕೆ ಶಿವಕುಮಾರ್ ತಿಳಿಸಿದರು.

ತಮ್ಮ ತವರು ಕ್ಷೇತ್ರಕ್ಕೆ ತೆರಳು ವೇಳೆ ಕನಕಪುರ ರಸ್ತೆವರೆಗೂ ಮೆಟ್ರೋ ಮೂಲಕ ಪ್ರಯಾಣಿಸುವ ಮುನ್ನ ಮಾಧ್ಯಮಗಳ ಜತೆಗೆ ಪ್ರತಿಕ್ರಿಯಿಸಿದ ಅವರು, ನನ್ನ ಕ್ಷೇತ್ರದ ಜನ ವಿಧಾನ ಸೌಧದ ಮೆಟ್ಟಿಲು ಹತ್ತಿಸಿದ್ದಾರೆ. ಕಳೆದ 40 ವರ್ಷಗಳಿಂದ ಬೆಳೆಸಿದ್ದಾರೆ ಮೊದಲು ಅವರಿಗೆ ಕೃತಜ್ಞತೆ ಸಲ್ಲಿಸಬೇಕಾಗಿರೋದು ನನ್ನ ಕರ್ತವ್ಯ. ಅದಕ್ಕೆ ಎಲ್ಲಾ ಕೆಲಸ ಮುಗಿಸಿ ಜನರ ಭೇಟಿಗೆ ಹೋಗುತ್ತಿದ್ದೇನೆ ಎಂದು ಹೇಳಿದರು.

ನನ್ನ ಕ್ಷೇತ್ರದ ಜನ ದೊಡ್ಡ ಆಲಳ್ಳಿಯಿಂದ ನನ್ನನ್ನು ಇಲ್ಲಿಯವರೆಗೆ ಕರೆತಂದಿದ್ದಾರೆ. ಕ್ಷೇತ್ರದ ಜನರು ನನ್ನನ್ನು ಭೇಟಿಯಾಗಬೇಕು ಎಂದು ಕೇಳುತ್ತಿದ್ದರು. ಅದಕ್ಕೆ ನನ್ನ ಕ್ಷೇತ್ರ, ನನ್ನ ಜನತೆ ಭೇಟಿಯಾಗುತ್ತಿದ್ದೇನೆ. ನನ್ನ ಕ್ಷೇತ್ರದ ಜನತೆಯ ಸಮಸ್ಯೆ, ಕುಂದುಕೊರತೆಗಳನ್ನು ಆಲಿಸಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಕ ಮಾಡುತ್ತೇನೆ. ನನ್ನ ಕ್ಷೇತ್ರದ ಜನತೆ ಎಂದೂ ತೊಂದರೆಕೊಟ್ಟವರಲ್ಲ. ಅವರವರ ಕೆಲಸ ನೋಡಿಕೊಂಡು ಹೋಗುತ್ತಿದ್ದಾರೆ ಎಂದರು.

ನನ್ನ ಜನರಿಗೆ ಕೃತಜ್ಞತೆ ಸಲ್ಲಿಸಬೇಕು. ಅವರ ಭಾವನೆ, ಶ್ರಮಕ್ಕೆ ತಕ್ಕ ಫಲ ಸಿಗಬೇಕು. ಸಾತನೂರು ಕ್ಷೇತ್ರ, ದೊಡ್ಡಾಲಹಳ್ಳಿ ಜಿಲ್ಲಾ ಪಂಚಾಯತಿ, ಕನಕಪುರದ ಜನ ನನ್ನ ಭೇಟಿ ಮಾಡಬೇಕು ಎಂದು ಹೇಳುತ್ತಿದ್ದರು. ಅವರಿಗೆ ಸಮಯ ನೀಡುವುದಕ್ಕೆ ಆಗಿರಲಿಲ್ಲ. ಯಾರೂ ಬೆಂಗಳೂರಿಗೆ ಬರಬೇಡಿ ಅಂತ ಮನವಿ ಮಾಡಿದ್ದೆ. ಆದ ಕಾರಣಕ್ಕೆ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೇನೆ ಎಂದು ಹೇಳಿದರು.



ವಿದೇಶಿಗರ ಮೆಟ್ರೋ ಅನುಭವ ಕೇಳಿದ ಸಿಎಂ

ವಿದೇಶಿ ಪ್ರವಾಸಿಗರಿಗೆ ಮೆಟ್ರೋ ಪ್ರಯಾಣ ಅನುಭವ ಹೇಗಿದೆ ಎಂದು ಕೇಳಿ ತಿಳಿದುಕೊಂಡರು. ಯುವತಿಯೋರ್ವರಿಗೆ ಏನು ಓದುತ್ತಿದ್ದೀರಿ, ಎಲ್ಲಿ ವಾಸ ಮಾಡುತ್ತಿದ್ದೀರಿ ಎಂದು ಮಾಹಿತಿ ಪಡೆದು. ಚೆನ್ನಾಗಿ ಓದಬೇಕು. ಭಾರತವನ್ನು ಕರ್ನಾಟಕದ ಮೂಲಕ ನೋಡಲಾಗುತ್ತಿದೆ. ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಕನಕಪುರ ರಸ್ತೆ ನಿಲ್ದಾಣದವರೆಗೂ ಪ್ರಯಾಣಿಕರು ಸೆಲ್ಫಿ ತಗೆದುಕೊಂಡು ಖುಷಿ ವ್ಯಕ್ತಪಡಿಸಿದರು.

ಗ್ಯಾಸ್, ಡೀಸೆಲ್ ಬೆಲೆ ಏರಿಕೆಗೆ ಖಂಡನೆ

ಗೃಹ ಬಳಕೆಯ ಸಿಲಿಂಡರ್ ದರ ಏರಿಕೆ ಬಗ್ಗೆ ಪ್ರತ್ಯೇಕ ವರದಿ ಕೇಳಿದ್ದೇನೆ. ಇದಕ್ಕಿಂತ ಇಂಡಸ್ಟ್ರಿಯಲ್ ಗ್ಯಾಸ್ ಬೆಲೆ, ಡೀಸೆಲ್ ಬೆಲೆ ಏರಿಕೆ ಗಾಬರಿ ಆಗುವಂತೆ ಏರಿಕೆ ಮಾಡಿದ್ದಾರೆ. ವರದಿ ತೆಗೆದುಕೊಳ್ಳುತ್ತಿದ್ದೇನೆ. ಸೋಮ ವಾರ ಇದರ ಬಗ್ಗೆ ಮಾತನಾಡುತ್ತೇನೆ ಎಂದರು.

ಕ್ರೀಡೆಯಿಂದ ವ್ಯಕ್ತಿತ್ವ ವಿಕಸನ: ಗೆಹಲೋತ್

ಬೆಂಗಳೂರು: ಕ್ರೀಡೆಗಳು ವ್ಯಕ್ತಿತ್ವ ವಿಕಸನಕ್ಕೆ ಪ್ರಬಲ ಮಾಧ್ಯಮವಾಗಿದ್ದು, ನಾಯಕತ್ವ ಕೌಶಲ್ಯಗಳನ್ನು ಬೆಳೆಸುವ ಜತೆಗೆ ಆತ್ಮವಿಶ್ವಾಸ ಮತ್ತು ತಂಡದ ಮನೋ ಭಾವವನ್ನು ಬಲಪಡಿಸುತ್ತವೆ ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಹೇಳಿದರು.

ಭಾನುವಾರ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಗವರ್ನರ್ಸ್ ಕಪ್–2026ರ ಪಂದ್ಯಾವಳಿಯಲ್ಲಿ ಗೆದ್ದ ವಿಜೇತರಿಗೆ ಬಹುಮಾನಗಳನ್ನು ವಿತರಿಸಿ ಮಾತನಾಡಿದರು. ಜೀವನದಲ್ಲಿ ಹೇಗೆ ಪ್ರತಿಯೊಂದು ನಿರ್ಧಾರ ಮಹತ್ವದ್ದಾಗಿದೆಯೋ, ಗಾಲ್ಫ್‌ನಲ್ಲಿಯೂ ಪ್ರತಿಯೊಂದು ಹೊಡೆತ ನಿರ್ಣಾಯಕವಾಗಿರುತ್ತದೆ ಎಂದರು.

ನಿರಂತರ ಅಭ್ಯಾಸ, ಸಕಾರಾತ್ಮಕ ಚಿಂತನೆ ಮತ್ತು ಆತ್ಮಶಿಸ್ತು ಯಶಸ್ಸಿನ ಮೂಲ ಮಂತ್ರಗಳಾಗಿವೆ. ಈ ಮೌಲ್ಯಗಳನ್ನು ಮೈಗೂಡಿಸಿಕೊಂಡು ಅತ್ಯುತ್ತಮ ಪ್ರದರ್ಶನ ನೀಡಿದ ಎಲ್ಲ ಆಟಗಾರರನ್ನು ರಾಜ್ಯಪಾಲರು ಅಭಿನಂದಿಸಿದರು. ವಿಜೇತರು ಗೌರವಕ್ಕೆ ಅರ್ಹರಾಗಿದ್ದರೂ, ಕೊನೆಯವರೆಗೂ ಸಮರ್ಪಣೆ ಮತ್ತು ಬದ್ಧತೆಯಿಂದ ಸ್ಪರ್ಧಿಸಿದ ಎಲ್ಲ ಸ್ಪರ್ಧಿಗಳೂ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಗೆಲುವಿನಲ್ಲಿ ವಿನಮ್ರತೆ ಮತ್ತು ಸೋಲಿನಲ್ಲಿ ಸಂಯಮ ಪ್ರದರ್ಶಿಸುವುದು ಉತ್ತಮ ಕ್ರೀಡಾಪಟುವಿನ ಲಕ್ಷಣ ಎಂದು ಅಭಿಪ್ರಾಯಪಟ್ಟರು.

ಗವರ್ನರ್ಸ್ ಕಪ್ ಸ್ಪರ್ಧೆಯ ಯಶಸ್ಸು ತಂಡದ ಕಾರ್ಯಪಟುತ್ವ, ಪರಸ್ಪರ ಗೌರವ ಮತ್ತು ಸ್ನೇಹಭಾವದ ಪ್ರತೀಕವಾಗಿದೆ. ಈ ಸ್ಪರ್ಧೆಯು ಅನೇಕ ಹೊಸ ಪ್ರತಿಭೆಗಳಿಗೆ ವೇದಿಕೆ ಒದಗಿಸಿದ್ದು, ಯುವ ಆಟಗಾರರ ಉತ್ಸಾಹವನ್ನು ಕಂಡಾಗ ಭಾರತವು ಗಾಲ್ಫ್ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ಹೊಂದಿದೆ ಎಂಬ ವಿಶ್ವಾಸ ಮೂಡುತ್ತದೆ ಎಂದರು. ಬೆಂಗಳೂರು ಗಾಲ್ಫ್ ಕ್ಲಬ್‌ನ ನಾಯಕ ರವಿಕುಮಾರ್ ರಾಜು ಇದ್ದರು.

ಭಾರತೀಯ ಯುವಕರ ಗಮನಾರ್ಹ ಸಾಧನೆ

ಭಾರತ ಸರ್ಕಾರದ ಖೇಲೋ ಇಂಡಿಯಾ ಮತ್ತು ಫಿಟ್ ಇಂಡಿಯಾ ಕಾರ್ಯಕ್ರಮಗಳು ದೇಶದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುತ್ತಿದ್ದು, ಅದರ ಪರಿಣಾಮವಾಗಿ ಭಾರತೀಯ ಯುವಕರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡುತ್ತಿದ್ದಾರೆ ಎಂದು ರಾಜ್ಯಪಾಲರು ತಿಳಿಸಿದರು.

ಲಂಚ ಪಡೆದ ಎಎಸ್‌ಐ, ಪೇದೆ ಲೋಕಾ ಬಲೆಗೆ

ಕಲಬುರಗಿ: ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರ ತವರೂರಲ್ಲಿ ಪೋಕ್ಸೋ ಪ್ರಕರಣದಲ್ಲಿ ಸಹಾಯ ಮಾಡುವುದಾಗಿ ಹೇಳಿ ಲಂಚಕ್ಕೆ ಬೇಡಿಕೆ ಇಟ್ಟು ಹಣ ಸ್ವೀಕರಿಸುತ್ತಿದ್ದ ವೇಳೆ ಮಹಿಳಾ ಪೊಲೀಸ್ ಪೇದೆ ಹಾಗೂ ಎಎಸ್‌ಐ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿರುವ ಘಟನೆ ಕಲಬುರಗಿಯಲ್ಲಿ ನಡೆದಿದೆ.



ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಸಿಬ್ಬಂದಿ ಜ್ಯೋತಿ ಹಾಗೂ ಎಎಸ್‌ಐ ಶಿವಶರಣಪ್ಪ ಬಂಧಿತ ಆರೋಪಿಗಳಾಗಿದ್ದಾರೆ. ದೂರುದಾರೆ ರೋಹಿಣಿ ಎಂಬುವರ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದ ಆರೋಪಿಗಳು, ಆರಂಭದಲ್ಲಿ 1,000 ಲಂಚ ಪಡೆದು ಬಳಿಕ ತಲಾ 5,000ರಂತೆ ಒಟ್ಟು 10,000 ನೀಡುವಂತೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಪ್ರಕರಣದಲ್ಲಿ ಸಾರ್ವಜನಿಕ ಅಭಿಯೋಜಕರಿಗೆ (ಪಿಪಿ) ಹಣ ನೀಡಬೇಕಾಗುತ್ತದೆ ಎಂದು ಹೇಳಿ ಲಂಚಕ್ಕಾಗಿ ಒತ್ತಾಯ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರುದಾರೆ ನೀಡಿದ ಮಾಹಿತಿಯ ಆಧಾರದ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿದ್ದು, ಉಳಿದ 10,000 ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ವೇಳೆ ಆರೋಪಿಗಳನ್ನು ರೆಡ್‌ಹ್ಯಾಂಡ್ ಆಗಿ ಬಂಧಿಸಿದ್ದಾರೆ. ಈ ಕಾರ್ಯಾಚರಣೆಯನ್ನು ಕರ್ನಾಟಕ ಲೋಕಾಯುಕ್ತ ಕಲಬುರಗಿ ಪೊಲೀಸ್ ಅಧೀಕ್ಷಕ ಸಿದ್ಧರಾಜು ಸಿ.ಅವರ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಕುಮಾರ್ ಮುರುಗುಂಡಿ ನೇತೃತ್ವದಲ್ಲಿ ನಡೆಸಲಾಗಿದೆ. ಬಂಧಿತ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ತನಿಖೆ ಪೂರ್ಣಗೊಂಡ ನಂತರ ನ್ಯಾಯಾಲಯದ ಮುಂದೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಟಿಕೆಟ್ ಹಂಚಿಕೆಯಲ್ಲಿ ಮಂಡ್ಯಕ್ಕೆ ಬಂಪರ್

ಮಂಡ್ಯ: ರಾಜ್ಯಸಭೆ ಹಾಗೂ ವಿಧಾನಪರಿಷತ್ ಸ್ಥಾನಗಳ ಕಾಂಗ್ರೆಸ್ ಪಕ್ಷದ ಟಿಕೆಟ್ ಹಂಚಿಕೆಯಲ್ಲಿ ಮಂಡ್ಯಕ್ಕೆ ಬಂಪರ್ ಹೊಡೆದಿದೆ. ಇದೇ ಪ್ರಥಮ ಬಾರಿಗೆ ರಾಜ್ಯಸಭೆಯ ಒಂದು ಹಾಗೂ ಪರಿಷತ್‌ನ ಎರಡು ಸ್ಥಾನಗಳಿಗೆ ಮಂಡ್ಯ ಮೂಲದವರಿಗೆ ಟಿಕೆಟ್ ದೊರಕಿದೆ.

ಕೆ.ಆರ್.ಪೇಟೆ ಕ್ಷೇತ್ರದ ಕೇಂದ್ರ ಮಾಜಿ ಸಚಿವ ಕೆ.ರೆಹಮಾನ್‌ಖಾನ್ ಪುತ್ರ ಮನ್ಸೂರ್ ಅಲಿಖಾನ್ ಅವರಿಗೆ ರಾಜ್ಯಸಭೆ ಟಿಕೆಟ್ ದೊರಕಿದ್ದರೆ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ಮಳವಳ್ಳಿ ಕ್ಷೇತ್ರದ ದಡದ ಪುರ ಶಿವಣ್ಣ ಹಾಗೂ ಜಿಲ್ಲೆಯ ಹಿರಿಯ ರಾಜಕಾರಣಿ ಸಾಹುಕಾರ್ ಚನ್ನಯ್ಯನವರ ಮೊಮ್ಮಗ ಹಾಗೂ ಕೆಪಿಸಿಸಿ ಖಜಾಂಚಿ ವಿನಯ್ ಕಾರ್ತಿಕ್ ಅವರಿಗೆ ವಿಧಾನಪರಿಷತ್ ಟಿಕೆಟ್ ದೊರಕಿದೆ.

ದಡದಪುರ ಶಿವಣ್ಣ ಅವರು ಹಿಂದಿನಿಂದಲೂ ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು. ಸಿದ್ದರಾಮಯ್ಯನವರು ಭಾಗವಹಿಸುತ್ತಿದ್ದ ಬಹುತೇಕ ಸಭೆ-ಸಮಾರಂಭಗಳಲ್ಲಿ ಶಿವಣ್ಣನವರ ಹಾಜರಿರುತ್ತಿದ್ದರು. ಶ್ರೀ ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷರಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಶಿವಣ್ಣ ಅವರು, ರಾಜಕೀಯವಾಗಿ ಕಾಂಗ್ರೆಸ್ ಪಕ್ಷದಲ್ಲೂ ಸಕ್ರಿಯರಾಗಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿದ್ದರೂ ಕ್ಷೇತ್ರದ ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

ಪ್ರಸ್ತುತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿರುವ ದಡದಪುರ ಶಿವಣ್ಣ ಕಾಂಗ್ರೆಸ್‌ನ ನಿಷ್ಠಾವಂತ ಮುಖಂಡರೆನಿಸಿ ಕೊಂಡಿದ್ದಾರೆ. ಇದುವರೆಗೂ ಜಿಲ್ಲೆಯಿಂದ ಹಿಂದುಳಿದ ವರ್ಗ ಕುರುಬ ಸಮುದಾಯಕ್ಕೆ ವಿಧಾನಪರಿಷತ್ ಪ್ರವೇಶಿಸುವ ಅವಕಾಶ ದೊರಕಿರಲಿಲ್ಲ. ಇದೀಗ ದಡದಪುರ ಶಿವಣ್ಣ ಅವರಿಗೆ ಕಾಂಗ್ರೆಸ್‌ನಿಂದ ವಿಧಾನಪರಿಷತ್‌ಗೆ ನಾಲ್ಕನೇ ಅಭ್ಯರ್ಥಿಯಾಗಿ ಪ್ರವೇಶ ಪಡೆಯುವ ಅದೃಷ್ಟ ಒಲಿದುಬಂದಿದೆ. 1999ರಲ್ಲಿ ಮಳವಳ್ಳಿಯ ಕಿರುಗಾವಲು ಕ್ಷೇತ್ರದಿಂದ ಜನತಾದಳದಿಂದ ಸ್ಪರ್ಧಿಸಿದ್ದರು.

ಕಾಂಗ್ರೆಸ್ ಪಕ್ಷದಿಂದ ಐದನೇ ಅಭ್ಯರ್ಥಿಯಾಗಿ ಕಣ ಪ್ರವೇಶಿಸಲಿರುವ ವಿನಯ್ ಕಾರ್ತಿಕ್ ಕೂಡ ಮಂಡ್ಯ ಮೂಲದವರೇ ಆಗಿದ್ದಾರೆ. ಜಿಲ್ಲೆಯ ಹಿರಿಯ ರಾಜಕಾರಣಿ ಸಾಹುಕಾರ್ ಚನ್ನಯ್ಯನವರ ಮೊಮ್ಮಗ. ಪ್ರಸ್ತುತ ಕೆಪಿಸಿಸಿ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದಾರೆ.

ಶಾಸಕರ ಸಂಖ್ಯೆ ಹೆಚ್ಚಳ

ದಡದಪುರ ಶಿವಣ್ಣ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಐದು ಸ್ಥಾನಗಳ ಪೈಕಿ ನಾಲ್ಕನೇ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಇದರಿಂದ ಬಹುತೇಕ ಚುನಾವಣೆ ನಡೆದರೆ ಇಲ್ಲವೇ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಿದೆ. ಇದರಿಂದ ಮಂಡ್ಯ ಜಿಲ್ಲೆಗೆ ಮೂರು ವಿಧಾನ ಪರಿಷತ್ ಸದಸ್ಯರು ಸಿಕ್ಕಂತಾಗಲಿದೆ. ಈಗಾಗಲೇ ಸ್ಥಳೀಯ ಸಂಸ್ಥೆಗಳಿಂದ ದಿನೇಶ್‌ಗೂಳಿಗೌಡ, ದಕ್ಷಿಣ ಪದವೀಧರ ಕ್ಷೇತ್ರದಿಂದ ಮಧು ಜಿ.ಮಾದೇಗೌಡ ಸದಸ್ಯರಾಗಿದ್ದಾರೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಹಾಗೂ ಬೆಂಬಲಿತ ಸೇರಿದಂತೆ ಶಾಸಕರ ಸಂಖ್ಯೆ 9ಕ್ಕೇರಲಿದೆ.

ಕಾರಾಗೃಹದಲ್ಲಿ ಮತೀಯ ಪರ ಘೋಷಣೆ!

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬಾಂಬ್ ಸ್ಫೋಟ ಪ್ರಕರಣದ ಕೈದಿಗಳಿಂದ ಜೈಲು ಸಿಬ್ಬಂದಿಗಳ ಮೇಲೆ ಮತ್ತೆ ಹಲ್ಲೆಗೆ ಯತ್ನಿಸಿದ್ದು, ಮತೀಯ ಪರ ಘೋಷಣೆಗಳನ್ನು ಕೂಗಿ ಪುಂಡಾಟ ನಡೆಸಿರುವ ಗಂಭೀರ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಬಾಂಬ್ ಸ್ಫೋಟ ಪ್ರಕರಣದ ಜೈಲು ಪಾಲಾಗಿರುವ ಕೈದಿಗಳು ಬ್ಯಾರಕ್‌ಗಳಲ್ಲಿ ಗಲಾಟೆ ನಡೆಸುತ್ತಿದ್ದರು. ಇದನ್ನು ಪ್ರಶ್ನಿಸಲು ಬಂದ ಜೈಲು ಸಿಬ್ಬಂದಿ ಜತೆ ವಾಗ್ವಾದ ನಡೆಸಿ, ಮತೀಯ ಪರ ಘೋಷಣೆ ಕೂಗಲು ಆರಂಭಿಸುತ್ತಿದ್ದಂತೆ ಸುಮಾರು 50ಕ್ಕೂ ಹೆಚ್ಚು ಕೈದಿಗಳು ಜಮಾವಣೆಗೊಂಡು ಜೈಲಿನಲ್ಲಿ ಆತಂಕದ ವಾತಾವರಣ ನಿರ್ಮಾಣ ಮಾಡಿದ್ದರು. ಮೂರು ದಿನಗಳ ಹಿಂದೆ ಈ ಘಟನೆ ನಡೆದಿದ್ದು, ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದು ಜೈಲು ಅಧಿಕಾರಿಗಳು ಹೇಳಿದ್ದಾರೆ.

ಕೈದಿಗಳಿಂದ ಹಲ್ಲೆ: ಬೇರೆ ಕೈದಿಗಳ ಪರವಾಗಿ ಇಬ್ಬರು ಕೈದಿಗಳು ಜೈಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಆಗಮಿಸಿದ್ದರು. ಆರೋಗ್ಯವಾಗಿದ್ದರೂ ತಮಗೆ ಆಸ್ಪತ್ರೆಯಲ್ಲಿ ದಾಖಲಿಸಿಕೊಳ್ಳಬೇಕೆಂದು ಹೇಳಿದ್ದರು. ಇದಕ್ಕೆ ಜೈಲು ವಾರ್ಡನ್ ದಾಖಲೆ ಪರಿಶೀಲಿಸಿದಾಗ ಇಬ್ಬರು ಹೆಸರು ಬೇರೆಯದ್ದಾಗಿರುವುದು ಪತ್ತೆಯಾಗಿದೆ.

ಬೇರೆ ಕೈದಿಗಳ ಹೆಸರಿನಲ್ಲಿ ಏಕೆ ಬಂದಿದ್ದೀರಿ? ಎಂದು ವಾರ್ಡನ್ ಪ್ರಶ್ನಿಸಿದಾಗ ಗಲಾಟೆಯಾಗಿದೆ. ಇದರಿಂದ ವಿವಿಧ ಬ್ಯಾರಕ್‌ನಲ್ಲಿದ್ದ ಕೈದಿಗಳು ಜಮಾವಣೆಗೊಂಡು ಘೋಷಣೆ ಕೂಗಿದ್ದಾರೆ. ಅಷ್ಟೇ ಅಲ್ಲದೆ, ಕರ್ತವ್ಯದಲ್ಲಿದ್ದ ಜೈಲು ವಾರ್ಡನ್ ಮೇಲೆ ಹಲ್ಲೆಗೆ ಯತ್ನಿಸಿದ್ದರು ಎನ್ನಲಾಗಿದೆ.

ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರು ಹೊರಕ್ಕೆ | ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಕ್ಷೀಣ

ರೈತರ ಜೀವನಾಡಿ ಕೆಆರ್‌ಎಸ್ ನೀರಿನ ಮಟ್ಟ 81 ಅಡಿಗೆ ಕುಸಿತ

ಶ್ರೀನಿವಾಸ್.ಕೆ.ಬೆಳ್ಳೂರು

ಮಂಡ್ಯ: ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟ 81 ಅಡಿಗೆ ಕುಸಿದಿದೆ. ಮೂರು ವರ್ಷಗಳ ಹಿಂದೆ ಜೂನ್ ತಿಂಗಳಲ್ಲಿ ಅಣೆಕಟ್ಟೆಯೊಳಗೆ ಈ ಪ್ರಮಾಣದ ನೀರಿನ ಮಟ್ಟ ದಾಖಲಾಗಿತ್ತು. ಮುಂಗಾರು ಆಗಮನ ವಿಳಂಬವಾದರೆ ಜಲಾಶಯದ ನೀರಿನ ಮಟ್ಟ ಅಪಾಯದ ಮಟ್ಟ ತಲುಪುವ ಆತಂಕ ಎದುರಾಗಿದೆ.

ಪ್ರಸ್ತುತ ಜಲಾಶಯದಲ್ಲಿ 81.35 ಅಡಿ ನೀರಿದ್ದು, ಅಣೆಕಟ್ಟೆಗೆ 474 ಕ್ಯುಸೆಕ್ ನೀರು ಹರಿದುಬರುತ್ತಿದೆ. ಜಲಾಶಯದಿಂದ ಹೊರಕ್ಕೆ ನದಿ ಮತ್ತು ನಾಲೆ ಸೇರಿ 436 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದ್ದು, ಅಣೆಕಟ್ಟೆಯಲ್ಲಿ 11.394 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 107.68 ಅಡಿ ನೀರು ಸಂಗ್ರಹವಾಗಿತ್ತು. ಆ ಸಮಯದಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಹೆಚ್ಚಾಗಿ ಸುರಿದಿತ್ತು. ಜೊತೆಗೆ ಮುಂಗಾರು ಮಳೆಯೂ ನಿರೀಕ್ಷೆಯಂತೆ ಆಗಮನವಾಗಿದ್ದರಿಂದ ಅಂದು ಜಲಾಶಯಕ್ಕೆ 6513 ಕ್ಯುಸೆಕ್ ನೀರು ಹರಿದುಬರುತ್ತಿತ್ತು. ಅಂದು ಜಲಾಶಯದಲ್ಲಿ 29.454 ಟಿಎಂಸಿ ಅಡಿ ನೀರು ಸಂಗ್ರಹವಾಗಿತ್ತು.



ದಿಗಂತ ವಿಶೇಷ

ಈ ಬಾರಿ ಮುಂಗಾರು ಪೂರ್ವ ಮಳೆ ಕೈಕೊಟ್ಟ ಪರಿಣಾಮ ಜಲಾಶಯದಿಂದ ಬೇಸಿಗೆ ಬೆಳೆಗಳಿಗೆ ನೀರು ಹರಿಸಲಾಯಿತು. ಹಲವು ಕೆರೆ-ಕಟ್ಟೆಗಳಿಗೆ ನೀರು ತುಂಬಿಸಲಾಯಿತು. ಇದರಿಂದ ಅಣೆಕಟ್ಟೆಯಲ್ಲಿ ನೀರನ್ನು ಕಾಯ್ದಿರಿಸಲು ಸಾಧ್ಯವಾಗಲಿಲ್ಲ. ಮಳೆ ಬಾರದಿದ್ದರೆ ಕುಡಿಯುವ ನೀರಿಗೂ ತತ್ವಾರ ಎದುರಾಗುವ ಆತಂಕ ಸೃಷ್ಟಿಯಾಗಿದೆ. ಜಲಾಶಯದಲ್ಲಿ ನೀರು ಕಡಿಮೆಯಾಗುತ್ತಿರುವುದರಿಂದ ನೀರೊಳಗೆ ಮುಳುಗಿದ್ದ ದೇಗುಲಗಳು ಗೋಚರಿಸಲಾರಂಭಿಸಿವೆ. 2023ರಲ್ಲಿ ಮುಂಗಾರು ಆಗಮನದ ವಿಳಂಬದಿಂದಾಗಿ ಜಲಾಶಯದ ನೀರಿನ ಮಟ್ಟ ಜೂನ್ ತಿಂಗಳಲ್ಲಿ 78 ರಿಂದ 79 ಅಡಿಗೆ ತಲುಪಿತ್ತು. ಮುಂಗಾರು ಮಳೆಯ ಕೊರತೆ ಹಾಗೂ ಬರಗಾಲದ ಛಾಯೆಯಿಂದ ಆ ವರ್ಷ ಅಣೆಕಟ್ಟು ಭರ್ತಿಯಾಗಲೇ ಇಲ್ಲ. ಮಳೆಯ ಅಭಾವದಿಂದ ಜಲಾಶಯದ ನೀರಿನ ಮಟ್ಟ ಆ ವರ್ಷ 107.18 ಅಡಿಗೆ ತಲುಪಿತ್ತು.

ಈ ಬಾರಿ ನಿರೀಕ್ಷೆಯಂತೆ ಮುಂಗಾರು ಪೂರ್ವ ಮಳೆ ಬರಲಿಲ್ಲ. ಮುಂಗಾರು ಮಳೆಯ ಪ್ರಮಾಣವೂ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಎಲ್‌ನಿನೋ ಪರಿಣಾಮ ಮುಂಗಾರು ಕ್ಷೀಣಿಸಲಿರುವುದರಿಂದ ಜುಲೈ ತಿಂಗಳಲ್ಲಿ ಭರ್ತಿಯಾಗುತ್ತಿದ್ದ ಜಲಾಶಯ ಈ ಬಾರಿ ಇನ್ನಷ್ಟು ವಿಳಂಬವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಹಾಲಿ ಅಣೆಕಟ್ಟೆಯ ನೀರಿನ ಮಟ್ಟ 81 ಅಡಿಗೆ ತಲುಪಿರುವುದು ಅಪಾಯದ ಮುನ್ಸೂಚನೆಯಾಗಿದೆ. 70 ಅಡಿಯವರೆಗಷ್ಟೇ ನೀರನ್ನು ಪಡೆಯಲು ಸಾಧ್ಯ. ಆನಂತರ ಉಳಿದಿದ್ದೆಲ್ಲವೂ ಡೆಡ್ ಸ್ಟೋರೇಜ್ ಆಗಿದೆ. ಮುಂಗಾರು ಮಳೆ ಆರಂಭವಾಗಿ ಜಲಾಶಯಕ್ಕೆ ನೀರು ಹರಿದುಬರುವಂತಾದರೆ ನೀರಿನ ಸಮಸ್ಯೆ ಸುಧಾರಿಸಬಹುದು. ಒಮ್ಮೆ ಮಳೆ ನಿರೀಕ್ಷೆಯಂತೆ ಬಾರದಿದ್ದರೆ ಪರಿಸ್ಥಿತಿ ಇನ್ನಷ್ಟು ಸಂಕಷ್ಟಮಯವಾಗಲಿದೆ.

ಕೃಷಿ ಮೇಲೆ ಕರಾಳ ಛಾಯೆ

ಕಳೆದ ಮೂರು ವರ್ಷದಿಂದ ಹೆಚ್ಚುವರಿ ಮಳೆ ಸುರಿದಾಗಲೆಲ್ಲಾ ಮಳೆಯಿಂದ ಬಿದ್ದ ಹೆಚ್ಚುವರಿ ನೀರನ್ನೆಲ್ಲಾ ಯಾವುದೇ ಅಡೆತಡೆಗಳಿಲ್ಲದೆ ತಮಿಳುನಾಡಿಗೆ ಹರಿಸಲಾಯಿತು. ಕೆರೆಗಳಲ್ಲಿ ತುಂಬಿರುವ ಹೂಳೆತ್ತಿಸಿ ನೀರಿನ ಸಂಗ್ರಹವನ್ನು ಹೆಚ್ಚಿಸುವ, ಹೊಸ ಕೆರೆಗಳನ್ನು, ಮಿನಿ ಬ್ಯಾರೇಜ್‌ಗಳನ್ನು ನಿರ್ಮಿಸಿಕೊಂಡು ನೀರು ಶೇಖರಣೆಗೆ ಆದ್ಯತೆ ನೀಡುವ ಯೋಜನೆಗಳು ರಾಜ್ಯದ ಕಾವೇರಿ ಕಣಿವೆಯಲ್ಲೆಲ್ಲೂ ನಡೆಯಲೇ ಇಲ್ಲ. ಪರಿಣಾಮ ಮಳೆ ಅಭಾವ ಎದುರಾದಾಗಲೆಲ್ಲಾ ತಮಿಳುನಾಡಿನೊಂದಿಗೆ ಕದನಕ್ಕಿಳಿಯುವುದು ಸರ್ವೇಸಾಮಾನ್ಯವಾಗಿದೆ. ಇದು ಮೂರು ದಶಕಗಳಿಂದಲೂ ಸಂಪ್ರದಾಯಬದ್ಧವಾಗಿ ನಡೆದುಕೊಂಡೇ ಬರುತ್ತಿದೆ. ರೈತರು ಕೂಡ ಮುಂಗಾರು ಮಳೆಯ ಮೇಲೆ ನಿರೀಕ್ಷೆ ಇಟ್ಟುಕೊಂಡು ಬಿತ್ತನೆ ಬೀಜ, ರಸಗೊಬ್ಬರಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಅಣೆಕಟ್ಟೆಗೂ ಒಳಹರಿವು ಬಾರದಿರುವುದರಿಂದ ಕೃಷಿಯ ಚಟುವಟಿಕೆಯ ಮೇಲೆ ಕರಾಳ ಛಾಯೆ ಆವರಿಸಲಾರಂಭಿಸಿದೆ.

ಸಂಪಾದಕೀಯ

ಪ್ರತಿಭಟನೆಗೆ ಹಕ್ಕಿದೆ, ಅಸಭ್ಯತೆಗೆ ಅಲ್ಲ

ಲಂಡನ್‌ನ ಬರ್ಕ್‌ಬೆಕ್ ಕಾಲೇಜಿನಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಉಪನ್ಯಾಸದ ವೇಳೆ ನಡೆದ ಅಡ್ಡಿಪಡಿಸುವ ಘಟನೆ ಮತ್ತೊಮ್ಮೆ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ವಿಧಾನಗಳ ಕುರಿತು ಚರ್ಚೆಗೆ ಕಾರಣವಾಗಿದೆ. ಕಾರ್ಯಕ್ರಮದ ವೇಳೆ ಕೆಲವರು ಭಾರತದ ಪ್ರಜಾಪ್ರಭುತ್ವ, ಭಿನ್ನಮತ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಲು ಯತ್ನಿಸಿದ್ದು, ಕಾರ್ಯಕ್ರಮದಲ್ಲಿ ಶಿಸ್ತು ಭಂಗವಾಗುವಂತಹ ಪರಿಸ್ಥಿತಿ ಉಂಟಾಯಿತು. ಇದನ್ನು ಲಂಡನ್‌ನ ಭಾರತೀಯ ಹೈಕಮಿಷನ್ ಅಸಭ್ಯ ವರ್ತನೆ ಎಂದು ಖಂಡಿಸಿದೆ. ಪ್ರಜಾಪ್ರಭುತ್ವದಲ್ಲಿ ಪ್ರಶ್ನೆ ಕೇಳುವ ಹಕ್ಕು ಅತ್ಯಂತ ಮಹತ್ವದ್ದು. ನ್ಯಾಯಾಂಗ ಸೇರಿದಂತೆ ಯಾವುದೇ ಸಂಸ್ಥೆ ಸಾರ್ವಜನಿಕ ಚರ್ಚೆ ಮತ್ತು ವಿಮರ್ಶೆಯಿಂದ ಹೊರತಾಗಿರಲು ಸಾಧ್ಯವಿಲ್ಲ. ಆದರೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಮತ್ತು ಸಾರ್ವಜನಿಕ ಕಾರ್ಯಕ್ರಮವೊಂದನ್ನು ಉದ್ದೇಶಪೂರ್ವಕವಾಗಿ ಅಸ್ತವ್ಯಸ್ತಗೊಳಿಸುವ ನಡೆ ಎರಡೂ ಒಂದೇ ಅಲ್ಲ. ಸಂವಾದದ ಅವಕಾಶವನ್ನು ಬಳಸಿಕೊಳ್ಳುವ ಬದಲು ಗದ್ದಲ ಸೃಷ್ಟಿಸುವುದು ಚರ್ಚೆಯ ಗುಣಮಟ್ಟವನ್ನು ಕುಗ್ಗಿಸುತ್ತದೆ.

ವಿಶೇಷವಾಗಿ ವಿದೇಶಿ ನೆಲದಲ್ಲಿ ಭಾರತದ ಅತ್ಯುನ್ನತ ನ್ಯಾಯಾಂಗ ಹುದ್ದೆಯ ಪ್ರತಿನಿಧಿಯೊಬ್ಬರು ಭಾಗವಹಿಸುವ ಕಾರ್ಯಕ್ರಮದಲ್ಲಿ ಸಂಯಮ ಮತ್ತು ಗೌರವ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಭಿನ್ನಮತದ ಧ್ವನಿ ಕೇಳಿಸಬೇಕು, ಆದರೆ ಅದು ಸಾಂಸ್ಕೃತಿಕ ಮತ್ತು ಪ್ರಜಾಸತ್ತಾತ್ಮಕ ಮಿತಿಗಳೊಳಗೆ ವ್ಯಕ್ತವಾಗಬೇಕು. ಇಲ್ಲವಾದರೆ ನಿಜವಾದ ಪ್ರಶ್ನೆಗಳೂ ಗದ್ದಲದ ನಡುವೆ ಕಣ್ಮರೆಯಾಗುವ ಅಪಾಯವಿದೆ. ಈ ಘಟನೆಯ ಮತ್ತೊಂದು ಆಯಾಮವೆಂದರೆ, ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಪ್ರತಿಭಟನೆಗಳು ಹೆಚ್ಚಾಗಿ ಗಮನ ಸೆಳೆಯುವ ಉದ್ದೇಶಕ್ಕೆ ಸೀಮಿತವಾಗುತ್ತಿರುವುದು. ವಿಚಾರಗಳ ಕುರಿತು ಗಂಭೀರ ಚರ್ಚೆ ನಡೆಸುವುದಕ್ಕಿಂತ ಕಾರ್ಯಕ್ರಮವನ್ನು ಅಡ್ಡಿಪಡಿಸಿ ಸುದ್ದಿ ಮಾಡುವುದು ಕೆಲವರ ಉದ್ದೇಶವಾಗುವುದು ಕಂಡುಬರುತ್ತಿದೆ. ಇಂತಹ ಪ್ರವೃತ್ತಿ ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಪೂರಕವಲ್ಲ. ನ್ಯಾಯಾಂಗವು ಪ್ರಜಾಪ್ರಭುತ್ವದ ಮೂರು ಪ್ರಮುಖ ಅಂಗಗಳಲ್ಲಿ ಒಂದಾಗಿದೆ. ಅದರ ತೀರ್ಪುಗಳನ್ನು ಟೀಕಿಸುವ ಹಕ್ಕು ನಾಗರಿಕರಿಗೆ ಇದ್ದರೂ, ನ್ಯಾಯಾಂಗದ ಘನತೆ ಮತ್ತು ಸಂಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಂದಿಸುವ ಪ್ರಯತ್ನಗಳು ದೀರ್ಘಾವಧಿ ಪರಿಣಾಮಗಳನ್ನು ಉಂಟುಮಾಡಬಹುದು. ಸಂಸ್ಥೆಗಳ ಮೇಲಿನ ವಿಶ್ವಾಸ ದುರ್ಬಲವಾದರೆ ಅದರ ನಷ್ಟ ಅಂತಿಮವಾಗಿ ಸಮಾಜಕ್ಕೆ ಆಗುತ್ತದೆ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಯನ್ನು ಹೊಂದಿದೆ. ಆದ್ದರಿಂದ ದೇಶದ ಒಳಗೆ ಮಾತ್ರವಲ್ಲ, ವಿದೇಶಗಳಲ್ಲಿಯೂ ಭಾರತೀಯರ ವರ್ತನೆ ಪ್ರಜಾಸತ್ತಾತ್ಮಕ ಸಂಸ್ಕೃತಿಯ ಪ್ರತಿಬಿಂಬವಾಗಿರಬೇಕು. ಭಿನ್ನಾಭಿಪ್ರಾಯಗಳು ಇರಬಹುದು, ಪ್ರತಿಭಟನೆಗಳೂ ನಡೆಯಬಹುದು, ಆದರೆ ಅವು ಸಂವಾದ, ಸಂಯಮ ಮತ್ತು ಪರಸ್ಪರ ಗೌರವದ ಚೌಕಟ್ಟಿನೊಳಗೆ ನಡೆದಾಗ ಮಾತ್ರ ಪ್ರಜಾಪ್ರಭುತ್ವದ ನಿಜವಾದ ಅರ್ಥ ಸಾರ್ಥಕವಾಗುತ್ತದೆ. ಹಕ್ಕು ಮತ್ತು ಹೊಣೆಗಾರಿಕೆ ಎರಡೂ ಜೊತೆಯಾಗಿ ನಡೆದಾಗ ಮಾತ್ರ ಪ್ರಜಾಪ್ರಭುತ್ವದ ಮೌಲ್ಯಗಳು ಉಳಿಯುತ್ತವೆ. ಇದೇ ಈ ಘಟನೆ ನೀಡುವ ಪ್ರಮುಖ ಪಾಠ. ಇದನ್ನು ಉಳಿಸಿಕೊಂಡು ಹೋದರೆ ಸಾಕು, ನಾಳೆಯ ಸಾಮಾಜಿಕ ಮಾಧ್ಯಮದಲ್ಲಿ ಹೀರೋಗಳಾಗುವ ಕಾರಣದಿಂದ ಇಂಥ ಹುಚ್ಚಾಟಗಳು ಸಹನೀಯ ಅಲ್ಲವೇ ಅಲ್ಲ.

ಮಮತಾ ದೀದಿ ಕೋಟೆ ಈಗ ಛಿದ್ರಛಿದ್ರ

ಟಿಎಂಸಿ ತನ್ನ ಸ್ವಯಂಕೃತಾಪರಾಧಗಳಿಂದ ಸೋತುಸುಣ್ಣವಾಗಿದೆ. ಅದರ ಬೇರುಗಳೆಲ್ಲ ದಿನೇ ದಿನೇ ಒಣಗುತ್ತಿವೆ. ಆ ಪಕ್ಷದ ಅಸ್ತಿತ್ವಕ್ಕೇ ಧಕ್ಕೆ ಒದಗಿದೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ದೇಶದಲ್ಲೆಡೆಯ ರಾಜಕೀಯ, ಚುನಾವಣೆ ಒಂದು ಬಗೆಯಾದರೆ ಪಶ್ಚಿಮ ಬಂಗಾಳ ರಾಜ್ಯದ್ದೇ ಬೇರೊಂದು ಬಗೆ. ಎಡಪಕ್ಷಗಳ ಆಡಳಿತಾವಧಿಯಿಂದಲೂ ಆ ರಾಜ್ಯದಲ್ಲಿ ಹಿಂಸಾಮುಕ್ತ ರಾಜಕೀಯ, ಹಿಂಸಾಮುಕ್ತ ಚುನಾವಣೆ ನಡೆದ ನಿದರ್ಶನವೇ ಇಲ್ಲ. ಚುನಾವಣಾ ಪೂರ್ವ, ಚುನಾವಣೋತ್ತರ ಹಿಂಸೆ ಆ ರಾಜ್ಯದಲ್ಲಿ ಸಾಮಾನ್ಯ..ಸಹಜ ಎಂಬ ಸ್ಥಿತಿಗೆ ತಲುಪಿರುವುದಕ್ಕೆ ಆ ರಾಜ್ಯವನ್ನು 35 ವರ್ಷ ನಿರಂತರ ಆಳಿದ ಸಿಪಿಎಂ ಮತ್ತು 15 ವರ್ಷ ಆಳಿದ ಟಿಎಂಸಿ ಪಕ್ಷಗಳ ಗೂಂಡಾ ವರ್ತನೆಯೇ ಕಾರಣ. ಮಾರ್ಕ್ಸಿಸ್ಟರ ಹಿಂಸಾತ್ಮಕ ದುರಾಡಳಿತದಿಂದ ಬೇಸತ್ತ ಬಂಗಾಳದ ಮತದಾರರು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದರು. ಆದರೆ ತೃಣಮೂಲದ ಕಾರ್ಯಕರ್ತರು ಕಳೆದ 15 ವರ್ಷಗಳಲ್ಲಿ ನಡೆಸಿದ ಗೂಂಡಾಗಿರಿ, ಅತ್ಯಾಚಾರ, ಅತ್ಯಂತ ವ್ಯಾಪಕ ಭ್ರಷ್ಟಾಚಾರ ಈಗ ಒಂದೊಂದಾಗಿ ಬಯಲಾಗುತ್ತಿದೆ. ಟಿಎಂಸಿಯ ಮೇರೆಮೀರಿದ ಹಿಂಸಾಚಾರ, ಅತ್ಯಾಚಾರ, ದುರಾಡಳಿತದಿಂದ ಆಕ್ರೋಶಗೊಂಡ ಮತದಾರರು ಈ ಬಾರಿ ಬಿಜೆಪಿಗೆ ಭರ್ಜರಿ ಗೆಲುವು ತಂದುಕೊಟ್ಟಿದ್ದು ಈಗ ಇತಿಹಾಸ.

ಬಿಜೆಪಿ ಸರ್ಕಾರ ಅಧಿಕಾರಕ್ಕೇರಿದ ಬಳಿಕವೂ ಅದೇ ರೀತಿಯ ಹಿಂಸಾಚಾರ ಮುಂದುವರಿದಿದೆ. ಸೋತ ತೃಣಮೂಲ ಪಕ್ಷದ ಮುಖಂಡರ ಮೇಲೆ ಹಲ್ಲೆ ನಡೆಸಲಾಗಿದೆ. ಮಮತಾ ಬ್ಯಾನರ್ಜಿ ಅವರ ಅಳಿಯ, ಸಂಸದ ಅಭಿಷೇಕ್ ಬ್ಯಾನರ್ಜಿ ಹಾಗೂ ಮತ್ತೊಬ್ಬ ಸಂಸದ ಕಲ್ಯಾಣ ಬ್ಯಾನರ್ಜಿ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ ಎಂದು ಸುದ್ದಿ ಪ್ರಸಾರವಾಗಿದ್ದರೂ ವಾಸ್ತವ ಮಾತ್ರ ಬೇರೆಯೇ ಇದೆ ಎಂಬುದು ಅನಂತರದ ವಿದ್ಯಮಾನಗಳಿಂದ ಬಯಲಾಗಿದೆ. ಅಭಿಷೇಕ್ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿಸಲಾದ 6 ಜನರಲ್ಲಿ ನಾಲ್ಕು ಮಂದಿ ಟಿಎಂಸಿಯ ಮಾಜಿ ಶಾಸಕ ಒಬ್ಬರ ಆಪ್ತರು! ಅಲ್ಲದೆ ಅಭಿಷೇಕ್ ಮೇಲೆ ನಡೆದಿದ್ದು ಮಾರಣಾಂತಿಕ ಹಲ್ಲೆ ಖಂಡಿತ ಅಲ್ಲ. ಕೊಳಕ ಕೋಳಿಮೊಟ್ಟೆ ಟೊಮ್ಯಾಟೋ ಎಸೆದು ಹಲ್ಲೆ ನಡೆಸಿದ ಅದನ್ನು ಮಾರಣಾಂತಿಕ ಹಲ್ಲೆ ಎನ್ನಲು ಸಾಧ್ಯವೆ? ಇನ್ನು ಕಲ್ಯಾಣ ಬ್ಯಾನರ್ಜಿ ತನ್ನ ತಲೆಗೆ ಗಾಯವಾದಂತೆ ಬಿಳಿಬಟ್ಟೆ ಸುತ್ತಿಕೊಂಡಿದ್ದು ಒಂದು ಕಣ್ಣೊರೆಸುವ ತಂತ್ರವಾಗಿತ್ತು. ತಲೆಗೆ ಸುತ್ತಿದ್ದ ಬಿಳಿ ಬಟ್ಟೆ ಬಿಚ್ಚಿದಾಗ ಅಲ್ಲಿ ಯಾವುದೇ ಗಾಯ ಕಂಡುಬಂದಿರಲಿಲ್ಲ. ಬಿಜೆಪಿ ಆಡಳಿತದಲ್ಲಿ ಭಾರೀ ಹಿಂಸಾಚಾರ ನಡೆದಿದೆ ಎಂದು ಬಿಂಬಿಸಲು ಟಿಎಂಸಿ ಮುಖಂಡರು ಹೂಡಿದ ತಂತ್ರಗಾರಿಕೆ ಇದಲ್ಲದೆ ಮತ್ತೇನು?

2021ರ ಚುನಾವಣೆಯಲ್ಲಿ ಮಮತಾ ದೀದಿ ಮೂರನೇ ಬಾರಿ ಗೆದ್ದಾಗ ಪಶ್ಚಿಮ ಬಂಗಾಳದಲ್ಲಿ ಅಕ್ಷರಶಃ ರಕ್ತದೋಕುಳಿಯೇ ಹರಿದಿತ್ತು. ಬಿಜೆಪಿಗೆ ಮತ ನೀಡಿದ ಹಿಂದು ಕುಟುಂಬಗಳನ್ನು ಅಟ್ಟಾಡಿಸಿಕೊಂಡು ಥಳಿಸಲಾಗಿತ್ತು. ಸಿಕ್ಕಸಿಕ್ಕ ಹೆಣ್ಣುಮಕ್ಕಳ ಮೇಲೆ ಟಿಎಂಸಿ ಗೂಂಡಾಗಳು ಬಲಾತ್ಕಾರ, ಅತ್ಯಾಚಾರ ನಡೆಸಿದ್ದರು. ನೂರಾರು ಕುಟುಂಬಗಳು ಹೆದರಿ ನೆರೆಯ ಅಸ್ಸಾಂಗೆ ಗುಳೆ ಹೋಗಬೇಕಾಯಿತು. ಹಿಂಸಾಚಾರಕ್ಕೆ ಆಗ ಬಲಿಯಾದದ್ದು 29ಕ್ಕೂ ಹೆಚ್ಚು ಮಂದಿ. 500ಕ್ಕೂ ಹೆಚ್ಚು ಮಂದಿ ತೀವ್ರ ಗಾಯಗೊಂಡಿದ್ದರು. ಆದರೆ ಈ ಬಾರಿ ಚುನಾವಣೋತ್ತರ ಹಿಂಸೆಯಲ್ಲಿ ಸಾವಿಗೀಡಾದವರ ಸಂಖ್ಯೆ ಕೇವಲ ಐದು. 2021ರ ಚುನಾವಣೋತ್ತರ ಹಿಂಸಾಚಾರದ ವೇಳೆ ಮಾನಸ್ ದರ್ಜಾಸಿ ಎಂಬ ವ್ಯಕ್ತಿಯನ್ನು ಪಶ್ಚಿಮ ಕ್ಷೇತ್ರದ ಬಿಜೆಪಿ ಮಹಿಳಾ ಅಭ್ಯರ್ಥಿಯನ್ನು ಹೊಡೆದು ಸಾಯಿಸಲಾಗಿತ್ತು. ಹಿಂದಿನ ಒಂದೊಂದು ದಶಕಗಳಿಗೆ ಹೋಲಿಸಿದರೆ ಪ್ರಸಕ್ತ ಚುನಾವಣೆ ವೇಳೆ ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಹಿಂಸೆ, ಸಾವು ನೋವಿನ ಪ್ರಮಾಣ ತೀರಾ ಕಡಿಮೆಯೆಂದೇ ಹೇಳಬೇಕಾಗಿದೆ. ಸೇಡಿನ ರಾಜಕೀಯ ಅಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂದು ಇದರರ್ಥವಲ್ಲವೆ?

ಈ ಬಾರಿ ಜನಾಕ್ರೋಶದ ಪರಿಣಾಮವಾಗಿ ಹೀನಾಯ ಸೋಲು ಕಂಡರೂ ಟಿಎಂಸಿ ಮುಖ್ಯಸ್ಥೆ ಮಮತಾ ದೀದಿಗೆ ಇನ್ನೂ ಜ್ಞಾನೋದಯವಾದಂತಿಲ್ಲ. ಪಕ್ಷವೂ ಸೋತು ತಾನೂ ಸೋತು ಹೋಗಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ರಾಜಕೀಯ ಸಾಂವಿಧಾನಿಕ ಶಿಷ್ಟಾಚಾರವನ್ನು ಕೂಡ ಪಾಲಿಸದಷ್ಟು ದುರಹಂಕಾರ ಆಕೆಗೆ. ಆದರೇನು, ಆಕೆಯ ಪಕ್ಷದ ಶಾಸಕರು, ಸಂಸದರೇ ಈಗ ದೂರ ಸರಿದು ಮಮತಾ ದುರಹಂಕಾರಕ್ಕೆ ತಕ್ಕ ಪಾಠ ಕಲಿಸುತ್ತಿದ್ದಾರೆ. ಮಮತಾ ಕರೆದ ಟಿಎಂಸಿ ಶಾಸಕಾಂಗ ಪಕ್ಷದ ಸಭೆಗೆ 80 ಶಾಸಕರ ಪೈಕಿ ಹಾಜರಾಗಿದ್ದು ಕೇವಲ 20 ಮಂದಿ. ಪಕ್ಷ ವಿರೋಧಿ ಚಟುವಟಿಕೆ ಕಾರಣಕ್ಕಾಗಿ ಇಬ್ಬರನ್ನು ಉಚ್ಚಾಟಿಸಲಾಗಿದೆ.



ಅಷ್ಟೇ ಅಲ್ಲ, ಪಕ್ಷದೊಳಗೆ ಈಗ ಬಂಡಾಯ ಪರ್ವ ಶುರುವಾಗಿದೆ. ಮಹಾರಾಷ್ಟ್ರದಲ್ಲಿ ಕೆಲವು ವರ್ಷ ಹಿಂದೆ ಎನ್‌ಸಿಪಿ ಹಾಗೂ ಶಿವಸೇನೆ ಇಬ್ಭಾಗವಾದಂತೆ ಬಂಗಾಳದಲ್ಲೂ ಟಿಎಂಸಿ ಇಬ್ಭಾಗವಾಗುವತ್ತ ಸಾಗಿದೆ. ಮಮತಾ ಆಪ್ತರಾದ ಶೋಭನ್ ದೇಬ್ ಚಟ್ಟೋಪಾಧ್ಯಾಯ ಅವರನ್ನು ಶಾಸಕಾಂಗ ಪಕ್ಷದ ನಾಯಕ ಎಂದು ಇತ್ತೀಚೆಗೆ ಕೈಗೊಂಡ ನಿರ್ಣಯಕ್ಕೆ ಪಕ್ಷೀಯರೇ ತಿರುಗಿಬಿದ್ದಿದ್ದಾರೆ. ಸಭೆ ನಡೆಸದೇ ಈ ಆಯ್ಕೆ ಮಾಡಲಾಗಿದೆ. ಅಲ್ಲದೆ ಈ ನಿರ್ಣಯಕ್ಕೆ ತಮ್ಮ ನಕಲಿ ಸಹಿ ಬಳಸಲಾಗಿದೆ ಎಂದು ಶಾಸಕರಾದ ಋತಬ್ರತ ಬ್ಯಾನರ್ಜಿ ಹಾಗೂ ಸಂದೀಪನ್ ಸಾಹಾ ಸ್ಪೀಕರ್‌ಗೆ ದೂರಿದ್ದರು.58 ಮಂದಿ ಶಾಸಕರು ತಮ್ಮ ಜೊತೆಗಿದ್ದಾರೆಂದು ಋತಬ್ರತ ಬ್ಯಾನರ್ಜಿ ದಾಖಲೆ ಒದಗಿಸಿದ ಹಿನ್ನೆಲೆಯಲ್ಲಿ ಸ್ಪೀಕರ್ ಋತಬ್ರತ ಅವರನ್ನೇ ವಿರೋಧ ಪಕ್ಷದ ನಾಯಕನಾಗಿ ಮಾನ್ಯ ಮಾಡಿದರು. ಇದರ ವಿರುದ್ಧ ಈಗ ಮಮತಾ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಪಕ್ಷದಲ್ಲಿ ಬಂಡಾಯದ ಭುಗಿಲು ಎದ್ದಿರುವುದರಿಂದ ಪಕ್ಷದ ಎಲ್ಲ ಸಾಂಸ್ಥಿಕ ಸಮಿತಿಗಳನ್ನು ವಿಸರ್ಜಿಸಲಾಗಿದೆ. ಋತಬ್ರತ ಬ್ಯಾನರ್ಜಿ ಬಣಕ್ಕೆ ಇದೀಗ 23 ಟಿಎಂಸಿ ಸಂಸದರೂ (ಲೋಕಸಭೆಯಲ್ಲಿ ಟಿಎಂಸಿ ಸಂಸದರ ಸಂಖ್ಯೆ 29) ಸೇರ್ಪಡೆಯಾಗಿ ದೀದಿಗೆ ಹೊಸ ತಲೆನೋವು ತಂದಿಟ್ಟಿದ್ದಾರೆ. ಕೋಲ್ಕತ್ತಾದ ಟಿಎಂಸಿಗೆ ಸೇರಿದ ಮೇಯರ್ ಫರ್ಹಾನ್ ಹಕೀಂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಮಮತಾ ಪಾಲಿಗೆ ಇನ್ನೊಂದು ಶಾಕ್. ಟಿಎಂಸಿ ವಕ್ತಾರ ಹಾಗೂ ರಾಜ್ಯ ಉಪಾಧ್ಯಕ್ಷ ಜಯ್‌ಪ್ರಕಾಶ್ ಮಜುಂದಾರ್ ತಾನಿದ್ದ ಬಾಡಿಗೆ ಮನೆಗೆ ಬಾಡಿಗೆ ಕಟ್ಟುವುದನ್ನೇ ನಿಲ್ಲಿಸಿ, ತನ್ನ ರಾಜಕೀಯ ಪ್ರಭಾವ ಬಳಸಿ ಮನೆ ಮಾಲಕಿಯನ್ನೇ ಹೊರಗಟ್ಟಿದ್ದರು. ಈಗ ಆಕೆಯ ದೂರಿನ ಮೇರೆಗೆ ಮಜುಂದಾರ್ ಬಂಧನವಾಗಿದೆ. ಜನರಿಂದ, ವ್ಯಾಪಾರಸ್ಥರಿಂದ ಟಿಎಂಸಿ ಮುಖಂಡರು ವಸೂಲಿ ಮಾಡಿದ್ದ 'ಕಟ್‌ಮನಿ' (ಬಲಾತ್ಕಾರದ ವಸೂಲಿ ಹಣ)ಯನ್ನು ಅವರೆಲ್ಲ ವಾಪಾಸು ಕೊಡುತ್ತಿದ್ದಾರೆ.

ಜೊತೆಗೆ ಶಿಕ್ಷಕರ ನೇಮಕಾತಿ ಹಗರಣ, ಶಾರದಾ ಚಿಟ್‌ಫಂಡ್ ಹಗರಣ, ಕಲ್ಲಿದ್ದಲು ಹಗರಣ, ಆರ್‌ಜಿಕಾರ್ ವೈದ್ಯೆ ಅತ್ಯಾಚಾರ ಯಾ ಕೊಲೆ ಪ್ರಕರಣ ಹೀಗೆ ಮಮತಾ ದುರಾಡಳಿತ ಕಾಲದಲ್ಲಿ ನಡೆದಿದ್ದ ಗಂಭೀರ ಹಗರಣಗಳೆಲ್ಲ ಈಗ ಮತ್ತೆ ತನಿಖೆಯ ಬ್ರಹ್ಮಾಸ್ತ್ರಕ್ಕೆ ಸಿಲುಕಿವೆ. ಶಿಕ್ಷಕರ ಹಗರಣದಲ್ಲಿ ಆರೋಪಿ, ಸಂಸದ ಅಭಿಷೇಕ್ ಬ್ಯಾನರ್ಜಿಗೆ ವಿಚಾರಣೆಗೆ ಹಾಜರಾಗುವಂತೆ ಇಡಿ (ಜಾರಿ ನಿರ್ದೇಶನಾಲಯ) ಸಮನ್ಸ್ ಜಾರಿ ಮಾಡಿದೆ.

ಹೀಗಿದ್ದರೂ ಮಮತಾ ದೀದಿಯ ರಾಜಕೀಯ ದರ್ಪ, ದೌಲತ್ತು ಇನ್ನೂ ಕಡಿಮೆಯಾಗಿಲ್ಲ. ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ಕಾಂಗ್ರೆಸ್‌ನ ದುಬಾರಿ ವಕೀಲ ಕಪಿಲ್ ಸಿಬಲ್ ಮೂಲಕ ತನ್ನ ಹಾಗೂ ತನ್ನ ಪಕ್ಷದ ಮೇಲಿನ ಆರೋಪಗಳನ್ನು ಕಳೆದುಕೊಳ್ಳಲು ಹೆಣಗುತ್ತಿದ್ದಾರೆ. ಟಿಎಂಸಿ ನಾಯಕರ ಮೇಲೆ ನಡೆಯುತ್ತಿರುವ ಹಲ್ಲೆ, ಹಿಂಸಾಚಾರ ನೋಡಿದರೆ ಈ ದೇಶದಲ್ಲಿರಲು ನನಗೆ ಅವಮಾನವೆನಿಸುತ್ತಿದೆ ಎಂದು ಸಿಬಲ್ ಅಪ್ಪಣೆ ಕೊಡಿಸಿದ್ದಾರೆ. ಒಂದೊಂದು ಹಿಯರಿಂಗ್‌ಗೆ ಲಕ್ಷಲಕ್ಷಗಳಲ್ಲಿ ಶುಲ್ಕ ಪಡೆಯುವ ಅತ್ಯಂತ ದುಬಾರಿ 'ದೇಶದ್ರೋಹಿ' ವಕೀಲ ಸಿಬಲ್ ಇಲ್ಲಿರಲು ಅವಮಾನವೆನಿಸಿದರೆ ಕೂಡಲೇ ಪಾಕಿಸ್ತಾನಕ್ಕೆ ತೆರಳಿ ಕ್ಷೇಮವಾಗಿರುವುದಕ್ಕೆ ಯಾರೂ ಅಡ್ಡಿಪಡಿಸಲಾರರು!

ಈ ನಡುವೆ ಹಲವು ತೃಣಮೂಲ ಕಾಂಗ್ರೆಸ್ ಕಚೇರಿಗಳು ಧ್ವಂಸವಾಗಿವೆ. ಆದರೆ ಹೀಗೆ ಧ್ವಂಸಗೊಳಿಸಿದ್ದು ಬಿಜೆಪಿ ಕಾರ್ಯಕರ್ತರಲ್ಲ. ಟಿಎಂಸಿ ಕಾರ್ಯಕರ್ತರೇ ಈ ಧ್ವಂಸಕಾರ್ಯದ ಮುಂದಾಳುಗಳು. ತಾವು ಬಿಜೆಪಿ ಬೆಂಬಲಿಗರೆಂದು ನೆಲೆ ಕಂಡುಕೊಳ್ಳಲು ಟಿಎಂಸಿ ಕಾರ್ಯಕರ್ತರೇ ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸಿದ್ದಾರೆಂದು ಟಿಎಂಸಿ ವಕ್ತಾರ ಕೊಹಿನೂರ್ ಮಜುಂದಾರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ತೃಣಮೂಲದ ರಾಷ್ಟ್ರೀಯ ವಕ್ತಾರ ರಿಜುದತ್ತ 'ತನ್ನನ್ನು ಹಾಗೂ ನನ್ನ ಕುಟುಂಬವನ್ನು ಟಿಎಂಸಿ ಗೂಂಡಾಗಳಿಂದ ರಕ್ಷಿಸಿದ್ದಕ್ಕೆ ಬಿಜೆಪಿ ಕಾರ್ಯಕರ್ತರಿಗೆ ಧನ್ಯವಾದ ಹೇಳಿದ್ದಾರೆ. ಆದರೆ ಇದೇ ಕಾರಣಕ್ಕೆ ಅವರನ್ನು ಪಕ್ಷದಿಂದ 6 ವರ್ಷ ಕಾಲ ಅಮಾನತು ಮಾಡಲಾಗಿದೆ.

ಪಶ್ಚಿಮ ಬಂಗಾಳದ ರಾಜಕೀಯ ಪರಂಪರೆಯೇ ಅಂತಹುದು. ಮತದಾರರು ಯಾವುದೇ ಪಕ್ಷಕ್ಕೆ ಅಧಿಕಾರದಲ್ಲಿರಲು ದೀರ್ಘಾವಧಿ ನೀಡುತ್ತಾರೆ. ಅದುವರೆಗೂ ಆ ಪಕ್ಷದ ಎಲ್ಲ ಅಪಸವ್ಯಗಳನ್ನೂ ಸಹಿಸುತ್ತಾರೆ. ಆದರೆ ಆಕ್ರೋಶ ಮಡುಗಟ್ಟಿ ಕ್ರೋಧಾಗ್ನಿಯಾಗಿ ಹೊರಹೊಮ್ಮಿದಾಗ ಆ ಪಕ್ಷವನ್ನು ಮೂಲಾಜಿಲ್ಲದೆ ಕಿತ್ತು ಬಿಸುಡುತ್ತಾರೆ. ಮತ್ತೆ ಅಧಿಕಾರಕ್ಕೇರಲು ಮತದಾರರು ಖಂಡಿತ ಬಿಡುವುದಿಲ್ಲ. 1977ರಲ್ಲಿ ಕಾಂಗ್ರೆಸ್ ಅಲ್ಲಿ ಅಧಿಕಾರ ಕಳೆದುಕೊಂಡಿತು. ಮರಳಿ ಅದು ಅಧಿಕಾರಕ್ಕೇರಲೇ ಇಲ್ಲ. 2011ರಲ್ಲಿ 35 ವರ್ಷ ಆಳ್ವಿಕೆ ನಡೆಸಿದ ಎಡಪಕ್ಷ ಸಿಪಿಎಂ ಅಧಿಕಾರ ಕಳೆದುಕೊಂಡಿತು. ಈಗ ವಿಪಕ್ಷವಾಗುವಷ್ಟು ಸ್ಥಾನ ಕೂಡ ಅದಕ್ಕಿಲ್ಲ. 15 ವರ್ಷ ಆಳ್ವಿಕೆ ನಡೆಸಿದ ಟಿಎಂಸಿ ತನ್ನ ಸ್ವಯಂಕೃತಾಪರಾಧಗಳಿಂದ ಸೋತುಸುಣ್ಣವಾಗಿದೆ. ಅದರ ಬೇರುಗಳೆಲ್ಲ ದಿನೇ ದಿನೇ ಒಣಗುತ್ತಿವೆ. ಆ ಪಕ್ಷದ ಅಸ್ತಿತ್ವಕ್ಕೇ ಧಕ್ಕೆ ಒದಗಿದೆ.

ಈಗ ಅಧಿಕಾರಕ್ಕೇರಿರುವ ಬಿಜೆಪಿಗೂ ಮುಂದೊಂದು ದಿನ ಅಂತಹುದೇ ಸ್ಥಿತಿ ಕಾದಿದೆಯೇ? ಜನಪರ ಆಡಳಿತ, ಹಿಂಸಾಮುಕ್ತ ರಾಜಕೀಯ, ಭ್ರಷ್ಟಾಚಾರ ರಹಿತ ಆಳ್ವಿಕೆ ನಡೆಸಲು ಬದ್ಧವಾಗಿರುವ ಬಿಜೆಪಿಗೆ ಅಂತಹ ಪರಿಸ್ಥಿತಿ ಬರಲಿಕ್ಕಿಲ್ಲ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ಓಲೈಕೆ ರಾಜಕೀಯ, ಜನವಿರೋಧಿ ನಡೆಯಿಂದ ದೂರ ಉಳಿದರೆ, ಜನಪರ ಕಾಳಜಿ ಮರೆಯದಿದ್ದರೆ ಬಂಗಾಳದಲ್ಲಿ ಕೇಸರಿ ಬಾವುಟ ರಾರಾಜಿಸುತ್ತಲೇ ಇರುತ್ತದೆ.

ಹರೆಯದವರು ಮತ್ತು ಸಮಾಜ

ಹರೆಯದವರ ಶೋಷಣೆಯನ್ನು ತಡೆದು ಅವರಿಗೆ ರಕ್ಷಣೆ ಒದಗಿಸುವುದು ಸಮಾಜದ ಕರ್ತವ್ಯ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ತರುಣರು ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ನಲವತ್ತು ಮಂದಿ ಪ್ರಜೆಗಳು ತರುಣರು. ಅವರು ಆರೋಗ್ಯವಂತರಾಗಿ, ಮಾನಸಿಕ ಮತ್ತು ಸಾಮಾಜಿಕವಾಗಿ ನೆಮ್ಮದಿಯಿಂದ ಮುನ್ನಡೆಯುವಂತೆ ರೂಪಿಸುವಲ್ಲಿ ಸಮಾಜವು ಮಹತ್ವದ ಪಾತ್ರವಹಿಸುತ್ತದೆ. ಅಂತಹ ಸಮಾಜವು ಆರೋಗ್ಯವಂತ ಸಮಾಜ ಎನಿಸಿಕೊಳ್ಳುತ್ತದೆ. ತರುಣರು ಆರೋಗ್ಯದಿಂದ, ಸಂಸ್ಕಾರವಂತರಾಗಿ ಪರಸ್ಪರ ಪ್ರೀತಿ ಪ್ರೇಮದಿಂದ ಇರಬೇಕು. ದ್ವೇಷ ಅಸೂಯೆಗಳಿಂದ ದೂರಉಳಿದು ಕಲೆ, ಸಾಹಿತ್ಯ, ಸಂಗೀತ, ನೃತ್ಯ ಮತ್ತು ಸಮೂಹ ಕಲೆಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಸಮಾಜದ ಜವಾಬ್ದಾರಿ. ತರುಣರು ಗುಣಮಟ್ಟದ ಶಿಕ್ಷಣ ಪಡೆದು, ಇತರರೊಂದಿಗೆ ಕೂಡಿ ಬಾಳಲು ಅನುವಾಗುವಂತೆ ಮತ್ತು ದೇಶಪ್ರೇಮ ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು. ಅಂತಹ ಸಮಾಜವು ಉನ್ನತ ಸಮಾಜವೆನಿಸಿಕೊಳ್ಳುತ್ತದೆ. ಹಾಗಾಗಿ ತರುಣರನ್ನು ಒಳ್ಳೆಯ ಸಂಸ್ಕಾರಗಳಿಂದ ಕೂಡಿದ ಪ್ರಜೆಗಳಾಗಿ ರೂಪಿಸುವಲ್ಲಿ ಸಮಾಜದ ಜವಾಬ್ದಾರಿ ಹಿರಿದು.

ಹಿಂದಿನ ಅಧ್ಯಾಯಗಳಲ್ಲಿ ಹರೆಯದವರನ್ನು ಆರೋಗ್ಯ ಮತ್ತು ಸಂಸ್ಕಾರವಂತ ಪ್ರಜೆಗಳಾಗಿ ರೂಪಿಸಲು ಕೌಟುಂಬಿಕ ಪರಿಸರ ಮತ್ತು ಪೋಷಕರ ಜವಾಬ್ದಾರಿ ಏನು ಎಂಬುದರ ಕುರಿತು ಓದುಗರೊಂದಿಗೆ ಕೆಲವು ಅಂಶಗಳನ್ನು ಹಂಚಿಕೊಂಡಿದ್ದೆ. ಈ ಲೇಖನದಲ್ಲಿ ತರುಣರನ್ನು ಆರೋಗ್ಯ ಮತ್ತು ಸಂಸ್ಕಾರವಂತರಾಗಿ ಮುನ್ನಡೆಸುವಲ್ಲಿ ಸಮಾಜದ ಪಾತ್ರದ ಕುರಿತು ಕೆಲವು ಅಂಶಗಳನ್ನು ತಿಳಿಯೋಣ.

ಇತ್ತೀಚಿನ ಕೆಲವು ಘಟನೆಗಳನ್ನು ಉದಾಹರಿಸಬೇಕೆಂದರೆ, ಕೇಂದ್ರ ಸರ್ಕಾರವು ನಡೆಸುವ ನೀಟ್ ಸ್ಪರ್ಧಾತ್ಮಕ ಪರೀಕ್ಷೆಯನ್ನು ಸುಮಾರು ಇಪ್ಪತ್ತೈದು ಲಕ್ಷ ವಿದ್ಯಾರ್ಥಿಗಳು ಬರೆದಿದ್ದರು. ಪರೀಕ್ಷೆಯ ಫಲಿತಾಂಶ ಇನ್ನೇನು ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ ಎಂದು ಪರೀಕ್ಷೆ ಬರೆದವರು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು. ಆಗ ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಮೊದಲೇ ದೊರೆತ ಉತ್ತರಗಳನ್ನು ಬರೆದು ಉಳಿದವರಿಗೆ ಅನ್ಯಾಯವಾಗಿದೆ ಎಂಬುದು ಸಾಬೀತಾಯಿತು. ಆದ್ದರಿಂದ ಪರೀಕ್ಷೆಯನ್ನು ವಜಾ ಮಾಡಿ ಮರುಪರೀಕ್ಷೆ ಮಾಡಲಾಗುತ್ತದೆ ಎಂಬ ಸರ್ಕಾರದ ಪ್ರಕಟಣೆಯನ್ನು ತಿಳಿದ ವಿದ್ಯಾರ್ಥಿಗಳಿಗೆ ಆಕಾಶವೇ ಕಳಚಿ ತಲೆಯ ಬಿದ್ದಂತಾಯಿತು. ಇದರಿಂದ ಎಷ್ಟೋ ವಿದ್ಯಾರ್ಥಿಗಳು ಖಿನ್ನತೆಗೊಳಗಾದರು. ಸುಮಾರು ನಾಲ್ಕೈದು ಜನ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರು. ಇದರಿಂದ ಹರೆಯದವರು ಅನುಭವಿಸಿದ ಸಂಕಟ ಊಹೆಗೂ ನಿಲುಕದ್ದು.



ಇನ್ನೊಂದು ಉದಾಹರಣೆಯನ್ನು ನೋಡೋಣ. ಫೇಸ್ ಬುಕ್, ಯೂಟ್ಯೂಬ್ ಮುಂತಾದ ಸಾಮಾಜಿಕ ಜಾಲತಾಣಗಳ ವ್ಯಸನಕ್ಕೆ ಸಿಕ್ಕು ಲೆಕ್ಕವಿಲ್ಲದಷ್ಟು ಹರೆಯದವರು ಶಿಕ್ಷಣದಿಂದ ವಂಚಿತರಾಗಿ ದಾರಿತಪ್ಪುತ್ತಿದ್ದಾರೆ ಎಂದು ಪೋಷಕರು ಮತ್ತು ತಜ್ಞರು ಅಭಿಪ್ರಾಯ ಪಟ್ಟರು. ಆ ಕಾರಣದಿಂದ ಸರ್ಕಾರವು ಹದಿನಾರು ವರ್ಷಗಳವರೆಗೆ ತರುಣರು ಸ್ಮಾರ್ಟ್ ಮೊಬೈಲ್ ಫೋನನ್ನು ಉಪಯೋಗಿಸದಂತೆ ಕಾನೂನನ್ನು ರಚಿಸುವ ನಿಟ್ಟಿನಲ್ಲಿದೆ. ಇದು ನಮ್ಮ ದೇಶದಲ್ಲಿ ಒಂದೇ ಅಲ್ಲ, ದೂರದ ಆಸ್ಟ್ರೇಲಿಯಾ, ಸಿಂಗಾಪುರ ದೇಶಗಳಲ್ಲೂ ಇದರ ಕುರಿತು ಕಾನೂನುಗಳನ್ನು ರಚಿಸಿದ್ದಾರೆ.

ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಸಮಾಜದ ಕರ್ತವ್ಯ. ಗುಣಮಟ್ಟದ ಶಿಕ್ಷಣ ಅಂದರೆ ಕೇವಲ ಪುಸ್ತಕದ ಜ್ಞಾನವೊಂದೇ ಅಲ್ಲ. ಶಿಕ್ಷಣವು ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಅಗತ್ಯವಿರುವ ಜ್ಞಾನ, ಕೌಶಲಗಳು, ಮತ್ತು ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಂಡು, ಆರೋಗ್ಯಕರ ವ್ಯಕ್ತಿತ್ವವನ್ನು ರೂಪಿಸುವ ಅಂಶಗಳಿಂದ ಕೂಡಿರಬೇಕು. ಹರೆಯದವರ ಭಾವನಾತ್ಮಕ, ಸಾಮಾಜಿಕ ಮತ್ತು ದೈಹಿಕ ಬೆಳವಣಿಗೆಯನ್ನು ಉತ್ತೇಜಿಸುವಂತಿರಬೇಕು. ಗುಣಮಟ್ಟದ ಶಿಕ್ಷಣವು ಹರೆಯದವರನ್ನು ಸಮಾಜದಲ್ಲಿ ಆರ್ಥಿಕವಾಗಿ ಉತ್ಪಾದಕರನ್ನಾಗಿ, ಮತ್ತು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುತ್ತದೆ.

ಹರೆಯದವರ ಶೋಷಣೆಯನ್ನು ತಡೆದು ಅವರಿಗೆ ರಕ್ಷಣೆ ಒದಗಿಸುವುದು ಸಮಾಜದ ಕರ್ತವ್ಯ. ಹಿಂಸಾತ್ಮಕ ಪರಿಸರದಿಂದ ನಡೆಯುವ ದೌರ್ಜನ್ಯ, ಲೈಂಗಿಕ ಅತ್ಯಾಚಾರಗಳು, ಹಿಂಸೆ ಇವುಗಳಿಂದ ಹರೆಯದವರನ್ನು ರಕ್ಷಿಸುವುದು ಸಮಾಜದ ಹೊಣೆ. ಈ ನಿಟ್ಟಿನಲ್ಲಿ ಒಂದೆರಡು ಉದಾಹರಣೆಗಳನ್ನು ಉಲ್ಲೇಖಿಸಬಹುದು. ಬಾಲ ಕಾರ್ಮಿಕರನ್ನು ಯಾವ ಸಂಸ್ಥೆಗಳೂ, ನೇಮಕ ಮಾಡಿಕೊಳ್ಳುವಂತಿಲ್ಲ. ಅದು ಹರೆಯದವರ ಶೋಷಣೆಯಾಗುತ್ತದೆ. ಹಾಗೆ ಬಾಲ ಕಾರ್ಮಿಕರನ್ನು ನೇಮಿಸಿಕೊಂಡರೆ, ನೇಮಿಸಿಕೊಂಡವರಿಗೆ ಮತ್ತು ಅವರ ಪೋಷಕರಿಗೆ ಜೈಲು ಶಿಕ್ಷೆ ಆಗುತ್ತದೆಂಬ ಕಾನೂನನ್ನು ಸರ್ಕಾರ ರಚಿಸಿದೆ. ಅದೇ ರೀತಿ ಬಾಲ್ಯ ವಿವಾಹದಿಂದ ಆಗುವ ಅನಾಹುತಗಳನ್ನು ತಪ್ಪಿಸಲು "ಶಾರದಾ ಆ್ಯಕ್ಟ್ (Sharada Act)" ಎಂಬ ಕಾನೂನನ್ನು ಸರ್ಕಾರ ಸಾವಿರದ ಒಂಬೈನೂರ ಐವತ್ತರ ದಶಕದಲ್ಲಿ ಸರ್ಕಾರ ಜಾರಿಗೆ ತಂದಿತು. ಬಾಲ್ಯವಿವಾಹದಿಂದ ಆಗುವ ದುಷ್ಪರಿಣಾಮಗಳು ಹರೆಯದವರ ಜೀವನವನ್ನು ದುಸ್ತರಗೊಳಿಸುತ್ತದೆ. ಇದರಿಂದ ಹೆಣ್ಣು ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಸಂಕಟಗೊಳಗಾಗುತ್ತಾರೆ. ಅವರ ಬೆಳವಣಿಗೆಯೂ ಕುಂಠಿತಗೊಳ್ಳುತ್ತದೆ. ಶಿಕ್ಷಣಕ್ಕೂ ಕತ್ತರಿ ಬೀಳಬಹುದು.

ಸಂಘ ಸಂಸ್ಥೆಗಳು ಹರೆಯದವರ ಹಕ್ಕುಗಳಿಗೆ ಮಾನ್ಯತೆ ನೀಡಿ, ಗೌರವಿಸಬೇಕು. ಅವರಲ್ಲಿ ಇರುವ ಸೃಜನಶೀಲತೆಗೆ ಅವಕಾಶ ಮಾಡಿಕೊಡಬೇಕು. ಅವರ ಅಹವಾಲುಗಳನ್ನು ಆಲಿಸಿ ಗೌರವಿಸಬೇಕು. ಅವುಗಳನ್ನು ಜಾರಿಗೊಳಿಸಲು ಸೂಕ್ತಕ್ರಮ ತೆಗೆದುಕೊಳ್ಳಬೇಕು. ಮಕ್ಕಳು ಮತ್ತು ತರುಣರನ್ನು ಕೌಟುಂಬಿಕ ಹಿಂಸೆಗಳಿಂದ ರಕ್ಷಿಸುವುದು ಸಮಾಜದ ಕರ್ತವ್ಯ.

ಹರೆಯದವರಿಗೆ ಒದಗಿಸಬೇಕಾದ ಮತ್ತೊಂದು ಮುಖ್ಯವಾದ ಅಂಶ, ಲೈಂಗಿಕ ಶಿಕ್ಷಣ. ಆರೋಗ್ಯಕರ ಲೈಂಗಿಕತೆಯು ತರುಣರ ಭವಿಷ್ಯದ ನೆಮ್ಮದಿಯ ಜೀವನಕ್ಕೆ ಬುನಾದಿ. ಹರೆಯದವರು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಲೈಂಗಿಕ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ. ಲೈಂಗಿಕ ಶಿಕ್ಷಣದಿಂದ ಹರೆಯದವರನ್ನು ಹೆಚ್.ಐ.ವಿ ಸೋಂಕು, ವಿಕೃತ ಲೈಂಗಿಕ ಕ್ರಿಯೆಗಳು ಮತ್ತು ಲೈಂಗಿಕ ರೋಗಗಳಿಂದ ದೂರವಿಡಬಹುದು. ಅದೇ ರೀತಿ ಲೈಂಗಿಕ ತಪ್ಪು ಕಲ್ಪನೆಗಳಿಂದ ಮನಸ್ಸನ್ನು ನಿರಾಳಗೊಳಿಸಬಹುದು. ಸಲಿಂಗ ಕಾಮಿಗಳಿಂದ ಲೈಂಗಿಕ ಅತ್ಯಾಚಾರ, ಹರೆಯದ ಹೆಣ್ಣು ಮಕ್ಕಳಲ್ಲಿ ನಾವು ನೋಡುವ ಗರ್ಭಧರಿಸುವಿಕೆ ಇವುಗಳಿಂದ ಹರೆಯದವರನ್ನು ದೂರವಿಡಬಹುದು. ಹರೆಯದವರು ಸ್ವತಂತ್ರವಾಗಿ ಬದುಕಲು, ಸಮಗ್ರವಾಗಿ ಯೋಚಿಸುವ, ಆರ್ಥಿಕವಾಗಿ ಸಬಲರಾಗುವ ಮತ್ತು ಸರಿಯಾದ ತೀರ್ಮಾನ ತೆಗೆದುಕೊಳ್ಳುವ ಕೌಶಲಗಳನ್ನು ಬೆಳೆಸಿಕೊಳ್ಳುವ ದಿಸೆಯಲ್ಲಿ ಅವರಿಗೆ ಸಕಾರಾತ್ಮಕ ಸಲಹೆ ನೀಡಬೇಕು.

ಹರೆಯದವರು ಸಾಮಾಜಿಕವಾಗಿ ಸದೃಢವಾಗಲು ಸಮುದಾಯಗಳ ಸ್ವಯಂ ಸೇವಾ ಸಂಸ್ಥೆಗಳು, ಕ್ರೀಡಾ ಸಂಸ್ಥೆಗಳು, ಸಾಹಿತ್ಯ, ಸಂಗೀತ, ಕಲೆಗಳಲ್ಲಿ ತಮ್ಮನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಗುಣಮಟ್ಟದ ಶಿಕ್ಷಣ, ಸಾಮಾಜಿಕ ಕೌಶಲಗಳು, ಹವ್ಯಾಸಗಳು, ಮತ್ತು ಜೀವನ ಕೌಶಲಗಳು ಹರೆಯದವರನ್ನು ಸಂಸ್ಕಾರವಂತ ಪ್ರಜೆಗಳನ್ನಾಗಿ ರೂಪಿಸುತ್ತದೆ. ಸಂಸ್ಕಾರವು ಹರೆಯದವರನ್ನು ಕೆಟ್ಟ ಚಟಗಳಿಂದ ಮತ್ತು ಸಮಾಜಬಾಹಿರ ವರ್ತನೆಗಳಿಂದ ದೂರವಿಡಲು ಪೂರಕ. ಆತ್ಮೀಯ ಗೆಳೆಯರು, ಹಿರಿಯರು ಮತ್ತು ಸಾಧಕರ ಒಡನಾಟ, ಅವರೊಂದಿಗಿನ ಮಾತುಕತೆಗಳು, ಮಾರ್ಗದರ್ಶನಗಳು ಹರೆಯದವರ ಮನಸ್ಸನ್ನು ಮತ್ತು ಅವರ ನಡವಳಿಕೆಗಳನ್ನು ಮಾದರಿಯಾಗಿರಿಸಿ, ಮುನ್ನಡೆಯಲು ಪೂರಕ.

ಹರೆಯದವರು ಸ್ವತಂತ್ರರಾಗಿ, ಕುಟುಂಬದ ಮತ್ತು ಸಮಾಜದ ರೀತಿ ರಿವಾಜುಗಳನ್ನು ಅನುಸರಿಸಿ, ತಮ್ಮ ಯೋಚನೆಗಳನ್ನು ಮತ್ತು ಭಾವನೆಗಳನ್ನು ಆತ್ಮವಿಶ್ವಾಸದಿಂದ ಒಳ್ಳೆಯ ಮಾತುಗಳಲ್ಲಿ ವ್ಯಕ್ತಪಡಿಸುವುದು ಹರೆಯದವರ ಕರ್ತವ್ಯ. "ಕೋಶ ಓದು, ದೇಶ ನೋಡು" ಎಂಬ ನಾಣ್ನುಡಿಯಂತೆ ಹರೆಯದವರನ್ನು ಜ್ಞಾನಗಳಿಸಲು ಕತೆ ಕಾದಂಬರಿಗಳ ಮೂಲಕ ಜ್ಞಾನ ಗಳಿಸುತ್ತಾ, ಬೇರೆ ಬೇರೆ ಸ್ಥಳಗಳನ್ನು ವೀಕ್ಷಿಸುತ್ತಾ ಜನರನ್ನು ಭೇಟಿ ಮಾಡಿ, ಅಲ್ಲಿಯ ಸಂಸ್ಕೃತಿಯನ್ನು ಅರಿತುಕೊಂಡು ಒಳ್ಳೆಯ ವ್ಯಕ್ತಿತ್ವವನ್ನು ಗಳಿಸಿಕೊಳ್ಳಲು ಪ್ರೋತ್ಸಾಹಿಸುವುದು ಸರ್ಕಾರ, ಸಮಾಜ, ಪೋಷಕರು, ಉಪಾಧ್ಯಾಯರು ಮತ್ತು ಸಮಾಜ ಚಿಂತಕರ ಕರ್ತವ್ಯ. ಹೀಗೆ ಹರೆಯದವರನ್ನು ಪ್ರಜ್ಞಾವಂತ ಪ್ರಜೆಯಾಗಿ ರೂಪಿಸುವಲ್ಲಿ ಸಮಾಜವು ಮಹತ್ವದ ಪಾತ್ರ ವಹಿಸುತ್ತದೆ.

'ಕ್ಯಾರಿಮನ್' ಕಿ ಬಾತ್!

ಹೆಂಡತಿ ಶಾಪಿಂಗ್ ಮಾಡುವಾಗ ಚೀಲ ಹಿಡಿದುಕೊಳ್ಳುವ ಹೊಣೆಗಾರಿಕೆ ಗಂಡನ ಹೆಗಲೇರುವುದು ಸಾಮಾನ್ಯ. ಇನ್ನು ಆ ಕೆಲಸವನ್ನು 'ಕ್ಯಾರಿಮನ್' ಮಾಡುತ್ತಾರೆ.


ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಶಾಪಿಂಗ್ ಹೋಗಬೇಕು' ಹೀಗೊಂದು ಮಾತು ತುಟಿಯಿಂದೀಚೆಗೆ ಜಿಗಿಯುತ್ತಿದ್ದಂತೆ, ಕೆಲವರ ಬಾಯಿಯಿಂದ ತರ ತರಹದ ಆಕ್ಷೇಪ, ಅಪಸ್ವರಗಳು ಒಂದೇ ಸಮನೆ ಪ್ರವಾಹೋಪಾದಿಯಲ್ಲಿ ಹರಿದು ಬರಲಾರಂಭಿಸುತ್ತದೆ.

"ಅಯ್ಯೋ ಮತ್ತೆ ಶಾಪಿಂಗಾ? ನನಗಂತೂ ಬರಲಾಗದಪ್ಪಾ, ನೀವೇ ಹೋಗಿ ಬನ್ನಿ, ಅಬ್ಬಾ ಅಷ್ಟು ಹೊತ್ತು ಅಲ್ಲೆಲ್ಲಾ ಕಾಯುತ್ತಾ; ತಿರುಗಾಡುತ್ತಾ ಕಾಲಕಳೆಯಲು ಸಾಧ್ಯವೇ ಇಲ್ಲ, ಅಲ್ಲಿ ನಾನಂತೂ ಚೀಲವನ್ನೆಲ್ಲಾ ಹೊತ್ತು ನಡೆದಾಡಲಾರೆ, ಶಾಪಿಂಗ್ ಏಕೆ? ಅದಕ್ಕಿಂತ ಆನ್‌ಲೈನ್‌ಲಿ ಆರ್ಡರ್ ಮಾಡಬಹುದಲ್ಲ?" ಇಂಥ ಬಗೆ ಬಗೆಯ ಬೇಸರವನ್ನು ಹೊರಹಾಕುವ ನುಡಿಬುಗ್ಗೆಯಂತೆ ಬಾಯಿ ಕಾರ್ಯನಿರ್ವಹಿಸಲಾರಂಭಿಸುತ್ತದೆ. ಶಾಪಿಂಗ್ ಎಂಬ ಪ್ರಕ್ರಿಯೆಯೊಂದು ಈ ಬಗೆಯ ಕೋಪ-ತಾಪಗಳತ್ತ ತಿರುಗಿ, 'ಅರರ್ರೇ.. ಇದೇನಿದು ಶಾಪಿಂಗೋ? ಶಾಪವೋ?' ಎಂಬ ಅನುಮಾನವೊಂದು ಮೂಡಲೂ ಇದು ಕಾರಣವಾದರೆ ಅಚ್ಚರಿ ಏನಿಲ್ಲ. ಪರಸ್ಪರ ಅಸಹನೆ, ಅತೃಪ್ತಿ ಹಾಗೂ ಆಕ್ರೋಶವೆಂಬ ಗೊಂದಲ ಮೂಡಲೂ ಇದು ಕಾರಣವಾಗುತ್ತಿತ್ತು. ಒಟ್ಟಾರೆಯಾಗಿ, 'ಇಲ್ಲ ಇಲ್ಲ ಚೀಲ ಹೊತ್ತು ತಿರುಗಲು ಸಾಧ್ಯವಿಲ್ಲ' ಎಂಬ ಕೆಲವರ ಮನದಾಳದ ಕೊರಗು ಹಾಗೂ ಪ್ರತಿರೋಧದ ಕೂಗಿಗೂ ಮನ್ನಣೆಯೊಂದು ಸಿಕ್ಕ ಸುದ್ದಿ ದಿಲ್ಲಿಯಿಂದಿಲ್ಲಿಗೆ ತೇಲಿ ಬಂದಿದೆ. ಅದುವೇ 'ಕ್ಯಾರಿಮನ್' ಬುಕ್ಕಿಂಗ್.

ಜವಾಬ್ದಾರಿಗೆ ಹೆಗಲು ನೀಡುವುದು, ಹೊಣೆ ಹೊರುವುದು ಎಂದೆಲ್ಲಾ ಹೇಳುವಾಗ ಈ ಬದುಕಿನಲ್ಲಿ 'ಹೊರುವ' ಕಾಯಕಕ್ಕೆ ಅದರದ್ದೇ ಆದ ಮಹತ್ವ ಇದೆ ಎಂದೆನಿಸುವುದರಲ್ಲಿ ಯಾವುದೇ ಸಂಶಯವಿಲ್ಲ. 'ಒಂಭತ್ತು ತಿಂಗಳು ಹೊತ್ತು....' ಎಂದು ಹೇಳುವುದರಿಂದ ಹಿಡಿದು, 'ಜೀವನದಲ್ಲಿ ಅದೆಷ್ಟೇ ಆಸ್ತಿ, ಅಂತಸ್ತು ಮಾಡಿಟ್ಟರೂ ಕೂಡಾ ಕೊನೆಯಲ್ಲಿ ನಾಲ್ಕು ಜನ ತಮ್ಮ ಹೆಗಲ ಮೇಲೆ ಹೊತ್ತು ಸಾಗುತ್ತಾರೆ' ಎಂದೆನ್ನುವವರೆಗೆ ಈ ಹೊರುವುದು ಹೇಗೆಲ್ಲ ಮಾನವ ಜೀವನವನ್ನು ಆವರಿಸಿಕೊಂಡಿದೆ ಎನ್ನುವುದನ್ನು ಅರ್ಥೈಸಿಕೊಳ್ಳಬಹುದು. ಅಂದರೆ ನಾವೆಲ್ಲರೂ ಬದುಕಿನ ಈ ಪ್ರಯಾಣದಲ್ಲಿ ಏನೇನನ್ನೆಲ್ಲಾ ಹೊರಬೇಕಾಗುತ್ತದೆ ಎಂದು ಹೇಳಲಂತೂ ಸಾಧ್ಯವೇ ಇಲ್ಲ. ಅವುಗಳ ಪೈಕಿ ನಾವು ಹೆಚ್ಚು ಹೊರುವುದೇ ಒಂದಿಲ್ಲೊಂದು ಚೀಲಗಳನ್ನು. ಈ ಚೀಲಗಳ ಜಾಲದಲ್ಲಿಯೇ ಮಾನವ ಬದುಕು ಸಿಲುಕಿಕೊಂಡಿದೆ ಎನ್ನುವುದಕ್ಕೆ ಶಾಲಾಚೀಲ, ಊಟದ ಚೀಲ, ಮನೆಯ ದಿನಸಿ ಸಾಮಾನಿನ ಚೀಲ, ಲ್ಯಾಪ್‌ಟಾಪ್ ಚೀಲ, ಕೈ ಚೀಲ, ಎಲೆ ಅಡಿಕೆ ಚೀಲ, ದುಡ್ಡಿನ ಚೀಲ ಹೀಗೆ ಅದೆಷ್ಟೋ ಚೀಲಗಳೇ ಜೀವಂತ ಸಾಕ್ಷಿ ಎನ್ನಬಹುದು. ಈ ತೆರನಾದ ಹತ್ತು ಹಲವು ಚೀಲಗಳನ್ನು ಹೊತ್ತು ಹೊತ್ತೂ ಸುಸ್ತಾದ ಜನರಿಗೆ, ಮತ್ತೆ ಶಾಪಿಂಗ್‌ನ ಆ ಹಲವಾರು ಚೀಲಗಳನ್ನು ಹೊತ್ತು ಸಾಗಬೇಕು ಎಂದರೆ ಅಸಾಧ್ಯವೇ ಸರಿ. ಅದರಲ್ಲೂ ಇರುವ ಎರಡೇ ಎರಡು ಕೈಗಳಲ್ಲಿ ಅದೆಷ್ಟು ಚೀಲಗಳನ್ನು ತಾನೇ ಹೊರಲಾದೀತು ಹೇಳಿ? ಹೀಗಾಗಿ ಚೀಲಗಳನ್ನು ಕ್ಯಾರಿ ಮಾಡಬೇಕು ಎಂದು ಶಾಪಿಂಗ್‌ಗೆ ಜೊತೆಯಾದವರಲ್ಲಿ ಹೇಳಿದರೆ ಅವರಂತೂ ಕೆಕ್ಕರಿಸಿ ನೋಡದೇ ಇರಲಾರರು. ಅಷ್ಟೂ ಸಾಲದೆನ್ನುವಂತೆ ಕ್ಯಾಕರಿಸಿ ಉಗಿದರೂ ಉಗಿಸಿಕೊಳ್ಳಬೇಕಷ್ಟೇ!



ನಾವು ಮಾತಿನ ಭರದಲ್ಲಿ "ಹೇಯ್ ಕ್ಯಾರಿ ಆನ್.." ಎಂದು ಹೇಳಿದಷ್ಟು ಸಲೀಸಾಗಿ ಈ ಬದುಕು ಮುಂದೆ ಸಾಗಬೇಕು ಎಂದರೆ ಕ್ಯಾರಿ ಬ್ಯಾಗ್‌ಗಳನ್ನು ಕ್ಯಾರಿ ಮಾಡಲೇಬೇಕಾಗುತ್ತದೆ ಎನ್ನುವುದು ಸರ್ವವಿಧಿತ. ಹಾಗಂತ ಅದಕ್ಕಾಗಿ ಯಾರು ಯಾರದೋ ಕೈಕಾಲು ಹಿಡಿದು, ಬಗೆ ಬಗೆಯಾಗಿ ಬೇಡಿಕೊಂಡು, ಹಲ್ಲು ಗಿಂಜುವುದೆಲ್ಲ ಹಳತಾಯಿತು. ಸದ್ಯ ಅದರ ಗೋಜಿಗೆ ಹೋಗದೇ 'ಕ್ಯಾರಿಮನ್'ಗಳ ಸಹಾಯ ಪಡೆದರೆ ಶಾಪಿಂಗ್‌ನ ಈ ಸಮಸ್ಯೆಗಳೆಲ್ಲವೂ ಶಾಪಮುಕ್ತವೇ ಸರಿ. ಅವರು ಸಿಕ್ಕರೆಂದರೆ ಶಾಪಿಂಗ್ ಶಿಖಾಮಣಿಗಳ ಕೆಲಸ ಬಲು ಸುಲಭ, ಸರಾಗ ಎನ್ನುವುದು ಅವರು ಏನೇನು ಕೆಲಸ ಮಾಡುತ್ತಾರೆ ಎನ್ನುವುದನ್ನು ನೋಡಿದರೆ ಅರ್ಥವಾಗುತ್ತದೆ. ಶಾಪಿಂಗ್‌ಗೆ ಸಂಬಂಧಿಸಿದಂತೆ ಚೀಲಗಳನ್ನು ಕ್ಯಾರಿ ಮಾಡಲು ವಿಫಲರಾಗಿ ಅವರ ಮನ ಗೆಲ್ಲಲು ಸೋತವರೂ ಸಹ ಈಗ 'ಕ್ಯಾರಿಮನ್' ಸೇವೆಯನ್ನು ಬಳಸಿಕೊಂಡು ಅವರ ಮನಗೆಲ್ಲಲು ಸಾಧ್ಯವಿದೆ. ಅಂದರೆ ಈ ಸೌಲಭ್ಯದಿಂದ ಶಾಪಿಂಗ್‌ನಲ್ಲಿ ಖರೀದಿಸಿದ ಸಾಮಾನುಗಳನ್ನು ಕ್ಯಾರಿ ಮಾಡುವ ಕಿರಿ ಕಿರಿ ಇಲ್ಲದೇ ತಮಗೆ ಬೇಕೆನಿಸಿದ್ದನ್ನೆಲ್ಲಾ ನಿಶ್ಚಿಂತೆಯಿಂದ ಖರೀದಿಸುತ್ತಾ ಸಾಗುವ ಮೂಲಕ ಮನ ಹಗುರಾಗಿದೆ, ಎಲ್ಲೆಲ್ಲೋ ತೇಲಾಡಿದೆ, ಖುಷಿಯಲ್ಲಿ ಹಾರಾಡಿದೆ ಎಂದೆನ್ನುತ್ತಾ ಶಾಪಿಂಗೂ ವರವಾಗುವ ಪರಿಯನ್ನು ಅನುಭವಿಸಿ ತೀರಬಹುದು. ಹಾಗೆ ನೋಡಿದರೆ ಇದು ನಾರಿಮಣಿಗಳಿಗಂತೂ ತುಂಬಾ ಪ್ರಯೋಜನ ಎಂದು ಹೇಳಿದರೂ ಕೂಡಾ, ಗಂಡಸರೂ ಇದರ ಫಲಾನುಭವಿಗಳೇ! ಏಕೆಂದರೆ ಅವರಿಗೀಗ ಈ ಕ್ಯಾರಿ ಮಾಡುವ ಬಲು ತ್ರಾಸದಾಯಕ ಕೆಲಸದಿಂದ ಒಂದು ತೆರನಾದ ಮುಕ್ತಿ ದೊರಕಿದಂತೆಯೇ ಸರಿ. ಆದರೂ ಮಹಿಳೆಯರಿಗೂ ಪುರುಷರ ಅನುಮತಿಗೆ ಕ್ಯಾರೇ ಅನ್ನದೇ ಶಾಪಿಂಗ್‌ನಲ್ಲಿ ತೊಡಗಿಸಿಕೊಳ್ಳಲೂ ಇದರಿಂದ ಅವರಿಗೂ ಅನುಕೂಲವೇ ಸೈ.

ಜನಜಂಗುಳಿಯಿಂದ ಗಿಜಿಗುಡುವ, ಎಲ್ಲೆಲ್ಲೂ ನೂಕುನುಗ್ಗಲಿನಿಂದ ಕೂಡಿರುವ, ತಮ್ಮಿಷ್ಟದ ಶಾಪಿಂಗ್‌ನಲ್ಲಿ ಮುಳುಗಿಹೋಗಿರುವ ಜನರ ದಂಡಿನಿಂದ ತುಂಬಿ ಹೋಗಿರುವ ಮಾಲ್ ಅಥವಾ ಮಾರ್ಕೆಟ್‌ನ್ನು ನೋಡಿದ ಯಾವುದೋ ಸ್ಟಾರ್ಟ್-ಅಪ್ ಶೂರನಿಗೆ ಹೀಗೊಂದು ವಿಚಾರ ಸ್ಪಷ್ಟವಾಗಿರಬೇಕು. ಅದೇನೆಂದರೆ ಈ ಭೂಮಿಯ ಮೇಲೆ ಉಂಟಾಗುತ್ತಿರುವ ವಾಯುಗುಣದ ಬದಲಾವಣೆ, ದೇಶ-ದೇಶಗಳ ನಡುವಿನ ಯುದ್ಧ, ಹಿಮಾಲಯ ಕರಗುವುದು, ನೆರೆ-ಬರ ಇವುಗಳೆಲ್ಲ ಅಸಲಿ ಸಮಸ್ಯೆಗಳೇ ಅಲ್ಲ. ಬದಲಿಗೆ ಆ ಕೈಯ್ಯಲ್ಲಿ ನಾಲ್ಕಾರು ಈ ಕೈಯ್ಯಲ್ಲಿ ನಾಲ್ಕಾರು ತುಂಬಿದ ಚೀಲಗಳನ್ನು ಹಿಡಿದುಕೊಂಡು, ಹೆಜ್ಜೆಯ ಮೇಲೆ ನಿಯಂತ್ರಣ ಸಾಧಿಸಲಾಗದೇ ಅತ್ತಿಂದಿತ್ತ, ಇತ್ತಿಂದತ್ತ ಓಲಾಡುತ್ತಾ ಓಲಾ, ಉಬರ್‌ಗೆ ಕಾಯುತ್ತಾ ಇಲ್ಲವೇ ಅದನ್ನು ಪಾರ್ಕಿಂಗ್ ನಿಲ್ಲಿಸಿರುವ ಕಾರಿನವರೆಗೆ ಅತ್ಯಂತ ಪ್ರಯಾಸದಿಂದ ಹೊತ್ತುಕೊಂಡು ಹೋಗುವಲ್ಲಿನ ತೊಂದರೆ ತಾಪತ್ರಯಗಳೇ ಈ ಕಾಲದ ಬಹುದೊಡ್ಡ ಜ್ವಲಂತ ಸಮಸ್ಯೆ ಅನಿಸಿರಬೇಕು. ಈ ಕಾರಣಕ್ಕೆ ಆತ ತುಂಬಾ ಯೋಚಿಸಿ ಹೀಗೊಂದು ವ್ಯವಸ್ಥೆಯನ್ನು ಸ್ಟಾರ್ಟ್-ಅಪ್ ಆಗಿ ಪರಿಚಯಿಸಿರಲಿಕ್ಕೂ ಸಾಕು. ಸೊನ್ನೆಯನ್ನು ಶೋಧಿಸಿದ, ಚಂದ್ರನೆಡೆಗೆ ಹೆಜ್ಜೆ ಹಾಕಿದ, AI ಅಂಗಳಕ್ಕೆ ಲಗ್ಗೆಯಿಟ್ಟ ಮಾನವ ಇದೀಗ ಶಾಪಿಂಗ್ ಹೋದವರ ಲಗೇಜ್‌ಗಳನ್ನು ಹಿಡಿದುಕೊಳ್ಳಲು ಅನುಕೂಲವಾಗುವಂತೆ ವ್ಯಕ್ತಿಗಳನ್ನು ಕಂಡುಹಿಡಿದಿರುವುದು ಅಲ್ಲಲ್ಲ ಪರಿಚಯಿಸಿರುವುದು ವಿಶೇಷವೇ ಸರಿ.

ಹೆಂಡತಿಶಾಪಿಂಗ್ ಮಾಡುವಾಗಚೀಲಹಿಡಿದುಕೊಳ್ಳುವಹೊಣೆಗಾರಿಕೆಗಂಡನ ಹೆಗಲೇರುವುದು ಸಾಮಾನ್ಯ. ಇನ್ನು ಆ ಕೆಲಸವನ್ನು 'ಕ್ಯಾರಿಮನ್' ಮಾಡುತ್ತಾರೆ. ಅಲ್ಲಿಗೆ ಗಂಡನ ಮೊದಲ ಟಾಸ್ಕ್ ಔಟ್‌ಸೋರ್ಸ್ ಮಾಡಿದಂತಾಯಿತು. ಮುಂದೆ ಈ ಕ್ಯಾರಿಮನ್ ಬುಕ್ಕಿಂಗ್‌ನ ಪ್ರೋ, ಪ್ರೀಮಿಯಮ್, ಗೋಲ್ಡ್ ಪ್ಯಾಕೇಜ್ ಎಂದೆಲ್ಲ ಪರಿಚಯಿಸಿ, ಅವರು ಮಾಡುವ ಖರೀದಿಯ ಆಯ್ಕೆಯನ್ನು ಪ್ರಶಂಸಿಸುವುದು, ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಮಾಡಲು ಅನುಕೂಲಕರವಾಗುವಂತೆ ಲೆಕ್ಕವಿಲ್ಲದಷ್ಟು ಬಗೆ ಬಗೆಯ ಪೋಸ್‌ಗಳ ಫೋಟೋ ಕ್ಲಿಕ್ಕಿಸಿ ನೀಡುವುದು, ಇನ್ನು ಅವರು ಅದೆಷ್ಟೇ ಅಂಗಡಿಗಳನ್ನು ಹತ್ತಿಳಿದರೂ ತಾಳ್ಮೆವಹಿಸಿ ಸಮಾಧಾನದಿಂದ ಇರುವುದು ಇನ್ನಿತ್ಯಾದಿ ಫೀಚರ್‌ಗಳನ್ನೂ ಅದರ ಜೊತೆಗೆ ಸೇರಿಸಬಹುದು. ಯಾವ ಯಾವ ಫೀಚರ್‌ನ ಅಗತ್ಯವಿದೆಯೋ ಅದಕ್ಕೆ ತಕ್ಕಂತೆ ಹಣ ಪಾವತಿಸಿ, ಆಯ್ಕೆ ಮಾಡಿಕೊಳ್ಳುವ ಅವಕಾಶವೂ ಲಭ್ಯವಾಗಬಹುದು.

ಈ ಎಲ್ಲಾ ಬೆಳವಣಿಗೆಗಳ ನಡುವೆ ಒಂದು ಕೈಯ್ಯಲ್ಲಿ ತರಕಾರಿ ಚೀಲ, ಮತ್ತೊಂದರಲ್ಲಿ ದಿನಸಿ ಚೀಲ, ಹೆಗಲಲ್ಲಿ ನೇತಾಡುವ ವ್ಯಾನಿಟಿ ಬ್ಯಾಗ್, ಕಂಕುಳ ಮಧ್ಯದಲ್ಲಿ ಸಿಕ್ಕಿಸಿಕೊಂಡ ನೀರಿನ ಬಾಟಲ್ ಜೊತೆಗೊಂದು ಪುಟ್ಟ ಮಗುವನ್ನೂ ಅದು ಹೇಗೋ ಅಡ್ಜಸ್ಟ್ ಮಾಡಿ ಕರೆದುಕೊಂಡು ಹೋಗಬಲ್ಲ ಅತ್ಯಪರೂಪದ ಸಾಮರ್ಥ್ಯವುಳ್ಳ ಕೆಲವು ಭಾರತೀಯ ಮಹಿಳೆಯರಲ್ಲಿ ಈ ಬಗ್ಗೆ ಹೇಳಿದರೆ ಅವರು "ಅದ್ಯಾಕೆ ಅವರಿಗೆ ಹಣ ಕೊಡಬೇಕು? ಬೇಕಿದ್ದರೆ ಅವರ ಯಾವುದಾದರೂ ಚೀಲ ಇದ್ದರೆ ಹೇಳಿ ಅದನ್ನೂ ನಾವೇ ಹಿಡಿದುಕೊಂಡು ಹೋಗುತ್ತೇವೆ" ಎಂದರೂ ಅಚ್ಚರಿಯೇನಿಲ್ಲ. ಇಂಥ ಚೀಲ ಹಿಡಿದುಕೊಳ್ಳುವ ವಿಷಯದಲ್ಲಿ ಅವರೆಂದೂ ಅಷ್ಟ/ನವ/ದಶಭುಜೆಯರೇ ಹೌದು. ಆದಾಗ್ಯೂ ಈ ಕ್ಯಾರಿಮನ್‌ಗಳು ಅದು ಹೇಗೆ ಮನ ಗೆಲ್ಲುವರೋ ಕಾದು ನೋಡಬೇಕಷ್ಟೇ!

ಓವರ್‌ಡೋಸ್: "ನೀ ಏನೂ ಮಾಡುವುದು ಬೇಡ, ಜಸ್ಟ್ ನನ್ ಜೊತೆ ಬಂದರೆ ಅಷ್ಟೇ ಸಾಕು" ಎಂದು ಹೇಳಿಯೇ ಶಾಪಿಂಗ್‌ಗೆ ಕರೆದುಕೊಂಡು ಹೋಗುತ್ತಾರೆ. ಆದರೆ ಆ ಶಾಪಿಂಗ್ ಮುಗಿಯುವಷ್ಟರಲ್ಲಿ ಜಸ್ಟ್ ಬಂದರಷ್ಟೇ ಸಾಕಾಗುವುದಿಲ್ಲ ಎಂಬ ಬಹುದೊಡ್ಡ ಸತ್ಯವೊಂದು ಅರ್ಥವಾಗಿರುತ್ತದೆ.

ಕಿರುಸುದ್ದಿ

ರ್‍ಯಾಂಕ್ ವಿಜೇತರಿಗೆ ಸನ್ಮಾನ

ಕುಂದಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕುಂದಾಪುರ ತಾಲೂಕು ಇದರ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ನಿಲಯ ಕುಂದಾಪುರ ವಿಭಜನೆ ಖಾರ್ವಿಕೇರಿ ಇಲ್ಲಿನ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭ ಶುಕ್ರವಾರ ನಡೆಯಿತು. ಕುಂದಾಪುರ ಪೊಲೀಸ್ ಠಾಣೆಯ ಉಪನಿರೀಕ್ಷಕ ನಂಜಾ ನಾಯ್ಕ್ ಕಾರ್ಯಕ್ರಮ ಉದ್ಘಾಟಿಸಿ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಈ ವಿದ್ಯಾರ್ಥಿ ನಿಲಯದಲ್ಲಿ ಓದಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಹತ್ತನೇ ರ್‍ಯಾಂಕ್ ಪಡೆದ ಪ್ರಜ್ಞಾ ಮತ್ತು ರಾಜ್ಯಕ್ಕೆ 15ನೇ ರ್‍ಯಾಂಕ್ ಪಡೆದ ಧನ್ಯ ಮತ್ತು ಡಿಸ್ಟಿಂಕ್ಷನ್ ಪಡೆದ 10 ವಿದ್ಯಾರ್ಥಿಗಳನ್ನು ಮತ್ತು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕುಂದಾಪುರ ಟೌನ್ ವಿದ್ಯಾರ್ಥಿ ನಿಲಯದಲ್ಲಿ ಓದಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದ 4 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಆಶಾದೇವಿ ನಾಯಕ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಕುಂದಾಪುರ ಪುರಸಭೆಯ ಸಾಮಾಜಿಕ ನ್ಯಾಯ ಸಮಿತಿ ಮಾಜಿ ಅಧ್ಯಕ್ಷ ಪ್ರಭಾಕರ್ ವಿ., ಪುರಸಭೆ ಮಾಜಿ ಸದಸ್ಯೆ ಪ್ರಭಾವತಿ ಶೆಟ್ಟಿ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹಾಕಪ್ಪ ಲಮಾಣಿ ಶುಭ ಹಾರೈಸಿದರು.

ವಿದ್ಯಾರ್ಥಿ ನಿಲಯದ ನಿಲಯ ಪಾಲಕಿ ಆಶಾಲತಾ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಿದ್ಯಾರ್ಥಿನಿ ರಮ್ಯ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

ಅರ್ಜಿ ಆಹ್ವಾನ

ಮಡಿಕೇರಿ: ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಕೊಡಗು ಜಿಲ್ಲೆಯ ಮೀನುಗಾರಿಕೆ ಇಲಾಖೆ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ ಇಬ್ಬರು ಫಲಾನುಭವಿಗಳಿಗೆ ಐಸ್ ಬಾಕ್ಸ್‌ನೊಂದಿಗೆ ಮೋಟಾರ್ ಸೈಕಲ್‌ಗೆ ಸಹಾಯಧನ ಸೌಲಭ್ಯ ಪಡೆಯಲು ಮೀನುಗಾರರಿಗೆ/ ಮೀನು ಕೃಷಿಕರಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಜೂ.20 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಸಂಬಂಧಪಟ್ಟ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳನ್ನು ಸಂಪರ್ಕಿಸುವಂತೆ ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕ ಸಚಿನ್ ಅವರು ಕೋರಿದ್ದಾರೆ.

ತಂಬಾಕು ಸೇವನೆ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಬೇಕು

ಮುಲ್ಕಿ: ಕಿಲ್ಪಾಡಿ ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠ ದಲ್ಲಿ ಶ್ರೀನಿವಾಸ ಡೆಂಟಲ್ ಕಾಲೇಜ್ ಸಹಯೋಗದಲ್ಲಿ 'ವಿಶ್ವ ತಂಬಾಕು ವಿರೋಧಿ ದಿನ'ವನ್ನು ಆಚರಿಸಲಾಯಿತು. ವೈದ್ಯರಾದ ಡಾ. ಅನಂತ ಕೃಷ್ಣ ಮಾತನಾಡಿ ತಂಬಾಕು ಸೇವನೆಯಿಂದ ಆರೋಗ್ಯಕ್ಕೆ ಆಗುವ ಹಾನಿಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ , ಶಿಕ್ಷಕರು ಮತ್ತು ಪೋಷಕರು ಎಚ್ಚರಿಕೆ ವಹಿಸಬೇಕಾಗಿದೆ ಎಂದರು. ಸಂಪನ್ಮೂಲ ವ್ಯಕ್ತಿಯಾಗಿ ಡಾ. ಸ್ನೇಹಾ ಅವರು ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿವರಿಸಿದರು. ತಂಬಾಕು ಸೇವನೆಯಿಂದ ಆಗುವ ಪರಿಣಾಮಗಳು ಮತ್ತು ಅದನ್ನು ತ್ಯಜಿಸುವುದರಿಂದಾಗುವ ಪ್ರಯೋಜನಗಳ ಕುರಿತು ಜಾಗೃತಿ ಮೂಡಿಸುವ ಕಿರು ನಾಟಕವನ್ನು ಪ್ರದರ್ಶಿಸಿದರು. ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು ಶಾಲಾ ಪ್ರಾಂಶುಪಾಲರಾದ ಕಾಮಾಕ್ಷಿ ಆರ್. ನಾಯಕ್ ಸ್ವಾಗತಿಸಿದರು. ಲಕ್ಷ್ಮಿ ಕಾಮತ್ ನಿರೂಪಿಸಿದರು.

ಔಷಧೀಯ ಗಿಡ ನೆಟ್ಟು ಪರಿಸರ ದಿನಾಚರಣೆ

ಶಿರ್ವ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೆಸಿಐ, ಶಂಕರಪುರ –ಜಾಸ್ಮಿನ್, ಜ್ಯೂನಿಯರ್ ಜೇಸಿಸ್ ವತಿಯಿಂದ ಭಾನುವಾರ ಶಂಕರಪುರ ಸಾಲ್ಮರ ಕೃಷ್ಣವೇಣಿ ಆಯುರ್ವೇದ ಚಿಕಿತ್ಸಾ ಮತ್ತು ಸ್ವಾಸ್ಥ್ಯ ಕೇಂದ್ರದ ಪರಿಸರದಲ್ಲಿ ಔಷಧಿಯ ಹಾಗೂ ಹಣ್ಣುಗಳ ಗಿಡಗಳನ್ನು ನೆಡುವ ಮೂಲಕ ಚಾಲನೆ ನೀಡಲಾಯಿತು. ಸಾಲ್ಮರ ಗೋವಿಂದ ಭಟ್ ಫ್ಯಾಮಿಲಿ ಟ್ರಸ್ಟ್ ಶಂಕರಪುರ ಇದರ ಟ್ರಸ್ಟಿ ಹರಿದಾಸ್ ಭಟ್ ಗಿಡವನ್ನು ನೆಟ್ಟು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರಿಯ ಮೂಳೆ ತಜ್ಞ ಡಾ.ಪ್ರಕಾಶ್ ಭಟ್, ಮೂಡುಬಿದ್ರಿ ಆಯುರ್ವೇದ ಸರ್ಜನ್ ಡಾ. ಸುಕೇಶ್ ಎ. ಮೀರಾ ಭಟ್, ಜೇಸಿಐ ಅಧ್ಯಕ್ಷ ರಾಜೇಶ್ ಆಚಾರ್ಯ, ಹಿರಿಯ ಜೇಸಿಐ ನಾಯಕ ನವೀನ್ ಅಮೀನ್ ಶಂಕರಮರ, ಇನ್ನಂಜೆ ಗ್ರಾ.ಪಂ.ನಿಕಟಪೂರ್ವ ಅಧ್ಯಕ್ಷೆ ಮಾಲಿನಿ ಶೆಟ್ಟಿ, ಜೂನಿಯರ್ ಜೇಸಿಐ ಅಧ್ಯಕ್ಷ ಹರ್ಷಿತ್, ಪದ್ಮನಾಭ ಭಟ್ ಸಾಲ್ಮರ, ಕೃಷ್ಣವೇಣಿ ಆಯುರ್ವೇದ ಮತ್ತು ಆಶ್ರಯಧಾಮದ ಮುಖ್ಯ ವೈದ್ಯಾಧಿಕಾರಿ ಡಾ.ಲಕ್ಷ್ಮೀಶ ಉಪಾಧ್ಯ, ಮುಖ್ಯ ಆಡಳಿತಾಧಿಕಾರಿ ಡಾ. ರಮೇಶ್ ಮಿತ್ತಾಂತಾಯ, ಕಾರ್ಯದರ್ಶಿ ಭವ್ಯಾ ಸುವರ್ಣ, ಸಂತೋಷ್ ಕುಮಾರ್, ಲಿನೆಟ್ ಡಿಮೆಲ್ಲೊ, ಜೇಸಿಐ ಸದಸ್ಯರು ಉಪಸ್ಥಿತರಿದ್ದರು.



ಬಂಟ್ವಾಳ ತಾಲೂಕಿನ ಪಾಂಡವರಕಲ್ಲು ದ.ಕ. ಜಿಲ್ಲಾ ಪಂಚಾಯತ್ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ ಸಾಮಾಜಿಕ ಕಾರ್ಯಕರ್ತ ಸುಧಾಕರ್ ಶೆಣೈ ಖಂಡಿಗ ಅವರು ಎಂಟು ಫ್ಯಾನ್‌ಗಳನ್ನು ಕೊಡುಗೆಯಾಗಿ ಶುಕ್ರವಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕಿ ಅಗ್ನೆಸ್ ಪ್ರಮಿಲಾ ಲೋಬೊ, ಎಸ್ ಡಿಎಂಸಿ ಅಧ್ಯಕ್ಷ ದಿನೇಶ್ ಜೇಕ್ಯಾರ್, ಸದಸ್ಯರಾದ ಮಾಧವ ಪಟ್ರಾಡಿ, ಲತೀಫ್, ಬಾಬು ಪೂಜಾರಿ ನಿರಾಡಿ, ಹನೀಫ್ ಕೆದಿಲೆ, ಫಾರೂಕ್ ನೀರಾಡಿ, ಪದ್ಮನಾಭ, ನಮಿತಾ ಮತ್ತಿತರರು ಹಾಜರಿದ್ದರು.

ಎಸ್.ಸಿ/ಎಸ್.ಟಿ. ವಸತಿ ಯೋಜನೆ: ಅವಧಿ ವಿಸ್ತರಣೆ

ಮಂಗಳೂರು: ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ ವಸತಿ ಯೋಜನೆಯಡಿ ಮನೆ ನಿರ್ಮಾಣ ಮಾಡಿಕೊಳ್ಳಲು ಅನುದಾನ ಮಂಜೂರು ಮಾಡುವ ಸಲುವಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 15 ರವರೆಗೆ ಅವಧಿ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ಮಂಗಳೂರು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಅರ್ಜಿದಾರರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿರಬೇಕು. ಕರ್ನಾಟಕ ರಾಜ್ಯದ ನಿವಾಸಿ ಯಾಗಿರಬೇಕು. ಅರ್ಜಿದಾರರು 18 ವರ್ಷ ಮೇಲ್ಪಟ್ಟಿರಬೇಕು. ಅರ್ಜಿದಾರರ ಕುಟುಂಬವು ವಸತಿರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆ ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ. ಅರ್ಜಿದಾರರು ಕಡ್ಡಾಯವಾಗಿ ಸ್ವಂತ ನಿವೇಶನವನ್ನು ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು. (ಪಾರಂಪರಿಕ ಅರಣ್ಯ ಹಕ್ಕು ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕು ಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.) ಇತ್ತೀಚಿನ ಜಾತಿ – ಆದಾಯ ಪ್ರಮಾಣ ಪತ್ರ (ಆರ್.ಡಿ. ಸಂಖ್ಯೆ ಹೊಂದಿರಬೇಕು). ಇತ್ತೀಚಿನ ಭಾವಚಿತ್ರ–2, ಆಧಾರ್ ಕಾರ್ಡ್, ಗುರುತಿನ ಚೀಟಿ, ಪಾನ್ ಕಾರ್ಡ್ ಜೆರಾಕ್ಸ್ ಪ್ರತಿ. ಆಹಾರ ಪಡಿತರ ಚೀಟಿ (ಬಿಪಿಎಲ್). ಬ್ಯಾಂಕ್ ಪಾಸ್ ಪುಸ್ತಕ (ಖಾತೆ ಸಂಖ್ಯೆ ಇರುವ ಮುಖಪುಟಕ್ಕೆ ಅರ್ಜಿದಾರರು ಸ್ವಯಂ ದೃಢೀಕರಣ ಮಾಡಿರಬೇಕು ಹಾಗೂ ಆಧಾರ್ ಲಿಂಕ್ ಆಗಿರಬೇಕು). ನಿವೇಶನದ ಹಕ್ಕು ಪತ್ರ ಅಥವಾ ನಿವೇಶನದ ಖಾತೆಯನ್ನು ಕಡ್ಡಾಯವಾಗಿ ಸಂಬಂಧಪಟ್ಟ ಇಲಾಖೆಯಿಂದ ಪಡೆದು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಅಥವಾ ಅರ್ಜಿ ನಮೂನೆಯನ್ನು ನಗರದ ಉರ್ವಸ್ಟೋರ್‌ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿರುವ ಉಪ ನಿರ್ದೇಶಕರ ಕಚೇರಿ (ದೂರವಾಣಿ ಸಂಖ್ಯೆ: 0824–2451237/9480843030), ಮಂಗಳೂರು (9480843114), ಬಂಟ್ವಾಳ (9480843112), ಬೆಳ್ತಂಗಡಿ (9480843113), ಪುತ್ತೂರು (9480843115), ಸುಳ್ಯ (9480843116) ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪಡೆಯಬಹುದು.

ಕಾಡಾನೆ ದಾಳಿಗೆ ಐಪಿಎಸ್ ಅಧಿಕಾರಿಯ ಪತ್ನಿ ಬಲಿ ಪ್ರಕರಣ | ಅರಣ್ಯ ಇಲಾಖೆಯ ಮೇಲೆ ಆಕ್ರೋಶ

ವಿವಿಧ ಸಂಘಟನೆಗಳಿಂದ ರಸ್ತೆ ತಡೆ, ಪ್ರತಿಭಟನೆ

ಮಡಿಕೇರಿ: ಐಪಿಎಸ್ ಅಧಿಕಾರಿ ಅಣ್ಣಳಮಾಡ ಸುನಿಲ್ ಅಚ್ಚಯ್ಯ ಅವರ ಪತ್ನಿಯ ಸಾವಿಗೆ ಅರಣ್ಯ ಇಲಾಖೆಯೇ ನೇರ ಹೊಣೆ ಎಂದು ಆರೋಪಿಸಿ ಕೊಡಗು ರೈತ ಸಂಘ ಮತ್ತು ಹಸಿರು ಸೇನೆ, ಯುಕೋ ಸಂಘಟನೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ತಿತಿಮತಿಯಲ್ಲಿ ಮೈಸೂರು–ಗೋಣಿಕೊಪ್ಪ ಹೆದ್ದಾರಿ ತಡೆ ನಡೆಸಿ ಸಾರ್ವಜನಿಕರು ಆಕ್ರೋಶ ಹೊರ ಹಾಕಿದರು.

ಬೆಳಗ್ಗೆ 11.15ಕ್ಕೆ ಆರಂಭಗೊಂಡ ಹೆದ್ದಾರಿ ತಡೆ ಸುಮಾರು 4.30 ಗಂಟೆವರೆಗೂ ಮುಂದುವರಿಯಿತು. ಮೈಸೂರಿನಿಂದ ವೀರಾಜಪೇಟೆ, ಕೇರಳದ ಇರಿಟ್ಟಿ, ಕಣ್ಣೂರು ಮುಂತಾದೆಡೆ ಸಾಗುವ ನೂರಾರು ವಾಹನಗಳು ಸಾಲು ಸಾಲು ನಿಂತು ರಸ್ತೆ ದಾಟಲು ಪರದಾಡಿದವು.

ಬಳಿಕ ವೀರಾಜಪೇಟೆಯಿಂದ ಮೈಸೂರಿಗೆ ತೆರಳುವ ವಾಹನಗಳು ಸಿದ್ದಾಪುರ ಹಾಗೂ ಗೋಣಿಕೊಪ್ಪದಿಂದ ಸಾಗುವ ವಾಹನಗಳು ಪಾಲಿಬೆಟ್ಟ, ಮಾಲ್ದಾರೆ, ಪಿರಿಯಾಪಟ್ಟಣ ಮಾರ್ಗವಾಗಿ ತೆರಳಿದವು. ಮತ್ತೆ ಕೆಲವು ಪ್ರಯಾಣಿಕರು ವಾಹನದಲ್ಲೇ ಕಾಲ ಕಳೆದರು.

ಯುಕೋ ಸಂಘಟನೆ ಮುಖ್ಯಸ್ಥ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ ಮಾತನಾಡಿ, ಆನೆಗಳ ಸಂಖ್ಯೆ ನಿಯಂತ್ರಣದಿಂದ ಮಾತ್ರ ಸಮಸ್ಯೆ ಬಗೆಹರಿಯಲು ಸಾಧ್ಯ. ಸರ್ಕಾರ ಸೆಕ್ಷನ್ 370, ಐಪಿಎಸ್ ಸೆಕ್ಷನ್ ಕೂಡಾ ಬದಲಿಸಿ ಸಾರ್ವಜನಿಕರಿಗೆ ನ್ಯಾಯ



ಒದಗಿಸುವ ಕಾರ್ಯ ಮಾಡಿದೆ. ಅದೇ ರೀತಿ ಸಂಖ್ಯೆ ನಿಯಂತ್ರಣಕ್ಕೆ ನಿಯಮ ರೂಪಿಸಬೇಕು. ಸಂವಿಧಾನದಲ್ಲಿ ಅವಕಾಶ ಕಲ್ಪಿಸಿ ನ್ಯಾಯ ಒದಗಿಸಬೇಕಿದೆ. ಈ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಣೆ ಹೊತ್ತು ನ್ಯಾಯ ಒದಗಿಸಲಿ ಎಂದು ಆಗ್ರಹಿಸಿದರು.

ಕಾರ್ಮಿಕ ಸಂಘಟನೆ ಮುಖ್ಯಸ್ಥ ಪಿ. ಆರ್. ಭರತ್ ಮಾತನಾಡಿ, ಜಿಲ್ಲಾ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಮಾನವ ಹಾನಿಗೆ ಅರಣ್ಯ ಇಲಾಖೆಯ ಅವೈಜ್ಞಾನಿಕ ನೀತಿ ಕಾರಣ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಹೊಣೆ ಹೊರಬೇಕಿದೆ. ಅರಣ್ಯ ಅಧಿಕಾರಿಗಳು ಹಣ ಲೂಟಿ ಮಾಡಲು ಅವೈಜ್ಞಾನಿಕ ಯೋಜನೆ ರೂಪಿಸಿ ಸಮಸ್ಯೆ ಜೀವಂತವಾಗಿರುವಂತೆ ನೋಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಪರಿಹಾರ ಮೊತ್ತ ಜೀವ ಕಳೆದುಕೊಂಡ ಕುಟುಂಬಕ್ಕೆ ಅನಿವಾರ್ಯವಲ್ಲ. ಆನೆಗಳು ನಾಡಿಗೆ ಬಾರದ ರೀತಿ ಅರಣ್ಯದಲ್ಲಿಯೇ ಕೂಡಿ ಹಾಕುವ ಯೋಜನೆ ಮುಖ್ಯ ಎಂದರು.

ಕೊಡಗು ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿ, ಜೀವ ಹಾನಿ ಬಗ್ಗೆ ಸರ್ಕಾರಗಳು ಸೂಕ್ತ ನಿರ್ಧಾರ ತೆಗೆದುಕೊಂಡು ಜನರ ಜೀವ ಉಳಿಸಲು ಪ್ರಯತ್ನ ನಡೆಸಬೇಕು. ಇದೇ ರೀತಿ ಮುಂದುವರಿದರೆ ರಾಜ್ಯ ವ್ಯಾಪಿ ಪ್ರತಿಭಟನೆ ಹಮ್ಮಿಕೊಳ್ಳುವ ಕಠಿಣ ನಿರ್ಧಾರಕ್ಕೆ ಬರಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತ ಮುಖಂಡ ಚೆಟ್ರುಮಾಡ ಸುಜಯ್ ಬೋಪಯ್ಯ, ಚೆಪ್ಪುಡಿರ ಕಾರ್ಯಪ್ಪ, ಪುಚ್ಚಿಮಾಡ ಸುಭಾಷ್ ಸುಬ್ಬಯ್ಯ, ಗೋಣಿಕೊಪ್ಪ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಸುನಿಲ್ ಮಾದಪ್ಪ, ಕೊಡಗು ಮಾಡೆಲ್ ಫಾರೆಸ್ಟ್ ಟ್ರಸ್ಟ್ ಅಧ್ಯಕ್ಷ ಡಾ. ಚೆಪ್ಪುಡಿರ ಕುಶಾಲಪ್ಪ, ಮುಖಂಡ ಸಿ. ಕೆ. ಬೋಪಣ್ಣ, ಪಿರಿಯಾಪಟ್ಟಣ ಮತ್ತು ಹೊರ ಜಿಲ್ಲೆಗಳ ರೈತ ಮುಖಂಡರುಗಳೂ ಈ ಸಂದರ್ಭ ಮಾತನಾಡಿ, ಅರಣ್ಯ ಇಲಾಖೆ ಹಾಗೂ ಸರಕಾರದ ವಿರುದ್ಧ ಆಕ್ರೋಶ ಹೊರಹಾಕಿದರಲ್ಲದೆ, ಕೊಡಗು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸ್ಥಳಕ್ಕೆ ಆಗಮಿಸಬೇಕೆಂದು ಪಟ್ಟು ಹಿಡಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಂಸದ ಯದುವೀರ್ ಹಾಗೂ ವೀರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ ಅವರುಗಳು, ಕಾಡಾನೆ ಸಂಖ್ಯೆ ನಿಯಂತ್ರಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾನೂನು ರೂಪಿಸಲು ನ್ಯಾಯಯುತವಾಗಿ ಕೈಜೋಡಿಸುವುದಾಗಿ ಘೋಷಿಸಿದರು.

ಶಾಸಕ ಎ. ಎಸ್. ಪೊನ್ನಣ್ಣ ಮಾತನಾಡಿ, ಕಾಡಾನೆ ಹಾವಳಿ ತಡೆಗೆ ಸರ್ಕಾರ ಕೂಡಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳ್ಳದ ಕಾರಣ ಸಾವು ನಡೆದಿದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಅರಣ್ಯ ಮಂತ್ರಿಗಳ ನಿಯೋಜನೆ ನಂತರ ನೇರವಾಗಿ ಕೊಡಗು ಜಿಲ್ಲೆಯಲ್ಲಿ ವಿಶೇಷ ಸಭೆ ನಡೆಸಿ, ಕಾರ್ಯಗತಗೊಳಿಸಲು ಮುಂದಾಗುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

ವೀರಾಜಪೇಟೆ ಡಿಸಿಎಫ್ ಜಗನ್ನಾಥ್, ನಾಗರಹೊಳೆ ಪ್ರಭಾರ ಡಿಸಿಎಫ್ ಕಿರುಂಬನಮ್ ಹೋರಾಟಗಾರರ ಮನವಿ ಆಲಿಸಿ, ಸರ್ಕಾರದಿಂದ ನಡೆಯುತ್ತಿರುವ ಯೋಜನೆ ಬಗ್ಗೆ ತಿಳಿಸಿದರು. ಸುಮಾರು ಐದು ಗಂಟೆಗಳ ಕಾಲ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು.

> **ಕಠಿಣ ಕ್ರಮಕ್ಕೂ ಬೆಂಬಲ**
>
> ಕೊಡಗಿನ ಗಡಿಭಾಗದಲ್ಲಿ ಸಮಸ್ಯೆ ಕಠಿಣ ಸ್ಥಿತಿ ಇದೆ. ದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ವನ್ಯಜೀವಿ ಸಂಘರ್ಷ ತೊಂದರೆ ಹೆಚ್ಚು, ವನ್ಯಜೀವಿ ಬದುಕಿಗೆ ಪೂರಕವಾಗಿ ಭೂಪ್ರದೇಶದ ಮಿತಿ ಬಗ್ಗೆ ಗಂಭೀರ ಚಿಂತನೆ ನಡೆಯಬೇಕಿದೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ನೇರವಾಗಿ ಕೇಂದ್ರದ ಅನುಮತಿ ಇಲ್ಲದೆ ತೊಡಗಿಕೊಳ್ಳಬಹುದಾಗಿದೆ. ಸಂಖ್ಯೆ ನಿಯಂತ್ರಣಕ್ಕೆ ಪುನರ್ವಸತಿ ಅಥವಾ ಯಾವುದೇ ಕ್ರಮಕ್ಕೂ ಸೂಕ್ತ ಬೆಂಬಲ ನೀಡಲಾಗುವುದು. ಕಠಿಣ ಕ್ರಮಕ್ಕೂ ಬೆಂಬಲ ನೀಡಲಾಗುವುದು. ಹೋರಾಟಗಾರರ ಜತೆಯಲ್ಲಿ ನಾವು ಕೂಡಾ ಇರುತ್ತೇವೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಸಾವು, ಚುನಾವಣೆ ಸಂದರ್ಭ ಕೂಡಾ ಕಾಡಾನೆ ದಾಳಿ ಎದುರಿಸಿದ ನಿದರ್ಶನ ಇದೆ. ಇದರಿಂದಾಗಿ ಅರಣ್ಯ ಇಲಾಖೆ ಸೂಕ್ತ ಅಧ್ಯಯನ ನಡೆಸಿ ಕ್ರಮಕ್ಕೆ ಮುಂದಾಗಬೇಕಿದೆ. ಕ್ರಮ ಸಂತೋಷಕರವಲ್ಲದಿದ್ದರೂ ಅನುಷ್ಠಾನ ಮುಖ್ಯ
>
> ■ ಯದುವೀರ್ ಒಡೆಯರ್, ಸಂಸದ

ಪುತ್ತೂರು ತೆಂಕಿಲದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ

ಸತತ ಐದು ದಿನಗಳಿಂದ ನಡೆದ ಶಿಕಕರ ಶೈಕ್ಷಣಿಕ ಪುನಶ್ಚೇತನ ಕಾರ್ಯಾಗಾರ ಸಮಾರೋಪ



ಪುತ್ತೂರು: ನಗರದ ತೆಂಕಿಲದಲ್ಲಿರುವ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಳೆದ ಸತತ ಐದು ದಿನಗಳಿಂದ ನಡೆದ ಶೈಕ್ಷಣಿಕ ಪುನಶ್ಚೇತನ ಕಾರ್ಯಾಗಾರ ಸಂಪನ್ನಗೊಂಡಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿವೇಕಾನಂದ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಸತೀಶ್ ರಾವ್ ಕಬಕ, ಇಂದಿನ ಕಾಲಘಟ್ಟದ ವಿದ್ಯಾರ್ಥಿಗಳ ಬೆಳವಣಿಗೆಗೆ ಶಿಕ್ಷಕರಿಗೆ ಕಾರ್ಯಾಗಾರವು ಅತ್ಯಂತ ಅಗತ್ಯವಾಗಿದ್ದು ಮಗುವಿನ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರ ಕಾರ್ಯಾಗಾರವು ಅತ್ಯಂತ ಅವಶ್ಯಕವಾಗಿದೆ. ವೃತ್ತಿ ಕೌಶಲ್ಯವನ್ನು ಉದ್ದೀಪನಗೊಳಿಸಲು ತರಬೇತಿಗಳು ಅತ್ಯಂತ ಸಹಕಾರಿಯಾಗಿವೆ. ತರಬೇತಿ ಪಡೆದ ಶಿಕ್ಷಕರು ಮುಂದೆ ತರಬೇತು ದಾರರಾಗಿ ಹೊರಹೊಮ್ಮಬೇಕು ಎಂಬುದೇ ತನ್ನ ಆಶಯ ಎಂದು ಹೇಳಿದರು.

ಸಮಾರೋಪ ಭಾಷಣಗೈದ ಡಾ. ಅಮೃತ ಪ್ರಸಾದ್, ಆಧುನಿಕ ತಂತ್ರಜ್ಞಾನ ಎಷ್ಟೇ ಮುಂದು ವರಿದರೂ ಶಿಕ್ಷಕರು ತಮ್ಮ ತಮ್ಮ ವಿಷಯಗಳಲ್ಲಿ ಹಿಡಿತವನ್ನು ಸಾಧಿಸಿಕೊಂಡಿದ್ದಾಗ ಮಾತ್ರ ಮಕ್ಕಳ ಮನಸ್ಸಿನಲ್ಲಿ ತನ್ನ ಛಾಪನ್ನು ಮೂಡಿಸಲು ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶಿವಪ್ರಕಾಶ್ ಎಂ., ಸದಸ್ಯ ಚಂದ್ರಶೇಖರ್ ಮತ್ತು ಕಾರ್ಯಾಗಾರದ ಪ್ರಮುಖ ಸಂಯೋಜಕರಾದ ಪರಿಮಳಮೂರ್ತಿ, ಅತೀರ, ಶಾಲಾ ಮುಖ್ಯೋಪಾಧ್ಯಾಯ ಸತೀಶ್ ಕುಮಾರ್ ರೈ ಉಪಸ್ಥಿತರಿದ್ದರು.

ಕವಿತಾ ಕೆ. ಪ್ರಾರ್ಥಿಸಿದರು. ಆಶಾ ಕೆ. ಶೆಟ್ಟಿ ವರದಿ ಸಲ್ಲಿಸಿದರು. ಸವಿತಾ ಕೆ. ಸ್ವಾಗತಿಸಿ, ರಮ್ಯಶ್ರೀ ಜಿ. ವಂದಿಸಿದರು. ದೀಪ್ತಿ ಆರ್. ಭಟ್ ಹಾಗೂ ಆಶಾಲತಾ ಪಿ.ಎಚ್. ಕಾರ್ಯಕ್ರಮ ನಿರ್ವಹಿಸಿದರು.

ಬಂಟಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಂದ ಇ-ವೋಟಿಂಗ್- ಸುರಕ್ಷಿತ ಬಯೋಮೆಟ್ರಿಕ್ ಮತದಾನ ವ್ಯವಸ್ಥೆಯ ಅಭಿವೃದ್ಧಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಗಣಕಯಂತ್ರ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸಾತ್ವಿಕ್ ಎಸ್ ಭಟ್, ಲೋಲಾಕ್ಷಿ, ಮಾನಸಿ ಹಾಗೂ ಪ್ರತಿಕ್ಷಾ ಪಾಟೀಲ್ ಅವರು ವಿಭಾಗದ ಪ್ರಾಧ್ಯಾಪಕಿ ಪ್ರೀತಿ ಎಂ. ಅವರ ಮಾರ್ಗದರ್ಶನದಲ್ಲಿ "ಇ ವೋಟಿಂಗ್ ಸಿಸ್ಟಮ್" ಎಂಬ ಸುರಕ್ಷಿತ ಬಯೋಮೆಟ್ರಿಕ್ ಮತದಾನ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

ಈ ವ್ಯವಸ್ಥೆಯು ಮತದಾರರ ಗುರುತಿನ ದೃಢೀಕರಣಕ್ಕಾಗಿ ಮುಖ ಮತ್ತು ಕಣ್ಣು ಗುರುತಿಸುವಿಕೆ ಮುಂತಾದ ಬಯೋಮೆಟ್ರಿಕ್ ತಂತ್ರಜ್ಞಾನಗಳನ್ನು ಬಳಸಲಾಗುತ್ತದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯು ಕೇವಲ ಒಮ್ಮೆ ಮಾತ್ರ ಮತ ಚಲಾಯಿಸಲು ಸಾಧ್ಯವಾಗುತ್ತದೆ ಹಾಗೂ ನಕಲಿ ಮತದಾನ ಮತ್ತು ವಂಚನೆಯ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ.

ಇಂಟರ್ನೆಟ್ ಸಂಪರ್ಕವಿಲ್ಲದಿದ್ದರೂ ಕಾರ್ಯನಿರ್ವಹಿಸುವಂತೆ ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದ್ದು ದೂರದ ಪ್ರದೇಶಗಳಲ್ಲಿಯೂ ಬಳಸಲು ಅನುಕೂಲಕರವಾಗಿದೆ. ಸುರಕ್ಷಿತ ಮತ ಸಂಗ್ರಹಣೆ, ನೈಜ ಸಮಯದ ಫಲಿತಾಂಶಗಳ ದೃಶ್ಯೀಕರಣ ಹಾಗೂ ಪಾರದರ್ಶಕತೆಯನ್ನು ಕಾಪಾಡುವ ಸೌಲಭ್ಯಗಳನ್ನು ಇದು ಒಳಗೊಂಡಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ, ಸಿ.ಇ.ಒ ಮತ್ತು ಪ್ರಾಂಶುಪಾಲರು ಹರ್ಷ ವ್ಯಕ್ತಪಡಿಸಿದ್ದಾರೆ.

ಪಾಂಡೇಶ್ವರ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ

ಗಿಡ ಬೆಳೆಸಿದ ಮಕ್ಕಳಿಗೆ ಬಹುಮಾನ!



ಕೋಟ: ಇಲ್ಲಿನ 'ಅರಿವು ಕೇಂದ್ರ', ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ ಪಾಂಡೇಶ್ವರ ಇವರ ಆಶ್ರಯದಲ್ಲಿ ಜೂ. 5ರಂದು ವಿಶ್ವ ಪರಿಸರ ದಿನಾಚರಣೆಯನ್ನು ಪಾಂಡೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಚರಿಸಲಾಯಿತು.

ಕಳೆದ ವರ್ಷದ ಪರಿಸರ ದಿನಾಚರಣೆಯ ಸಂದರ್ಭದಲ್ಲಿ ನೀಡಲಾಗಿದ್ದ ಗಿಡಗಳನ್ನು ಅತ್ಯಂತ ಶ್ರದ್ಧೆಯಿಂದ ಪಾಲನೆ–ಪೋಷಣೆ ಮಾಡಿ ಬೆಳೆಸಿದ ತರಗತಿಯ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಪ್ರಥಮ ಹಾಗೂ ದ್ವಿತೀಯ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಕೇವಲ ಗಿಡ ನೆಡುವುದಷ್ಟೇ ಅಲ್ಲದೆ, ಅವುಗಳನ್ನು ಜವಾಬ್ದಾರಿಯಿಂದ ಬೆಳೆಸುವುದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಬಹುಮಾನ ವಿತರಿಸಿದ್ದು ವಿಶೇಷವಾಗಿತ್ತು.

ವಿದ್ಯಾರ್ಥಿಗಳಿಗೆ ಹೊಸ ಸವಾಲು!

ಮಕ್ಕಳಲ್ಲಿ ಗಿಡ ನೆಟ್ಟು ಬೆಳೆಸುವ ಮನೋಭಾವವನ್ನು ನಿರಂತರವಾಗಿ ಇಟ್ಟುಕೊಳ್ಳುವ ನಿಟ್ಟಿನಲ್ಲಿ ಪಾಂಡೇಶ್ವರ ಗ್ರಂಥಪಾಲಕಿ ಜ್ಯೋತಿ ಈ ಬಾರಿಯೂ ಒಂದು ವಿಶಿಷ್ಟ ಸ್ಪರ್ಧೆಯನ್ನು ಆಯೋಜಿಸಿ ಗಮನ ಸೆಳೆದರು. ಸ್ಪರ್ಧೆಯ ವಿಶೇಷತೆ ಏನೆಂದರೆ ಇಂದು ನೀಡುವ ಗಿಡವನ್ನು ಸಂಜೆ ಮನೆಗೆ ತೆರಳಿದ ವಿದ್ಯಾರ್ಥಿಗಳು ತಮ್ಮ ತಾಯಿಯ ಜೊತೆಗೂಡಿ ನೆಟ್ಟು, ಆ ಫೋಟೋವನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಮೊದಲು ಕಳುಹಿಸುವ ಮೊದಲ ಮೂರು ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ನೀಡಲಾಗುವುದಲ್ಲದೆ ಈ ಗಿಡವನ್ನು ಒಂದು ವರ್ಷಗಳ ಕಾಲ ಚೆನ್ನಾಗಿ ಪಾಲನೆ ಮಾಡಿ, ಅದರ ಪ್ರಗತಿಯ ಫೋಟೋವನ್ನು ಮುಖ್ಯ ಶಿಕ್ಷಕರ ವಾಟ್ಸಾಪ್ ನಂಬರ್‌ಗೆ ಕಳುಹಿಸಬೇಕು ಎಂಬ ನಿರ್ದೇಶನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಪಾಂಡೇಶ್ವರ ಅನುದಾನಿತ ಶಾಲೆಯ ಮುಖ್ಯೋಪಾಧ್ಯಾಯರಾದ ಕೃಷ್ಣ ಪೂಜಾರಿ, ಗ್ರಂಥ ಪಾಲಕಿ ಜ್ಯೋತಿ, ಶಾಲಾ ಶಿಕ್ಷಕ ವೃಂದ, ಸಂಜೀವಿನಿ ಒಕ್ಕೂಟದ ಉಷಾ ಗಣೇಶ್ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭೇಟಿಯಾಗಿ ಪ್ರಸ್ತಾವನೆ ಸಲ್ಲಿಸಿದ ಸಂಸದ ಯದುವೀರ್ ಒಡೆಯರ್

ಮೈಸೂರು-ಕೊಡಗಿನ ಪ್ರಮುಖ ಪ್ರವಾಸೋದ್ಯಮ, ಪರಂಪರೆ ಅಭಿವೃದ್ಧಿಗೆ ಸಂಬಂಧಿಸಿ ಪ್ರಸ್ತಾವನೆಗಳ ಸಲ್ಲಿಕೆ

ಮಡಿಕೇರಿ: ಮೈಸೂರು ಹಾಗೂ ಕೊಡಗಿನ ಪ್ರಮುಖ ಪ್ರವಾಸೋದ್ಯಮ ಮತ್ತು ಪರಂಪರೆ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಕೊಡಗು–ಮೈಸೂರು ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರ ಮೈಸೂರು ಭೇಟಿಯ ಸಂದರ್ಭದಲ್ಲಿ ಎರಡು ಪ್ರಮುಖ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಾರೆ.

ಮೊದಲ ಪ್ರಸ್ತಾವನೆಯಲ್ಲಿ, ಮೈಸೂರಿನ ಅರ್ಜುನ ವೃತ್ತ (ಎಲ್ಐಸಿ ಜಂಕ್ಷನ್) ಅಭಿವೃದ್ಧಿ ಯೋಜನೆಗೆ ತಾಂತ್ರಿಕ ಅನುಮೋದನೆ ದೊರಕುವ ಉದ್ದೇಶದಿಂದ ಯೋಜನಾ ನಿರ್ವಹಣಾ ಸಲಹೆಗಾರರನ್ನು ನೇಮಕ ಮಾಡುವಂತೆ ಅವರು ಸಚಿವರನ್ನು ಕೋರಿದ್ದಾರೆ.

ಈ ಯೋಜನೆಗೆ ಈಗಾಗಲೇ ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಿಂದ 20 ಕೋಟಿ ರೂ. ಅನುದಾನ ಮಂಜೂರಾಗಿದ್ದು, ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿಯನ್ನು ಹೊರುತ್ತಿದ್ದ ದಂತಕಥೆಯ ಆನೆ ಅರ್ಜುನನ ಸ್ಮರಣಾರ್ಥ ಭವ್ಯ ಸ್ಮಾರಕ ನಿರ್ಮಿಸುವ ಉದ್ದೇಶ ಹೊಂದಿದೆ.



2012ರಿಂದ 2019ರವರೆಗೆ ದಸರಾ ಜಂಬೂಸವಾರಿಯಲ್ಲಿ ಮುಂಚೂಣಿ ಆನೆಯಾಗಿ ಭಾಗವಹಿಸಿ ಚಿನ್ನದ ಅಂಬಾರಿಯನ್ನು ಹೊತ್ತಿದ್ದ ಅರ್ಜುನ ಆನೆ, ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಜನರ ಭಾವನಾತ್ಮಕ ನೆನಪಿನಲ್ಲಿ ಅಚ್ಚಳಿಯದ ಸ್ಥಾನ ಪಡೆದಿದೆ ಎಂದು ಯದುವೀರ್ ಒಡೆಯರ್ ತಿಳಿಸಿದರು.

ಅರ್ಜುನನಿಗೆ ಸಮರ್ಪಿತವಾದ ಸ್ಮಾರಕ ನಿರ್ಮಾಣವು ಅತ್ಯಂತ ಸೂಕ್ತವಾಗಿದ್ದು, ಈ ವೃತ್ತವು ಮೈಸೂರಿನ ಪ್ರಮುಖ ಪ್ರವೇಶ ದ್ವಾರಗಳಲ್ಲಿ ಒಂದಾಗಿರುವುದರ ಜೊತೆಗೆ ಐತಿಹಾಸಿಕ ದಸರಾ ಮೆರವಣಿಗೆಯ ಅಂತಿಮ ತಾಣವಾಗಿರುವುದರಿಂದ ವಿಶೇಷ ಮಹತ್ವ ಪಡೆದುಕೊಂಡಿದೆ ಎಂದು ಅವರು ಹೇಳಿದರು.

ಯೋಜನೆಯಡಿ ವಿಶ್ವಮಟ್ಟದ ವಿನ್ಯಾಸ, ವಾಸ್ತುಶಿಲ್ಪ, ಸಂಚಾರ ನಿರ್ವಹಣೆ, ಭೂದೃಶ್ಯ ಅಭಿವೃದ್ಧಿ ಹಾಗೂ ಸಮಯೋಚಿತ ಅನುಷ್ಠಾನಕ್ಕೆ ಅಗತ್ಯವಿರುವ ಸಮಗ್ರ ವರದಿಯನ್ನು ಸಿದ್ಧಪಡಿಸಲಾಗಿದ್ದು, ಶೀಘ್ರ ಅನುಮೋದನೆಗಾಗಿ ಮನವಿ ಸಲ್ಲಿಸಲಾಗಿದೆ.

ಮಡಿಕೇರಿ ಕೋಟೆಯ ಸಮಗ್ರ ಅಭಿವೃದ್ಧಿ

ಇನ್ನೊಂದು ಪ್ರಸ್ತಾವನೆಯಲ್ಲಿ, ಕೊಡಗಿನ ಐತಿಹಾಸಿಕ ಮಡಿಕೇರಿ ಕೋಟೆಯ ಸಮಗ್ರ ನವೀಕರಣ, ಸಂರಕ್ಷಣೆ ಹಾಗೂ ತಾಂತ್ರಿಕ ಉನ್ನತೀಕರಣಕ್ಕೆ ಕೇಂದ್ರ ಸರ್ಕಾರದ ನೆರವು ಕೋರಿದ್ದಾರೆ.

ಕೊಡಗಿನ ಇತಿಹಾಸ, ಸಂಸ್ಕೃತಿ ಹಾಗೂ ವಾಸ್ತುಶಿಲ್ಪದ ವೈಭವದ ಪ್ರತೀಕವಾಗಿರುವ ಈ ಕೋಟೆ ಪ್ರತಿವರ್ಷ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುವ ಪ್ರಮುಖ ಪ್ರವಾಸಿ ತಾಣವಾಗಿದೆ.

ಈ ಎರಡೂ ಯೋಜನೆಗಳು ಅಮೂಲ್ಯ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದರ ಜೊತೆಗೆ ಪ್ರವಾಸೋದ್ಯಮವನ್ನು ಉತ್ತೇಜಿಸಿ, ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಮೈಸೂರು ಹಾಗೂ ಕೊಡಗಿನ ಸ್ಥಳೀಯ ಆರ್ಥಿಕತೆಗೆ ಮಹತ್ತರ ಕೊಡುಗೆ ನೀಡಲಿವೆ ಎಂದು ಯದುವೀರ್ ಒಡೆಯರ್ ಅಭಿಪ್ರಾಯಪಟ್ಟರು.

ಪ್ರವಾಸೋದ್ಯಮ ಮತ್ತು ಪರಂಪರೆ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಅಗತ್ಯ ಸಮೀಕ್ಷೆಗಳನ್ನು ಕೈಗೊಂಡು ಸೂಕ್ತ ಆರ್ಥಿಕ ನೆರವು ನೀಡುವಂತೆ ಅವರು ಸಚಿವಾಲಯವನ್ನು ಕೋರಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಾದ್ಯಂತ ಪರಂಪರೆ ಸಂರಕ್ಷಣೆ, ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಮೂಲಸೌಕರ್ಯ ವೃದ್ಧಿಗೆ ತಾವು ನಿರಂತರವಾಗಿ ಬದ್ಧರಾಗಿರುವುದಾಗಿ ಪುನರುಚ್ಚರಿಸಿದ ಅವರು, ಈ ಭಾಗದ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗಳಿಗೂ ಉಳಿಸಿ ಬೆಳೆಸುವ ಸಂಕಲ್ಪವನ್ನು ವ್ಯಕ್ತಪಡಿಸಿದರು.

ಪ್ರಸ್ತಾವಿತ ಯೋಜನೆಯ ಪ್ರಮುಖ ಅಂಶಗಳು

- ಐತಿಹಾಸಿಕ ಕಟ್ಟಡಗಳ ವೈಜ್ಞಾನಿಕ ರಕ್ಷಣೆ ಮತ್ತು ಪುನಶ್ಚೇತನ
- ಆಧುನಿಕ ಪರಂಪರೆ ವಸ್ತುಸಂಗ್ರಹಾಲಯದ ಸ್ಥಾಪನೆ
- ಡಿಜಿಟಲ್ ಮಾಹಿತಿ ವ್ಯವಸ್ಥೆಗಳು ಮತ್ತು ಬಹುಭಾಷಾ ಆಡಿಯೋ ಮಾರ್ಗದರ್ಶಿಗಳ ಅಳವಡಿಕೆ
- ಸೌಂಡ್ ಅಂಡ್ ಲೈಟ್ ಶೋ ಆರಂಭ
- ಪರಿಸರ ಸ್ನೇಹಿ ಪಾದಚಾರಿ ಮಾರ್ಗಗಳು ಮತ್ತು ಸುಂದರೀಕರಣ
- ವಾಹನ ನಿಲುಗಡೆ ಹಾಗೂ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿ
- ಪ್ರವಾಸೋದ್ಯಮ ಮತ್ತು ಸ್ಥಳೀಯ ಆರ್ಥಿಕತೆಗೆ ಉತ್ತೇಜನ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನಿಡ್ಲೆಳ್ಳಿ ಒಕ್ಕೂಟದ ಪದಗ್ರಹಣ

ಚಿಕ್ಕಂದಿನಿಂದಲೇ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಅಗತ್ಯ

• **ನಿಡ್ಲೆಳ್ಳಿ:** ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ನಿಡ್ಲೆಳ್ಳಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ನಿಡ್ಲೆಳ್ಳಿ ಒಕ್ಕೂಟ ಹಾಗೂ ಶ್ರೀ ಶಾಂತದುರ್ಗಾ ದೇವಸ್ಥಾನ ಶ್ರೀ ಕ್ಷೇತ್ರ ನಿಡ್ಲೆಳ್ಳಿ ಇವುಗಳ ಸಂಯುಕ್ತ ಆಶ್ರಯದಲ್ಲಿ ವೇದಮೂರ್ತಿ ದಿನೇಶ್ ಮರಡಿತ್ತಾಯ ಅವರ ನೇತೃತ್ವದಲ್ಲಿ 22ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ನಿಡ್ಲೆಳ್ಳಿ ಒಕ್ಕೂಟದ ಪದಗ್ರಹಣ ಕಾರ್ಯಕ್ರಮ ನಿಡ್ಲೆಳ್ಳಿ ದೇವಸ್ಥಾನದಲ್ಲಿ ನಡೆಯಿತು.

ಧಾರ್ಮಿಕ ಉಪನ್ಯಾಸ ನೀಡಿದ ದೈಹಿಕ ಶಿಕ್ಷಣ ಶಿಕ್ಷಕ ಕೃಷ್ಣ ಪ್ರಸಾದ್ ಬೆಟ್ಟಂಪಾಡಿ, ಯಾವುದೇ ಪರಿಸ್ಥಿತಿಯಲ್ಲಿಯೂ ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಬಿಟ್ಟು ಹೋಗಬಾರದು. ಚಿಕ್ಕ ವಯಸ್ಸಿನಲ್ಲಿಯೇ ನಮ್ಮ ಮಕ್ಕಳಿಗೆ ಧಾರ್ಮಿಕ ಮತ್ತು ಸಂಸ್ಕೃತಿಯ ಬಗ್ಗೆ ಮೊದಲು ಮನೆಯಲ್ಲಿ ಕಲಿಸಬೇಕು. ಅನ್ಯ ಧರ್ಮಿಯರಿಗೆ ಧಾರ್ಮಿಕ ಶಿಕ್ಷಣ ಸಿಗುತ್ತಿದೆ. ಆದರೆ, ನಮ್ಮ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಇಲ್ಲದಿರುವುದು ನಾವು ಹಿಂದೆ ಉಳಿಯಲು



ಕಾರಣವಾಗಿದೆ. ತಮ್ಮ ಮಕ್ಕಳನ್ನು ಧಾರ್ಮಿಕ ಶಿಕ್ಷಣಕ್ಕೆ ಕಳುಹಿಸಲು ಹೆತ್ತವರಿಗೆ ಸಮಯ ಸಿಗುತ್ತಿಲ್ಲ. ಮುಂದೆ ಹಾಗಾಗದೆ ತುಳು ನಾಡಿನ ದೈವಾರಾಧನೆಯನ್ನು ಕೂಡ ಉಳಿಸಿ ಮುಂದಿನ ಮಕ್ಕಳಿಗೂ ಅದರ ಬಗ್ಗೆ ತಿಳಿಸುವ ಕೆಲಸ ಹಿರಿಯರಿಂದ ಆಗಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಯೋಜನೆಯ ತಾಲೂಕು ಯೋಜನಾಧಿಕಾರಿ ಶಶಿಧರ್ ಎಂ. ಮಾತನಾಡಿ, ಸಾಮೂಹಿಕ ಸತ್ಯನಾರಾಯಣ ಪೂಜೆ ಖಾವಂದರ ಚಿಂತನೆಯ ಫಲ. ಹಿಂದುಗಳನ್ನು ಒಗ್ಗೂಡಿಸಿ ಅವರಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವ ಮಹಾತ್ವಾಕಾಂಕ್ಷೆಯಿಂದ ಯೋಜನೆಯಲ್ಲಿ ಅಳವಡಿಸಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅತೀ ಕಡಿಮೆ ಬಡ್ಡಿ ದರದಲ್ಲಿ ಜನ ಸಾಮಾನ್ಯರಿಗೆ ಸಾಲ ಒದಗಿಸುವ ಒಂದು ಏಕೈಕ ಸಂಸ್ಥೆ ಆಗಿದೆ.

ಪದಗ್ರಹಣ ಕಾರ್ಯಕ್ರಮ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಿಡ್ಲೆಳ್ಳಿ ಒಕ್ಕೂಟಕ್ಕೆ ನೂತನ ಸಮಿತಿ ರಚಿಸಲಾಗಿದ್ದು, ನೂತನ ಸಮಿತಿಗೆ ನಿಕಟಪೂರ್ವ ಸಮಿತಿ ಪದಾಧಿಕಾರಿಗಳು ವೀಳ್ಯ, ಅಡಿಕೆ ಮತ್ತು ದಾಖಲಾತಿ ಪುಸ್ತಕವನ್ನು ಅತಿಥಿಗಳ ಸಮ್ಮುಖದಲ್ಲಿ ಹಸ್ತಾಂತರಿಸುವ ಮೂಲಕ ಜವಾಬ್ದಾರಿಯನ್ನು ಹಸ್ತಾಂತರಿಸಿದರು. ನೂತನ ಒಕ್ಕೂಟದ ಅಧ್ಯಕ್ಷ ಕುಶಾಲಪ್ಪ ಕೋಡಿ, ಉಪಾಧ್ಯಕ್ಷೆ ಸುಗುಣ, ಜತೆ ಕಾರ್ಯದರ್ಶಿ ನವನೀತ, ಕೋಶಾಧಿಕಾರಿ ಗಂಗಾಧರ ಸಿ.ಎಚ್. ಜವಾಬ್ದಾರಿ ವಹಿಸಿಕೊಂಡರು.

ಇದನ್ನು ಅಧ್ಯಯನ ಮಾಡಿದ ವಿದೇಶಿ ಸಂಸ್ಥೆ ಹೇಳಿದೆ ಎಂದು ತಿಳಿಸಿದರು.

ಶ್ರೀ ಶಾಂತದುರ್ಗಾ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ ಗೌಡ ಪುಳಿತ್ತಡಿ ಮಾತನಾಡಿ, ಹಿಂದುಗಳ ಜನಸಂಖ್ಯೆ ಈಗ ಕಡಿಮೆಯಾಗುತ್ತಿರುವುದು ದುರಂತ. ಈ ರೀತಿ ಜನಸಂಖ್ಯೆ ಕಡಿಮೆಯಾದರೆ ಹಿಂದು ಧರ್ಮದ ಅವನತಿಗೆ ಕಾರಣವಾದೀತು. ಇದು ತಮಾಷೆ ಮಾತಲ್ಲ ಗಂಭೀರ ವಿಷಯ. ಮುಂದಿನ ಜನಾಂಗ ಜನಸಂಖ್ಯೆ ಹೆಚ್ಚಿಸುವುದರಲ್ಲಿ ಮನಸ್ಸು ಮಾಡಲು ಪ್ರಯತ್ನಿಸಿ ಎಂದರು.

ನಿಡ್ಲೆಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ವೆಂಕಟ್ರಮಣ ಬೋರ್ಕರ್ ಶುಭಾಶಂಸನೆಗೈದರು. ಪೂಜಾ ಸಮಿತಿ ಅಧ್ಯಕ್ಷೆ ಸುನಿತಾ, ಪೂಜಾ ಸಮಿತಿ ಅಧ್ಯಕ್ಷೆ ಸುನೀತಾ ರೈ, ಒಕ್ಕೂಟದ ನೂತನ ಅಧ್ಯಕ್ಷ ಕುಶಾಲಪ್ಪ ಕೋಡಿ, ನಿಕಟಪೂರ್ವ ಒಕ್ಕೂಟದ ಪದಾಧಿಕಾರಿಗಳಾದ ಆಚಾರ್ಯ, ಹೇಮಾ ಸಿ.ಎಚ್., ಸತೀಶ್ ಎಂ. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪೂಜಾ ಸಮಿತಿಯ ಗೌರವಾಧ್ಯಕ್ಷ ರಾಧಾಕೃಷ್ಣಪಾಟಾಳಿ ಅಧ್ಯಕ್ಷತೆ ವಹಿಸಿದ್ದರು.

ಸೇವಾ ಪ್ರತಿನಿಧಿ ಶಾಲಿನಿ ಕೆ. ಸ್ವಾಗತಿಸಿ, ಗಂಗಾಧರ ಸಿ.ಎಚ್. ವಂದಿಸಿದರು. ವಲಯ ಮೇಲ್ವಿಚಾರಕ ಆದರ್ಶ್ ಕಾರ್ಯಕ್ರಮ ನಿರ್ವಹಿಸಿದರು.

ಸುಳ್ಯ ಶಾಸಕಿಯಿಂದ ಮಿಲಿಟರಿ ಗ್ರೌಂಡ್-ಜಯನಗರ ಕಾಂಕ್ರಿಟ್ ರಸ್ತೆ ಉದ್ಘಾಟನೆ



• **ಸುಳ್ಯ:** ಸುಳ್ಯ ಕಸಬಾ ಗ್ರಾಮದ ಮಿಲಿಟರಿ ಗ್ರೌಂಡ್-ಜಯನಗರ ರಸ್ತೆ ಕಾಮಗಾರಿ ಶಾಸಕರ ವಿಶೇಷ ಅನುದಾನದಲ್ಲಿ ಸುಮಾರು ರೂ.20 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ ಕಾಂಕ್ರೀಟ್ ರಸ್ತೆಯನ್ನು ಶಾಸಕಿ ಭಾಗೀರಥಿ ಮುರುಳ್ಯ ಉದ್ಘಾಟಿಸಿ ಶುಭ ಹಾರೈಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ನಗರ ಪಂಚಾಯತ್ ಮಾಜಿ ಅಧ್ಯಕ್ಷ ವಿನಯ ಕುಮಾರ್ ಕಂದಡ್ಕ, ಮಾಜಿ ಉಪಾಧ್ಯಕ್ಷ ಬುದ್ಧ ನಾಯ್ಕ್, ಮಾಜಿ ಸದಸ್ಯೆ ಶಿಲ್ಪಾ ಸುದೇವ್, ಪ್ರಮುಖರಾದ ಶಿವನಾಥ ರಾವ್, ಕುಸುಮಾಧರ ಜಯನಗರ, ನಿಸರ್ಗ ಇಂಡಸ್ಟ್ರೀಸ್ ಮಾಲಕ ಕಸ್ತೂರಿಶಂಕರ್, ಸ್ಥಳೀಯ ಮುಖಂಡರಾದ ಮಾಧವ ಜಯನಗರ, ರಾಧಾಕೃಷ್ಣ ನಾಯಕ್ ಜಯನಗರ, ಪ್ಲಂಬರ್ ಇಬ್ರಾಹಿಂ, ನಾರಾಯಣ ಶಾಂತಿನಗರ, ಸಚಿನ್ ಕೊಯಿಂಗೋಡಿ, ದಯಾನಂದ, ನಾಗೇಶ್ ಜಯನಗರ, ಅಮಿತ್ ಜಯನಗರ, ಇಂಜಿನಿಯರ್ ರಕ್ಷಿತ್ ನಂದಗೋಕುಲ, ಹೊಸಗದ್ದೆ ಕಾಲನಿ ನಿವಾಸಿಗಳು, ಊರವರು ಉಪಸ್ಥಿತರಿದ್ದರು. ಶಕ್ತಿ ಕೇಂದ್ರ ಮುಖಂಡ ರಮೇಶ್ ಇರಂತಮಜಲು ಸ್ವಾಗತಿಸಿ, ವಂದಿಸಿದರು.

ಮನೆಗೊಂದು ಗ್ರಂಥಾಲಯ ಯೋಜನೆಯ ಅನುಷ್ಠಾನ

ಓದಿನಿಂದ ಜೀವನ ಸಾರ್ಥಕ: ಡಾ. ಮಾನಸ

• **ಮಡಿಕೇರಿ:** ಓದಿನಿಂದ ಜೀವನ ಸಾರ್ಥಕವಾಗುತ್ತದೆ. ಮನೆ ಕಟ್ಟುವ ಸಂದರ್ಭದಲ್ಲಿ ನಾವು ದೇವರ ಕೋಣೆ, ಮಲಗುವ ಕೋಣೆ, ಅಡುಗೆ ಕೋಣೆಗಳನ್ನು ನಿರ್ಮಿಸುವಂತೆ ಪುಸ್ತಕದ ಕೋಣೆ ಅಥವಾ ಗ್ರಂಥಾಲಯವನ್ನೂ ನಿರ್ಮಿಸಬೇಕು. ಅದು ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ತಿಳಿಯಪಡಿಸುವ ಸೇತುವೆಯಾಗಬಲ್ಲದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ನುಡಿದರು.

ಪ್ರಾಧಿಕಾರದ ಮನೆಗೊಂದು ಗ್ರಂಥಾಲಯ ಯೋಜನೆಯ ಅನ್ವಯ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ ರಮೇಶ್ ಅವರ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆಯನ್ನು ಅನುಷ್ಠಾನ ಮಾಡಿ ಟಿ.ಪಿ ರಮೇಶ್‌ರವರಿಗೆ ಅಭಿನಂದನಾ ಪತ್ರ ನೀಡಿ ಅವರು ಮಾತನಾಡಿದರು.

ಇಂದಿನ ವಿದ್ಯಾರ್ಥಿಗಳಿಗೆ ಮತ್ತು ಯುವಜನಾಂಗಕ್ಕೆ ಸಾಹಿತ್ಯದ ಪರಿಚಯ ಮಾಡಿಕೊಡುವ ಮೂಲಕ ಅವರನ್ನು ಸಾಹಿತ್ಯಾಸಕ್ತರನ್ನಾಗಿ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಅವರು ನುಡಿದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಟಿ.ಪಿ ರಮೇಶ್, ಸಾಹಿತ್ಯ ಮತ್ತು ಗ್ರಂಥಾಲಯ ನಿಂತ ನೀರಾಗಬಾರದು ಸದಾ ಚಲಾವಣೆಯಲ್ಲಿರಬೇಕು. ದಿನಕ್ಕೆ ಒಂದು ಗಂಟೆಯಾದರೂ ಪುಸ್ತಕವನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಪುಸ್ತಕ ಪ್ರಾಧಿಕಾರದ ಜಾಗೃತಿ ಸಮಿತಿಯ ಸಂಚಾಲಕ ಎಂ.ಪಿ. ಕೇಶವ ಕಾಮತ್ ಮಾತನಾಡಿ, ಮನೆಗೊಂದು ಗ್ರಂಥಾಲಯ ಯೋಜನೆ ಅತ್ಯದ್ಭುತವಾದುದು. ಕನ್ನಡ ಪುಸ್ತಕ ಪ್ರಾಧಿಕಾರ ಯಾರಿಗೂ ಗ್ರಂಥಾಲಯ ಸ್ಥಾಪಿಸಲು ಪುಸ್ತಕವನ್ನು ಪುಕ್ಕಟೆಯಾಗಿ ನೀಡುವುದಿಲ್ಲ. ಆದರೆ ಪುಸ್ತಕ ಖರೀದಿಸಿ ಮನೆಯಲ್ಲಿ ಒಂದು ಗ್ರಂಥಾಲಯ ನಿರ್ಮಿಸಿ ಮುಂದಿನ ಪೀಳಿಗೆಗೆ ನಾಡು-ನುಡಿಯ ಸಾಹಿತ್ಯ ಸಂಸ್ಕೃತಿಯ ಆಚಾರ ವಿಚಾರಗಳ ಪರಿಚಯ ಮಾಡಿಕೊಡುವ ಮತ್ತು ಪುಸ್ತಕ ಪ್ರಪಂಚವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿದೆ. ನಾವೇ ಪುಸ್ತಕ ಖರೀದಿಸಿ ನಮ್ಮ ಮನೆಯಲ್ಲಿಯೇ ಗ್ರಂಥಾಲಯ ಸ್ಥಾಪಿಸಿಕೊಳ್ಳಬೇಕು ಪ್ರತಿಯೊಂದು ಮನೆಯಲ್ಲಿಯೂ ಒಂದು ಗ್ರಂಥಾಲಯವಿದ್ದರೆ ಓದುಗರ ಸಂಖ್ಯೆ ಬೆಳೆಯುತ್ತದೆ. ಇದರಿಂದ ಪುಸ್ತಕ ಪ್ರಪಂಚ ಬದುಕಿಕೊಳ್ಳುತ್ತದೆ ಎಂದರು.

- ದೇವರ ಕೋಣೆ, ಮಲಗುವ ಕೋಣೆ, ಅಡುಗೆ ಕೋಣೆಗಳನ್ನು ನಿರ್ಮಿಸುವಂತೆ ಪುಸ್ತಕದ ಕೋಣೆ ಅಥವಾ ಗ್ರಂಥಾಲಯವನ್ನೂ ನಿರ್ಮಿಸಬೇಕು.
- ಮನೆಗೊಂದು ಗ್ರಂಥಾಲಯ ಯೋಜನೆಯನ್ನು ಅನುಷ್ಠಾನ ಮಾಡಿ
- ಸಾಹಿತ್ಯ ಮತ್ತು ಗ್ರಂಥಾಲಯ ನಿಂತ ನೀರಾಗಬಾರದು ಸದಾ ಚಲಾವಣೆಯಲ್ಲಿರಬೇಕು
- ಕನ್ನಡ ಪುಸ್ತಕ ಪ್ರಾಧಿಕಾರ ಯಾರಿಗೂ ಗ್ರಂಥಾಲಯ ಸ್ಥಾಪಿಸಲು ಪುಸ್ತಕವನ್ನು ಪುಕ್ಕಟೆಯಾಗಿ ನೀಡುವುದಿಲ್ಲ.

ಜಾಗೃತಿ ಸಮಿತಿ ಕಾರ್ಯದರ್ಶಿ ರಂಜಿತ್ ಕವಲಪಾರ ಸ್ವಾಗತಿಸಿ, ನಿರೂಪಿಸಿದರು. ಚಂದನ್ ಕಾಮತ್, ವಾಸು ರೈ, ನಿರ್ಮಲಾ ರಮೇಶ್, ಎಚ್.ಎಲ್. ದಿವಾಕರ್, ರಾಜಾರಾವ್, ದೀಪಕ್ ಪೊನ್ನಪ್ಪ ಉಪಸ್ಥಿತರಿದ್ದರು.

ಬೆಳ್ತಂಗಡಿ ವಕೀಲರ ಸಂಘದಿಂದ ಹೈಕೋರ್ಟ್ ರಿಜಿಸ್ಟ್ರಾರ್ ಭೇಟಿ

• **ಬೆಳ್ತಂಗಡಿ:** ಬಹು ನಿರೀಕ್ಷಿತ ಬೆಳ್ತಂಗಡಿ ನೂತನ ನ್ಯಾಯಾಲಯ ಸಂಕೀರ್ಣದ ಕಾಮಗಾರಿಯ ಶಂಕುಸ್ಥಾಪನೆ ಕಾರ್ಯಕ್ರಮ ಜೂ. 14 ರಂದು ನಿಗದಿಯಾಗಿದ್ದು ಆ ನಿಟ್ಟಿನಲ್ಲಿ ವಕೀಲರ ಸಂಘದ ನಿಯೋಗ ಇಂದು ಸಂಘದ ಅಧ್ಯಕ್ಷರಾದ ಅಲೋಶಿಯಸ್ ಎಸ್. ಲೋಬೋರವರ ನೇತೃತ್ವದಲ್ಲಿ ಹೈಕೋರ್ಟ್ ಮೂಲ ಸೌಕರ್ಯ ವಿಭಾಗದ ರಿಜಿಸ್ಟ್ರಾರ್ ಹೆಚ್. ಆರ್. ರಾಧಾರವರನ್ನು ಬೇಟಿ ಮಾಡಿ ನೂತನ ನ್ಯಾಯಾಲಯ ಸಂಕೀರ್ಣ ಶಂಕು ಸ್ಥಾಪನೆ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಿದರು.

ನಿಯೋಗದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ, ಸಂಘದ ಉಪಾಧ್ಯಕ್ಷ, ಕಟ್ಟಡ ಸಮಿತಿ ಅಧ್ಯಕ್ಷ ಶ್ರೀನಿವಾಸ ಗೌಡ, ಕಟ್ಟಡ ಸಮಿತಿ ಸದಸ್ಯ, ಅಪರ ಸರ್ಕಾರಿ ವಕೀಲ ಮನೋಹರ ಕುಮಾರ್, ಎ ಮತ್ತು ಕಟ್ಟಡ ಸಮಿತಿ ಸದಸ್ಯ, ಮಾಜಿ ಪ್ರಧಾನ ಕಾರ್ಯದರ್ಶಿ ನವೀನ್ ಬಿ ಕೆ ಉಪಸ್ಥಿತರಿದ್ದರು.



ಶಾಲಾ ಪ್ರಾರಂಭೋತ್ಸವ

• **ಮಂಗಳೂರು:** ಕೊರಗ ಅಭಿವೃದ್ಧಿ ಸಂಘ ನಗರ ವಲಯ ಹಾಗೂ ಅಂಬೇಡ್ಕರ್ ಯುವ ಮಂಡಲ ಕೋಡಿಕಲ್ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಅಂಬೇಡ್ಕರ್ ಯುವ ಮಂಡಲದಲ್ಲಿ ನಡೆಯಿತು.

ಅತಿಥಿಗಳಾಗಿದ್ದ ಸಮುದಾಯದ ಶಿಕ್ಷಕರಾದ ಮಣಿಮಾಲಾ ಕೋಡಿಕಲ್, ಆಶಾ ಕೋಡಿಕಲ್, ಸುಮಧುರ ಕೋಡಿಕಲ್, ಸಿಂಧು ಕೋಡಿಕಲ್ ಹಾಗೂ ಗೀತಾ ಕಂಕನಾಡಿ ಅವರು ಬ್ಯಾನರ್ ಬಿಡುಗಡೆಗೊಳಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಉದ್ಘಾಟನಾ ಮಾತನ್ನಾಡಿದ ಅಶೋಕ ನಗರ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿ ಮಣಿಮಲಾ, ಮಕ್ಕಳು ವಿದ್ಯಾಭ್ಯಾಸದಿಂದ ಭವಿಷ್ಯ ರೂಪಿಸಲು ಸಾಧ್ಯ ಎಂದರು.

ಕಸಬ ಬೆಂಗ್ರೆ ಎಆರ್‌ಕೆ ಆಂಗ್ಲ ಮಾಧ್ಯಮ ಶಾಲೆ ಶಿಕ್ಷಕಿ ಸುಮಧುರ ಕೋಡಿಕಲ್, ಅಶೋಕ ನಗರ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಗೀತಾ ಕಂಕನಾಡಿ ಶುಭ ಹಾರೈಸಿದರು. ನಂತರ ಮಕ್ಕಳಿಂದ ಅಂಬೇಡ್ಕರ್



ಯುವ ಮಂಡಲದಿಂದ ಕೊರಗ ಸಮುದಾಯದವರೆಗೆ ಜಾಥಾ ನೆರವೇರಿತು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಕಾವೂರು ಅಂಗನವಾಡಿ ಶಿಕ್ಷಕಿ ಇಂದಿರಾ ಕೆ. ಅವರು ಕಿಶೋರಿ ಯೋಜನೆ ಕುರಿತು ಮಾಹಿತಿ ನೀಡಿದರು. ಉಳ್ಳಾಲ ಸಂತ ಸಬಾಸ್ಟಿಯನ್ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿ ಸಿಂಧು ಕೋಡಿಕಲ್ ಮಾತನಾಡಿದರು. ನಾಗೇಶ್ ಕೋಡಿಕಲ್ ಮುಖ್ಯ ಅತಿಥಿಯಾಗಿದ್ದರು. ಆಶಾ ಕೋಡಿಕಲ್ ಕಾರ್ಯಕ್ರಮ ನಿರೂಪಿಸಿ ,ಮನೋಜ್ ಕೋಡಿಕಲ್ ವಂದಿಸಿದರು.

ಪ್ರಥಮ ಚಿಕಿತ್ಸೆ ತರಬೇತಿ ಕಾರ್ಯಕ್ರಮ

• **ಕುಂದಾಪುರ :** ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್ ಕ್ರಾಸ್ ಘಟಕ ಮತ್ತು ಎನ್.ಎಸ್.ಎಸ್. ಘಟಕ ಇದರ ಸಂಯುಕ್ತ ಆಶ್ರಯದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರ ಇವರ ಸಹಯೋಗದೊಂದಿಗೆ ಪ್ರಥಮ ಚಿಕಿತ್ಸೆ ತರಬೇತಿ ಕಾರ್ಯಕ್ರಮ ಕಾಲೇಜಿನ ಎ.ವಿ. ಹಾಲಿನಲ್ಲಿ ಶುಕ್ರವಾರ ಜರುಗಿತು.

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಕುಂದಾಪುರ ಘಟಕದ ಸಭಾಪತಿ ಜಯಕರ ಶೆಟ್ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಇಂದಿನ ಯುವಪೀಳಿಗೆ ಸಮಾಜದಲ್ಲಿನ ಆಗು- ಹೋಗುಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ವೈದ್ಯಾಧಿಕಾರಿ ಡಾ. ಸೋನಿ ಡಿಕೋಸ್ಟ ಅವರು ಪ್ರಥಮ ಚಿಕಿತ್ಸೆಯ ತರಬೇತಿಯನ್ನು ಪ್ರಾತ್ಯಕ್ಷಿಕೆಯ ಮೂಲಕ ನಡೆಸಿ, ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರ ಘಟಕದ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್, ಕಾಲೇಜಿನ ರೆಡ್‌ಕ್ರಾಸ್ ಘಟಕದ ಸಂಯೋಜನಾಧಿಕಾರಿ ವೃದ್ಧಿಶ್ರೀ ಜಿ. ಶೆಟ್ಟಿ ಹಾಗೂ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಪೂಜಾ ಕುಂದರ್ ಉಸ್ಥಿತರಿದ್ದರು.

ಕಾಲೇಜು ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕ ಯೋಗೀಶ ಶ್ಯಾನುಭೋಗ್ ಸ್ವಾಗತಿಸಿದರು. ರಾಷ್ಟ್ರೀಯ ಸೇವಾ ಯೋಜನ ಘಟಕದ ಕಾರ್ಯಕ್ರಮಾಧಿಕಾರಿ ರಾಜೇಶ ಶೆಟ್ಟಿ ವಂದಿಸಿದರು. ವಿದ್ಯಾರ್ಥಿನಿ ಸ್ನೇಹಾ ಪ್ರಾರ್ಥಿಸಿ, ಶರಣ್ಯ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-58) ಡ್ರಾ ಜೂನ್ 07ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MR 852787 (KANHANGAD)
Consolation Prize Rs.5,000/-
MN 852787 MO 852787 MP 852787 MX 852787
MR 852787 MS 852787 MU 852787 MV 852787
MW 852787 MY 852787 MZ 852787
2nd Prize Rs.25,00,000/- [25 Lakhs]
MO 478093 (MALAPPURAM)
3rd Prize Rs. 5,00,000/- [5 Lakhs]
MP 356724 (ERNAKULAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0164 0386 1916 2126 2402 2583 3981 4453 4648 4765
4967 5119 5515 5978 6807 8078 8315 8532 8621
5th Prize Rs.2,000/-
2260 4418 5892 7109 7505 9920
6th Prize Rs.1,000/-
0060 0416 1261 1363 1940 2403 2695 3054 3375 3685
4124 4320 4502 4514 5153 6261 6426 6432 6437 6438
7748 7803 7965 8312 9036
7th Prize Rs.500/-
0014 0056 0130 0439 0479 0648 0747 0853 1064 1279
1282 1546 1612 1674 1969 2183 2221 2299 2425 2592
2593 2626 2704 2723 2786 2804 2933 3085 3094 3343
3352 3446 3727 3834 3862 4532 4592 4792 4828 4829
5264 5331 5418 5485 5654 5682 6076 6327 6365 6908
6933 6952 6962 7075 7079 7113 7476 7620 7738 7791
7805 7810 7904 7975 8301 8375 8463 8634 8810 8933
9075 9082 9227 9362 9454 9899
8th Prize Rs.200/-
0017 0040 0275 0404 0592 0604 0686 0699 0809 0856
0913 1032 1034 1044 1117 1132 1271 1346 1476 1768
1947 1953 2047 2339 2527 2554 2569 2650 2781 2902
3095 3156 3403 3505 3643 3692 4122 4181 4213 4233
4427 4798 4811 4814 4823 5101 5110 5227 5306 5320
5374 5525 5722 6095 6201 6210 6361 6603 6630 6697
6783 6924 7020 7023 7126 7215 7251 7258 7522 7921
7955 7981 8253 8303 8468 8483 8502 8538 8546 9002
9027 9034 9265 9287 9398 9730 9876 9886 9890 9891
9917 9992
9th Prize Rs.100/-
0051 0065 0101 0133 0161 0223 0269 0279 0345 0394
0417 0464 0481 0506 0580 0682 0703 0731 0744 0815
0992 0999 1077 1136 1270 1338 1342 1357 1510 1517
1786 1792 1849 1856 1955 1982 2034 2039 2161 2290
2477 2586 2646 2657 2691 2716 2892 3028 3089 3161
3182 3218 3313 3621 3865 3927 4110 4208 4249 4265
4339 4373 4450 4530 4538 4586 4611 4689 4734 4801
4818 4862 4934 5021 5186 5291 5310 5311 5361 5433
5465 5496 5550 5599 5641 5663 5670 5905 6009 6011
6025 6044 6069 6142 6143 6221 6285 6289 6358 6389
6396 6496 6618 6702 6747 6789 7017 7072 7149 7161
7306 7362 7427 7454 7530 7716 7726 7801 7870 7890
7908 7915 7974 8031 8076 8095 8114 8145 8390 8396
8459 8469 8565 8704 8989 9017 9103 9231 9371 9412
9424 9479 9499 9581 9592 9717 9744 9791 9851 9870

ಪುತ್ತೂರು ನ್ಯಾಯಾಲಯದ ಸಂಕೀರ್ಣದ ಬಳಿ ಸಸಿಗಳ ನಾಟಿ

ಸಾಮೂಹಿಕ ಯತ್ನದಿಂದ ನಿಸರ್ಗ ಹಸಿರು



• **ಪುತ್ತೂರು:** ಅಪೂರ್ವವಾಗಿರುವ ಪ್ರಕೃತಿ ಸಂಪತ್ತಿನ ರಕ್ಷಕರಾಗಿ, ಪರಿಸರ ನೈರ್ಮಲ್ಯತೆಯನ್ನು ಕಾಪಾಡಲು ನಾವೆಲ್ಲರೂ ಕಂಕಣಬದ್ಧರಾಗಬೇಕು. ಸಾಮೂಹಿಕ ಯತ್ನದಿಂದ ಮತ್ತೆ ನಿಸರ್ಗವನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಬೇಕು ಎಂದು 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಸದಾನಂದ ನಾಗಪ್ಪ ನಾಯಕ್ ಹೇಳಿದರು.

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪುತ್ತೂರು ನ್ಯಾಯಾಲಯದ ಸಂಕೀರ್ಣದ ಬಳಿ ವಿವಿಧ ತಳಿಗಳ ಗಿಡ ನೆಡುವ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಿದರು. ಪರಿಸರ ಸ್ವಚ್ಛವಾಗಿದ್ದರೆ ಆರೋಗ್ಯವೂ ಸುರಕ್ಷಿತ ಎಂದು ಹೇಳಿದ ಅವರು, ಕಾನೂನು ಸೇವಾ ಸಮಿತಿಯ ಸಹಯೋಗದಲ್ಲಿ ನಗರ ಹಾಗೂ ಹೊರ ವಲಯದಲ್ಲಿ ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶೆ ಸುಮಂಗಳಾ, ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಲಯದ ನ್ಯಾಯಾಧೀಶೆ ಪ್ರಕೃತಿ ಕಲ್ಯಾಣಪುರ್, 1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಲಯದ ನ್ಯಾಯಾಧೀಶ ದೇವರಾಜ್ ವೈ.ಎಚ್., ವಕೀಲರ ಸಂಘದ ಅಧ್ಯಕ್ಷ ಜಗನ್ನಾಥ ರೈ, ವಲಯ ಅರಣ್ಯಾಧಿಕಾರಿ ಕಿರಣ್ ಬಿ.ಎಂ., ವಕೀಲರು, ಅರಣ್ಯ ಇಲಾಖೆ ಸಿಬಂದಿ ಉಪಸ್ಥಿತರಿದ್ದರು.

2.5 ಮಿ. ಟನ್ ಕಾರ್ಬನ್‌ಗೆ ತಡೆ | ವಿಐಎಸ್‌ಎಲ್ ಯಶಸ್ವಿ ಸಾಧನೆ

ನವೀಕರಿಸಬಹುದಾದ ಇಂಧನ ಅಳವಡಿಕೆ



• **ಬೆಂಗಳೂರು:** ವೇದಾಂತಐರನ್ ಆಂಡ್ ಸ್ಟೀಲ್ ಲಿಮಿಟೆಡ್ (ವಿಐಎಸ್‌ಎಲ್) ಸಂಸ್ಥೆ ತನ್ನ ಕಾರ್ಯಾಚರಣೆ ಯುದ್ದಕ್ಕೂ ಕೈಗೊಂಡಿರುವ ಸುಸ್ಥಿರತೆಯ ಯೋಜನೆಗಳ ಮೂಲಕ ಪರಿಸರ ವ್ಯವಸ್ಥೆಗಳನ್ನು ಮರುಸ್ಥಾಪಿಸುವಲ್ಲಿ, ನವೀಕರಿಸಬಹುದಾದ ಇಂಧನ ಅಳವಡಿಕೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದೆ. ಈ ವಿನೂತನ ಕ್ರಮಗಳ ಮೂಲಕ ಒಟ್ಟಾರೆಯಾಗಿ ಸುಮಾರು 2.5 ಮಿಲಿಯನ್ ಟನ್ ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಿದ್ದೇವೆ ಎಂದು ಪರಿಸರ ದಿನಾಚರಣೆ ಸಂದರ್ಭದಲ್ಲಿ ಸಂಸ್ಥೆಯು ಘೋಷಿಸಿದೆ.

ಸಂಸ್ಥೆಯ ಪರಿಸರಸ್ನೇಹಿ ಯೋಜನೆಗಳ ಕುರಿತು ಮಾತನಾಡಿದ ವಿಐಎಸ್‌ಎಲ್‌ನ ಸಿಇಒ ಪಂಕಜ್ ಕುಮಾರ್ ಶರ್ಮಾ, ಸುಸ್ಥಿರ ಭವಿಷ್ಯದ ಕಡೆಗಿನ ಪರಿವರ್ತನೆಗೆ, ಕೈಗಾರಿಕೆಗಳು ಕಚ್ಚಾ ವಸ್ತುಗಳನ್ನು ಹೇಗೆ ಸಾಗಿಸುತ್ತವೆ, ಇಂಧನವನ್ನು ಹೇಗೆ ಬಳಸುತ್ತವೆ ಮತ್ತು ಪರಿಸರದೊಂದಿಗೆ ಹೇಗೆ ಸಂವಹನ ನಡೆಸುತ್ತವೆ ಎಂಬುದನ್ನು ಮೂಲಭೂತವಾಗಿ ಮರುಚಿಂತನೆ ಮಾಡುವ ಅಗತ್ಯವಿದೆ ಎಂದಿದ್ದಾರೆ.

ಸ್ವಚ್ಛ ತಂತ್ರಜ್ಞಾನಗಳ ಅಳವಡಿಕೆಯೇ ವಿಐಎಸ್‌ಎಲ್ ಸಂಸ್ಥೆಯ ಕಾರ್ಬನ್ ಮುಕ್ತ ಪಯಣದ ಪ್ರಮುಖ ಹೆಜ್ಜೆಯಾಗಿದೆ. ಈಗ ಎಲೆಕ್ಟ್ರಿಕ್ ಪ್ರಯಾಣಿಕ ವಾಹನಗಳು, ವೀಲ್ ಲೋಡರ್ ಮತ್ತು ಫೋರ್ಕ್ ಲಿಫ್ಟ್‌ಗಳನ್ನು ಬಳಸಲಾಗುತ್ತಿದ್ದು, ಇದು ವಾರ್ಷಿಕವಾಗಿ ಸುಮಾರು 800 ಕಿಲೋಲೀಟರ್ ಡೀಸೆಲ್ ಉಳಿತಾಯ ಮಾಡಲು ಮತ್ತು ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಲು ನೆರವಾಗಿದೆಂದರು.

ಸುಸ್ಥಿರ ಲಾಜಿಸ್ಟಿಕ್ಸ್ ಕಡೆಗೆ ಕಂಪನಿ ನೀಡಿರುವ ಗಮನವು ಮಹತ್ತರ ಬದಲಾವಣೆಯನ್ನು ತಂದಿದೆ. 2026ರ ಹಣಕಾಸು ವರ್ಷವೊಂದರಲ್ಲೇ, ವಿಐಎಸ್‌ಎಲ್‌ನ ಬಾರ್ಜ್ ನೌಕಾಪಡೆಯ ಕಾರ್ಯಾಚರಣೆಯು ಅಂದಾಜು 2.1 ಲಕ್ಷ ಟ್ರಕ್ ಟ್ರಿಪ್ ಗಳನ್ನು ರದ್ದುಗೊಳಿಸುವುದಕ್ಕೆ ಸಮಾನವಾಗಿದೆ. ಇದು ಸುಮಾರು 10.8 ಮಿಲಿಯನ್ ಲೀಟರ್ ಡೀಸೆಲ್ ಉಳಿಸಲು ಸಹಾಯ ಮಾಡಿದ್ದು, ಸುಮಾರು 28,900 ಟನ್ ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಯನ್ನು ತಡೆದಿದೆ. ಈ ಮಹತ್ತರ ಬದಲಾವಣೆಯು ಒಂದು ಸಣ್ಣ ಅಥವಾ ಮಧ್ಯಮ ಗಾತ್ರದ ಪಟ್ಟಣದ ವಾರ್ಷಿಕ ವಿದ್ಯುತ್ ಬಳಕೆಯಿಂದ ಉಂಟಾಗುವ ಕಾರ್ಬನ್ ಪ್ರಮಾಣವನ್ನು ಸರಿದೂಗಿಸುವುದಕ್ಕೆ ಸಮಾನವಾಗಿದೆಂದು ಮಾಹಿತಿ ನೀಡಿದ್ದಾರೆ.

ಪಿಎಫ್‌ಎ ತಂತ್ರಜ್ಞಾನ ಬಳಸಿ ಚಿಕಿತ್ಸೆ

• **ಬೆಂಗಳೂರು:** ಹೃದಯ ಬಡಿತದ ಗಂಭೀರ ಅಸ್ವಸ್ಥತೆಯಾದ ಹೃತ್ಕರ್ಣದ ಕಂಪನ (ಏಟ್ರಿಯಲ್ ಫಿಬ್ರಿಲೇಷನ್-ಎಎಫ್‌ಐಬಿ) ಚಿಕಿತ್ಸೆಯಲ್ಲಿ ನಾರಾಯಣ ಹೆಲ್ತ್ ಸಿಟಿ ಮಹತ್ವದ ಸಾಧನೆ ಮಾಡಿದ್ದು, ಭಾರತದಲ್ಲೇ ಮೊದಲ ಬಾರಿಗೆ ಪಲ್ಸ್ಡ್ ಫೀಲ್ಡ್ ಅಬ್ಲೇಶನ್ (ಪಿಎಫ್‌ಎ) ತಂತ್ರಜ್ಞಾನ ಬಳಸಿ ಯಶಸ್ವಿಯಾಗಿ ಚಿಕಿತ್ಸೆ ನೀಡಿದೆ.

ಕಾರ್ಡಿಯಾಕ್ ಎಲೆಕ್ಟ್ರೋಫಿಸಿಯಾಲಜಿ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಎಂದು ಪರಿಗಣಿಸಲಾಗಿರುವ ಈ ಚಿಕಿತ್ಸೆಯನ್ನು ಡಾ. ದೀಪಕ್ ಪದ್ಮನಾಭನ್, ಡಾ. ಕಪಿಲ್ ಕುಮಾವತ್ ಹಾಗೂ ಡಾ. ದೇವವ್ರತ ಬೇರಾ ಅವರ ನ್ನೊಳಗೊಂಡ ತಜ್ಞರ ತಂಡ ಯಶಸ್ವಿಯಾಗಿ ನಿರ್ವಹಿಸಿದೆ.

ಸಾಂಪ್ರದಾಯಿಕ ಅಬ್ಲೇಶನ್ ಚಿಕಿತ್ಸೆಗೆ ಸುಮಾರು ನಾಲ್ಕು ಗಂಟೆಗಳ ಸಮಯ ಬೇಕಾಗುತ್ತಿದ್ದರೆ, ಈ ನೂತನ ತಂತ್ರಜ್ಞಾನದಿಂದ ಕೇವಲ 35 ನಿಮಿಷದಲ್ಲಿ ಚಿಕಿತ್ಸೆ ಪೂರ್ಣಗೊಳಿಸಲಾಗಿದೆ.

ಭಾರತದಲ್ಲಿ ಪಿಎಫ್‌ಎ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡ ಮೊದಲ ಕೇಂದ್ರ ಎಂಬ ಹೆಗ್ಗಳಿಕೆಗೆ ನಾರಾಯಣ ಹೆಲ್ತ್ ಪಾತ್ರವಾಗಿದೆ. ಜಾನ್ಸನ್ ಆ್ಯಂಡ್ ಜಾನ್ಸನ್, ಅಬಾಟ್, ಬೋಸ್ಟನ್ ಸೈಂಟಿಫಿಕ್ ಮತ್ತು ಮೆಡ್ಟ್ರಾನಿಕ್ ಸಂಸ್ಥೆಗಳ ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನಗಳ ನೆರವಿನಿಂದ ಈ ಚಿಕಿತ್ಸಾ ವಿಧಾನವನ್ನು ಜಾರಿಗೊಳಿಸಲಾಗಿದೆ.

ಈ ಕುರಿತು ಮಾತನಾಡಿದ ನಾರಾಯಣ ಹೆಲ್ತ್ ಸಂಸ್ಥೆಯ ಸಂಸ್ಥಾಪಕ ಡಾ. ದೇವಿ ಪ್ರಸಾದ್ ಶೆಟ್ಟಿ, ಪಿಎಫ್‌ಎ ತಂತ್ರಜ್ಞಾನವು ಹೃದಯದ ಲಯ ನಿರ್ವಹಣಾ ಕ್ಷೇತ್ರದಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಲಿದ್ದು, ಸುತ್ತಮುತ್ತಲಿನ ಅಂಗಾಂಗಗಳಿಗೆ ಹಾನಿಯಾಗದಂತೆ ಕೇವಲ ಹೃದಯದ ಅಸಹಜ ಅಂಗಾಂಶವನ್ನು ಗುರಿಯಾಗಿಸಿಕೊಂಡು ಚಿಕಿತ್ಸೆ ನೀಡುವ ಸುರಕ್ಷಿತ ವಿಧಾನವಾಗಿದೆ ಎಂದು ತಿಳಿಸಿದರು.

ಗೌಡರ ಭೇಟಿ



ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಮಾವು ಮತ್ತು ಹಲಸಿನ ಮೇಳಕ್ಕೆ ಮಾಜಿ ಪ್ರಧಾನ ಮಂತ್ರಿ ಎಚ್. ಡಿ.ದೇವೇಗೌಡರು ಭೇಟಿ ನೀಡಿ ರೈತರೊಡನೆ ವಿವಿಧ ಸಮಸ್ಯೆ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು. ತೋಟಗಾರಿಕೆ ಇಲಾಖೆ ಅಪರ ನಿರ್ದೇಶಕ ಡಾ.ಎಂ.ಜಗದೀಶ್, ಕೋಲಾರ ಮಾವು ಬೆಳೆಗಾರರ ಸಂಘದ ಅಧ್ಯಕ್ಷ ಚಿನ್ನಪ್ಪ ರೆಡ್ಡಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಅಕ್ರಮ ಒತ್ತುವರಿ ತೆರವು



• **ಮಹದೇವಪುರ:** ಕ್ಷೇತ್ರ ವ್ಯಾಪ್ತಿಯ ಹೋಪ್‌ಫಾರ್ಮ್ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಣೆ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ನೆರವಾಗುವಂತೆ ಪಟ್ಟಂದೂರು ಅಗ್ರಹಾರ ಸರ್ವೆ ನಂ. 40ರಲ್ಲಿನ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂದು ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್ ತಿಳಿಸಿದರು.

ಈ ಕ್ರಮದೊಂದಿಗೆ ಹೋಪ್‌ಫಾರ್ಮ್ ಜಂಕ್ಷನ್‌ನಲ್ಲಿ ಫ್ರೀ ಲೆಫ್ಟ್ ಟರ್ನ್ ಹಾಗೂ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಗೆ ಅಗತ್ಯ ಸ್ಥಳಾವಕಾಶ ಕಲ್ಪಿಸಲಾಗಿದೆ.

ಈ ಕಾರ್ಯಾಚರಣೆ ಮಾಜಿ ಸಚಿವರು ಹಾಗೂ ಮಹದೇವಪುರ ಮೊಬಿಲಿಟಿ ಟಾಸ್ಕ್ ಫೋರ್ಸ್ ಅಧ್ಯಕ್ಷ ಅರವಿಂದ ಲಿಂಬಾವಳಿ ಮತ್ತು ಕ್ಷೇತ್ರದ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆಯಿತು ಎಂದು ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್ ತಿಳಿಸಿದರು.

ಕಾರ್ಯಾಚರಣೆಯಲ್ಲಿ ಬಿಬಿಎಂಪಿ ಎಂಜಿನಿಯರಿಂಗ್ ವಿಭಾಗ, ಟಿಡಿಆರ್ ಭೂಸ್ವಾಧೀನ ಅಧಿಕಾರಿಗಳು, ರಾಜಸ್ವ ಇಲಾಖೆ, ಕೆ.ಆರ್.ಪುರಂ ತಹಶೀಲ್ದಾರ್ ಕಚೇರಿ ಅಧಿಕಾರಿಗಳು ಹಾಗೂ ಮಹದೇವಪುರ ಮೊಬಿಲಿಟಿ ಟಾಸ್ಕ್ ಫೋರ್ಸ್ ಅಧಿಕಾರಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ

• **ಬೆಂಗಳೂರು:** ವಿದ್ಯಾರ್ಥಿಗಳಿಗೆ ಹೆಚ್ಚಿನ ತಿಳಿವಳಿಕೆ ನೀಡಲು ಸ್ಯಾಪ್ ತನ್ನ ಸ್ಯಾಪ್ ಲರ್ನಿಂಗ್ ಹಬ್ ಸ್ಟೂಡೆಂಟ್ ಎಡಿಷನ್‌ಗೆ ಉಚಿತ ಪ್ರವೇಶ ನೀಡುತ್ತಿದೆ. ಈ ಪ್ಲಾಟ್‌ಫಾರಂ ವಿದ್ಯಾರ್ಥಿಗಳಿಗೆ ಎಂಟರ್‌ಪ್ರೈಸ್ ತಂತ್ರಜ್ಞಾನದಲ್ಲಿ ಪ್ರಮಾಣೀಕರಣ ಪಡೆದುಕೊಳ್ಳಲು ನೆರವಾಗುತ್ತದೆ. ಉದ್ಯಮಗಳಿಗೆ ಹಣಕಾಸು ಪೂರೈಕೆ ಸರಣಿ, ಮಾನವ ಸಂಪನ್ಮೂಲ ಮತ್ತು ಗ್ರಾಹಕ ಅನುಭವಗಳಂತಹ ಕಾರ್ಯಗಳಲ್ಲಿ ಡಿಜಿಟಲ್ ಕಾರ್ಯಾಚರಣೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರತಿಭೆಗಳ ಅಗತ್ಯವಿದೆ. ರಿಯಲ್ ಸ್ಯಾಪ್ ಪ್ರಾಕ್ಟೀಸ್ ಸಿಸ್ಟಮ್ಸ್ ಮತ್ತು ಎರಡು ಉಚಿತ ಸ್ಯಾಪ್ ಪ್ರಮಾಣೀಕರಣ ಪ್ರಯತ್ನಗಳನ್ನು ಪಡೆಯಬಹುದು. ವಿವಿಧ ಶೈಕ್ಷಣಿಕ ಹಿನ್ನೆಲೆಯ ವಿದ್ಯಾರ್ಥಿಗಳು ಉದ್ಯಮದ ಹುದ್ದೆಗಳಿಗೆ ರೂಪಿಸಲಾದ ಸ್ಯಾಪ್ ಕಲಿಕೆಯ ಪ್ರಯಾಣವನ್ನು ಆವಿಷ್ಕರಿಸಬಹುದು.ಉಚಿತ ಸ್ಯಾಪ್ ಲರ್ನಿಂಗ್ ಹಬ್, ಸ್ಟೂಡೆಂಟ್ ಎಡಿಷನ್ ಕುರಿತು ಹೆಚ್ಚಿನ ಮಾಹಿತಿಗಾಗಿ https://learning.sap.com/free&student&edition ಭೇಟಿ ನೀಡಿ.

ಜೂ.10ರಂದು ಪಿಎಚ್.ಡಿ ಪ್ರವೇಶ ಪರೀಕ್ಷೆ ಫಲಿತಾಂಶ

• **ಬೆಂಗಳೂರು:** ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ 2026-27ನೇ ಸಾಲಿನ ಪಿಎಚ್‌ಡಿ ಪ್ರವೇಶ ಪರೀಕ್ಷೆಯ ಫಲಿತಾಂಶ ಜೂ. 10ರಂದು ಪ್ರಕಟವಾಗಲಿದೆ. ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ ಜೂ. 17 ರಿಂದ 19 ರವರೆಗೆ ಅಭ್ಯರ್ಥಿಗಳ ಸಂದರ್ಶನ ನಡೆಯಲಿದ್ದು, ಜೂ.23 ರಂದು ಅರ್ಹತಾ ಪಟ್ಟಿ ಪ್ರಕಟಗೊಳ್ಳುತ್ತದೆ ಎಂದು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಪ್ರೊ. ರಮೇಶ. ಬಿ.ಕುಡೇನಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಪಾಲಿಕೆ ವ್ಯಾಪ್ತಿಯ ಪಾರ್ಕ್, ಆಟದ ಮೈದಾನ, ಕೆರೆ | ಸಮುದಾಯದ ಕಾರ್ಯಕ್ರಮಗಳಿಗೆ ಬಾಡಿಗೆ ನೀಡಲು ಚಿಂತನೆ

ಆದಾಯ ಹೆಚ್ಚಳಕ್ಕೆ ವಿನೂತನ ಯೋಜನೆ

• **ಬೆಂಗಳೂರು:** ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳ ಸಮರ್ಪಕ ನಿರ್ವಹಣೆ ಮತ್ತು ಆದಾಯದ ಮೂಲವನ್ನು ಬಲಪಡಿಸುವ ಉದ್ದೇಶದಿಂದ ಬೆಂಗಳೂರು ಪಶ್ಚಿಮ ನಗರ ಪಾಲಿಕೆಯು ವಿನೂತನ ಯೋಜನೆಗೆ ಕೈ ಹಾಕಿದೆ. ಪಾಲಿಕೆ ವ್ಯಾಪ್ತಿಗೆ ಬರುವ ಉದ್ಯಾನವನಗಳು, ಆಟದ ಮೈದಾನಗಳು ಹಾಗೂ ಕೆರೆಗಳನ್ನು ವಿವಿಧ ಸಮುದಾಯ ಆಧಾರಿತ ಕಾರ್ಯಕ್ರಮಗಳಿಗೆ ಬಾಡಿಗೆಗೆ ನೀಡಲು ಚಿಂತನೆ ನಡೆಸಿದೆ.

ಸದ್ಯ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸೌಲಭ್ಯಗಳು ಹಾಗೂ ಆಸ್ತಿಗಳ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ ಎಂಬ ದೂರುಗಳು ಸಾರ್ವಜನಿಕ ವಲಯದಿಂದ ವ್ಯಾಪಕವಾಗಿ ಕೇಳಿ ಬರುತ್ತಿದ್ದವು. ಈ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಪಾಲಿಕೆ, ಸಾರ್ವಜನಿಕ ಆಸ್ತಿಗಳ ಮೂಲಕವೇ ಆದಾಯ ಗಳಿಸಿ, ಆ ಹಣವನ್ನು ಅದೇ ಸ್ಥಳಗಳ ಅಭಿವೃದ್ಧಿ ಹಾಗೂ ದಿನನಿತ್ಯದ ನಿರ್ವಹಣೆಗೆ ಬಳಸಿಕೊಳ್ಳಲು ಚಿಂತನೆ ನಡೆಸಿದೆ.ವಸತಿ ಪ್ರದೇಶಗಳು ಹೆಚ್ಚಾಗಿರುವ ಪಶ್ಚಿಮ ಪಾಲಿಕೆ ಅಧೀನದಲ್ಲಿರುವ ಸಾರ್ವಜನಿಕ ಆಸ್ತಿ ಗಳನ್ನು ಸಮರ್ಪಕವಾಗಿ



ಬಳಸಿಕೊಳ್ಳಲು ಉತ್ತಮ ಅವಕಾಶವಿದೆ. ಸದ್ಯ ಪಾಲಿಕೆ ವ್ಯಾಪ್ತಿಯಲ್ಲಿ 469 ಉದ್ಯಾನವನಗಳು, ಹತ್ತಾರು ಆಟದ ಮೈದಾ ನಗಳು, ಆಡಿಟೋರಿಯಂಗಳು, ಸಮುದಾಯ ಭವನಗಳು ಹಾಗೂ 47 ಕೆರೆಗಳು ಸೇರಿದಂತೆ ವಿಶಾಲವಾದ ಸಾರ್ವಜನಿಕ ಆಸ್ತಿಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತಾವಿತ ಹೊಸ ಯೋಜನೆ ಪ್ರಕಾರ, ಪಾಲಿಕೆ ಈ ತೆರೆದ ಸ್ಥಳಗಳಲ್ಲಿ ಸ್ಥಳೀಯ ಸಂತೆಗಳು, ಸಾಂಸ್ಕೃತಿಕ ಕಾರ್ಯಕ್ರಮ, ಸಮುದಾಯದ ಬೃಹತ್ ಕೂಟ ಹಾಗೂ ಸಾರ್ವ ಜನಿಕ ಹಿತಾಸಕ್ತಿಯ ಚಟುವಟಿಕೆಗಳನ್ನು ಆಯೋಜಿಸಲು ಬಾಡಿಗೆಗೆ ನೀಡಲಾಗುತ್ತದೆ. ಇವುಗಳಿಂದ ಬರುವ ಬಾಡಿಗೆ ಹಣ ನೇರವಾಗಿ ಸೌಲಭ್ಯ ಉನ್ನತೀಕರಣಕ್ಕೆ ಮರುಹೂಡಿಕೆ ಮಾಡುವ ಚಿಂತನೆಯಲ್ಲಿ ನಗರ ಪಾಲಿಕೆಯಲ್ಲಿದೆ.

ವಾರಾಂತ್ಯದಲ್ಲಿ ಹೆಚ್ಚು ಬಳಕೆಗೆ ಅವಕಾಶ

ಉದ್ಯಾನವನ ಹಾಗೂ ಆಟದ ಮೈದಾನಗಳ ನಿರ್ವಹಣೆಗೆ ಪಾಲಿಕೆ ದೊಡ್ಡ ಮಟ್ಟದ ಹಣ ವ್ಯಯಿಸುತ್ತಿದ್ದರೂ ಸಾರ್ವಜನಿಕರಿಂದ ದೂರುಗಳು ಬರುತ್ತಲೇ ಇವೆ. ಮತ್ತೊಂದೆಡೆ, ವಾರದ ಬಹುತೇಕ ದಿನದಲ್ಲಿ ಈ ಮೈದಾನಗಳು ಸದ್ಬಳಕೆಯಾಗದೆ ಖಾಲಿ ಉಳಿಯುತ್ತಿವೆ. ಹಲವು ಆಟದ ಮೈದಾನಗಳು ಕೇವಲ ವಾರಾಂತ್ಯದಲ್ಲಿ ಮಾತ್ರ ಬಳಕೆಯಾಗುತ್ತಿದೆ. ಇನ್ನುಳಿದ ದಿನದಲ್ಲಿ ಖಾಲಿ ಇರಲಿವೆ ಎಂದು ಪಾಲಿಕೆ ತಿಳಿಸಿದೆ.

ಮೂಲ ಉದ್ದೇಶಕ್ಕೆ ಧಕ್ಕೆ ಇಲ್ಲ

ಹೊಸ ಯೋಜನೆಯಿಂದಾಗಿ ಪಾರ್ಕ್ ಮತ್ತು ಮೈದಾನಗಳ ಮೂಲ ಉದ್ದೇಶಕ್ಕೆ ಅಂದರೆ ಸಾರ್ವಜನಿಕರ ಬಳಕೆಗೆ ಯಾವುದೇ ಧಕ್ಕೆಯಾಗದಂತೆ ಎಚ್ಚರ ವಹಿಸಲಾಗುವುದು. ಅಲ್ಲದೆ, ಇದು ಸ್ಥಳೀಯ ನಾಗರಿಕರ ಒಡನಾಟ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲಿದೆ ಎಂಬ ವಿಶ್ವಾಸವನ್ನು ಪಾಲಿಕೆ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಪೈಲಟ್ ಯೋಜನೆ ಶೀಘ್ರ ಆರಂಭ


ಯೋಜನೆಯನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ಪಾಲಿಕೆಯು ಕೆಲವು ಲಾಭರಹಿತ ಸಂಸ್ಥೆಗಳು ಮತ್ತು ಖಾಸಗಿ ಏಜೆನ್ಸಿಗಳ ಜೊತೆ ಪಾಲುದಾರಿಕೆ ಮಾಡಿಕೊಳ್ಳಲು ಚಿಂತಿಸುತ್ತಿದೆ. ಆರಂಭದಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗುತ್ತಿದ್ದು, ಸಾರ್ವಜನಿಕರಿಂದ ಸಿಗುವ ಸ್ಪಂದನೆ ಮತ್ತು ಯಶಸ್ಸನ್ನು ನೋಡಿಕೊಂಡು ಮುಂದಿನ ವರ್ಷದಿಂದ ಬೃಹತ್ ಮಟ್ಟದಲ್ಲಿ ನಿರ್ವಹಿಸಲು ಖಾಸಗಿ ಏಜೆನ್ಸಿಯೊಂದನ್ನು ನೇಮಿಸಲು ಪಾಲಿಕೆ ನಿರ್ಧರಿಸಿದೆ.

ಪೂಗ ಪ್ರವರ್ತಕ -ಕ್ಯಾಂಪ್ಕೊ ಯುಗಪುರುಷ ವಾರಣಾಶಿ ಸುಬ್ರಾಯ ಭಟ್

ಇಂದು 2026 ಜೂನ್ 8. ವಾರಣಾಶಿಯವರು ಜನಿಸಿ 99 ವರ್ಷ ಪೂರೈಸಿದ ದಿನ. ಅಂದರೆ ಇದು ಅವರ ಜನ್ಮ ಶತಮಾನೋತ್ಸವ ವರ್ಷ. ಕ್ಯಾಂಪ್ಕೊ ಸಂಸ್ಥೆ ಈ ವರ್ಷವನ್ನು ಅಭಿಮಾನ ಮತ್ತು ಕೃತಜ್ಞತಾ ಪೂರ್ವಕ ಅವರ ಜನ್ಮ ಶತಮಾನೋತ್ಸವವನ್ನು ಆಚರಿಸಲಿದೆ. ಕ್ಯಾಂಪ್ಕೊ ಕುಟುಂಬಕ್ಕೆ ಇದು ಹೆಮ್ಮೆಯ ವರ್ಷ. ಸ್ವಾಭಿಮಾನದ ಬದುಕಿಗೆ ಪಥ ತೋರಿದ ದಾರ್ಶನಿಕನಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುವ ಸುಸಮಯ.

ಜೂನ್ 8, 1927 ಸಾಮಾನ್ಯ ದಿನವಲ್ಲ. ಭಾರತದ ಆರ್ಥಿಕತೆಗೆ ದೊಡ್ಡ ಕೊಡುಗೆಯನ್ನು ಕೊಡುತ್ತಿರುವ, ಮುಖ್ಯವಾಗಿ ಕೇರಳ ಮತ್ತು ಕರ್ನಾಟಕದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಗೆ ಬಹುಪಾಲು ಕಾರಣವಾಗಿರುವ ಅಡಿಕೆ ಕೃಷಿಕರಿಗೆ ಹೊಸ ಬೆಳಕಾದ ಪ್ರತಿಷ್ಠಿತ ಕ್ಯಾಂಪ್ಕೊ ಸಂಸ್ಥೆಯನ್ನು ಸ್ಥಾಪಿಸಿದ ಕ್ಯಾಂಪ್ಕೊ ಬ್ರಹ್ಮ, ಯುಗಪುರುಷ, ವಾರಣಾಶಿ ಸುಬ್ರಾಯ ಭಟ್ಟರು ಜನ್ಮ ತಾಳಿದ ದಿನ.

ಸುಬ್ರಾಯ ಭಟ್ಟರು ಹುಟ್ಟಿದ ಊರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಮೂಡಂಬೈಲು. ತಂದೆ ವಾರಣಾಶಿ ಕೃಷ್ಣಯ್ಯ, ತಾಯಿ ತಿರುಮಲೇಶ್ವರಿ ಅಮ್ಮ. ಸುಬ್ರಾಯ ಭಟ್ಟರ ಪ್ರಾಥಮಿಕ ವಿದ್ಯಾಭ್ಯಾಸ ಮೂಡಂಬೈಲು ಸರಕಾರಿ ಶಾಲೆಯಲ್ಲಿ. 6 ಮತ್ತು 7ನೇ ತರಗತಿ ಕಲಿಕೆ ಅಡ್ಯನಡ್ಕದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಪ್ರೌಢಶಾಲಾ ವಿದ್ಯಾಭ್ಯಾಸ ನೀಲೇಶ್ವರದಲ್ಲಿ ಮಾಡಿದರು. ಹದಿನೈದನೇ ವರ್ಷದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದೆ ಶಿಕ್ಷಣ ಸಂಸ್ಥೆಯ ವಿದ್ಯಾಭ್ಯಾಸ ಅನಿವಾರ್ಯ ಕಾರಣಗಳಿಂದ ಮುಂದುವರಿಸಲಾಗಲಿಲ್ಲ. ಆದರೆ ಸಮಾಜದಲ್ಲಿ ನಿತ್ಯ ನಿರಂತರ ಓಡಾಟ, ಒಡನಾಟ, ಪಡೆದುಕೊಂಡ



ಅನುಭವ, ತಂದೆಯವರ ಜೊತೆಗಿನ ಸಾಮೀಪ್ಯ ವಾರಣಾಶಿಯವರು ವ್ಯವಹಾರಚತುರರಾಗಿ ಬೆಳೆಯಲು ಕಾರಣವಾಯಿತು. ಪುಣಚ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ, ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷರಾಗಿ ದೀರ್ಘಕಾಲದ ಸೇವೆ ಅವರನ್ನು ಒಬ್ಬ ದಾರ್ಶನಿಕ, ಕರ್ತೃತ್ವ ಶಕ್ತಿಯುಳ್ಳ ಅಪ್ರತಿಮ ಸಾಧಕನನ್ನಾಗಿ ರೂಪುಗೊಳಿಸಿತು.

ತಾನು ಸ್ವತಹ ಅಡಿಕೆ ಕೃಷಿಕ. ಊರೆಲ್ಲಾ ಕೃಷಿಕರು ಕಡಿಮೆ ಬೆಲೆಗೆ ಹಣ್ಣಡಿಕೆ ಮಾರಾಟ ಮಾಡಿ ಬದುಕುವ ಕಷ್ಟಗಳನ್ನು ಕಣ್ಣಾರೆ ಕಂಡರು. ಏನಾದರೂ ಮಾಡಬೇಕೆಂದು ಯೋಚಿಸಿದರು. ಕೆಂಪಡಿಕೆ ಬಿಸಿಲಿಗೆ ಒಣಗಿಸಿ ಚಾಲಿ ಅಡಿಕೆ ಮಾಡಿ ಅದಕ್ಕೆ ಮಂಗಳೂರಿನ ಮಾರುಕಟ್ಟೆ ಪರಿಚಯಿಸಿದರು. ಮುಂದೆ 1973ಜುಲೈ11ರಂದು ಅಡಿಕೆ ಬೆಳೆಗಾರರ ಕಣ್ಮಣಿ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಕ್ಯಾಂಪ್ಕೊ ಸ್ಥಾಪಿಸಿದರು.

ಸುಬ್ರಾಯ ಭಟ್ಟರ ನೇತೃತ್ವದಲ್ಲಿ ಅನೇಕ ಹಿರಿಯ ಕೃಷಿಕರು, ಸಹಕಾರಿಗಳು ಅವರಿಗೆ ಈ ಮಹಾನ್‌ಕಾರ್ಯದಲ್ಲಿ ಹೆಗಲಾಗಿದ್ದರು. ಕ್ಯಾಂಪ್ಕೊ ಸಂಸ್ಥೆಯಿಂದ ವಿರಮಿಸಿದ ನಂತರ ಕಾಫಿ ಬೆಳೆಗಾರರ ಸಮಸ್ಯೆಗೆ ಓಗೊಟ್ಟು 1992ರಲ್ಲಿ ಕಾಫಿ ಬೆಳೆಗಾರರಿಗಾಗಿ 'ಕೋಮಾರ್ಕ್' ಸಂಸ್ಥೆ ಸ್ಥಾಪಿಸಿದರು.

1986ರಲ್ಲಿ ಪುತ್ತೂರಿನಲ್ಲಿ ಸ್ಥಾಪಿತವಾದ ಕ್ಯಾಂಪ್ಕೊ ಚಾಕೋಲೇಟ್ ಫ್ಯಾಕ್ಟರಿ ಸಹಕಾರಿ ಕ್ಷೇತ್ರದ ದೇವ ಮಂದಿರ. ಆರೋಗ್ಯ ಕೈಗೊಡುತ್ತಿದ್ದರೂ ಲೆಕ್ಕಿಸದೆ ಅಂತಾರಾಷ್ಟ್ರೀಯ ದೈತ್ಯ ಕಂಪೆನಿಗಳ ಅಸಹಕಾರಕ್ಕೆ ಸಡ್ಡುಹೊಡೆದು ವಿದೇಶಕ್ಕೆ ಹೋಗಿ ಅಗತ್ಯ ಯಂತ್ರಗಳನ್ನು ಖರೀದಿಸಿ ತಂದು ಫ್ಯಾಕ್ಟರಿಯನ್ನು ಅಂದಿನ ರಾಷ್ಟ್ರಪತಿ ಗ್ಯಾನಿ ಜೈಲ್ ಸಿಂಗ್ ಅವರಿಂದ ಉದ್ಘಾಟನೆಗೊಳ್ಳುವಂತೆ ಮಾಡಿದ ಅಪ್ರತಿಮ ಸಾಧಕ ಕ್ಯಾಂಪ್ಕೊ ಪಿತಾಮಹ ವಾರಣಾಶಿಯವರು. ಅಂತಾರಾಷ್ಟ್ರೀಯ ಗುಣಮಟ್ಟದ ಚಾಕೋಲೇಟ್‌ಗಳನ್ನು ಮತ್ತು ಕೊಕ್ಕೊ ಉತ್ಪನ್ನಗಳನ್ನು ಉತ್ಪಾದಿಸಿ ಹೆಸರುವಾಸಿಯಾದ ಕ್ಯಾಂಪ್ಕೊ ಚಾಕೊಲೇಟ್ ಫ್ಯಾಕ್ಟರಿ ಕೊಕ್ಕೊ ಬೆಳೆಗಾರರ ಆಶಾಕಿರಣ. ಮೂರು ಶಿಫ್ಟ್‌ಗಳಲ್ಲಿ ಕೆಲಸ ನಿರ್ವಹಿಸಿ ಸಾವಿರಾರು ಕುಟುಂಬಗಳ ಜೀವನಕ್ಕೆ ಉಸಿರಾದ ಇದು ವಾರಣಾಶಿಯವರ ಛಲ, ಸಾಧನೆ, ಅವಿರತ ಪರಿಶ್ರಮಕ್ಕೆ ದ್ಯೋತಕ.

ಇಡೀ ದೇಶವೇ ಮೆಚ್ಚುವಂತೆ ಸಂಸ್ಥೆಯನ್ನುಕಟ್ಟಿ ಬೆಳೆಸಿದ್ದು ಮಾತ್ರ ಸುಬ್ರಾಯ ಭಟ್ಟರ ಸಾಧನೆಯಲ್ಲ. ಮಂಗಳೂರಿನಿಂದ ಹಿಡಿದು ದೆಹಲಿಯತನಕ ಹತ್ತು ಹಲವಾರುಕಡೆ ಸಂಸ್ಥೆಗೆ ನಿವೇಶನ ಖರೀದಿಸಿ ಕಟ್ಟಡ ನಿರ್ಮಿಸಿ ವ್ಯವಹಾರ ಹೆಚ್ಚಲು ಮತ್ತು ಸಂಸ್ಥೆ ಗಟ್ಟಿಯಾಗಿ ನೆಲೆಯೂರಲು ಕಾರಣರಾಗಿದ್ದಾರೆ. ಕೇರಳ ಮತ್ತು ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಖರೀದಿ, ವ್ಯವಹಾರ ಹೊಂದಿದ ಕ್ಯಾಂಪ್ಕೊ ದೇಶಾದ್ಯಂತ ತನ್ನ ಮಾರಾಟ ಕೇಂದ್ರಗಳನ್ನು ಹೊಂದಿ ವ್ಯವಹಾರ ನಡೆಸುವುದರ ಹಿಂದೆ ವಾರಣಾಶಿಯವರ ಅದ್ಭುತ ದೂರದರ್ಶಿತ್ವ, ಕರ್ತವ್ಯ ಪ್ರಜ್ಞೆ, ಕೆಚ್ಚು, ದಿಟ್ಟತನಗಳು ಅವಿರತ ಕೆಲಸ ಮಾಡಿವೆ. 1973ರಿಂದ 1990ರ ತನಕ ಅಂದರೆ ಸುಮಾರು 18 ವರ್ಷಕಾಲ ಕ್ಯಾಂಪ್ಕೊ ಅಧ್ಯಕ್ಷರಾಗಿ ಆಡಳಿತ ನಡೆಸಿ ಸಂಸ್ಥೆಯನ್ನು ಸಮಗ್ರ ಪಥದಲ್ಲಿ ನಡೆಯಲು ಸಕಲ ಸನ್ನದ್ಧಗೊಳಿಸಿ ವಿರಮಿಸಿದರು.

ತನ್ನ ಕುಟುಂಬ, ಆರೋಗ್ಯ ಯಾವುದನ್ನೂ ಲೆಕ್ಕಿಸದೆ ಸರಳವಾಗಿ ಬದುಕುವುದರ ಜೊತೆಗೆ ದಿನದ 18ರಿಂದ 20 ಘಂಟೆಯವರೆಗೆ ಅವಿಶ್ರಾಂತ ದುಡಿಮೆ ಸಂಸ್ಥೆಯು ಉನ್ನತಿಯ ಮೆಟ್ಟಿಲುಗಳನ್ನೇರಿಕೊಂಡು ಮೇಲೇರಲು ಕಾರಣವಾಯಿತು. ವಾರಣಾಶಿಯವರು ಪ್ರಾಮಾಣಿಕತೆ, ಸತ್ಯಸಂಧತೆ, ದೂರದೃಷ್ಟಿ, ಸಮಯಪ್ರಜ್ಞೆ, ಶಿಸ್ತುಗಳ ಪ್ರತಿರೂಪ. ಅವರ ಸಾಧನೆ ಪರಿಶ್ರಮಕ್ಕೆ ಅವರಿಗೆ ಹತ್ತಾರು ಪ್ರಶಸ್ತಿಗಳು ಬಂದಿವೆ. 2005ರಲ್ಲಿ ರಾಷ್ಟ್ರಮಟ್ಟದ 'ಸಹಕಾರಿತಾ ರತ್ನ' ಪ್ರಶಸ್ತಿ ಅವರ ಮುಡಿಗೇರಿತು.2017ಡಿಸೆಂಬರ್ 27ರಂದು ತನ್ನ 87ನೇ ವಯಸ್ಸಿನಲ್ಲಿ ವಾರಣಾಶಿ ಸುಬ್ರಾಯ ಭಟ್ಟರು ಅಸ್ತಂಗತರಾದರು.

ದಾರ್ಶನಿಕ ವಾರಣಾಶಿಯವರು ಅಡಿಕೆಗೆ ಒಂದು ಸ್ಥಾನಮಾನ ತಂದುಕೊಟ್ಟವರು. ಅಡಿಕೆ ಕೃಷಿಕರಿಗೆ ನೆಮ್ಮದಿಯ ಬದುಕನ್ನು ಕಟ್ಟಿ ಕೊಟ್ಟವರು. ಸಾವಿರಾರು ಸಿಬ್ಬಂದಿಗಳ, ಕಾರ್ಮಿಕರ ಕುಟುಂಬದವರ ಪಾಲಿಗೆ ಅಕ್ಷರಶಃ ಬೆಳಕಾದವರು. ಅಂದು ಬಡತನದ ಬೇಗೆಯಲ್ಲಿದ್ದುಕೊಂಡು ಬದುಕುತ್ತಿದ್ದ ಕುಟುಂಬಗಳು ಇಂದು ಗೌರವಯುತವಾಗಿ ಬದುಕಲು ಅವಕಾಶ ಮಾಡಿಕೊಟ್ಟದ್ದು ಸುಬ್ರಾಯ ಭಟ್ಟರು ಭದ್ರ ಬುನಾದಿ ಹಾಕಿ ಕೊಟ್ಟ ಕ್ಯಾಂಪ್ಕೊ. 2016ರಲ್ಲಿ ಕ್ಯಾಂಪ್ಕೊ ಸಂಸ್ಥೆಯ ಹಿರಿಯ ಅಧಿಕಾರಿಯೋರ್ವರ ಬೀಳ್ಕೊಡುವ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ನನಗೆ ಒದಗಿ ಬಂದಿತ್ತು. ವಿದಾಯಕೂಟದಲ್ಲಿ ಮಾತನಾಡಿದ ಆ ಅಧಿಕಾರಿ ಸಂಸ್ಥೆ ಆರಂಭಕಾಲದಲ್ಲಿ ಅನುಭವಿಸಿದ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. 'ಕ್ಯಾಂಪ್ಕೊ ಬ್ರಹ್ಮ ವಾರಣಾಶಿಯವರು ಸಂಸ್ಥೆಯನ್ನು ಕಟ್ಟಿಬೆಳೆಸದೆ ಇರುತ್ತಿದ್ದರೆ ನನ್ನಂತವರ ನೂರಾರು ಕುಟುಂಬಗಳು ಕಣ್ಣೀರಲ್ಲೇ ಕೈತೊಳೆಯಬೇಕಾಗುತ್ತಿತ್ತು. ನಿಜವಾಗಿ ವಾರಣಾಶಿಯವರು ಪ್ರಾತಃಸ್ಮರಣೀಯರು. ನಿತ್ಯ ಒಂದು ತುತ್ತು ಅನ್ನ ಬಾಯಿಗಿಡಬೇಕಾದರೆ ವಾರಣಾಶಿಯವರ ನೆನಪು ಬಂದೇ ಬರುತ್ತಿತ್ತು. ಹೀಗೆ ಮಾತನಾಡುತ್ತ ಆ ಅಧಿಕಾರಿ ಭಾವುಕರಾದರು. ಇಂತಹ ಅನೇಕರ ಪಾಲಿಗೆ ಆಪದ್ಬಾಂಧವರಾದವರು ಕೀರ್ತಿಶೇಷ ವಾರಣಾಶಿಯವರು.

▶ ಶಂ.ನಾ.ಖಂಡಿಗೆ


ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ

ಸಮಾಜ ಪರಿವರ್ತನೆಗೆ ಶಿಕ್ಷಣವೇ ಶಕ್ತಿ

• **ಬೆಂಗಳೂರು:** ಶಿಕ್ಷಣವು ವ್ಯಕ್ತಿಯ ಬದುಕನ್ನು ಮಾತ್ರವಲ್ಲ, ಇಡೀ ಸಮಾಜವನ್ನು ಪರಿವರ್ತಿಸುವ ಶಕ್ತಿಯಾಗಿದೆ ಎಂದು ಡಿಆರ್‌ಡಿಒದ ಮಾಜಿ ನಿರ್ದೇಶಕ, ಪದ್ಮವಿಭೂಷಣ ಡಾ. ವಾಸುದೇವ ಕೆ. ಅತ್ರೆ ತಿಳಿಸಿದರು.

ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸಾರ್ಥಕ ಶಿಕ್ಷಣ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ 2026ನೇ ಸಾಲಿನ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸೂಕ್ತ ಸಮಯದಲ್ಲಿ ದೊರೆಯುವ ನೆರವು ಅವರ ಭವಿಷ್ಯವನ್ನು ಉಜ್ವಲಗೊಳಿಸುವುದರ ಜತೆಗೆ ರಾಷ್ಟ್ರದ ಅಭಿವೃದ್ಧಿಗೂ ಕೊಡುಗೆ ನೀಡುತ್ತದೆ ಎಂದರು.

ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆಯ ಮಾಜಿ ನಿರ್ದೇಶಕಿ ಪದ್ಮಶ್ರೀ ಡಾ. ವಿಜಯಲಕ್ಷ್ಮಿ ದೇಶಮಾನೆ ಮಾತನಾಡಿ, ವಿದ್ಯಾರ್ಥಿಗಳು



ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು, ಸಮಾಜಕ್ಕೆ ಉತ್ತಮ ವ್ಯಕ್ತಿಯಾಗಿ, ದೇಶಕ್ಕೆ ಒಳ್ಳೆ ಪ್ರಜೆಯಾಗಿ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಇಂಡಸ್ ಟವರ್ಸ್ ಲಿಮಿಟೆಡ್‌ನ ಮಾಜಿ ಸಿಇಒ ಶಾಂತರಾಜು ಬಿ.ಎಸ್., ಪೈ ಗ್ರೂಪ್ ಆಫ್ ಹೋಟೆಲ್ಸ್‌ನ ಅಧ್ಯಕ್ಷ ಜಗನ್ನಾಥ ವಿ.ಪೈ, ಸಾರ್ಥಕ ಶಿಕ್ಷಣ ಚಾರಿಟೇಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಡಾ. ಕೆ. ಶೇಷಮೂರ್ತಿ ಸೇರಿದಂತೆ ಇತರರಿದ್ದರು. ಇದೇ ಸಂದರ್ಭದಲ್ಲಿ ಆಯ್ಕೆಯಾದ 108 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.

ವಚನ ಜ್ಯೋತಿ ಬಳಗದಿಂದ ಕಲಾವಿದರಿಗೆ ಚೆಕ್ ವಿತರಣೆ

ಕಲೆ ಉಳಿಸಲು ಕಲಾವಿದರ ಬೆಂಬಲಿಸಿ

• **ಬೆಂಗಳೂರು:** ಬದುಕು ನಡೆಸುವುದು ದುಸ್ತರವಾಗಿರುವಾಗ, ಕಲೆಯನ್ನು ಉಳಿಸಿ ಪಸರಿಸುತ್ತಿರುವ ಕಲಾವಿದರ ಬೆನ್ನು ತಟ್ಟಿ ನೆರವು ನೀಡುವುದು ನಮ್ಮ ಕರ್ತವ್ಯ ಎಂದು ವಚನಜ್ಯೋತಿ ಬಳಗದ ಗೌರವಾಧ್ಯಕ್ಷ ಡಾ.ಮಹೇಶ ಬೆಲ್ಲದ್ ತಿಳಿಸಿದರು.

ಯಶವಂತಪುರದ ಆನ್ ಲೈನ್ ಇನ್ಸ್ಟ್ರುಮೆಂಟ್ಸ್ ಇಂಡಿಯಾದ ತಮ್ಮ ಕಚೇರಿಯಲ್ಲಿ ವಚನ ಕಲಾವಿದರಿಗೆ ಒಟ್ಟು ಎರಡೂವರೆ ಲಕ್ಷದ ನೆರವಿನ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕೃತಿಯ ಪ್ರಸಾರಕರಾದ ಕಲಾವಿದರನ್ನು ಗುರುತಿಸಿ ಅವರ ಸಂಕಷ್ಟಗಳಲ್ಲಿ ಜತೆಯಾಗಿ ನಿಂತು, ಕರೆದೊಯ್ಯುವ ವಚನಜ್ಯೋತಿ ಬಳಗದ ಮಾರ್ಗ ಅನುಕರಣೀಯವಾಗಿದ್ದು. ಹಾಗಾಗಿ ತಾವೂ ಸಹ ಇಂದು ವಚನ ಕಲಾವಿದರಿಗೆ ಕೈಲಾದ ನೆರವು ನೀಡುತ್ತಿದ್ದೇವೆ ಎಂದು ತಿಳಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್.ಪಿನಾಕ ಪಾಣಿ ಮಾತನಾಡಿ, ರಂಜನೆಯೇ ಪ್ರಧಾನವಾಗಿರುವ ಈ ಕಾಲಮಾನದಲ್ಲಿ ಬದುಕಿನ ಸೂತ್ರವನ್ನು ತಿಳಿಸಿ, ನೈತಿಕ ಮೌಲ್ಯ



ಗಳನ್ನು ಬಿತ್ತುವ ವಚನಗಳನ್ನು ಮನ ಮನಕ್ಕೆ ಮುಟ್ಟಿಸುವ ಕಾರ್ಯದಲ್ಲಿ ಬಳಗದ ಜತೆಯಿರುವ ಗಾಯಕರು - ವಾದಕರಿಗೆ ಆರ್ಥಿಕ ನೆರವು ನೀಡುತ್ತಿರುವ ಗೌರವಾಧ್ಯಕ್ಷ ಮಹೇಶ ಬೆಲ್ಲದರಿಗೆ ಋಣಿಯಾಗಿರುತ್ತೇನೆ ಎಂದರು.

ಗಾಯಕರಾದ ದೇವೇಂದ್ರಕುಮಾರ ಪತ್ತಾರ್, ರವೀಂದ್ರ ಸೊರಗಾವಿ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಸರಸ್ವತಿ ಹೆಗಡೆ, ಸಿದ್ದರಾಮ ಕೇಸಾಪುರ, ಅಮರೇಶ ಗವಾಯಿ, ಈರಯ್ಯ ಚಿಕ್ಕಮಠ, ಚೇತನಾ ಮುಧೋಳ್, ಪ್ರಭಾ ಇನಾಂದಾರ್, ವಾದ್ಯಗಾರರಾದ ಗುರುರಾಜ ಆಚಾರ್ಯ, ವೃಂಕೇಶ್ ಸೇರಿದಂತೆ ಇತರರಿದ್ದರು.

ಕೇಂದ್ರ ಪಾಲಿಕೆ ಆಯುಕ್ತರಾಗಿ ಜಗದೀಶ್

• **ಬೆಂಗಳೂರು:** ಕೇಂದ್ರ ನಗರ ಪಾಲಿಕೆಯ ಆಯುಕ್ತರಾಗಿ ನಿಯೋಜನೆಗೊಂಡ ಐಎ ಎಸ್ ಅಧಿಕಾರಿ ಜಗದೀಶ.ಜಿ . ಎಂಜಿ ರಸ್ತೆಯ ಪಿಯುಬಿ ಕಟ್ಟಡದಲ್ಲಿನ ಆಯುಕ್ತರ ಕಚೇರಿಯಲ್ಲಿ ಶನಿವಾರ ಅಧಿಕಾರ ವಹಿಸಿ ಕೊಂಡರು.

ಅಧಿಕಾರ ಸ್ವೀಕಾರ ಮಾಡಿದ ನಂತರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ವಿವಿಧ ಇಲಾಖೆಗಳ ಪ್ರಗತಿ, ನಾಗರೀಕರಿಗೆ ನೀಡಲಾಗುತ್ತಿರುವ ಸೇವೆಗಳ ಗುಣಮಟ್ಟ, ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಸಮಗ್ರವಾಗಿ ಪ್ರಗತಿ ಪರಿಶೀಲನೆ ಸಭೆ ನಡೆಸಿ ಇಲಾಖೆಗಳ ನಡುವಿನ ಸಮನ್ವಯವನ್ನು ಮತ್ತಷ್ಟು ಬಲಪಡಿಸಿ, ಸಾರ್ವಜನಿಕರಿಗೆ ತ್ವರಿತ ಹಾಗೂ ಪರಿಣಾಮಕಾರಿ ಸೇವೆಗಳನ್ನು ಒದಗಿಸಲು ಎಲ್ಲರೂ ಕಾನೂನಿನ ಚೌಕಟ್ಟಿನಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಪಾರ್ಕ್‌ಗಳಿಗೆ ಮಕ್ಕಳು, ಹಿರಿಯ ನಾಗರೀಕರು, ಮಹಿಳೆಯರು, ಸಾರ್ವಜನಿಕರು ವಾಯುವಿಹಾರಕ್ಕೆ ಆಗಮಿಸುತ್ತಾರೆ. ಅವರಿಗೆ ನಡಿಗೆದಾರರ ಸ್ನೇಹಿ ಪಾರ್ಕ್ ಗಳನ್ನಾಗಿ ರೂಪಿಸಿ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಶೇ. 100 ರಷ್ಟು ಗುರಿ ಸಾಧನೆಗೆ ತ್ವರಿತ ಕ್ರಮ ವಹಿಸುವುದು ಈ ನಿಟ್ಟಿನಲ್ಲಿ ಅಗತ್ಯ ತರಬೇತಿ ಏರ್ಪಡಿಸಲು ಸೂಚನೆ ನೀಡಿದರು.

ಮಾರುಕಟ್ಟೆ ಸೇರಿದಂತೆ ಬಾಡಿಗೆ ಪಾವತಿ ಮಾಡದಮಳಿಗೆಗಳನ್ನು, ಸ್ವತ್ತುಗಳನ್ನುಖಾಲಿ ಮಾಡಿಸಿ ಬೀಗ ಹಾಕಿ. ತ್ಯಾಜ್ಯ ನಿರ್ವಹಣೆಗೆ ಸ್ವಚ್ಛತಾ ಸಿಬ್ಬಂದಿಗಳಿಗೆ ಹಾಜರಾತಿ ಕಡ್ಡಾ ಯಗೊಳಿಸಿ, ಪ್ರತಿ ದಿನ ಮನೆ ಮನೆ ತ್ಯಾಜ್ಯ ಸಂಗ್ರಹಣೆ ಶೇ. 100 ಪ್ರಗತಿ ಸಾಧಿಸಿ ಎಂದು ತಿಳಿಸಿದರು. ನಾವೆಲ್ಲರೂ ಸಾರ್ವಜನಿಕರ ಸೇವಕರಾಗಿದ್ದು, ಸಾರ್ವಜನಿಕರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಲು ಹಾಗೂ ಅವರ ಕುಂದುಕೊರತೆಗಳನ್ನು ತ್ವರಿತವಾಗಿ ಪರಿಹರಿಸಲು ಸೂಚಿಸಿದರು.

ಕಿರುಸುದ್ದಿ

ಇಂದಿನಿಂದ ಕಟೀಲು ಮೇಳಗಳ ಕಲಾವಿದರ ತಾಳಮದ್ದಲೆ

ಕಟೀಲು : ಶ್ರೀ ದುರ್ಗಾಪರಮೇಶ್ವರೀ ದೇವಳದ ಕಲಾ ಮಂಟಪದಲ್ಲಿ ಜೂ.8ರ ಸೋಮವಾರದಿಂದ ಜೂ.14ರ ಭಾನುವಾರದ ವರೆಗೆ ಸಂಜೆ 4.30ರಿಂದ ಕಟೀಲು ಮೇಳಗಳ ಆಸಕ್ತ ಕಲಾವಿದರಿಂದ ತಾಳಮದ್ದಲೆ ನಡೆಯಲಿದೆ. ಜೂ. 8ರಂದು ಸುಧನ್ವ, ಜೂ.9ರಂದು ವಾಲಿ, ಜೂ.10ರಂದು ಭರತ, ಜೂ.11ಕ್ಕೆ ಭೀಮ, ಜೂ.13ಕ್ಕೆ ಭೀಷ್ಮ, ಜೂ. 14ಕ್ಕೆ ರಾವಣ ಪ್ರಸಂಗಗಳ ತಾಳಮದ್ದಲೆಯನ್ನು ಕಟೀಲು ಮೇಳಗಳ ಕಲಾವಿದರು ನಡೆಸಿಕೊಡಲಿದ್ದಾರೆ.

ಸೋಮವಾರದ ತಾಳಮದ್ದಲೆಯಲ್ಲಿ ಪದ್ಯಾಣ ಗೋವಿಂದ ಭಟ್, ಸತೀಶ್ ಶೆಟ್ಟಿ ಬೋಂದೇಲ್, ಭಾಸ್ಕರ ಭಟ್, ರಾಮಪ್ರಕಾಶ್ ಕಲ್ಲೂರಾಯ ವಿಷ್ಣು ಶರ್ಮ, ರವಿ ಮುಂಡಾಜೆ, ನಾಗೇಶ್ ಆಚಾರ್ಯ, ಅಕ್ಷಯ ಕೋಡಿಕಲ್, ದಿನಕರ ಗೋಖಲೆ, ಗಣೇಶ್ ಚಂದ್ರಮಂಡಲ ಮೊದಲಾದವರು ಭಾಗವಹಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಸತಿ ರಹಿತ ಹಾಗೂ ನಿವೇಶನ ರಹಿತರ ಸಮೀಕ್ಷೆಗೆ ಅರ್ಜಿ ಆಹ್ವಾನ

ಮಂಗಳೂರು: ರಾಜೀವ್ ಗಾಂಧಿ ವಸತಿ ನಿಗಮದ ಸೂಚನೆಯಂತೆ ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)–2.0 ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ವಸತಿ ರಹಿತ ಹಾಗೂ ನಿವೇಶನ ರಹಿತರ ಸಮೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 30 ರ ವರೆಗೆ ಕಾಲಾವಕಾಶ ನೀಡಲಾಗಿದೆ. ಆದುದರಿಂದ ಈ ಯೋಜನೆಯಡಿ ಇದುವರೆಗೂ ಯಾವುದೇ ವಸತಿ ಯೋಜನೆಯಡಿ ಸೌಲಭ್ಯ ಪಡೆಯದೇ ಇರುವ ವಸತಿ ರಹಿತರು (ನಿವೇಶನ/ಹಳೆಯ ಕಚ್ಚಾಮನೆ ಉಳ್ಳವರು) ಹಾಗೂ ನಿವೇಶನರಹಿತ ಮಹಿಳೆಯರು, ಹಿರಿಯ ನಾಗರೀಕರು, ವಿಧುರರು, ವಿಶೇಷ ಚೇತನರು ಹಾಗೂ ಮಾಜಿ ಸೈನಿಕರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಫೋಟೋ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವೋಟರ್ ಐಡಿ, ಬ್ಯಾಂಕ್ ಪಾಸ್ ಪುಸ್ತಕ, ಕುಟುಂಬ ಸದಸ್ಯರ ಆಧಾರ್ ಕಾಡ್‌ಗಳು, ನಿವೇಶನ/ಹಳೆಯ ಕಚ್ಚಾಮನೆ ದಾಖಲೆಗಳೊಂದಿಗೆ ಸ್ವಂತವಾಗಿ/ಗ್ರಾಹಕ ಸೇವಾ ಕೇಂದ್ರಗಳಲ್ಲಿ/ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆನ್‌ಲೈನ್ ಮೂಲಕ ಜೂನ್ 30 ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಮಹಾನಗರಪಾಲಿಕೆಯ ನಗರ ಬಡತನ ನಿರ್ಮೂಲನಾ ಕೋಶ ವಿಭಾಗವನ್ನು ಸಂಪರ್ಕಿಸುವಂತೆ ಮಹಾನಗರಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಮೊಗ್ಗ ಏರ್‌ಪೋರ್ಟ್ ಪುನಶ್ಚೇತನಕ್ಕೆ ಪ್ರಯತ್ನ : ಸಂಸದ ಬಿ. ವೈ. ರಾಘವೇಂದ್ರ

ಬೈಂದೂರು: ಉಡಾನ್ ಯೋಜನೆಯಡಿ ಶಿವಮೊಗ್ಗ ಏರ್‌ಪೋರ್ಟ್ ಪುನಶ್ಚೇತನಕ್ಕೆ ಪ್ರಯತ್ನ ನಡೆಸಲಾಗುತ್ತಿದೆ ಎಂದು ಸಂಸದ ಬಿ. ವೈ. ರಾಘವೇಂದ್ರ ತಿಳಿಸಿದ್ದಾರೆ.



ಶಿವಮೊಗ್ಗ ವಿಮಾನ ನಿಲ್ದಾಣದಿಂದ ಇಂಡಿಗೋ ಹಾಗೂ ಸ್ಪೈಸ್‌ಜೆಟ್ ಸಂಸ್ಥೆಗಳ ವಿಮಾನ ಹಾರಾಟ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಸಂಸದರು, ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆ ಪುನರಾರಂಭಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ವಿಮಾನ ನಿಲ್ದಾಣವನ್ನು ಕೇಂದ್ರ ಸರ್ಕಾರದ ಉಡಾನ್ ಯೋಜನೆಯಡಿ ತರಲು ಪ್ರಯತ್ನಿಸಲಾಗುವುದು ಎಂದ ಅವರು, ಬೀದರ್ ಹಾಗೂ ಕಲಬುರಗಿ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಸುಮಾರು ರೂ.25 ಕೋಟಿ ವೆಚ್ಚದಲ್ಲಿ ಪುನರ್‌ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ.

ಅದೇ ಮಾದರಿಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೂ ನೆರವು ನೀಡುವಂತೆ ರಾಜ್ಯ ಸರ್ಕಾರವನ್ನು ಕೋರಲಾಗಿತ್ತು. ಆದರೆ ಈ ಸಂಬಂಧ ರಾಜ್ಯ ಕಾಂಗ್ರೆಸ್ ಸರ್ಕಾರ ಅಗತ್ಯ ಕ್ರಮ ಕೈಗೊಂಡಿಲ್ಲ ಎಂದು ಅವರು ಆರೋಪಿಸಿದರು. ಶಿವಮೊಗ್ಗ ವಿಮಾನ ನಿಲ್ದಾಣವನ್ನು ಉಡಾನ್ ಯೋಜನೆಯಡಿ ಸೇರಿಸುವಂತೆ ಈಗಾಗಲೇ ಮನವಿ ಮಾಡಲಾಗಿದೆ. ರಾಜ್ಯ ಸರ್ಕಾರವೂ ಈ ಕುರಿತು ಅರ್ಜಿ ಸಲ್ಲಿಸಿದ್ದು, ಅದನ್ನು ಅನುಸರಿಸಿ ವಿಮಾನ ಸೇವೆ ಪುನಶ್ಚೇತನಗೊಳಿಸಲು ಪ್ರಯತ್ನಿಸಲಾಗುವುದು ಎಂದು ಸಂಸದರು ತಿಳಿಸಿದರು.

ಹೆಬ್ರಿ ಶ್ರೀ ವಿಶ್ವಕರ್ಮ ಮಹಿಳಾ ಮಂಡಳಿಯಿಂದ ಸಾಮೂಹಿಕ ಶ್ರೀ ದುರ್ಗಾ ನಮಸ್ಕಾರ

ಹೆಬ್ರಿ: ಹೆಬ್ರಿ ಶ್ರೀ ವಿಶ್ವಕರ್ಮ ಮಹಿಳಾ ಮಂಡಳಿಯ ವತಿಯಿಂದ ಶ್ರೀ ವಿಶ್ವಕರ್ಮ ಸಮಾಜಸೇವಾ ಸಂಘ ಮತ್ತು ಯುವ ವೃಂದದ ಸಹಕಾರದಲ್ಲಿ ಸಂಘದ ಸಭಾಭವನದಲ್ಲಿ ಇತ್ತೀಚೆಗೆ ಸಾಮೂಹಿಕ ಶ್ರೀ ದುರ್ಗಾ ನಮಸ್ಕಾರ ಪೂಜೆ ನಡೆಯಿತು. ಯಳಗೋಳಿ ರವೀಂದ್ರ ಪುರೋಹಿತ್ ದಂಪತಿಯ ನೇತೃತ್ವದಲ್ಲಿ ಪೂಜೆ ನಡೆಯಿತು. ಪಾರಾಯಣ, ಶ್ರೀ ದುರ್ಗಾ ನಮಸ್ಕಾರ, ಮಹಾಪೂಜೆ, ಅನ್ನ ಸಂತರ್ಪಣೆ ನಡೆಯಿತು. ಹೆಬ್ರಿ ಶ್ರೀ ವಿಶ್ವಕರ್ಮ ಮಹಿಳಾ ಮಂಡಳಿಯ ಅಧ್ಯಕ್ಷೆ ಪ್ರೇಮ ಎಂ ವರಂಗ, ಪದಾಧಿಕಾರಿಗಳು, ಸದಸ್ಯರು, ಶ್ರೀ ವಿಶ್ವಕರ್ಮ ಸಮಾಜಸೇವಾ ಸಂಘ ಮತ್ತು ಯುವ ವೃಂದದ ಪದಾಧಿಕಾರಿಗಳು, ಸದಸ್ಯರು, ಪ್ರಮುಖರು, ವಿಶ್ವಕರ್ಮ ಸಮಾಜದ ಮುಖಂಡರು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

1.50 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ನೋಟ್ಸ್ ಪುಸ್ತಕ ವಿತರಣೆ

ಕುಂದಾಪುರ: ಗಂಗೊಳ್ಳಿಯ ಸರಸ್ವತಿ ವಿದ್ಯಾಲಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026– 27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 1ನೇ ತರಗತಿಯಿಂದ 7ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವ ಎಲ್ಲಾ ವಿದ್ಯಾರ್ಥಿಗಳಿಗೆ ದಾನಿಯೋರ್ವರು ಕೊಡುಗೆಯಾಗಿ ನೀಡಿದ ಸುಮಾರು 1.50 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಉಚಿತ ನೋಟ್ಸ್ ಪುಸ್ತಕಗಳನ್ನು ವಿತರಿಸಲಾಯಿತು. ಜಿ.ಎಸ್.ವಿ.ಎಸ್. ಅಸೋಸಿಯೇಷನ್ ಅಧ್ಯಕ್ಷ ಡಾ. ಕಾಶೀನಾಥ್ ಪಿ. ಪೈ, ಸಂಚಾಲಕ ಎನ್.ಸದಾಶಿವ ನಾಯಕ್ ಹಾಗೂ ಶಾಲಾ ಮುಖ್ಯೋಪಾಧ್ಯಾಯ ದೀಕ್ಷಿತ್ ಮೇಸ್ತ, ಶಾಲೆಯ ಶಿಕ್ಷಕರು, ಪೋಷಕರು ಮೊದಲಾದವರು ಉಪಸ್ಥಿತರಿದ್ದರು. ದೀಕ್ಷಿತ್ ಮೇಸ್ತ ಸ್ವಾಗತಿಸಿ, ಶಿಕ್ಷಕಿ ಮಾಲಾಶ್ರೀ ಖಾರ್ವಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಕೆಸಿಇಟಿ ಪರೀಕ್ಷೆಯಲ್ಲಿ ವಿಶಾಲ್ ಪಿ.ಗೆ 194ನೇ ರ್‍ಯಾಂಕ್– ಪುತ್ತೂರು ತಾಲೂಕಿಗೇ ಪ್ರಥಮ

ವಿವೇಕಾನಂದ ವಿದ್ಯಾರ್ಥಿಗಳ ಉನ್ನತ ಸಾಧನೆ

ಪುತ್ತೂರು : ವೃತ್ತಿಪರ ಕೋರ್ಸ್‌ಗಳಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) 2026ರಲ್ಲಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುನ್ನತ ಸಾಧನೆ ಮಾಡಿದ್ದಾರೆ. ವಿಶಾಲ್ ಪಿ. (ಪುತ್ತೂರಿನ ಪಡ್ನೂರಿನ ವಿಠ್ಠಲ ಪಿ. ಹಾಗೂ ರೇಷ್ಮಾ ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 194ನೇ ರ್‍ಯಾಂಕ್ ಗಳಿಸುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನಿಯಾಗಿದ್ದಾರೆ. ವಿಶಾಲ್‌ಇತರ ವಿಭಾಗಗಳಾದ ಬಿ.ಪಿ.ಒ.ದಲ್ಲಿ 558ನೇ ರ್‍ಯಾಂಕ್, ಬಿ.ಫಾರ್ಮ ಹಾಗೂ ಫಾರ್ಮ್‌ಡಿ.ಯಲ್ಲಿ 1167ನೇ ರ್‍ಯಾಂಕ್, ಮೋಕ್ಷಿತ್ ಪಿ.ಎಸ್. (ಶಾಂತಿಗೋಡಿನ ಪಿ.ಎಸ್. ಸತೀಶ್ ಹಾಗೂ ರೂಪಲತಾ ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 1563ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 2173ನೇ ರ್‍ಯಾಂಕ್, ಚೇತನ್ ಕೆ.ವಿ. (ಪುತ್ತೂರಿನ ಪಡ್ನೂರಿನ ವಿಶ್ವನಾಥಗೌಡ ಕೆ. ಹಾಗೂ ಗಿರಿಜಾ ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 1918ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 1758ನೇ ರ್‍ಯಾಂಕ್, ಅದಿತಿಯು. (ಬೆಂಗಳೂರಿನ ಉಮಾಶಂಕರ್ ಹಾಗೂ ಸುಮಾ ಕೆ.ಡಿ.ದಂಪತಿಯ ಪುತ್ರಿ) ಬಿ.ಪಿ.ಟಿ., ಡಿ.ಫಾರ್ಮ್, ಬಿ.ಎಸ್ಸಿ.ಎ.ಹೆಚ್.ಎಸ್.ನಲ್ಲಿ 291ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 292ನೇ ರ್‍ಯಾಂಕ್, ಫುಡ್ ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ, ಸಿರಿಕಲ್ಚರ್‌ನಲ್ಲಿ 543ನೇ ರ್‍ಯಾಂಕ್, ನ್ಯಾಚುರೋಪತಿ ಮತ್ತು ಯೋಗದಲ್ಲಿ 613ನೇ ರ್‍ಯಾಂಕ್, ವೆಟರ್ನರಿ ಸೈನ್ಸ್‌ನಲ್ಲಿ 1303ನೇ ರ್‍ಯಾಂಕ್, ನರ್ಸಿಂಗ್‌ನಲ್ಲಿ 1307ನೇ ರ್‍ಯಾಂಕ್ ಹಾಗೂ ಬಿ. ಫಾರ್ಮ ಮತ್ತು ಫಾರ್ಮ ಡಿ.ಯಲ್ಲಿ 1924ನೇ ರ್‍ಯಾಂಕ್, ಇಂಜಿನಿಯರಿಂಗ್‌ನಲ್ಲಿ 2695ನೇ ರ್‍ಯಾಂಕ್, ಹೇಮಂತ್‌ಕುಮಾರ್ ಕೆ.ವೈ. (ವಾಣಾಜೆಯಕೃಷ್ಣಪ್ಪಮೂಲ್ಯಹಾಗೂಯಶೋಧ ವಿ. ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 3030ನೇ ರ್‍ಯಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ, ಸಿರಿಕಲ್ಚರ್‌ನಲ್ಲಿ 3188ನೇ ರ್‍ಯಾಂಕ್, ಬಿಪಿಒದಲ್ಲಿ 1514ನೇ ರ್‍ಯಾಂಕ್, ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್.ಎಸ್.ನಲ್ಲಿ 4538ನೇ ರ್‍ಯಾಂಕ್,



ಡಿ. ಫಾರ್ಮದಲ್ಲಿ 4539ನೇ ರ್‍ಯಾಂಕ್, ಪ್ರಾಪ್ತಿ ಆಳ್ವ (ಬಂಟ್ವಾಳ ತಾಲೂಕಿನ ಮಣಿನಾಲ್ಕೂರಿನ ಪ್ರವೀಣ್ ಆಳ್ವ ಹಾಗೂ ಸವಿತಾ ದಂಪತಿಯ ಪುತ್ರಿ) ಇಂಜಿನಿಯರಿಂಗ್‌ನಲ್ಲಿ 3213ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 573ನೇ ರ್‍ಯಾಂಕ್, ಅಭಿರಾಮ್ ವಿ.ಭಟ್ (ಬಂಟ್ವಾಳ ತಾಲೂಕಿನ ನರಿಕೊಂಬಿನ ವಸಂತಕುಮಾರ್ ಎನ್. ಹಾಗೂ ಸುಲೋಚನಾ ಕುಮಾರಿ ಬಿ. ಕೆ. ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 3462ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 164ನೇ ರ್‍ಯಾಂಕ್, ಹಿತೇಶ್‌ಗೌಡ ಕೆ.ಕೆ. (ಬಂಟ್ವಾಳ ತಾಲೂಕಿನ ಸಾಲೆತ್ತೂರಿನ ಕಾರಾಜೆಯ ಕೃಷ್ಣಪ್ಪ ಗೌಡ ಕೆ. ಹಾಗೂ ಎಂ.ಎಸ್. ಮೀನಾ ದಂಪತಿಯ ಪುತ್ರ) ಇಂಜಿನಿಯರಿಂಗ್ ನಲ್ಲಿ 3537ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 2425ನೇ ರ್‍ಯಾಂಕ್, ಫುಡ್ ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ ಸಿರಿಕಲ್ಚರ್‌ನಲ್ಲಿ 2919ನೇ ರ್‍ಯಾಂಕ್, ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್.ಎಸ್.ನಲ್ಲಿ 3395ನೇ ರ್‍ಯಾಂಕ್, ಡಿ. ಫಾರ್ಮದಲ್ಲಿ 3396ನೇ ರಾಂಕ್, ಮಂಗಳಾಮೃತ ಕೆ.ಆರ್. (ಸುಳ್ಯ ತಾಲೂಕಿನ ಜಾಲ್ಸೂರಿನ ರವಿರಾಜ್ ಕೆ. ಹಾಗೂ ವಾಣಿಕುಮಾರಿ ಎ. ದಂಪತಿಯ ಪುತ್ರಿ) ಇಂಜಿನಿಯರಿಂಗ್‌ನಲ್ಲಿ 3710ನೇ ರಾಂಕ್, ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ. ಎ.ಹೆಚ್.ಎಸ್.ನಲ್ಲಿ 429ನೇ ರ್‍ಯಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ., ಸಿರಿಕಲ್ಚರ್‌ನಲ್ಲಿ 791ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 971ನೇ ರ್‍ಯಾಂಕ್, ನ್ಯಾಚುರೋಪತಿ ಮತ್ತು ಯೋಗದಲ್ಲಿ 1027ನೇ ರ್‍ಯಾಂಕ್, ವೆಟರ್ನರಿ ಸೈನ್ಸ್‌ನಲ್ಲಿ 2090ನೇ ರ್‍ಯಾಂಕ್, ನರ್ಸಿಂಗ್‌ನಲ್ಲಿ 2096ನೇ ರ್‍ಯಾಂಕ್, ಬಿ. ಫಾರ್ಮ ಮತ್ತು ಫಾರ್ಮ ಡಿ.ಯಲ್ಲಿ 3179ನೇ ರ್‍ಯಾಂಕ್, ಅಮೋಘ ಕೃಷ್ಣ ಕೆ. (ನೆಹರು ನಗರದ ಬಾಲಕೃಷ್ಣ ಭಟ್ ಕೆ. ಹಾಗೂ ಸುಮಿತ್ರಾ ಕೆ. ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 3729ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 2864ನೇ ರ್‍ಯಾಂಕ್, ತೀರ್ಥ ಶೆಟ್ಟಿ (ಬಂಟ್ವಾಳದ ಮಣಿನಾಲ್ಕೂರಿನ ರಾಜೇಶ್ ಶೆಟ್ಟಿ ಹಾಗೂ ಸುಮಲತಾ ದಂಪತಿಯ ಪುತ್ರಿ) ಇಂಜಿನಿಯರಿಂಗ್‌ನಲ್ಲಿ 4592ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 1084ನೇ ರ್‍ಯಾಂಕ್, ಚಿರಂಜನ್ ಎ. (ಬಂಟ್ವಾಳ ತಾಲೂಕಿನ ಕನ್ಯಾನದ ವಸಂತ ಹಾಗೂ ವನಿತಾ ದಂಪತಿಯ ಪುತ್ರ) ಇಂಜಿನಿಯರಿಂಗ್‌ನಲ್ಲಿ 5007ನೇ ರ್‍ಯಾಂಕ್, ಸಮೃದ್ಧಿ ಜೆ. ಶೆಟ್ಟಿ (ಪುತ್ತೂರಿನ ಜಗದೀಶ್ ಶೆಟ್ಟಿ ಎನ್. ಹಾಗೂ ಹರಿಣಾಕ್ಷಿ ಜೆ.ಶೆಟ್ಟಿ ದಂಪತಿಯ ಪುತ್ರಿ) ಬಿ.ಪಿ.ಒ. ದಲ್ಲಿ 359ನೇ ರ್‍ಯಾಂಕ್, ಸಪ್ತಮಿ ವೈ. ಪಿ. (ಮೈಸೂರಿನ ಹೂಟಗಳ್ಳಿಯ ಪೂಣಚ್ಚ ವೈ. ಪಿ. ಹಾಗೂ ಜಯಂತಿ ಕೆ.ಪಿ. ದಂಪತಿಯ ಪುತ್ರಿ) ಬಿ.ಪಿ.ಒ. ದಲ್ಲಿ 434ನೇ ರ್‍ಯಾಂಕ್, ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 934ನೇ ರ್‍ಯಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ ಸಿರಿಕಲ್ಚರ್‌ನಲ್ಲಿ 2539ನೇ ರ್‍ಯಾಂಕ್, ಶ್ರೀಜಾ (ಬಂಟ್ವಾಳ ತಾಲೂಕಿನ ಸದಾನಂದ ಹಾಗೂ ವನಿತಾ ದಂಪತಿಯ ಪುತ್ರಿ) ಬಿ.ಪಿ.ಒ. ದಲ್ಲಿ 796ನೇ ರ್‍ಯಾಂಕ್, ಪ್ರಸ್ತುತಿ ಪಿ. (ಕಾಸರಗೋಡಿನ ಉದಯ ಶಂಕರ ಭಟ್ ಪಿ. ಕೆ. ಹಾಗೂ ಶ್ರೀವಾಣಿ ಪಿ. ದಂಪತಿಯ ಪುತ್ರಿ) ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್ .ನಲ್ಲಿ 992ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 1798ನೇ ರ್‍ಯಾಂಕ್, ತನ್ಮಯಿ ವಾಗ್ಲೆ ಪಿ. (ಪುತ್ತೂರಿನ ತೆಂಕಿಲದ ಸತೀಶ್ ವಾಗ್ಲೆ ಕೆ. ಹಾಗೂ ಪೂರ್ಣಿಮಾ ಎಸ್. ದಂಪತಿಯ ಪುತ್ರಿ) ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 1047ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 2706ನೇ ರ್‍ಯಾಂಕ್, ಧನ್ವಿ ಆರ್.ಬಿ. (ಉರಿಮಜಲಿನ ರಾಘವಗೌಡ ಹಾಗೂ ಭಾರತಿ ದಂಪತಿಯ ಪುತ್ರಿ) ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 1060ನೇ ರ್‍ಯಾಂಕ್, ಫುಡ್ ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ., ಸಿರಿಕಲ್ಚರ್‌ನಲ್ಲಿ 1624ನೇ ರ್‍ಯಾಂಕ್, ಬಿ.ಪಿ.ಒ.ದಲ್ಲಿ 1636ನೇ ರ್‍ಯಾಂಕ್, ನ್ಯಾಚುರೋಪತಿ ಮತ್ತು ಯೋಗದಲ್ಲಿ 2347ನೇ ರ್‍ಯಾಂಕ್, ವೆಟರ್ನರಿ ಸೈನ್ಸ್‌ನಲ್ಲಿ 4039ನೇ ರ್‍ಯಾಂಕ್, ನರ್ಸಿಂಗ್‌ನಲ್ಲಿ 4048ನೇ ರ್‍ಯಾಂಕ್, ನಿಶಾಂತ್ ಕೆ.ವಿ. (ಬೆಂಗಳೂರಿನವೀರೇಂದ್ರ ಕೆ.ಆರ್. ಹಾಗೂ ಕುಮುದಿನಿ ವೈ. ಜೆ. ದಂಪತಿಯ ಪುತ್ರ) ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 1074ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 2614ನೇ ರ್‍ಯಾಂಕ್, ವಿದ್ಯಾಲಕ್ಷ್ಮೀ ಎಸ್.ಈ. (ಬಂಟ್ವಾಳದ ಕರೋಪಾಡಿಯ ಎಸ್. ಗೋಪಾಲಕೃಷ್ಣ ಹಾಗೂ ಅನಿತಾ ಎಸ್. ದಂಪತಿಯ ಪುತ್ರಿ) ಬಿ.ಪಿ.ಟಿ., ಡಿ.ಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 1128ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 2017ನೇ ರ್‍ಯಾಂಕ್, ಟೀನಾ ಬಿ.ಎಮ್. (ಕೊಡಗಿನ ಮಂದಪ್ಪ ಬಿ.ಎ. ಹಾಗೂ ಸ್ವಾತಿ ಬಿ.ಎಮ್. ದಂಪತಿಯ ಪುತ್ರಿ) ಬಿ.ಪಿ.ಟಿ., ಡಿಫಾರ್ಮ, ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 2234ನೇ ರ್‍ಯಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ., ಸಿರಿಕಲ್ಚರ್‌ನಲ್ಲಿ 4936ನೇ ರ್‍ಯಾಂಕ್, ಮಾನ್ಯತಾ (ಬಂಟ್ವಾಳದ ಕಲ್ಮಾರ್‌ನ ಯಶವಂತ ಪೂಜಾರಿ ಹಾಗೂ ಸರೋಜಿನಿ ಕೆ. ದಂಪತಿಯ ಪುತ್ರಿ) ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 2400ನೇ ರ್‍ಯಾಂಕ್, ಡಿ. ಫಾರ್ಮದಲ್ಲಿ 2401ನೇ ರ್‍ಯಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ ಸಿರಿಕಲ್ಚರ್‌ನಲ್ಲಿ 4300ನೇ ರ್‍ಯಾಂಕ್, ವೈಷ್ಣವಿ ಜಿ. (ಪುತ್ತೂರಿನ ಬನ್ನೂರಿನ ವಿನಾಯಕ ರಾಮ್ ಜಿ.ಪಿ. ಹಾಗೂ ಪ್ರಸನ್ನ ಪಿ.ದಂಪತಿಯ ಪುತ್ರಿ) ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್.ಎಸ್. ನಲ್ಲಿ 2744ನೇ ರ್‍ಯಾಂಕ್, ಡಿ. ಫಾರ್ಮದಲ್ಲಿ 2745ನೇ ರಾಂಕ್, ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ, ಸಿರಿಕಲ್ಚರ್‌ನಲ್ಲಿ 4506ನೇ ರ್‍ಯಾಂಕ್, ಹೆಚ್.ಕೆ.ತರುಣೇಶ್ (ಹಾಸನದ ಹೆಚ್ .ಡಿ. ಕೃಷ್ಣೇಗೌಡ ಹಾಗೂ ಹೆಚ್.ಎನ್.ಭಾರತಿ ದಂಪತಿಯ ಪುತ್ರ) ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್. ಎಸ್. ನಲ್ಲಿ 3426ನೇ ರ್‍ಯಾಂಕ್, ಡಿ. ಫಾರ್ಮದಲ್ಲಿ 3427ನೇ ರ್‍ಯಾಂಕ್, ಬಿ.ಪಿ.ಒ. ದಲ್ಲಿ 3384ನೇ ರ್‍ಯಾಂಕ್, ಸಮನ್ವಿತಾ ಎಮ್.ಎಸ್.(ಪುತ್ತೂರು ತಾಲೂಕಿನ ಪೆರ್ಲಂಪಾಡಿಯ ಶಿವಪ್ರಸಾದ್ ಎಂ. ಹಾಗೂ ಪ್ರಸನ್ನ ಎಂ.ಎಸ್. ದಂಪತಿಯ ಪುತ್ರಿ) ಫುಡ್‌ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ, ಸಿರಿಕಲ್ಚರ್‌ನಲ್ಲಿ 3946ನೇ ರ್‍ಯಾಂಕ್, ಪ್ರತ್ಯೂಷ್ ಆರ್.ವೈ. (ಪುತ್ತೂರಿನ ರಾಘವೇಂದ್ರ ಕೆ.ಆರ್. ಹಾಗೂ ಶಾಂತಿ ಕೆ. ಆರ್. ದಂಪತಿಯ ಪುತ್ರ) ಬಿ.ಪಿ.ಒ.ದಲ್ಲಿ 3455ನೇ ರ್‍ಯಾಂಕ್, ಅಜೇಯ ರಾಮ್ (ಉರಿಮಜಲಿನ ಕೇಶವಮೂರ್ತಿ ಸಿ. ಹಾಗೂ ಗೀತಾಲಕ್ಷ್ಮೀ ದಂಪತಿಯ ಪುತ್ರ) ಫುಡ್ ಸೈನ್ಸ್, ಅಗ್ರಿಕಲ್ಚರ್ ಬಿ.ಎಸ್ಸಿ, ಸಿರಿಕಲ್ಚರ್‌ನಲ್ಲಿ 4375ನೇ ರಾಂಕ್, ವೆಟರ್ನರಿಸೈನ್ಸ್‌ನಲ್ಲಿ 4938ನೇ ರ್‍ಯಾಂಕ್, ನರ್ಸಿಂಗ್‌ನಲ್ಲಿ 4951ನೇ ರ್‍ಯಾಂಕ್, ಅನಿರುದ್ಧ ಕೆ.ಎನ್. (ಕಾಸರಗೋಡಿನ ಮುಜುಂಗಾವಿನ ನಾರಾಯಣ ಜಿ.ಹೆಗ್ಡೆ ಹಾಗೂ ವಿದ್ಯಾದಂಪತಿಯ ಪುತ್ರ) ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್‌ಎಸ್. ನಲ್ಲಿ 3714ನೇ ರ್‍ಯಾಂಕ್, ಡಿ. ಫಾರ್ಮದಲ್ಲಿ 3715ನೇ ರ್‍ಯಾಂಕ್, ರಾಕೇಶ್ ಜಿ. (ಚಿತ್ರದುರ್ಗದ ಗುರುಮೂರ್ತಿ ಆರ್. ಹಾಗೂ ಸೌಭಾಗ್ಯ ಆರ್.ಜಿ. ದಂಪತಿಯ ಪುತ್ರ) ಬಿ.ಪಿ.ಟಿ., ಬಿ.ಎಸ್ಸಿ.ಎ.ಹೆಚ್. ಎಸ್. ನಲ್ಲಿ 3647ನೇ ರ್‍ಯಾಂಕ್, ಡಿಫಾರ್ಮದಲ್ಲಿ 3648ನೇ ರ್‍ಯಾಂಕ್ ಗಳಿಸಿದ್ದಾರೆ.

5000ದ ಒಳಗೆ ಸುಮಾರು 29 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದುಕೊಂಡು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇವರನ್ನು ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕ ಹಾಗೂ ಉಪ ನ್ಯಾಸಕೇತರ ವೃಂದದವರು ಅಭಿನಂದಿಸಿದ್ದಾರೆ.

ಹಸಿರು ಭವಿಷ್ಯಕ್ಕಾಗಿ ಸೈಕ್ಲಿಂಗ್ ಧ್ಯೇಯದೊಂದಿಗೆ ವಿಶ್ವ ಸೈಕಲ್ ದಿನ ಆಚರಣೆ

'ಸಂಡೇಸ್ ಆನ್ ಸೈಕಲ್' ಜಾಥಾ



ಮಂಗಳೂರು: ಒಂದೆಡೆ ಜಿಟಿ ಜಿಟಿ ಮಳೆ. ಈ ಮಳೆಯ ನಡುವೆಯೂ ನೂರಾರು ಮಂದಿ ಸೈಕ್ಲಿಸ್ಟ್‌ಗಳು ಭಾನುವಾರ ಮುಂಜಾನೆ ಅತ್ಯುತ್ಸಾಹದಿಂದ ಮಂಗಳೂರಿನ ಮಂಗಳಾ ಕ್ರೀಡಾಂಗಣದ ಬಳಿ ಸೇರಿದ್ದರು.

ವಿಶ್ವಸೈಕಲ್ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಸೈಕಲ್ ಜಾಥಾದಲ್ಲಿ ಪಾಲ್ಗೊಳ್ಳಲು ಅವರೆಲ್ಲರೂ ಬೆಳಕು ಹರಿಯುವ ಮುನ್ನಲೇ ಅಲ್ಲಿ ಬಂದು ಸೇರಿದ್ದರು. ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇರಾ ಯುವ ಭಾರತ, ದಕ್ಷಿಣಕನ್ನಡ ವತಿಯಿಂದ ವಿಶ್ವ ಸೈಕಲ್ ದಿನಾಚರಣೆ–2026ರ ಅಂಗವಾಗಿ 'ಹಸಿರು ಭವಿಷ್ಯಕ್ಕಾಗಿ ಸೈಕ್ಲಿಂಗ್' ಎಂಬ ಧ್ಯೇಯವಾಕ್ಯದೊಂದಿಗೆ ಭವ್ಯ 'ಸಂಡೇಸ್ ಆನ್ ಸೈಕಲ್' ಸೈಕಲ್ ಜಾಥಾವನ್ನು ಆಯೋಜಿಸಿತ್ತು.

ಈ ಕಾರ್ಯಕ್ರಮವನ್ನು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಕ್ಷಿಣ ಕನ್ನಡ, ಎನ್‌ಎಸ್‌ಎಸ್ ಮಂಗಳೂರು ವಿಶ್ವವಿದ್ಯಾಲಯ, ಫ್ರೀಡಿಂಗ್ ಸನ್, ಮಂಗಳೂರು ಸೈಕ್ಲಿಂಗ್ ಕ್ಲಬ್, ಸುರತ್ಕಲ್ ಬೀಚ್ ರನ್ನರ್ಸ್ ಹಾಗೂ ವಿ ಆರ್ ಸೈಕ್ಲಿಂಗ್ ಕ್ಲಬ್ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು. ಯುವಜನರಲ್ಲಿ ಆರೋಗ್ಯಕರ ಜೀವನಶೈಲಿ, ದೈಹಿಕ ಕ್ಷಮತೆ, ಪರಿಸರ ಸಂರಕ್ಷಣೆ ಹಾಗೂ ಯುವ ಸಬಲೀಕರಣದ ಕುರಿತು ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.

ನೂರಾರು ಮಂದಿ ಭಾಗಿ

ಸೈಕಲ್ ಜಾಥಾದಲ್ಲಿ ಮಕ್ಕಳು, ಯುವಕರು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಸೇರಿದಂತೆ ನೂರಾರು ಮಂದಿ ಉತ್ಸಾಹದಿಂದ ಭಾಗವಹಿಸಿದರು. ಪರಿಸರ ಸ್ನೇಹಿ ಜೀವನಶೈಲಿ ಹಾಗೂ ಸುಸ್ಥಿರ ಭವಿಷ್ಯದ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಈ ಜಾಥಾ ಆಯೋಜಿಸಲಾಗಿತ್ತು. ಮಂಗಳಾ ಕ್ರೀಡಾಂಗಣದಿಂದ ಆರಂಭವಾದ ಜಾಥಾ ನಗರದ ಪ್ರಮುಖ ಪ್ರದೇಶಗಳಾದ ಕಾರ್ ಸ್ಟ್ರೀಟ್, ಕ್ಲಾಕ್ ಟವರ್, ಪಿವಿಎಸ್ ಸರ್ಕಲ್, ಲಾಲ್ ಬಾಗ್ ಹಾಗೂ ಲೇಡಿ ಹಿಲ್ ಮಾರ್ಗವಾಗಿ ಸಂಚರಿಸಿ ಮತ್ತೆ ಮಂಗಳಾ ಕ್ರೀಡಾಂಗಣದಲ್ಲಿ ಸಮಾಪ್ತಿಗೊಂಡಿತು.

ಯುವ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜಾ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಆರೋಗ್ಯಕರ ಜೀವನಕ್ಕಾಗಿ ಸೈಕ್ಲಿಂಗ್ ಅತ್ಯಂತ ಪರಿಣಾಮಕಾರಿ ಸಾಧನವಾಗಿದ್ದು, ಪರಿಸರ ಸಂರಕ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸುತ್ತದೆ ಎಂದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೇರಾ ಯುವಭಾರತ್ ಇದರ ಉಪನಿರ್ದೇಶಕ ಉಲ್ಲಾಸ್ ಕೆ.ಟಿ.ಕೆ ಅವರು ಈ ಅರ್ಥಪೂರ್ಣ ಕಾರ್ಯಕ್ರಮವನ್ನು ಶ್ಲಾಘಿಸಿದರಲ್ಲದೆ ಆರೋಗ್ಯವಂತ ಹಾಗೂ ಸದೃಢ ರಾಷ್ಟ್ರ ನಿರ್ಮಾಣದಲ್ಲಿ ಸೈಕ್ಲಿಂಗ್ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಜಗದೀಶ್ ಕೆ., ಶೇಷಪ್ಪ ಅಮೀನ್, ಚಿತ್ತರಂಜನ್ ಬೋಳಾರ್ ದಿನೇಶ್ ಅತ್ತಾವರ, ಅನಿಲ್ ಶೇಟ್, ಹರ್ನಿಶ್, ಹಾರ್ದಿಕ್ ರೈ ಮುಂತಾದವರು ಭಾಗವಹಿಸಿದ್ದರು.

ಕಾಸರಗೋಡು ಬಿಜೆಪಿ ಒಬಿಸಿ ಮೋರ್ಚಾದಿಂದ ಬಿರ್ಸಾ ಮುಂಡಾ ಪ್ರಶಸ್ತಿ ವಿಜೇತ ಸಂಜೀವ ಪುಲ್ಲೂರುಗೆ ಗೌರವ

ಕಾಸರಗೋಡು: 19ನೇ ಶತಮಾನದಲ್ಲಿ ಭಾರತದಲ್ಲಿ ಬ್ರಿಟಿಷ್ ವಸಹಾತಿನ ದಬ್ಬಾಳಿಕೆಯ ತುಳಿತಕ್ಕೆ ಬಲಿಯಾಗುತ್ತಿದ್ದ ಆದಿವಾಸಿ ಬುಡಕಟ್ಟು ಜನಾಂಗದ ರಕ್ಷಣೆಗೋಸ್ಕರ ಹೋರಾಡಿ ಸೆರೆಮನೆವಾಸವನ್ನು ಅನುಭವಿಸಿ ವೀರ ಮೃತ್ಯು ಹೊಂದಿದ ಆದಿವಾಸಿ ಜನಾಂಗದ ಧೀರ ಸ್ವಾತಂತ್ರ್ಯ ಹೋರಾಟಗಾರ ಭಗವಾನ್ ಬಿರ್ಸಾ ಮುಂಡಾರ ಹೆಸರಲ್ಲಿ ಭಾರತ ಸರಕಾರ ನೀಡುವ ಬಿರ್ಸಾ ಮುಂಡಾ ಅನ್ಸಾಂಗ್ ಹೀರೋ ಪ್ರಶಸ್ತಿ ಗಳಿಸಿರುವ ಸಂಜೀವ ಪುಲ್ಲೂರು ಅವರನ್ನು ಕಾಸರಗೋಡು ಬಿಜೆಪಿ ಒಬಿಸಿ ಮೋರ್ಚಾ ವತಿಯಿಂದ ಗೌರವಿಸಲಾಯಿತು.

ಕೇರಳದ ಅತ್ಯಂತ ದುರ್ಬಲ ವಿಭಾಗಕ್ಕೊಳಪಟ್ಟ ಕೊರಗ ಜನಾಂಗದ ಅಭಿವೃದ್ಧಿ ಮತ್ತು ಸಾಂಪ್ರದಾಯಕ ಕಲಾ ಸಂಸ್ಕೃತಿಯ ರಕ್ಷಣೆಗಾಗಿ ಅವಿರತ ಶ್ರಮಿಸುತ್ತಿರುವ ಸಂಜೀವ ಪುಲ್ಲೂರು ಅವರು ಕಾಸರಗೋಡು ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾಗಿ ರಾಜಕೀಯ ಸೇವೆ ಸಲ್ಲಿಸುತ್ತಿದ್ದಾರೆ.



ಅವರ ಸಾಧನೆಯನ್ನು ಗುರುತಿಸಿ ನೀಡಲಾದ ಪ್ರಶಸ್ತಿಯು ಕಾಸರಗೋಡಿನವರಿಗೆ ಹೆಮ್ಮೆಯ ವಿಷಯವಾಗಿದೆ ಎಂದು ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಮುರಳಿಕುಮಾರ್ ಮಧೂರು ಅಭಿಪ್ರಾಯಪಟ್ಟಿದ್ದಾರೆ.

ಕಾರ್ಯಕ್ರಮದಲ್ಲಿ ಬಿಜೆಪಿ ಒಬಿಸಿ ಮೋರ್ಚಾ ಕಾಸರಗೋಡು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಯಾನಂದ ಕುಲಾಲ್, ಬಿಜೆಪಿ ಕಾಸರಗೋಡು ಜಿಲ್ಲಾ ಉಪಾಧ್ಯಕ್ಷ ಮುರಳೀಧರ ಯಾದವ್, ಬಿಜೆಪಿ ಒಬಿಸಿ ಮೋರ್ಚಾ ಕಾರ್ಯದರ್ಶಿ ದಿನೇಶ್ ಚೆರುಗೋಳಿ, ಬಿಜೆಪಿ ಒಬಿಸಿ ಮೋರ್ಚಾ ಕಾಸರಗೋಡು ಮಂಡಲಾಧ್ಯಕ್ಷ ಅಶೋಕ್ ಚೆಟ್ಟಿಯಾರ್, ಒಬಿಸಿ ಮೋರ್ಚಾ ಕುಂಬಳೆ ಮಂಡಲಾಧ್ಯಕ್ಷ ಮಹೇಶ್ ಪುಣಿಯೂರ್ ಮುಂತಾದವರು ಭಾಗವಹಿಸಿದ್ದರು.

ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನ

ತುಳಸೀ ಅರ್ಚನೆ, ಕುಂಕುಮಾರ್ಚನೆ

ಕುಂದಾಪುರ : ಕುಂದಾಪುರದ ಹಿರಿಯ ಸಿವಿಲ್ ನ್ಯಾಯಾಧೀಶ ಕುಮಾರ್ ಅವರು ಕುಟುಂಬ ಸಮೇತರಾಗಿ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿದರು. ದೇವರ ದರ್ಶನ ಹಾಗೂ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಸ್ವಾಮೀಜಿದ್ವಯರ ಪುತ್ಥಳಿಯ ದರ್ಶನ ಪಡೆದ ಅವರು, ಪುರುಷೋತ್ತಮ ಮಾಸದ ಅಂಗವಾಗಿ ದೇವಸ್ಥಾನದಲ್ಲಿ ನಡೆಯುತ್ತಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವ ಕಾರ್ಯಕ್ರಮವನ್ನು ವೀಕ್ಷಿಸಿ ಪ್ರಸಾದ ಸ್ವೀಕರಿಸಿದರು. ದೇವಳದ ಪ್ರಧಾನ ಅರ್ಚಕ ಎಸ್. ವೆಂಕಟರಮಣ ಆಚಾರ್ಯ ಮತ್ತು ಜಿ.ಶಂಕರ ಕೆ.ಆಚಾರ್ಯ ಅವರು ನ್ಯಾಯಾಧೀಶರನ್ನು ಪ್ರಸಾದ ನೀಡಿ ಗೌರವಿಸಿದರು. ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಸಾಮೂಹಿಕ ತುಳಸಿ ಅರ್ಚನೆ

ಪುರುಷೋತ್ತಮ ಮಾಸದ ಅಂಗವಾಗಿ ನಡೆಯುತ್ತಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವದ ಸಂದರ್ಭ ದೇವರ ಪ್ರೀತ್ಯರ್ಥ ಸಮಾಜ ಅಭಿವೃದ್ಧಿ ಹಾಗೂ ಲೋಕ ಕಲ್ಯಾಣಾರ್ಥ ಸಾಮೂಹಿಕ ತುಳಸಿ ಅರ್ಚನೆ ಮತ್ತು ಶ್ರೀದೇವಿ ಭೂದೇವಿ ಪ್ರೀತ್ಯರ್ಥ ಸಾಮೂಹಿಕ ಕುಂಕುಮಾರ್ಚನೆ ಕಾರ್ಯಕ್ರಮ ಭಾನುವಾರ



ನಡೆಯಿತು. ದೇವಳದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ ಮತ್ತು ತಾಂತ್ರಿಕ ಜಿ.ವಸಂತ ಭಟ್ ನೇತೃತ್ವದಲ್ಲಿ ತುಳಸಿ ಅರ್ಚನೆಯ ಮತ್ತು ಕುಂಕುಮಾರ್ಚನೆಯ ಧಾರ್ಮಿಕ ವಿಧಿ–ವಿಧಾನಗಳು ಸಂಪನ್ನಗೊಂಡಿತು. ಮಧ್ಯಾಹ್ನ ದೇವರಿಗೆ ಮಹಾಪೂಜೆ, ಮಹಾಸಮಾರಾಧನೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯಿತು. ದೇವಳದ ಆಡಳಿತ ಮಂಡಳಿ ಸದಸ್ಯರು, ಅರ್ಚಕರು, ಪುರೋಹಿತರು, ಮಹಿಳಾ ಮಂಡಳಿ ಸದಸ್ಯರು, ಊರಿನ ಹತ್ತು ಸಮಸ್ತರು, ಸೇವಾದಾರರು, ಊರ ಪರ ಊರಿನ ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಕೆ.ಸಿ.ಇ.ಟಿ ಫಲಿತಾಂಶ : ಜ್ಞಾನಸುಧಾದ ಎನ್. ಶ್ರೇಯಸ್‌ಗೆ ನಾಲ್ಕು ವಿಭಾಗಗಳಲ್ಲಿ ನಾಲ್ಕನೇ ರ್‍ಯಾಂಕ್

ಇಂಜಿನಿಯರಿಂಗ್‌ನಲ್ಲಿ 25 ವಿದ್ಯಾರ್ಥಿಗಳಿಗೆ 500ರ ಒಳಗಿನ ರ್‍ಯಾಂಕ್

ಕಾರ್ಕಳ: ಇಂಜಿನಿಯರಿಂಗ್ ಹಾಗೂ ಇತರ ವೃತ್ತಿಪರ ಕೋರ್ಸುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪ್ರವೇಶ ಪರೀಕ್ಷೆಯ ಫಲಿತಾಂಶದಲ್ಲಿ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ಇಂಜಿನಿಯರಿಂಗ್ ವಿಭಾಗದಲ್ಲಿ 25 ವಿದ್ಯಾರ್ಥಿಗಳು 500ರೊಳಗಿನ ರ್‍ಯಾಂಕ್, 87 ವಿದ್ಯಾರ್ಥಿಗಳು 2 ಸಾವಿರದೊಳಗಿನ ರ್‍ಯಾಂಕ್ ಹಾಗೂ 201 ವಿದ್ಯಾರ್ಥಿಗಳು ಐದು ಸಾವಿರ ದೊಳಗಿನ ರ್‍ಯಾಂಕ್ ಗಳಿಸಿದ್ದಾರೆ. ಜೊತೆಗೆ 28 ವಿದ್ಯಾರ್ಥಿಗಳು ಇಂಜಿನಿಯರಿಂಗ್‌ಯೇತರ ವಿಭಾಗಗಳಲ್ಲಿ ನೂರರೊಳಗಿನ ರ್‍ಯಾಂಕ್ ಪಡೆದಿದ್ದಾರೆ.

ಡಿ–ಫಾರ್ಮಾ, ಫಿಸಿಯೋಥೆರಪಿ, ಪ್ರಾಸ್ತೆಟಿಕ್ಸ್, ಆರ್ಥೋಟಿಕ್ಸ್ ಮತ್ತು ಅಲೈಡ್ ಹೆಲ್ತ್ ಸೈನ್ಸಸ್ ವಿಭಾಗಗಳಲ್ಲಿ ಸಂಸ್ಥೆಯ ಎನ್. ಶ್ರೇಯಸ್ 4ನೇ ರ್‍ಯಾಂಕ್ ಪಡೆದಿದ್ದಾರೆ.



ಇಂಜಿನಿಯರಿಂಗ್ ವಿಭಾಗದಲ್ಲಿ ಸೋಹನ್ ಗಿರಿರಡ್ಡಿ 25ನೇ ರ್‍ಯಾಂಕ್, ನಿಶಾನ್ ಎನ್. ಸಾಲ್ಯಾನ್ 76ನೇ ರ್‍ಯಾಂಕ್, ಸೃಜನ್ ಎನ್. 94ನೇ ರ್‍ಯಾಂಕ್, ಅಶ್ವಿನ್ ವಿ. ಶೆಟ್ಟಿ 105ನೇ ರ್‍ಯಾಂಕ್, ಎನ್. ಎಸ್ ವಿವೇಕ್ 109ನೇ ರ್‍ಯಾಂಕ್, ಕನಿಷ್ಕ ಎಸ್. ಅಮೀನ್ 118ನೇ ರ್‍ಯಾಂಕ್, ಮಾಧವ ಕಾಮತ್ 127ನೇ ರ್‍ಯಾಂಕ್, ಮೇಧಾಂಶ್‌ಎನ್.ಬಿ. 148ನೇ ರ್‍ಯಾಂಕ್, ಅನಿರುದ್ಧ್ ರವಿರಾಜ್ ಉಡುಪ 166ನೇ ರ್‍ಯಾಂಕ್, ಜೀವನ್ ಎನ್ ಬಿ 223ನೇ ರ್‍ಯಾಂಕ್, ಅಭಿಷೇಕ್ ಡಿ.ಜಿ. 225ನೇ ರ್‍ಯಾಂಕ್, ವೈಷ್ಣವಿ ಕುಲಕರ್ಣಿ 250ನೇ ರ್‍ಯಾಂಕ್, ಸುಹಾಸ್ ಶೆಣೈ 252ನೇ ರ್‍ಯಾಂಕ್, ಮೋದಕ್ ಪಿ ಆರ್ 254ನೇ ರ್‍ಯಾಂಕ್, ಸಮ್ಯುದ್ ದಿನೇಶ್ ನಾಯಕ್ 277ನೇ ರ್‍ಯಾಂಕ್, ಜ್ಞಾನದೀಪ್ ವಿ ಶೆಟ್ಟಿ 304ನೇ ರ್‍ಯಾಂಕ್, ಅನಿಕೇತ್ ರವಿರಾಜ್‌ಉಡುಪ 313ನೇ ರ್‍ಯಾಂಕ್, ಭರತ್‌ರೆಡ್ಡಿ 321ನೇ ರ್‍ಯಾಂಕ್, ಸಿದ್ಧಾಂತ್ ನಾಯ್ಕಬಾ ಜಿ 322ನೇ ರ್‍ಯಾಂಕ್, ಚಿನ್ಮಯಿ ಭಟ್ 353ನೇ ರ್‍ಯಾಂಕ್, ಸೌಖ್ಯಿತಾ ಸಿ ಎಂ 371ನೇ ರ್‍ಯಾಂಕ್, ಎಸ್. ಅಮೇಯ ಉತ್ಪಾಲ್ 391ನೇ ರ್‍ಯಾಂಕ್, ವರುಣ್‌ಜೆ 405ನೇ ರ್‍ಯಾಂಕ್, ಈಶಾಂತ್ ಪಾಟೀಲ್ ಜಿ 428ನೇ ರ್‍ಯಾಂಕ್, ಪ್ರಣವ್ ಎಂ ಯು 487ನೇ ರ್‍ಯಾಂಕ್ ಗಳಿಸಿದ್ದಾರೆ.

ಕೆ.ಸಿ.ಇ.ಟಿ–2026ರ ಸಾಧಕ ವಿದ್ಯಾರ್ಥಿಗಳನ್ನು ಹಾಗೂ ಸಾಧನೆಗೆ ಬೆನ್ನೆಲುಬಾಗಿ ನಿಂತ ಜ್ಞಾನಸುಧಾ ಎಂಟ್ರನ್ಸ್ ಅಕಾಡೆಮಿಯನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ ಹಾಗೂ ಜ್ಞಾನಸುಧಾ ಪರಿವಾರ ಅಭಿನಂದಿಸಿದೆ.

ಕಿರುಸುದ್ದಿ

ರಿವ್ಯೂ ಬಳಕೆಯಲ್ಲಿ ಎಡವಿದ ಅಫ್ಘಾನ್, ರಾಹುಲ್ ಅದೃಷ್ಟ



• ಮುಲ್ಲಾನ್‌ಪುರ್: ಮೊದಲ ದಿನದಾಟದಲ್ಲಿ ಕೆಎಲ್ ರಾಹುಲ್ ಎರಡು ಬಾರಿ ಅದೃಷ್ಟದೇವತೆ ಕೈಹಿಡಿದ ಬಳಿಕ ಶತಕ ದಾಖಲಿಸಿದ್ದರು. ಜಿಯಾವುರ್ ರೆಹಮಾನ್ ಎಸೆದಿದ್ದ 11ನೇ ಓವರ್‌ನಲ್ಲಿ ರಾಹುಲ್ ಕ್ಯಾಚ್‌ಗೆ ಪ್ರವಾಸಿಗರು ಬಲವಾದ ಮನವಿ ಮಾಡಿದ್ದರು. ಆದರೆ ಅಂಪೈರ್ ತಿರಸ್ಕರಿಸಿದ್ದರು. ಈ ವೇಳೆ ಮೌನ ತಾಳಿದ್ದ ರಾಹುಲ್ ಪ್ರತಿಕ್ರಿಯಿಸಿಲ್ಲ. ಆದರೆ ಕೈಯಲ್ಲಿದ್ದ ಬ್ಯಾಟ್‌ನ ಹ್ಯಾಂಡಲ್ ಅಲ್ಲಾಡುತ್ತಿದೆ ಎಂಬ ರೀತಿ ಎರಡು ಬಾರಿ ಅಲುಗಾಡಿಸಿದ್ದರು. ಸ್ಲಿಪ್‌ನಲ್ಲಿದ್ದ ಗುರ್ಬಾಜ್ ತಮ್ಮ ನಾಯಕ ಶಾಹಿದಿಗೆ ಡಿಆರ್‌ಎಸ್‌ಗೆ ಒತ್ತಾಯಿಸಿದರೂ ನಾಯಕ ನಿರಾಕರಿಸಿದ್ದರು. 16ನೇ ಓವರ್‌ನಲ್ಲಿ ಪ್ಯಾಡ್‌ಗೆ ಚೆಂಡು ತಗುಲಿದ್ದರೂ ಅಫ್ಘಾನಿಸ್ತಾನ ಆಟಗಾರರು ಎಲ್‌ಬಿಡಬ್ಲ್ಯು ಮನವಿ ಮಾಡಿಲ್ಲ. ಆದರೆ ಹಾಕ್‌ಐ ಪ್ರಕಾರ ಚೆಂಡು ಸ್ಟಂಪ್‌ಗೆ ತಗುಲುವ ಸಾಧ್ಯತೆಯಿತ್ತು. ಪಂದ್ಯದಲ್ಲಿ ಅಫ್ಘಾನ್ ರಿವ್ಯೂ ಬಳಸಿಕೊಳ್ಳುವಲ್ಲಿ ಎಡವಿದ್ದು, ರಾಹುಲ್ ಅದೃಷ್ಟ ಖುಲಾಯಿಸಿತ್ತು.

ಮೊದಲ ಓವರ್‌ನಲ್ಲೇ ವಿಕೆಟ್: ಮಾನವ್ ವಿನೂತನ ದಾಖಲೆ!

• ಮುಲ್ಲಾನ್‌ಪುರ್: ಪದಾರ್ಪಣಾ ಟೆಸ್ಟ್ ಆಡುತ್ತಿರುವ ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ಮೊದಲ ಓವರ್‌ನಲ್ಲಿಯೇ ವಿಕೆಟ್ ಕಬಳಿಸುವ ಮೂಲಕ ವಿನೂತನ ದಾಖಲೆಯನ್ನು ಬರೆದಿದ್ದಾರೆ. ಅಫ್ಘಾನಿಸ್ತಾನದ ಆರಂಭಿಕ ಬ್ಯಾಟರ್ ಅಬ್ದುಲ್ ಮಲಿಕ್ ಹೊಡೆದ ಚೆಂಡು ಮೊಹಮ್ಮದ್ ಸಿರಾಜ್ ಕೈ ಸೇರಿತ್ತು. ಸುಥಾರ್ ಅವರು ಟಿನು ಯೊಹಾನನ್ ಬಳಿಕ ಈ ದಾಖಲೆ ಬರೆದ ಮೊದಲ ಭಾರತೀಯ ಎನಿಸಿಕೊಂಡಿದ್ದಾರೆ. ಮೋಂಟು ಬ್ಯಾನರ್ಜಿ (1948ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ) ಈ ಸಾಧನೆಗೈದ ಮೊದಲ ಭಾರತೀಯರಾಗಿದ್ದರು. ನಂತರ ಮನೋಹರ್ (1958ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ), ವಾಮನ್ ಕುಮಾರ್ (1961ರಲ್ಲಿ ಪಾಕಿಸ್ತಾನ ವಿರುದ್ಧ), ಚೇತನ್ ಶರ್ಮಾ (1984ರಲ್ಲಿ ಪಾಕಿಸ್ತಾನ ವಿರುದ್ಧ), ಡಬ್ಲ್ಯುವಿ ರಾಮನ್ (1988ರಲ್ಲಿ ವೆಸ್ಟ್ ಇಂಡೀಸ್), ನೀಲೇಶ್ ಕುಲಕರ್ಣಿ (1997ರಲ್ಲಿ ಶ್ರೀಲಂಕಾ ವಿರುದ್ಧ), ಟಿನು ಯೊಹಾನನ್ (2001ರಲ್ಲಿ ಇಂಗ್ಲೆಂಡ್ ವಿರುದ್ಧ) ಈ ಸಾಧನೆಗೈದಿದ್ದಾರೆ.

ಟಿ20 ವಿಶ್ವಕಪ್: ತಂಡಗಳಿಗೆ ಶುಭಕೋರಿದ ಐಸಿಸಿ ಅಧ್ಯಕ್ಷ

• ದುಬೈ: ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಸ್ಪರ್ಧಿಸುವ ಎಲ್ಲಾ 12 ತಂಡಗಳಿಗೂ ಐಸಿಸಿ ಅಧ್ಯಕ್ಷ ಜಯ್ ಶಾ ಭಾನುವಾರ ಶುಭಕೋರಿದ್ದಾರೆ. ಇಂಗ್ಲೆಂಡ್ ಮತ್ತು ವೇಲ್ಸ್‌ನ ಐತಿಹಾಸಿಕ ಕ್ರೀಡಾಂಗಣದಲ್ಲಿ ಆಯೋಜಿಸುವ ವಿಶ್ವಕಪ್ ದಾಖಲೆಯ ವೀಕ್ಷಣೆಯನ್ನು ಸಾಧಿಸಲಿದ್ದು, ವಿಶಾಲವಾದ ಜಾಗತಿಕ ನೇರಪ್ರಸಾರ ಮಾಡಲಾಗುವುದು. ಲಕ್ಷಗಟ್ಟಲೆ ಅಭಿಮಾನಿಗಳು ಮತ್ತು ವಿಶ್ವದ ಶ್ರೇಷ್ಠ ಕ್ರೀಡಾಪಟುಗಳನ್ನು ಒಂದುಗೂಡಿಸುವ ಪಂದ್ಯಾವಳಿ ಇದಾಗಿರಲಿದೆ ಎಂದು ಜಯ್ ಶಾ ಭರವಸೆ ನೀಡಿದ್ದಾರೆ. ಭಾನುವಾರ ಲಂಡನ್‌ನಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸಹಿತ ಎಲ್ಲಾ 12 ನಾಯಕಿಯರು ವಿಶ್ವಕಪ್ ಟ್ರೋಫಿಯೊಂದಿಗೆ ಪೋಸ್ ನೀಡಿದರು.

ಅಥ್ಲೆಟಿಕ್ಸ್: ಶೈಲಿಗೆ ಸ್ವರ್ಣ, ಅನಿಮೇಶ್, ತೇಜಸ್‌ಗೆ ಬೆಳ್ಳಿ

• ನ್ಯೂ ತೈಪೆ: ತೈವಾನ್‌ನ ನ್ಯೂ ತೈಪೆ ಸಿಟಿ ಅಥ್ಲೆಟಿಕ್ಸ್ ಓಪನ್ 2026ರಲ್ಲಿ ಭಾರತದ ಲಾಂಗ್ ಜಂಪರ್ ಶೈಲಿ ಸಿಂಗ್ ಸ್ವರ್ಣ ಗೆದ್ದರೆ, ಪುರುಷರ 200 ಮೀ. ಓಟದಲ್ಲಿ ಅನಿಮೇಶ್ ಕುಜೂರ್ ರಜತ ಪದಕ ಗೆದ್ದಿದ್ದಾರೆ. ಇಲ್ಲಿ ನಡೆದ ಮಹಿಳೆಯರ ಉದ್ದ ಜಿಗಿತ ಸ್ಪರ್ಧೆಯಲ್ಲಿ ಶೈಲಿ 6.24 ಮೀ. ಜಿಗಿತದೊಂದಿಗೆ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ. ಪುರುಷರ 200 ಮೀ. ಓಟದಲ್ಲಿ 20.47 ಸೆಕೆಂಡುಗಳಲ್ಲಿ ಗುರಿ ಮುಟ್ಟುವ ಮೂಲಕ ಅನಿಮೇಶ್ ಬೆಳ್ಳಿ ಪದಕ ಗೆದ್ದರು. ಪುರುಷರ 110 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಭಾರತದ ತೇಜಸ್ ಶಿರ್ಸೆ 13.58 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಬೆಳ್ಳಿ ಪದಕ ಗೆದ್ದರು.







ಮಹಿಳೆಯರ ರಿಲೇ ಸ್ವರ್ಣ: ಮಹಿಳೆಯರ 100 ಮೀ. ರಿಲೇ ಸ್ಪರ್ಧೆಯಲ್ಲಿ ಭಾರತ ತಂಡ 44.07 ಸೆಕೆಂಡಿನಲ್ಲಿ ಕ್ರಮಿಸಿ ಸ್ವರ್ಣ ಪದಕ ಗೆದ್ದುಕೊಂಡಿದೆ.

ಬ್ಯಾಟಿಂಗ್‌ನಲ್ಲೂ ಮಾನವ್ 28 ರನ್ ಕೊಡುಗೆ | ಸುಂದರ್ ಜತೆ 54 ರನ್ ಜೊತೆಯಾಟ

ಸುಥಾರ್ ವಾರ್; ಆಫ್ಘಾನ್ ಮೇಲೆ ಹಿಡಿತ

• ಮುಲ್ಲಾನ್‌ಪುರ್: ತಮ್ಮ ಚೊಚ್ಚಲ ಟೆಸ್ಟ್ ಪಂದ್ಯದಲ್ಲೇ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಅದ್ಭುತ ಪ್ರದರ್ಶನ ನೀಡಿ ಮೂರು ವಿಕೆಟ್ ಕಬಳಿಸಿದ ಪರಿಣಾಮ, ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ನ ಎರಡನೇ ದಿನದಾಟದ ಅಂತ್ಯಕ್ಕೆ ಭಾರತ ಸಂಪೂರ್ಣ ಮೇಲುಗೈ ಸಾಧಿಸಿದೆ.

ತೀವ್ರ ಬಿಸಿಲಿನ ನಡುವೆ ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು 564 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದಾಗ ಡಿಕ್ಲೇರ್ ಮಾಡಿತು. ವಾಷಿಂಗ್ಟನ್ ಸುಂದರ್ ಒತ್ತಡರಹಿತ ಅರ್ಧಶತಕ ಸಿಡಿಸಿದರೆ, ಸುಥಾರ್(41 ಎಸೆತಗಳಲ್ಲಿ 28 ರನ್) ಜೊತೆಗೂಡಿ ಏಳನೇ ವಿಕೆಟ್‌ಗೆ 54 ರನ್‌ಗಳ ಉಪಯುಕ್ತ ಜತೆಯಾಟ ಕಟ್ಟಿದರು. ದಿನದಾಟ ಮುಕ್ತಾಯದ ವೇಳೆಗೆ ಅಫ್ಘಾನಿಸ್ತಾನ 5 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಸುಥಾರ್ 21ಕ್ಕೆ 3 ವಿಕೆಟ್ ಪಡೆದರೆ, ಕರ್ನಾಟಕ ವೇಗಿ ಪ್ರಸಿದ್ಧ್ ಕೃಷ್ಣ 27ಕ್ಕೆ 2 ವಿಕೆಟ್ ಕಬಳಿಸಿದರು. ಭಾರತ ಈಗಾಗಲೇ 451 ರನ್‌ಗಳ ಮುನ್ನಡೆ ಸಾಧಿಸಿದೆ. ರಾಜಸ್ಥಾನದ ಶ್ರೀಗಂಗಾನಗರದ 23ರ ಹರೆಯದ ಸುತಾರ್ ತಮ್ಮ ಸಾಂಪ್ರದಾಯಿಕ ಬೌಲಿಂಗ್ ಶೈಲಿ ಮತ್ತು ನಿಯಂತ್ರಣ ನೋಡುಗರ ಗಮನ ಸೆಳೆದರು. ಟಿ20 ಕ್ರಿಕೆಟ್ ಪ್ರಭಾವದಿಂದ ಸ್ಪಿನ್ ಬೌಲಿಂಗ್ ಹೆಚ್ಚು ನಿಯಂತ್ರಣದ ಅಸ್ತ್ರವಾಗಿ ಪರಿಣಮಿಸುತ್ತಿರುವ ಈ ಕಾಲಘಟ್ಟದಲ್ಲಿ, ಸುತಾರ್ ತಮ್ಮ ಫ್ಲೈಟ್, ಟರ್ನ್ ಮತ್ತು ನಿಖರತೆಯಿಂದ ಹೊಸ ಚೈತನ್ಯ ಮೂಡಿಸಿದರು. ಸುಂದರ್ ಅರ್ಧ ಶತಕ, ಭಾರತ 564/8 ಡಿಕ್ಲೇರ್: ಇದಕ್ಕೂ ಮುನ್ನ ವಾಷಿಂಗ್ಟನ್ ಸುಂದರ್ 6ನೇ ಟೆಸ್ಟ್ ಅರ್ಧ ಶತಕ ಪೂರ್ಣಗೊಳಿಸಿದ ತಕ್ಷಣ ಗಿಲ್ ಇನ್ನಿಂಗ್ಸ್ ಡಿಕ್ಲೇರ್ ಮಾಡುವ ನಿರ್ಧಾರ ಕೈಗೊಂಡರು.



ಟೆಸ್ಟ್ ಲಯಕ್ಕೆ ಮರಳಿದ ಪಂತ್

ಭಾರತದ ಮೊದಲ ಆಯ್ಕೆಯ ವಿಕೆಟ್‌ಕೀಪರ್ ರಿಷಭ್ ಪಂತ್ ಟೆಸ್ಟ್ ನಲ್ಲಿ ಬ್ಯಾಟಿಂಗ್ ಲಯ ಕಂಡುಕೊಂಡಿದ್ದಾರೆ. ಇನ್ನೋರ್ವ ವಿಕೆಟ್‌ಕೀಪರ್ ಧ್ರುವ್ ಜ್ಯುರೆಲ್ ಟೆಸ್ಟ್ ತಂಡದಲ್ಲಿದ್ದಾರೆ. ಇನ್ನೋರ್ವ ವಿಕೆಟ್‌ಕೀಪರ್ ಇಶಾನ್ ಕಿಶನ್ ಟೆಸ್ಟ್ ಆಯ್ಕೆಯಾಗಿ ಕಾಯುತ್ತಿದ್ದಾರೆ. ಆದರೆ ಮುಖ್ಯ ಕೋಚ್ ಗೌತಮ್ ಗಂಭೀರ್ ಪಂತ್‌ಗೆ ಅವಕಾಶ ನೀಡಿದ್ದು, ಅಫ್ಘಾನಿಸ್ತಾನ ವಿರುದ್ಧ ಪಂತ್ 81 ರನ್ ಗಳಿಸಿದ್ದಾರೆ. 121 ಎಸೆತಗಳನ್ನು ಎದುರಿಸಿದ ಪಂತ್ 6 ಬೌಂಡರಿ ಮತ್ತು 3 ಸಿಕ್ಸರ್‌ಗಳನ್ನು ಬಾರಿಸಿದ್ದರು. ಉಪನಾಯಕ ಪಟ್ಟ ಕಳೆದುಕೊಂಡ ಪಂತ್ ಯಾವುದೇ ಒತ್ತಡವಿಲ್ಲದೆ ಬ್ಯಾಟ್ ಬೀಸಿದ್ದಾರೆ. 194 ನಿಮಿಷಗಳ ಕಾಲ ಕ್ರೀಸ್‌ನಲ್ಲಿ ಸಮಯ ಕಳೆದ ಪಂತ್, ಎರಡು ಸೆಷನ್ ಬ್ಯಾಟ್ ಮಾಡಿದ್ದಾರೆ. ಹೊಡೆಬಡಿ ಆಟಕ್ಕೆ ಹೆಸರುವಾಸಿ ಪಂತ್ ಮೊದಲ 21 ಎಸೆತಗಳಲ್ಲಿ ಯಾವುದೇ ಬೌಂಡರಿ–ಸಿಕ್ಸರ್ ಹೊಡೆಯದೆ ತಮ್ಮ ಹೊಡೆಬಡಿ ಆಟದ ಪ್ರಲೋಭನೆಯನ್ನು ನಿಯಂತ್ರಿಸಿದರು.

ಸಲೀಮ್ 140ಕ್ಕೆ 6 ವಿಕೆಟ್

145 ಕಿ.ಮೀ. ವೇಗದಲ್ಲಿ ಚೆಂಡು ಎಸೆಯಬಲ್ಲ ಅಫ್ಘಾನ್ ವೇಗಿ ಮೊಹಮ್ಮದ್ ಸಲೀಮ್ ತಮ್ಮ ಕ್ರಿಕೆಟ್ ವೃತ್ತಿಜೀವನದಲ್ಲಿ ಅದ್ಭುತ ಕಂಬ್ಯಾಕ್ ಮಾಡಿದ್ದಾರೆ. 16ನೇ ವಯಸ್ಸಿನಲ್ಲಿ ಅವಕಾಶಗಳು ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಸಲೀಮ್ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ್ದು, ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ಸ್ಕೋರ್ ವಿವರ

ಭಾರತ ಪ್ರಥಮ ಇನ್ನಿಂಗ್ಸ್	564/8ಡಿ.
ಗಿಲ್ ಸಿ ಅಫ್ಸರ್ ಬಿ ಸಲೀಮ್	120
ಪಂತ್ ಸಿ ಓಮರ್ ಬಿ ಶಾಹಿದಿ	81
ಜ್ಯುರೆಲ್ ಬಿ ಸಲೀಮ್	19
ಸುಂದರ್ ಔಟಾಗದೆ	52
ಸುಥಾರ್ ಸಿ ಅಫ್ಸರ್ ಬಿ ಸಲೀಮ್	28
ಸಿರಾಜ್ ಬಿ ಸಲೀಮ್	22
ಕುಲ್ದೀಪ್ ಔಟಾಗದೆ	9
ಇತರೆ	22
ಬೌಲಿಂಗ್ ವಿವರ	
ರೆಹಮಾನ್	24-2-91-1
ಓಮರ್‌ಝಾಯ	22-5-67-0
ಸಲೀಮ್	27-3-140-6
ಖರೋಟೆ	23-0-115-0
ಮಲಿಕ್	7-0-43-0
ಶಾಹಿದಿ	24-1-91-1
ಅಫ್ಘಾನಿಸ್ತಾನ ಪ್ರಥಮ ಇನ್ನಿಂಗ್ಸ್	113/5
ಮಲಿಕ್ ಸಿ ಸಿರಾಜ್ ಬಿ ಸುಥಾರ್	16
ಅಟಲ್ ಬಿ ಪ್ರಸಿದ್ಧ	17
ಗುರ್ಬಾಜ್ ಸಿ ಸಾಯಿ ಬಿ ಸುಥಾರ್	12
ಶಾ ಔಟಾಗದೆ	43
ಶಾಹಿದಿ ಎಲ್‌ಬಿ ಪ್ರಸಿದ್ಧ	20
ಅಫ್ಸರ್ ಸಿ ಜ್ಯುರೆಲ್ ಬಿ ಸುಥಾರ್	3
ಇತರೆ	2
ಬೌಲಿಂಗ್ ವಿವರ	
ಸಿರಾಜ್	6-1-24-0
ಪ್ರಸಿದ್ಧ	7-0-27-2
ಸುಥಾರ್	15.5-7-21-3
ಕುಲ್ದೀಪ್	7-0-29-0
ಸುಂದರ್	4-0-12-0

ಜೂನಿಯರ್ ಫೆಡ್ ಕಪ್‌ನಿಂದ ಎರಡು ವಿಭಿನ್ನ ಹಾದಿಯವರೆಗೆ

ಡಿಎಸ್‌ಪಿ ಸಾತ್ವಿಕಾ ಮಣಿಸಿದ್ದ ಖ್ವಾಲಿನ್ಸ್ಕಾ





• ಹೊಸದಿಲ್ಲಿ: ಫ್ರೆಂಚ್ ಓಪನ್ 2026ರ ಮಹಿಳಾ ವಿಭಾಗದ ರನ್ನರ್‌ಅಪ್ ಪೋಲೆಂಡ್‌ನ ಮಾಯಾ ಖ್ವಾಲಿನ್ಸ್ಕಾ ಅವರು ತೆಲಂಗಾಣ ಡಿಎಸ್‌ಪಿ ಸಾತ್ವಿಕಾ ಸಾಮಾ ಅವರನ್ನು ಸೋಲಿಸಿದ್ದ ಸ್ವಾರಸ್ಯ ಕರ ಘಟನೆ 2016ರಲ್ಲಿ ನಡೆದಿತ್ತು. ಪ್ರಸ್ತುತ ಸಾತ್ವಿಕಾ ತೆಲಂಗಾಣದಲ್ಲಿ ಜಿಲ್ಲಾ ಪೊಲೀಸ್ ಉಪ ವರಿಷ್ಠೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಭವಿಷ್ಯದ ಇಬ್ಬರು ಪ್ರತಿಭೆಗಳು ಒಂದೇ ವೇದಿಕೆಯಲ್ಲಿ ಮುಖಾಮುಖಿ ಆಗಿದ್ದು, ಇಂದು ಇಬ್ಬರೂ ಸಂಪೂರ್ಣ ವಿಭಿನ್ನ ದಾರಿಗಳನ್ನು ಹಿಡಿದು ತಮ್ಮ ಛಾಪು ಮೂಡಿಸುತ್ತಿದ್ದಾರೆ. ಇನ್ನೊಂದು ಕಡೆ ಮಾಯಾ ಫ್ರೆಂಚ್ ಓಪನ್ ಫೈನಲ್ ಪ್ರವೇಶಿಸಿದ ಮೊದಲ ಅರ್ಹತಾ ಸುತ್ತಿನ ಆಟಗಾರ್ತಿ ಮತ್ತು ಗ್ರ್ಯಾಂಡ್ ಸ್ಲಾಮ್‌ವೊಂದರ ಫೈನಲ್ ಪ್ರವೇಶಿಸಿದ ದ್ವಿತೀಯ ಅರ್ಹತಾ ಸುತ್ತಿನ ಆಟಗಾರ್ತಿ ಎಂಬ ದಾಖಲೆ ಬರೆದಿದ್ದಾರೆ. 2016ರಲ್ಲಿ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದಿದ್ದ ಜೂನಿಯರ್ ಬಿಲ್ಲಿ ಜೀನ್ ಕಿಂಗ್ ಕಪ್ ಫೈನಲ್‌ನಲ್ಲಿ (ಅಂದಿನ ಜೂನಿಯರ್ ಫೆಡ್ ಕಪ್) ಇವರಿಬ್ಬರೂ ಮುಖಾಮುಖಿ ಆಗಿದ್ದರು. ಆದರೆ ಭಾರತೀಯ ಆಟಗಾರ್ತಿ ಸಾತ್ವಿಕಾ ಪಂದ್ಯ ಸೋತಿದ್ದರು.

ಆವೆಮಣ್ಣಿನಲ್ಲಿ ಐತಿಹಾಸಿಕ ಸಾಧನೆ

ಇತ್ತೀಚೆಗೆ ಮಾಯಾ ಟೆನಿಸ್ ಜಗತ್ತಿನಲ್ಲಿ ಸಂಚಲನ ಮೂಡಿಸಿದರು. ಎಲ್ಲ ಅಡೆತಡೆಗಳನ್ನು ಮೀರಿ, ಅರ್ಹತಾ ಸುತ್ತುಗಳಿಂದ ಆರಂಭಿಸಿ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಫೈನಲ್‌ವರೆಗೆ ತಲುಪಿದ ಮೊದಲ ಆಟಗಾರ್ತಿ ಎಂಬ ಇತಿಹಾಸ ನಿರ್ಮಿಸಿದರು. ರೋಲಾಂಡ್ ಗ್ಯಾರೋಸ್‌ನ ಆವೆಮಣ್ಣಿನ ಅಂಗಣದಲ್ಲಿ ಅವರು ತೋರಿದ ಅಚಲ ಹೋರಾಟದ ಮನೋಭಾವ ಟೆನಿಸ್ ಇತಿಹಾಸದಲ್ಲಿ ಅವರಿಗೆ ವಿಶೇಷ ಸ್ಥಾನವನ್ನು ತಂದುಕೊಟ್ಟಿದೆ.

ಅಂಗಣದ ಚಾಂಪಿಯನ್, ಸಮಾಜದ ನಾಯಕಿ

ಇನ್ನೊಂದೆಡೆ, ಸಾತ್ವಿಕಾ ಸಾಮಾ ಜೀವನ ಪಥವೂ ಅಷ್ಟೇ ಪ್ರೇರಣಾದಾಯಕ. ಜೂನಿಯರ್ ಹಂತದ ನಂತರ ಅವರು ವೃತ್ತಿಪರ ಟೆನಿಸ್‌ನಲ್ಲಿ ಉತ್ತಮ ಸಾಧನೆ ಮಾಡಿ, 20ನೇ ವಯಸ್ಸಿನಲ್ಲಿ ಡಬ್ಲ್ಯುಟಿಎ ಸಿಂಗಲ್ಸ್ ಶ್ರೇಯಾಂಕದಲ್ಲಿ 809ನೇ ಸ್ಥಾನಕ್ಕೇರಿದ್ದರು. 2019ರ ದಕ್ಷಿಣ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಪರ ಮಹಿಳಾ ಸಿಂಗಲ್ಸ್ ಸ್ವರ್ಣ ಪದಕ ಗೆದ್ದು ತಮ್ಮ ಕ್ರೀಡಾ ಜೀವನದ ಅತ್ಯುನ್ನತ ಸಾಧನೆಯನ್ನು ದಾಖಲಿಸಿದರು. ಇಂದು, 26 ವರ್ಷದ ಸಾತ್ವಿಕಾ ಸಾಮಾ ಇನ್ನೂ ಸೇವೆಯಲ್ಲಿದ್ದಾರೆ. ಆದರೆ ವಿಭಿನ್ನ ಸಮವಸ್ತ್ರದಲ್ಲಿ. ಅವರು ಸಾರ್ವಜನಿಕ ಸೇವೆಗೆ ಪ್ರವೇಶಿಸಿ, ಪ್ರಸ್ತುತ ತೆಲಂಗಾಣದಲ್ಲಿ ಜಿಲ್ಲಾ ಪೊಲೀಸ್ ಉಪ ವರಿಷ್ಠೆ (ಡಿಎಸ್‌ಪಿ) ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಶಿಪ್ 2026

ಭಾರತ ವನಿತೆಯರಿಗೆ 6ನೇ ಕಪ್

• ಮಡಗಾಂವ್: ಭಾರತ ಮಹಿಳಾ ಫುಟ್‌ಬಾಲ್ ತಂಡವು ಸ್ಯಾಫ್ ಮಹಿಳಾ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಆರನೇ ಬಾರಿ ತನ್ನದಾಗಿಸಿಕೊಂಡಿದ್ದು, ಏಳು ವರ್ಷಗಳ ಬಳಿಕ ಮತ್ತೆ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಶನಿವಾರ ನಡೆದ ಫೈನಲ್‌ನಲ್ಲಿ ಬಾಂಗ್ಲಾದೇಶವನ್ನು 3–1 ಗೋಲುಗಳಿಂದ ಮಣಿಸಿ ಆತಿಥೇಯರು ಭರ್ಜರಿ ಜಯ ಸಾಧಿಸಿದರು.

ಭಾರತದ ಪರವಾಗಿ ಪ್ಯಾರಿ ಷಾಕ್ಸಾ (42ನೇ ನಿಮಿಷ), ಸ್ಯಾನ್‌ಫಿಡಾ ನೊಂಗ್ರಮ್ (46ನೇ ನಿಮಿಷ) ಮತ್ತು ಲಿಂಡಾ ಕೋಮ್ ಸೆರ್ಟೊ (82ನೇ ನಿಮಿಷ) ಗೋಲು ಗಳಿಸಿದರು. ಹಾಲಿ ಚಾಂಪಿಯನ್ ಬಾಂಗ್ಲಾದೇಶದ ಪರ ರಿತು ಪೋರ್ಣಾ ಚಕ್ಮಾ (45+2ನೇ ನಿಮಿಷ) ಏಕೈಕ ಗೋಲು ದಾಖಲಿಸಿದರು. ಗುಂಪು ಹಂತದಲ್ಲಿಯೂ ಇದೇ ಎದುರಾಳಿಯನ್ನು 3–0 ಅಂತರದಿಂದ ಸೋಲಿಸಿದ್ದ ಭಾರತ, ಟೂರ್ನಿಯುದ್ದಕ್ಕೂ ಸಂಪೂರ್ಣ ಪ್ರಾಬಲ್ಯ ಮೆರೆದಿತು. ಎಲ್ಲಾ ಪಂದ್ಯಗಳಲ್ಲೂ ಗೆಲುವು ಸಾಧಿಸಿದ ಭಾರತ 18 ಗೋಲುಗಳನ್ನು ಬಾರಿಸಿದ್ದು, ಕೇವಲ ಒಂದು ಗೋಲು ಮಾತ್ರ ಬಿಟ್ಟುಕೊಟ್ಟಿತು. ಆರಂಭಿಕ ಪಂದ್ಯದಲ್ಲಿ ಮಾಲ್ಡೀವ್ಸ್ ವಿರುದ್ಧ 11–0 ಅಂತರದ ಭರ್ಜರಿ ಜಯ ದಾಖಲಿಸಿದ್ದ ಭಾರತ, ಬಳಿಕ ಬಾಂಗ್ಲಾದೇಶವನ್ನು 3–0 ಅಂತರದಿಂದ ಮಣಿಸಿ ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು. ಟೂರ್ನಿಯಲ್ಲಿ ಭಾರತದ ಯಶಸ್ಸಿಗೆ ಪ್ರಮುಖ ಪಾತ್ರವಹಿಸಿದ ಆವೇಕಾ ಸಿಂಗ್ ನಾಲ್ಕು ಗೋಲುಗಳೊಂದಿಗೆ ಅಗ್ರ ಸ್ಕೋರರ್ ಪ್ರಶಸ್ತಿ ಪಡೆದರು. ಸ್ಯಾನ್‌ಫಿಡಾ ನೊಂಗ್ರಮ್ ಅತ್ಯಂತ ಮೌಲ್ಯಯುತ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರೆ, ಪಂಥೋಯ್ ಚಾನು ಎಲಾಂಗ್‌ಬಾಮ್ ಅತ್ಯುತ್ತಮ ಗೋಲ್‌ಕೀಪರ್ ಪ್ರಶಸ್ತಿ ಪಡೆದರು.



7 ವರ್ಷಗಳ ಬಳಿಕ ಪ್ರಶಸ್ತಿ

ಸತತ ಐದು ಬಾರಿ ಪ್ರಶಸ್ತಿ ಗೆದ್ದಿದ್ದ ಭಾರತ ಕಳೆದ ಎರಡು ಆವೃತ್ತಿಗಳಲ್ಲಿ ಫೈನಲ್ ತಲುಪಲೂ ವಿಫಲವಾಗಿತ್ತು. 2022 ಹಾಗೂ 2024ರಲ್ಲಿ ಬಾಂಗ್ಲಾದೇಶ ಪ್ರಶಸ್ತಿ ಗೆದ್ದಿತ್ತು. ಭಾರತ ಕೊನೆಯದಾಗಿ 2019ರಲ್ಲಿ ಚಾಂಪಿಯನ್ ಆಗಿತ್ತು. ಅದಕ್ಕೂ ಮುನ್ನ 2010, 2012, 2014, 2016ರಲ್ಲೂ ಭಾರತ ವನಿತೆಯರೇ ಚಾಂಪಿಯನ್ ಆಗಿದ್ದರು. ಭಾರತದ ಐತಿಹಾಸಿಕ ಗೆಲುವಿಗೆ ಸಂಭ್ರಮ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ, ಭಾರತ ತಂಡವನ್ನು ಅಭಿನಂದಿಸಿದ್ದಾರೆ.

ನಿವೃತ್ತಿ ಘೋಷಿಸಿದ ಗ್ರೇಸ್!



ಇದೇ ಸಂಭ್ರಮದ ಸಮಯದಲ್ಲಿ ಅನುಭವಿ ಆಟಗಾರ್ತಿ ಗ್ರೇಸ್ ಡಾಂಗ್‌ಮೇಯಿ ಅಂತಾರಾಷ್ಟ್ರೀಯ ಫುಟ್ಬಾಲ್‌ನಿಂದ ನಿವೃತ್ತಿ ಘೋಷಿಸಿದರು. 2013ರಲ್ಲಿ ಪದಾರ್ಪಣೆ ಮಾಡಿದ್ದ ಗ್ರೇಸ್, 24 ಅಂತಾರಾಷ್ಟ್ರೀಯ ಗೋಲ್‌ಗಳನ್ನು ಸ್ಕೋರ್ ಮಾಡಿದ್ದಾರೆ. 3 ಸ್ಯಾಫ್ ಮಹಿಳಾ ಚಾಂಪಿಯನ್ ಮತ್ತು 2 ದಕ್ಷಿಣ ಏಷ್ಯಾ ಸ್ವರ್ಣ ಗೆದ್ದ ತಂಡಗಳ ಸದಸ್ಯೆಯಾಗಿದ್ದರು.



ನಾರ್ವೆ ಚೆಸ್ 2026 ಚಾಂಪಿಯನ್ಸ್

ನಾರ್ವೆ ಚೆಸ್ ಟ್ರೋಫಿಯೊಂದಿಗೆ ಪುರುಷರ ವಿಭಾಗದ ಚಾಂಪಿಯನ್ ಪ್ರಜ್ಞಾನಂದ (ಭಾರತ) ಮತ್ತು ಮಹಿಳಾ ವಿಭಾಗದ ಚಾಂಪಿಯನ್ ಬಿಬಿಸಾರ ಅಸ್ಸಾವುಬಯೀವ (ಕಜಕಿಸ್ತಾನ).

ಪ ದ ಬ ಂ ಧ

» ರಾಜಾ ಸಂಗಮೇಶ ಹಿರೇಮಠ



6008

6007 ಉತ್ತರ

ಎಡದಿಂದ ಬಲಕ್ಕೆ:
2.ಮೆಲ್ಲುಸಿರು 4.ಹರ
5.ಚತುರ 6.ತರುಣಾತಪ
9.ಕಿರುಗೆಜ್ಜೆ 10.ದೇವದಾಸ
13.ದಶಾವತಾರ
15.ಜಹಜು 17.ಜೋಕೆ
18.ಕಾಸದಾರ

ಮೇಲಿನಿಂದ ಕೆಳಕ್ಕೆ :
1.ಮಂಚ 2.ಮೆರವಣಿಗೆ
3.ಸಿರಿತನ 4.ಹರಿತ
7.ಪರಿಸರ 8.ಬಾಕಿದಾರ
11.ವಜ್ರಪಂಜರ
12.ಮಂದಹಾಸ
14.ತಾಳಿಕೆ 16.ಜುಟ್ಟು

ಎಡದಿಂದ ಬಲಕ್ಕೆ
1.ಪತ್ರಿಕೆಯಲ್ಲಿನ ಉದ್ದನೆಯ ಸಾಲು (3)
4.ದಾಖಲೆ ಮಾಡು–ನೋಂದಾಯಿಸು (3)
6.ಕೀಳುಮಟ್ಟದ ಕಾವ್ಯ ರಚಿಸುವವನು (3)
8.ಹಾಸಿಗೆ–ಚಾಪೆ ಮುಂತಾದವು (4)
9.ಮಸಾಲೆ ಬೆರೆತ ಬೇಯಿಸಿದ ಅಕ್ಕಿ (4)
11.ಮೇರಿ ನಡುವೆ ಇರುವ ಸಂಯುಕ್ತ ಸಂಸ್ಥಾನ (4)
13.ಬ್ರಿಟಿಷರು ಸ್ವಾತಂತ್ರ್ಯ ಯೋಧರಿಗೆ ನೀಡುತ್ತಿದ್ದ ಕಠಿಣ ಶಿಕ್ಷೆ (4)
15.ಕುರು ಸಾಮ್ರಾಜ್ಯದ ಪ್ರಧಾನಮಂತ್ರಿ ತಿರುಗಿದ್ದಾನೆ (3)
17.ಅಂದವಾಗಿ ಕಾಣುತ್ತಿರುವ ಪಲ್ಲಕ್ಕಿ (3)
18.ಈತ ವಿದ್ಯೆ ಕಲಿಸುವವನು (3)

ಮೇಲಿನಿಂದ ಕೆಳಕ್ಕೆ
2.ಕೈಯಲ್ಲಿ ಹಿಡಿದಿರುವ ಕತ್ತಿಯಿದು (4)
3.ಬದುಕು–ಕಾರ್ಯಗಳಿಗೆ ಬರುವ ಅಡೆತಡೆಗಳು (3)
5.ಹೇಳಿಕೊಳ್ಳಲಾಗದ ತೊಂದರೆ–ಹಿಂಸೆ (4)
6.ಹೂವುಗಳಿಂದ ತುಂಬಿದ ಸ್ಥಳ (5)
7.ಹಾಸ್ಯದ ಮೂಲಕ ವಿಡಂಬನೆ ಮಾಡುವ ಕಬ್ಬಿಗ (5)
8.ದೇವರಮೂರ್ತಿಗೆ ಮಾಡುವ ಪೂಜೆ ತಲೆಕೆಳಗಾಗಿದೆ (3)
10.ಮಿತಿಮೀರುತ್ತಿರುವ ಸೊಕ್ಕು (3)
12.ಮೋಡದ ಘರ್ಜನೆಯಾದ ರಾವಣಸುತ (4)
14.ಕಪ್ಪುಗೊರಲದ ಮತ್ತೊಂದು ಹೆಸರು (4)
16.ಎರಡರಷ್ಟು–ಇಮ್ಮಡಿಯಿದು (3)

ಮನಸ್ಸಿಗೆ ಹಿಡಿ–ತಪಾಸಣೆಯ ಕನ್ನಡಿ

ದೇಹಕ್ಕೆ ಹೇಗೆ ಶಿಕ್ಷಣ ಮುಖ್ಯವೋ ಹಾಗೆ ಮನಸ್ಸಿಗೂ ಅವಶ್ಯ, ದೇಹಕ್ಕೆ ಹೇಗೆ ವ್ಯಾಯಾಮ ಅಗತ್ಯವೋ ಹಾಗೆ ಮನಸ್ಸಿಗೂ ಅವಶ್ಯ

ಆಪ್ತ ಸಲಹೆ
■ ಉದಯಶಂಕರ ಪದ್ಯಾಣಿ
ಆಪ್ತ ಸಮಾಲೋಚಕರು

ನಿಯಮಿತ ಕಾಲದಲ್ಲಿ ಮಾನಸಿಕ ಆರೋಗ್ಯವನ್ನು ಪರೀಕ್ಷಿಸಿ ಸಲಹೆ ಪಡೆದುಕೊಂಡು ಅಗತ್ಯದ ಬದಲಾವಣೆಗಳನ್ನು ಮಾಡಿಕೊಂಡರೆ ಒಳ್ಳೆಯದು.

ದೈಹಿಕ ಆರೋಗ್ಯಕ್ಕಾಗಿ ವಾರ್ಷಿಕವಾಗಿ ವೈದ್ಯಕೀಯ ಪರೀಕ್ಷೆಗಳನ್ನು ಮಾಡುವಂತೆ ಭಾವನೆಗಳನ್ನು ಮತ್ತು ಮನಸ್ಸಿನ ಯೋಚನೆಗಳನ್ನು ದೃಢ ಮಾಡಿಕೊಳ್ಳಲು ಬೇಕಾಗುವ ಸಲಹೆ ಸೂಚನೆಗಳನ್ನು ಪಡೆದುಕೊಂಡರೆ ಉತ್ತಮ .

ಇದರಿಂದ ನಮ್ಮ ಆರೋಗ್ಯ ನಮ್ಮ ಕುಟುಂಬದವರೊಂದಿಗೆ ನಮ್ಮ ಸಂಬಂಧ ಸಾಮಾಜಿಕವಾಗಿ ನಮ್ಮ ವ್ಯಕ್ತಿತ್ವ ಸುಗಮವಾಗಿ ಬೆಳೆಯಲು ಸಾಧ್ಯವಿದೆ. ಆದರೆ ಈ ತರಹ ಸಲಹೆ ಸೂಚನೆಗಳನ್ನು ನಾವು ಮುಂಚಿತವಾಗಿ ಯಾಕೆ ಪಡೆದುಕೊಳ್ಳುತ್ತಿಲ್ಲ?

ಆಪ್ತ ಸಲಹೆಯಿಂದ ಮಾಡಿದ ಬದಲಾವಣೆಗಳಿಂದ ನನ್ನ ಹಿತಾಸಕ್ತಿಗೆ ತೊಂದರೆಯಾಗುತ್ತದೆ ಎಂದು ತಪ್ಪು ತಿಳುವಳಿಕೆಯಿಂದ ಹಲವಾರು ಜನರು ಆಪ್ತ ಸಲಹೆಗೆ ಒಪ್ಪುವುದಿಲ್ಲ. ಮತ್ತು ಮೊದಲು ತೆಗೆದುಕೊಂಡ ಆಪ್ತ ಸಹಾಯದ ಬಗ್ಗೆ ಅಷ್ಟು ಫಲಪ್ರದವಾಗದ ಅನುಭವಗಳು ಇದ್ದರೆ ಅವನು ಮತ್ತೆ ಆಪ್ತ ಸಲಹೆಯನ್ನು ತೆಗೆದುಕೊಳ್ಳುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಇದರಲ್ಲಿ ಅಡ್ಡಿಪಡಿಸುವ ಮುಖ್ಯ ಕಾರಣವೆಂದರೆ ಮಾನಸಿಕ ಅನಾರೋಗ್ಯದ ಬಗ್ಗೆ ಇರುವ ಕಳಂಕ ಅಥವಾ ಅಸ್ಪೃಶ್ಯತೆಯ ಭಾವ. ಈ ಹಿಂಜರಿಕೆಯನ್ನು ಮಾಡದೆ ನಾವು ಮಾನಸಿಕ ಆರೋಗ್ಯದ ಬಗ್ಗೆ ಸಲಹೆಗಳನ್ನು ತೆಗೆದುಕೊಳ್ಳುವುದು ಅಗತ್ಯ. ತೊಂದರೆಗಳು ಸಣ್ಣಪುಟ್ಟವಾದರೂ ಅವುಗಳನ್ನು ಮೊದಲ ಹಂತದಲ್ಲಿ ಸರಿಪಡಿಸುವುದು ಮುಖ್ಯ.ಇದರಿಂದಾಗಿ ಅವು ಮುಂದೆ ದೊಡ್ಡ ತೊಂದರೆಯಾಗದೆ ಇರಲಿಕ್ಕೆ ಸಾಧ್ಯವಿದೆ.

ಇಂದಿನ ಅವಿಭಕ್ತ ಕುಟುಂಬ, ಮೊಬೈಲ್ ನ ಆಕರ್ಷಣೆ ಮತ್ತು ನಗರ ಜೀವನದ ಸ್ವಾಭಾವಿಕ ತೊಂದರೆಗಳ ಪರಿಣಾಮವಾಗಿ ಆತಂಕ ಮತ್ತು ಒತ್ತಡಗಳು ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿವೆ.

ಮಾನಸಿಕ ಆರೋಗ್ಯಕ್ಕಾಗಿ ಸಲಹೆ ಸೂಚನೆಗಳನ್ನು ಪಡೆಯುವವರನ್ನು ಹುಚ್ಚರೆಂದೇನೂ ತಿಳಿಯಬೇಕಾಗಿಲ್ಲ. ಒಂದರ್ಥದಲ್ಲಿ ನಾವೆಲ್ಲರೂ ಹುಚ್ಚರು, ಕೆಲವರು ಹೆಚ್ಚು ಮತ್ತೆ ಕೆಲವರು ಕಡಿಮೆ ಎಂದಷ್ಟೇ ಎಂಬ ಅರಿವಿರಬೇಕು. ಎಂತವನೇ ಆದರೂ ಮನುಷ್ಯನಿಗೆ ಕೋಪ ತಾಪಗಳಿರುವುದು ಬೇಸರ ದುಮ್ಮಾನ ಗಳಿರುವುದು, ಸ್ವಲ್ಪಮಟ್ಟಿನ ಆತಂಕ ಮತ್ತು ಖಿನ್ನತೆ ಇರುವುದು ಸಹಜ. ಕೆಲವರಿಗೆ ಮಾತ್ರ ಅದು ಬಹಳ ಬೇಗನೆ ದುಷ್ಪರಿಣಾಮಗಳನ್ನು ಉಂಟುಮಾಡಬಹುದು. ಇಷ್ಟೆಲ್ಲಾ ಸೌಲಭ್ಯಗಳಿದ್ದರೂ ಮಾನಸಿಕ ಆರೋಗ್ಯವನ್ನು ಉತ್ತಮಪಡಿಸುವ ಬಗ್ಗೆ ಹೆಚ್ಚಿನವರು ಗಮನ ಕೊಡುವುದಿಲ್ಲ. ಈಗ ತುರ್ತಾಗಿ ಇದರ ಬಗ್ಗೆ ನಾವು ಗಮನಹರಿಸಿ ನಮ್ಮ ದೈಹಿಕ ಆರೋಗ್ಯದೊಂದಿಗೆ ಮಾನಸಿಕ ಆರೋಗ್ಯದ ಸ್ಥಿತಿಯ ಬಗ್ಗೆಪರೀಕ್ಷೆ ಮಾಡಿಕೊಳ್ಳಲೇಬೇಕು. ಇದಕ್ಕೆ ನಮ್ಮಲ್ಲಿ ಒಂದು ನಿರ್ದಿಷ್ಟ ಛಲ ಬೇಕು. ನನ್ನ ಜೀವನವನ್ನು ನಾನು ಇನ್ನೂ ಸುಗಮಗೊಳಿಸಬೇಕು, ನನ್ನನ್ನು ನಾನು ಇನ್ನೂ ಹೆಚ್ಚು ತಿಳಿದುಕೊಳ್ಳಬೇಕು,ಆಗಮಾತ್ರ ನಾನು ನನ್ನ ಜೀವನದಲ್ಲಿ ಹೆಚ್ಚಿನ ಸಂತೋಷವನ್ನು ಕಾಣಬಹುದು ಎಂದೆಲ್ಲಾ ಧನಾತ್ಮಕವಾಗಿ ಯೋಚನೆ ಮಾಡುವುದನ್ನು ಅಭ್ಯಾಸ ಮಾಡಬೇಕು.

ಇವತ್ತಿನ ಧಾವಂತದ ಜೀವನದಲ್ಲಿ, ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಇದಕ್ಕೆ ಬೇಕಾದ ಆಪ್ತ ಸಲಹೆಗಳು ನಾವು ಕೆಲಸ ಮಾಡುವ ಪರಿಸರದಲ್ಲಿ ಲಭ್ಯವಿರುತ್ತದೆ. ಆಯಾಯ ಸಂಸ್ಥೆಗಳು ಇದನ್ನು ವ್ಯವಸ್ಥೆ ಮಾಡಿರುತ್ತಾರೆ.

ಕೆಲವು ಸಂಸ್ಥೆಗಳು ನಮ್ಮ ಸ್ವಾಟ್ ಅನಾಲಿಸಿಸ್‌ನಂತಹ ಪ್ರಕ್ರಿಯೆಗಳಿಂದ ತಮ್ಮನ್ನು ತಾವು ತಿಳಿದುಕೊಳ್ಳುವದರಲ್ಲಿ ಸಹಾಯ ಮಾಡುತ್ತಾರೆ. ಇದೇ ರೀತಿಯಲ್ಲಿ ಸೈಕೋಮೆಟ್ರಿಕ್ ಟೆಸ್ಟ್ ಎನ್ನುವ ಪರೀಕ್ಷೆ ಕೂಡ ನಮ್ಮ ಪ್ರಕೃತಿದತ್ತವಾದ ಸಾಮರ್ಥ್ಯ ಮತ್ತು ನೆಲೆಯನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ. ಇಂತಹ ಸೌಲಭ್ಯ ಇಲ್ಲದವರು ಸುಲಭವಾಗಿ ಲಭ್ಯವಿರುವ ಆಪ್ತ ಸಮಾಲೋಚನೆಯ ಸಹಾಯವಾಣಿಯೊಂದಿಗೆ ಸಹಾಯ ಪಡೆಯಕೊಳ್ಳಬಹುದು.

ಪುರಂದರ ದಾಸರ ಜನಪ್ರಿಯ ಕೀರ್ತನೆ

"ಸ್ನಾನವ ಮಾಡಿರೋ ಜ್ಞಾನತೀರ್ಥದಲ್ಲಿ?" ನೀವೆಲ್ಲ ಕೇಳಿರಬಹುದು. ಅದರಲ್ಲಿನ ಒಂದು ಸಾಲು ಈ ರೀತಿ ಇದೆ

"ತನ್ನೊಳು ತಾನೇ ತಿಳಿದರೊಂದು ಸ್ನಾನ".

ಅಂದರೆ ಧ್ಯಾನ ಪೂಜೆ ಮತ್ತುಸೇವೆಯ ಮೂಲಕ ನಮ್ಮನ್ನು ನಾವೇ ಅರಿತುಕೊಂಡು ಸುಧಾರಿಸುವುದು ಸನಾತನ ಮಾರ್ಗ.

ಅದಕ್ಕಾಗಿರುವ ಇನ್ನೊಂದು ಸದ್ಯದ ಸುಲಭದ ದಾರಿ ಆಪ್ತ ಸಲಹೆ. ಇದರ ಮೂಲಕವೂ ನಮ್ಮನ್ನು ನಾವು ಇನ್ನೊಬ್ಬರ ಸಹಾಯದಿಂದ ಅರಿತು ಬೆಳಗಬಹುದು. ಜೀವನದಲ್ಲಿ ನಾವು ನಿರಂತರವಾದ ಗುಣಾತ್ಮಕವಾದ ಬದಲಾವಣೆಗಳನ್ನು ಮಾಡದಿದ್ದರೆ ನಮ್ಮ ಜೀವನ ಅಧೋಗತಿಗೆ ಹೋಗುವ ಸಾಧ್ಯತೆ ಇದೆ. ನಮ್ಮ ಜೀವನದ ಗುಣಮಟ್ಟ ತಗ್ಗುವ ಸಾಧ್ಯತೆಗಳಿವೆ. ಇನ್ನೊಂದು ಸನ್ನಿವೇಶದಲ್ಲಿ ಪ್ರಾಯಕ್ಕೆ ಬಂದ ಮಕ್ಕಳು ಮದುವೆ ಮಾಡಿಕೊಳ್ಳಲು ತಯಾರಿರುವುದಿಲ್ಲ. ಮದುವೆಯಿಂದ ತಮ್ಮ ಸ್ವಾತಂತ್ರ್ಯ ಕಳೆದುಹೋಗುತ್ತದೆ ಎಂಬ ಕಪೋಲ ಕಲ್ಪಿತ ಯೋಚನೆಯಲ್ಲಿ ಇರುತ್ತಾರೆ.

ಅವರ ಮನಸ್ಸಿನಾಳದಲ್ಲಿ ತನಗೆ ಮದುವೆ ಬೇಡ ಎಂದು ಇರುವುದಿಲ್ಲ. ಇಲ್ಲಿಯೂ ಮನೆಯವರೆಲ್ಲ ಸೇರಿ ಆಪ್ತ ಸಮಾಲೋಚನೆ ಮಾಡಿಕೊಂಡರೆ ಸಹಾಯವಾಗಬಹುದು.

ಇಂದಿನ ಸಂದರ್ಭದಲ್ಲಿ ಎಷ್ಟೋ ಕುಟುಂಬಗಳು ಆಪ್ತ ಸಲಹೆಯ ಮೂಲಕ ತಮ್ಮ ತೊಂದರೆಗಳಿಗೆ ಸಮಾಧಾನ ಪಡೆದುಕೊಂಡು ಸುಖ ಜೀವನವನ್ನು ನಡೆಸುತ್ತಿದ್ದಾರೆ.

ದೇಹಕ್ಕೆ ಹೇಗೆ ಶಿಕ್ಷಣ ಮುಖ್ಯ ಮನಸ್ಸಿಗೂ ಶಿಕ್ಷಣ ಅಗತ್ಯ. ದೇಹಕ್ಕೆ ಹೇಗೆ ವ್ಯಾಯಾಮ ಅಗತ್ಯವು ಹಾಗೆ ಮನಸ್ಸಿಗೂ ಬೇಕು.

ಎಲ್ಲಾ ದೃಷ್ಟಿಯಿಂದ ಮಾನಸಿಕ ಆರೋಗ್ಯವನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ನಿರ್ದಿಷ್ಟ ಅವಧಿಯಲ್ಲಿ ನಮ್ಮ ಜೀವನ ಕ್ರಮವನ್ನು ಆಪ್ತ ಸಲಹಾಕಾರರೊಂದಿಗೆ ಸಮಾಲೋಚಿಸುವುದು ಉಪಯೋಗಿ ಪ್ರಕ್ರಿಯೆ.

ಕಿರುಸುದ್ದಿ

ಅಂಗಡಿಗೆ ಗ್ರಾಹಕರ ಸೋಗಿನಲ್ಲಿ ಬಂದು ಪರ್ಸ್ ಕಳವು

ಸುಂಟಿಕೊಪ್ಪ: ಸುಂಟಿಕೊಪ್ಪ ಪಟ್ಟಣದ ಆಸ್ಪತ್ರೆ ರಸ್ತೆಯಲ್ಲಿರುವ ಅಕ್ಷತಾ ಭಂಡಾರ (ಭವಾನಿ ಸ್ಟೋರ್) ನಲ್ಲಿ ಕಳ್ಳತನದ ಘಟನೆ ನಡೆದಿದ್ದು, ಅಂಗಡಿ ಮಾಲಕರನ್ನು ಮಾತಿನಲ್ಲಿ ತೊಡಗಿಸಿ ಗ್ರಾಹಕರ ಸೋಗಿನಲ್ಲಿ ಬಂದ ದುಷ್ಕರ್ಮಿಗಳು ಪರ್ಸ್ ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ.
ಮಾಹಿತಿಯ ಪ್ರಕಾರ, ಸಾಮಗ್ರಿಗಳನ್ನು ಖರೀದಿಸುವ ನೆಪದಲ್ಲಿ ಅಂಗಡಿಗೆ ಬಂದ ವ್ಯಕ್ತಿಗಳು ಅಂಗಡಿ ಮಾಲಕರ ಗಮನವನ್ನು ಬೇರೆಡೆ ಸೆಳೆದು, ಕೌಂಟರ್‌ನಲ್ಲಿ ಇರಿಸಲಾಗಿದ್ದ ಪರ್ಸ್ ಅನ್ನು ಎಗರಿಸಿಕೊಂಡು ಪರಾರಿಯಾಗಿದ್ದಾರೆ. ಕಳುವಾದ ಪರ್ಸ್‌ನಲ್ಲಿ ಸುಮಾರು 10 ಸಾವಿರ ರೂ. ನಗದು, ಎಟಿಎಂ ಕಾರ್ಡ್‌ಗಳು, ಪಾನ್ ಕಾರ್ಡ್ ಹಾಗೂ ಇತರೆ ಪ್ರಮುಖ ದಾಖಲಾತಿಗಳು ಇದ್ದವು ಎಂದು ಅಂಗಡಿ ಮಾಲಕರು ತಿಳಿಸಿದ್ದಾರೆ. ಈ ಸಂಬಂಧ ಸುಂಟಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ಠಾಣಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಭೀಕರ ರಸ್ತೆ ಅಪಘಾತ: ಮಹಿಳೆ ದುರ್ಮರಣ

ಮಡಿಕೇರಿ: ಆಟೋ ಮತ್ತು ಪುರಸಭೆಯ ಕಸ ಸಾಗಿಸುವ ವಾಹನದ ನಡುವೆ ಅಪಘಾತ ಸಂಭವಿಸಿ ಮಹಿಳೆಯೊಬ್ಬರು ಅಸು ನೀಗಿ, ಇನ್ನಿಬ್ಬರು ಗಾಯಗೊಂಡಿರುವ ಘಟನೆ ವೀರಾಜಪೇಟೆಯ ಪೆರುಂಬಾಡಿ ಬಳಿ ನಡೆದಿದೆ. ಆಟೋದಲ್ಲಿ ಇಬ್ಬರು ಮಹಿಳೆಯರು ಮತ್ತು ಓರ್ವ ಪುರುಷ ಪ್ರಯಾಣಿಸುತ್ತಿದ್ದು, ಇವರ ಪೈಕಿ ಗಂಭೀರ ಸ್ಥಿತಿಯಲ್ಲಿದ್ದ ಸುಲೋಚನಾ ಎಂಬವರನ್ನು ಮೈಸೂರಿನ ಆಸ್ಪತ್ರೆಗೆ ಸಾಗಿಸುತ್ತಿದ್ದ ವೇಳೆ ಮಾರ್ಗಮಧ್ಯೆ ಸಾವಿಗೀಡಾಗಿದ್ದಾರೆ. ಅಮೃತಾ ಹಾಗೂ ಪದ್ಮನಾಭ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸಲಾಗಿದೆ.



ಬೈಕ್‌ನಲ್ಲಿ ಸಾಗಿಸುತ್ತಿದ್ದ ಎಂಡಿಎಂಎ ಸಹಿತ ಯುವಕ ಸೆರೆ

ಬದಿಯಡ್ಕ: ಮಾದಕ ವಸ್ತು ಸಾಗಾಟ ಮತ್ತು ಮಾರಾಟದ ವಿರುದ್ಧ ಪೊಲೀಸ್ ಇಲಾಖೆ ಆಪರೇಶನ್ ತೂಫನ್ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಬದಿಯಡ್ಕ ಪೊಲೀಸರು ಭಾನುವಾರ ಬೆಳಗ್ಗೆ ನಡೆಸಿದ ಕಾರ್ಯಾಚರಣೆಯಲ್ಲಿ ಬೈಕ್‌ನಲ್ಲಿ ಸಾಗಿಸುತ್ತಿದ್ದ ಎಂಡಿಎಂಎ ಸಹಿತ ಯುವಕನನ್ನು ಬಂಧಿಸಿದ್ದಾರೆ. ಕಟ್ಟತ್ತಡ್ಕ ಎಕೆಜಿ ನಗರದ ಮೊಹಮ್ಮದ್ ಹನೀಫ್ (36) ಬಂಧಿತ ಆರೋಪಿಯಾಗಿದ್ದಾನೆ. ಬದಿಯಡ್ಕದ ಚೋಳುಕಟ್ಟೆಯಲ್ಲಿ ಪೊಲೀಸರು ವಾಹನಗಳನ್ನು ತಪಾಸಣೆ ನಡೆಸುವ ವೇಳೆ ಆರೋಪಿ ಚಲಾಯಿಸುತ್ತಿದ್ದ ಬೈಕ್ ತಪಾಸಣೆ ನಡೆಸಿದಾಗ ಅದರಲ್ಲಿ 30 ಗ್ರಾಂ ಎಂಡಿಎಂಎ ಪತ್ತೆಯಾಗಿದೆ.

ಫೇಸ್‌ಬುಕ್‌ನಲ್ಲಿ ಸಚಿವ ಖರ್ಗೆ ವಿರುದ್ಧ ಕಮೆಂಟ್ ಆರೋಪ: ವ್ಯಕ್ತಿ ಬಂಧನ

ಕಾರ್ಕಳ: ಫೇಸ್‌ಬುಕ್‌ನಲ್ಲಿ ರಾಜ್ಯದ ನೂತನ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ವಿರುದ್ಧ ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಆರೋಪದಡಿ ಮೇಲೆ ಕೆರ್ವಾಶೆಯ ಸುಧೀರ್ ಬಂಗೇರ (48) ಎಂಬವರನ್ನು ಕಾರ್ಕಳ ನಗರ ಪೊಲೀಸರು ಬಂಧಿಸಿದ್ದಾರೆ. 'ನಮ್ಮ ಕಾರ್ಲ' ಎಂಬ ಫೇಸ್‌ಬುಕ್ ಪೇಜ್‌ನಲ್ಲಿ ಗೃಹ ಸಚಿವರ ಕುರಿತಾಗಿದ್ದ ಪೋಸ್ಟ್‌ಗೆ ಆರೋಪಿ ಸುಧೀರ್ ಅವರು ಕಮೆಂಟ್ ಮಾಡಿದ್ದರೆನ್ನಲಾಗಿದೆ. ಈ ಕುರಿತು ಅತ್ತೂರು ನಿವಾಸಿ ಸುರೇಶ್ ಎಂಬವರು ನೀಡಿದ ದೂರಿನನ್ವಯ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಬಿ.ಎನ್.ಎಸ್ ಹಾಗೂ ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಅಪರಾಧ ಕ್ರಮಾಂಕ 82/2026 ರಂತೆ ಮೊಕದ್ದಮೆ ದಾಖಲಾಗಿದ್ದು, ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತಿದೆ.



ಕಳೆದ ಎರಡು ದಿನಗಳಲ್ಲಿ ಜನತೆಯನ್ನು ಕಂಗಾಲಾಗಿಸಿದ್ದ ಮುಂಗಾರು

ಆರ್ಭಟಿಸಿದ ಮಳೆಗೀಗ ಅಲ್ಪ ವಿರಾಮ!

ಮಂಗಳೂರು: ಈ ಬಾರಿ ಮುಂಗಾರು ಭಾರೀ ಗಾಳಿ ಮಳೆಯೊಂದಿಗೆ ಆರಂಭವಾಗಿತ್ತು. ಕಳೆದ ಎರಡು ದಿನಗಳ ಕಾಲ ಎಡೆಬಿಡದೆ ಸುರಿದಿದ್ದು, ಹಲವೆಡೆ ಪ್ರಾಕೃತಿಕ ವಿಕೋಪಕ್ಕೂ ಕಾರಣವಾಗಿತ್ತು. ಆದರೆ ಭಾನುವಾರ ಮಾತ್ರ ಮಳೆ ಮಾಯವಾಗಿದ್ದು, ಬಿಸಿಲಿನ ವಾತಾವರಣ ಕಂಡುಬಂದಿದೆ. ಮಂಗಳೂರಿನಲ್ಲಿ ದಿನವಿಡೀ ಮೋಡ ಕವಿದ ವಾತಾವರಣ ಕಂಡುಬಂದಿದ್ದು, ಹನಿ ಹನಿ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿಯಲ್ಲಿ ಸಾಧಾರಣ ಮಳೆ ಸುರಿದಿದೆ.

ಸಂಜೆಯ ವೇಳೆ ಕಡಬ, ಬೆಳ್ತಂಗಡಿ, ಧರ್ಮಸ್ಥಳ ಹಾಗೂ ಚಾರ್ಮಾಡಿ ಘಾಟ್ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ದ.ಕ.ದಲ್ಲಿ 23.9ಮಿ.ಮೀ ಮಳೆ

ಭಾನುವಾರ ಬೆಳಗ್ಗೆ 8.30ರಿಂದ ಮೊದಲ್ಗೊಂಡು ಹಿಂದಿನ 24 ಗಂಟೆಗಳ ಅವಧಿಯಲ್ಲಿ ದ.ಕ ಜಿಲ್ಲೆಯಲ್ಲಿ ಸರಾಸರಿ 23.9 ಮಿಮೀ ಮಳೆ ದಾಖಲಾಗಿದೆ. ಬೆಳ್ತಂಗಡಿಯಲ್ಲಿ 19.9 ಮಿಮೀ, ಬಂಟ್ವಾಳದಲ್ಲಿ 17.1 ಮಿಮೀ, ಮಂಗಳೂರು 25 ಮಿಮೀ, ಪುತ್ತೂರು 22.7 ಮಿಮೀ, ಸುಳ್ಯ 26.8 ಮಿಮೀ, ಮೂಡುಬಿದಿರೆ 13.8 ಮಿಮೀ, ಉಳ್ಳಾಲದಲ್ಲಿ 23.2 ಮಿಮೀ ಮಳೆಯಾಗಿದೆ.

ಮಳೆ ಮುನ್ಸೂಚನೆ

ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ, ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ದಿನದ ಅವಧಿಯಲ್ಲಿ ಒಂದೆರಡು ಬಾರಿ ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದೆ. ಆದರೆ, ಕರಾವಳಿ ತೀರ ಭಾಗಗಳಲ್ಲಿ ಸಂಜೆ ಮತ್ತು ರಾತ್ರಿಯ ವೇಳೆಗೆ ಮಳೆ ಮತ್ತಷ್ಟು ಬಿರುಸುಕೊಳ್ಳಲಿದ್ದು, ಉತ್ತಮ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಚಾರ್ಮಾಡಿ ಘಾಟ್ ಹಾಗೂ ಘಾಟ್ ಭಾಗದ ರಸ್ತೆಗಳಲ್ಲಿ ಸಂಜೆ ವೇಳೆ ಮಳೆಯೊಂದಿಗೆ ದಟ್ಟ ಮಂಜು ಕವಿಯುವ ಸಾಧ್ಯತೆ ಇರುವುದರಿಂದ ವಾಹನ ಸವಾರರು ಜಾಗರೂಕರಾಗಿ ಚಲಿಸುವಂತೆ ಸೂಚಿಸಲಾಗಿದೆ.



ಶನಿವಾರ ಸುರಿದ ಮಳೆಗೆ ಮಂಗಳೂರು ನಗರದಲ್ಲಿ ರಸ್ತೆಯೇ ಹೊಳೆಯಾಗಿತ್ತು

ಜೂನ್ 14ರ ವರೆಗೆ ಉತ್ತಮ ಮಳೆ ಮುನ್ಸೂಚನೆ

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಜೂನ್ 8ರಿಂದ ಮುಂಗಾರು ಮಾರುತಗಳು ಮತ್ತಷ್ಟು ಚುರುಕಾಗಲಿದ್ದು, ಜೂನ್ 14ರ ತನಕ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುವ ಲಕ್ಷಣಗಳಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಅಡೂರಿನಲ್ಲಿ ಬಾಲಕರಿಬ್ಬರು ಸಾವನ್ನಪ್ಪಿದ ಘಟನೆ

ಗಾಯಾಳು ಬಾಲಕ ಚೇತರಿಕೆ

ಕಾಸರಗೋಡು: ಮಳೆಗಾಲ ಆರಂಭಗೊಂಡ ಸಮಯದಲ್ಲೇ ಇಬ್ಬರು ಪುಟಾಣಿಗಳು ಮಣ್ಣು ಜರಿದು ಬಿದ್ದು ಸಾವನ್ನಪ್ಪಿದ ದಾರುಣ ಘಟನೆ ಅಡೂರಿನಲ್ಲಿ ಶನಿವಾರ ಸಂಜೆ ನಡೆದಿದ್ದು, ಇದೇ ಘಟನೆಯಲ್ಲಿ ಗಂಭೀರ ಗಾಯಗೊಂಡ ಇನ್ನೊಬ್ಬ ಬಾಲಕ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾನೆ.

ಕಾಸರಗೋಡು ಜಿಲ್ಲೆಯನ್ನೇ ನಡುಗಿಸಿದ, ಆದೂರು ಪೊಲೀಸ್ ಠಾಣೆ ವ್ಯಾಪ್ತಿಯ ಅಡೂರು ಸಂಕೆಕಡವು ಎಂಬಲ್ಲಿ ಶನಿವಾರ ಸಂಜೆ ನಡೆದ ದುರಂತದಲ್ಲಿ ಅಡೂರು ಪಿಎಚ್‌ಸಿ ಸಮೀಪ ವಾಸಿಸುವ ಅಬೂಬಕ್ಕರ್ ಎಂಬವರ ಮಕ್ಕಳಾದ ಮುನ್ನೀರ್ (10) ಮತ್ತು ಮುಜಮ್ಮಿಲ್ (14) ಮೃತಪಟ್ಟಿದ್ದಾರೆ.

ಗಾಯಗೊಂಡ ನೆರೆಮನೆಯ ತಾಜುದ್ದೀನ್ ಮತ್ತು ವಹ್ಸಾ ದಂಪತಿಯ ಪುತ್ರ ವಹಾಸ್ (14)ನನ್ನು ಚೆಂಗಳ ಇಂದಿರಾನಗರದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಇತ್ತೀಚೆಗಷ್ಟೇ ಇಲ್ಲಿ ಗೃಹ ಪ್ರವೇಶ ನಡೆದಿದ್ದು, ಅದರ ಸಂಭ್ರಮ ಮಾಸುವ ಮೊದಲೇ ದೊಡ್ಡ ದುರಂತ ನಡೆದು ಹೋಗಿದೆ.

ಆದೂರು ಪೊಲೀಸರು ಸ್ಥಳಕ್ಕಾಗಮಿಸಿ ಗೋಡೆ ಕುಸಿದು ಬೀಳಲು ಕಾರಣದ ಬಗ್ಗೆ ತನಿಖೆಯನ್ನು ನಡೆಸುತ್ತಿದ್ದಾರೆ.



ಹೋಂಸ್ಟೇ ಬಾತ್‌ರೂಮ್‌ನಲ್ಲಿ ಗ್ಯಾಸ್ ಗೀಸರ್‌ನಿಂದ ಸೋರಿಕೆ

ವಿಷಾನಿಲದಿಂದ ಉಸಿರುಗಟ್ಟಿ ಯುವತಿ ಮೃತ್ಯು

ಸೋಮವಾರಪೇಟೆ: ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ಖಾಸಗಿ ಸಂಸ್ಥೆಯ ಉದ್ಯೋಗಿನಿಯೊಬ್ಬರು ಹೋಂಸ್ಟೇಯ ಬಾತ್‌ರೂಮ್‌ನಲ್ಲಿ ಗ್ಯಾಸ್ ಗೀಸರ್ ನಿಂದ ಸೋರಿಕೆಯಾದ ವಿಷ ಅನಿಲದಿಂದ ಉಸಿರುಗಟ್ಟಿ ಮೃತಪಟ್ಟಿರುವ ದುರ್ಘಟನೆ ಸೋಮವಾರಪೇಟೆ ಸಮೀಪದ ಕಲಕಂದೂರು ಗ್ರಾಮದಲ್ಲಿ ನಡೆದಿದೆ.



ಮೃತರನ್ನು ವಿನುತಾ (27) ಎಂದು ಗುರುತಿಸಲಾಗಿದೆ. ಅವರು ಬೆಂಗಳೂರಿನ ಹೆಲ್ತ್ ಕೇರ್ ಸಲ್ಯೂಷನ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದು, ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಎರಡು ದಿನಗಳ ಪ್ರವಾಸದ ಅಂಗವಾಗಿ 14 ಸದಸ್ಯರ ತಂಡದೊಂದಿಗೆ ಶನಿವಾರ ಕಲಕಂದೂರಿನ ಖಾಸಗಿ ಹೋಂ ಸ್ಟೇಗೆ ಆಗಮಿಸಿದ್ದರು.

ಭಾನುವಾರ ಬೆಳಿಗ್ಗೆ ವಿನುತಾ ಸ್ನಾನಕ್ಕಾಗಿ ಬಾತ್‌ರೂಮ್‌ಗೆ ತೆರಳಿದ ವೇಳೆ ಅಳವಡಿಸಲಾಗಿದ್ದ ಗ್ಯಾಸ್ ಗೀಸರ್‌ನಿಂದ ವಿಷ ಅನಿಲ ಸೋರಿಕೆಯಾಗಿದ್ದು, ಇದರಿಂದ ಉಂಟಾದ ಆಮ್ಲಜನಕದ ಕೊರತೆಯಿಂದ ಉಸಿರುಗಟ್ಟಿ ಮೃತಪಟ್ಟಿರುವುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ವಿನುತಾ ಅವರು ಮೈಸೂರಿನ ಸಿದ್ದಾರ್ಥನಗರ ನಿವಾಸಿಗಳಾದ ಜಗನ್ನಾಥ್ ಹಾಗೂ ರೇಣುಕಾ ದಂಪತಿಯ ಪುತ್ರಿಯಾಗಿದ್ದಾರೆ.

ಘಟನೆ ಕುರಿತು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಶವಾಗಾರದಲ್ಲಿ ಇರಿಸಲಾಗಿದೆ. ಸುರಕ್ಷತಾ ವ್ಯವಸ್ಥೆಗಳ ಕೊರತೆ ಸೇರಿದಂತೆ ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿದಿದೆ.

ಡ್ರೈವಿಂಗ್ ಲೈಸನ್ಸ್ ಅಮಾನತುಗೊಳಿಸಲ್ಪಟ್ಟವರಿಗೆ ಕಡ್ಡಾಯ ತರಬೇತಿ ಕ್ರಮದಲ್ಲಿ ಅಲ್ಪ ಸಡಿಲಿಕೆ

ಕಾಸರಗೋಡು: ಸಾರಿಗೆ ಕಾನೂನು ಉಲ್ಲಂಘಿಸಿ ವಾಹನ ಚಲಾಯಿಸಿದ ತಪ್ಪಿಗಾಗಿ ಡ್ರೈವಿಂಗ್ ಲೈಸನ್ಸ್ ಅಮಾನತುಗೊಳಿಸಲ್ಪಟ್ಟವರಿಗೆ ಆ ಲೈಸನ್ಸ್ ಮರಳಿ ಲಭಿಸಲು ಕಡ್ಡಾಯ ಐದು ದಿನಗಳ ತರಬೇತಿ ಏರ್ಪಡಿಸಿರುವ ಸಾರಿಗೆ ಇಲಾಖೆ ತನ್ನ ಆ ನಿಲುವಿ ನಲ್ಲಿ ಈಗ ಅಲ್ಪ ಸಡಿಲಿಕೆ ತಂದಿದೆ.



ಸಾರಿಗೆ ಕಾನೂನು ಉಲ್ಲಂಘಿಸಿ ವಾಹನ ಚಲಾಯಿಸುವವರಿಗೆ ಈಗ ಐದು ದಿನಗಳ ಕಡ್ಡಾಯ ತರಬೇತಿಗೆ ಒಳಪಡಬೇಕಾಗಿದೆ. ಆದರೆ ಹೀಗೆ ಸಾರಿಗೆ ಕಾನೂನನ್ನು ಉಲ್ಲಂಘಿಸಿ ವಾಹನ ಚಲಾಯಿಸಿದವರಲ್ಲಿ ಗಂಭೀರವಾದ ರೀತಿಯ ಅಪರಾಧ ಕೃತ್ಯವೆಸಗದೇ ಇರುವವರಿಗೆ ಐದು ದಿನಗಳ ಕಡ್ಡಾಯ ತರಬೇತಿಯನ್ನು ಇನ್ನು ಮೂರು ದಿನಗಳಿಗೆ ಇಳಿಸಲು ಸಾರಿಗೆ ಇಲಾಖೆ ತೀರ್ಮಾನಿಸಿದೆ.

ಮದ್ಯದ ಅಮಲಿನಲ್ಲಿ ವಾಹನ ಚಲಾಯಿಸಿ ಅಪಘಾತ ಸೃಷ್ಟಿಸುವಿಕೆ, ಅಪಾಯಕಾರಿ ರೀತಿಯಲ್ಲಿ ವಾಹನ ಚಲಾಯಿಸುವ ಮೂಲಕ ಮರಣ ಸಂಭವಿಸುವಿಕೆ, ಮದ್ಯದಮಲಿನಲ್ಲಿ ವಾಹನ ಚಲಾಯಿಸಿ ಗಾಯ ಉಂಟು ಮಾಡುವಿಕೆ ಇತ್ಯಾದಿ ಗಂಭೀರವಾದ ರೀತಿಯ ಸಾರಿಗೆ ಉಲ್ಲಂಘಿಸುವವರಿಗೆ ಮಾತ್ರ ಇನ್ನು ಐದು ದಿನಗಳ ಕಡ್ಡಾಯ ತರಬೇತಿಯನ್ನು ಸೀಮಿತಗೊಳಿಸಲು ಇಲಾಖೆ ತೀರ್ಮಾನಿಸಿದೆ. ಇಂತಹ ಅಪರಾಧ ಕೃತ್ಯ ನಡೆಸಿದವರ ಡ್ರೈವಿಂಗ್ ಲೈಸನ್ಸ್‌ನ್ನು ಒಂದು ವರ್ಷ ತನಕ ಅಮಾನತುಗೊಳಿಸಲಾಗುತ್ತಿದೆ. ಇನ್ನು ಮದ್ಯದಮಲಿನಲ್ಲಿ ವಾಹನ ಚಲಾಯಿಸುವಿಕೆ (ಸಾವು ನೋವು ಉಂಟಾಗದ ರೀತಿಯಲ್ಲಿ) ಅಮಿತ ವೇಗ, ಸುರಕ್ಷಿತವಲ್ಲದ ರೀತಿಯಲ್ಲಿ ವಾಹನ ಚಲಾಯಿಸುವಿಕೆ, ಅಪಾಯ ಕಾರಿ ರೀತಿಯಲ್ಲಿ (ಅಪಘಾತ ಉಂಟಾಗದಿದ್ದಲ್ಲಿ) ವಾಹನ ಚಲಾಯಿಸಿದವರಿಗೆ ಇನ್ನು ಐದು ದಿನಗಳ ಬದಲು ಕಡ್ಡಾಯ ತರಬೇತಿಯನ್ನು 3 ದಿನಗಳಿಗೆ ಇಳಿಸಲು ಇಲಾಖೆ ತೀರ್ಮಾನಿಸಿದೆ.


ಕೇರಳ ರಾಜ್ಯ ಸಾರಿಗೆ ಇಲಾಖೆಯ ಮಹತ್ತರ ಕೊಡುಗೆ

ಇನ್ನು ಖಾಸಗಿ ಬಸ್‌ಗಳಲ್ಲಿಯೂ ವಿದ್ಯಾರ್ಥಿಗಳಿಗೆ ಡಿಜಿಟಲ್ ಪಾಸ್

ಕಾಸರಗೋಡು: ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಕನ್ಸೆಷನಲ್ ಕಾರ್ಡ್ (ಡಿಜಿಟಲ್ ಪಾಸ್) ಇರುವ ರೀತಿಯಲ್ಲಿ ಖಾಸಗಿ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಡಿಜಿಟಲ್ ಪಾಸ್ ಸೌಕರ್ಯ ಏರ್ಪಡಿಸಲು ರಾಜ್ಯ ಸಾರಿಗೆ (ಮೋಟಾರು ವಾಹನ) ಇಲಾಖೆ ತೀರ್ಮಾನಿಸಿದೆ. ಅದರಂತೆ ಮೋಟಾರು ವಾಹನ ಇಲಾಖೆಯ ಎಂವಿಡಿ ಲೀಡ್ಸ್ ಎಂಬ ಹೆಸರಿನ ಮೊಬೈಲ್ ಅಪ್ಲಿಕೇಷನ್ ಮತ್ತು ವೆಬ್‌ಸೈಟ್ ಮೂಲಕ ಡಿಜಿಟಲ್ ಪಾಸ್ ಸೌಕರ್ಯ ಜ್ಯಾರಿಗೊಳಿಸಲಾಗುವುದು.

ಡಿಜಿಟಲ್ ಪಾಸ್ ಸೌಕರ್ಯ

ಸ್ಥಳೀಯಾಡಳಿತ, ಖಾಸಗಿ ಮತ್ತು ಸಮಾನಾಂತರ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಡಿಜಿಟಲ್ ಪಾಸ್ ಸೌಕರ್ಯ ಏರ್ಪಡಿಸಲಾಗಿದೆ. ಇನ್ನು ಸರಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ತಮ್ಮ ಐಡಿ ಕಾರ್ಡ್ ತೋರಿಸಿದಲ್ಲಿ ಖಾಸಗಿ ಬಸ್‌ಗಳಲ್ಲಿ ಟಿಕೆಟ್ ದರ ರಿಯಾಯಿತಿ ಲಭಿಸುತ್ತಿದೆ. ವಿದ್ಯಾರ್ಥಿಗಳಿಗೆ ಜ್ಯಾರಿಯಲ್ಲಿ ಈಗ ಪೇಪರ್ ಕನ್ಸೆಶನ್ ಕಾರ್ಡ್ ನೀಡಲಾಗುತ್ತಿದೆ. ಇಂತಹ ಕ್ರಮ ಡಿಜಿಟಲ್ ಪಾಸ್ ಲಭಿಸುವ ತನಕ ಮುಂದುವರಿಯಲಿದೆ.





ಹೆಸರು ನೋಂದಾಯಿಸಿ

ಡಿಜಿಟಲ್ ಪಾಸ್‌ಗಾಗಿ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗಳು ರಾಜ್ಯ ಮೋಟಾರು ವಾಹನ ಇಲಾಖೆ ಎಂವಿಡಿ ಲೀಡ್ಸ್ ಎಂಬ ವೆಬ್‌ಸೈಟ್‌ನಲ್ಲಿ ತಮ್ಮ ಹೆಸರು ನೋಂದಾಯಿಸಬೇಕು. ಹೀಗೆ ಹೆಸರು ನೋಂದಾಯಿಸಿದ ಬಳಿಕ ಪ್ರತೀ ಶಾಲೆಗೆ ಯೂಸರ್ ನೇಮ್ ಮತ್ತು ಪಾಸ್‌ವಾರ್ಡ್ ಲಭಿಸಲಿದೆ. ಇನ್ನು ವಿದ್ಯಾರ್ಥಿಗಳು ತಮ್ಮ ಮೊಬೈಲ್ ಫೋನ್‌ನಲ್ಲಿ ಎಂವಿಡಿ ಲೀಡ್ಸ್ ಆ್ಯಫ್ ಇನ್‌ಸ್ಟಾಲ್ ನಡೆಸಬೇಕು. ನಂತರ ಅವರು ಮೊಬೈಲ್ ಫೋನ್ ನಂಬ್ರ, ಪಾಸ್‌ಪೋರ್ಟ್ ಅಳತೆಯ ಫೋಟೋ ಮತ್ತು ತಾವು ಕಲಿಯುವ ಶಾಲೆ ಮತ್ತು ತರಗತಿ ಆ್ಯಪ್‌ನಲ್ಲಿ ಅಫ್‌ಲೋಡ್ ಮಾಡಿ ಪಾಸ್‌ಗಾಗಿ ಅರ್ಜಿ ಸಲ್ಲಿಸಬೇಕು.

ಆರ್‌ಟಿಒಗೆ ಫಾರ್ವರ್ಡ್ ಮಾಡಬೇಕು

ಹೀಗೆ ವಿದ್ಯಾರ್ಥಿಗಳು ಸಲ್ಲಿಸುವ ಅರ್ಜಿ ಮೊದಲು ಅವರು ಕಲಿಯುವ ಶಿಕ್ಷಣ ಸಂಸ್ಥೆಗೆ ಲಭಿಸಲಿದೆ. ಅದಕ್ಕೆ ಆ ಶಿಕ್ಷಣ ಸಂಸ್ಥೆ ಅಂಗೀಕಾರ ನೀಡಿ ಅದನ್ನು ನಂತರ ಆರ್‌ಟಿಒಗೆ ಫಾರ್ವಡ್ ಮಾಡಬೇಕು. ಅದನ್ನು ಆರ್‌ಟಿಒ ಪರಿಶೀಲಿಸಿದ ಬಳಿಕ ಕನ್ಸೆಶ್ಯನ್ ಕಾರ್ಡ್ ಮಂಜೂರು ಮಾಡಲಿದೆ. ವಿದ್ಯಾರ್ಥಿಗಳು ಆ ಕಾರ್ಡ್‌ನ್ನು ತಮ್ಮ ಮೊಬೈಲ್ ಫೋನ್‌ನಲ್ಲಿ ಸೇವ್ ಮಾಡಬೇಕು. ಮಾತ್ರವಲ್ಲದೆ ಅದರ ಪ್ರಿಂಟೌಂಟ್ ತೆಗೆದು ಅದನ್ನು ಸಂರಕ್ಷಿಸಿಡಬೇಕಾಗಿದೆ. ಪ್ರಿಂಟೌಂಟ್ ಪ್ರಯಾಣ ವೇಳೆ ಬಸ್ ಕಂಡಕ್ಟರ್‌ಗೆ ತೋರಿಸಬೇಕು. ಆ ಕಾರ್ಡ್‌ನಕ್ಯೂ ಆರ್ ಕೋಡ್‌ನ್ನು ಸ್ಕ್ಯಾನ್ ಮಾಡಿ ಅದು ಅಸಲಿಯಾಗಿದೆಯೇ ಎಂಬುದನ್ನು ಖಾತರಿಪಡಿಸ ಬಹುದಾಗಿದೆ. ಹೀಗೆ ಲಭಿಸುವ ಕಾರ್ಡ್‌ನಲ್ಲಿ ವಿದ್ಯಾರ್ಥಿಗಳ ಹೆಸರು, ವಿಳಾಸ, ಅವರು ಕಲಿಯುತ್ತಿರುವ ಶಿಕ್ಷಣ ಸಂಸ್ಥೆಯ ಹೆಸರು, ಕಾರ್ಡ್‌ನ ನಿಗದಿತ ಅವಧಿ, ಅದು ಯಾವ ಆರ್‌ಟಿಒ ಆ ಕಚೇರಿ ವ್ಯಾಪ್ತಿಗೊಳಪಟ್ಟಿದೆ ಎಂಬ ಮಾಹಿತಿಯೂ ಲಭ್ಯವಾಗಲಿದೆ.



ಉಳ್ಳಾಲ ದರ್ಗಾ, ಚೀರುಂಭಾ ಭಗವತೀ ಕ್ಷೇತ್ರ, ತೊಕ್ಕೊಟ್ಟು ಸಂತ ಸೆಬಾಸ್ಟಿಯನ್ನರ ಕ್ಷೇತ್ರಕ್ಕೆ ಭೇಟಿ, ಪ್ರಾರ್ಥನೆ ಸಲ್ಲಿಕೆ

ಸಚಿವ ಸ್ಥಾನ ಕ್ಷೇತ್ರದ ಮತದಾರರಿಗೆ ಸಂದ ಗೌರವ: ಸಚಿವ ಯು.ಟಿ. ಖಾದರ್

ಉಳ್ಳಾಲ: ರಾಜಕೀಯದಲ್ಲಿ ಅಜ್ಞಾತವಾಸದಲ್ಲಿದ್ದ ಅನುಭವ ತನಗಾಗಿದೆ. ಈ ಬಾರಿ ಮತ್ತೆ ಸಚಿವನಾಗಿರುವುದು ನನ್ನ ಕ್ಷೇತ್ರದ ಮತದಾರರಿಗೆ ಸಂದ ಗೌರವವಾಗಿದೆ. ಐದು ಬಾರಿ ಶಾಸಕನಾಗುವ ಜೊತೆಗೆ ನಾಲ್ಕು ಇಲಾಖೆಯ ಸಚಿವನಾಗಿ, ವಿರೋಧ ಪಕ್ಷದ ಉಪನಾಯಕನಾಗಿ, ಸ್ಪೀಕರ್ ಆದ ಬಳಿಕ ಇದೀಗ ಮತ್ತೆ ಆರೋಗ್ಯ ಸಚಿವನಾಗುವ ಅವಕಾಶ ಸಿಕ್ಕಿರುವುದಕ್ಕೆ ನಿಮ್ಮೆಲ್ಲರ ಸಹಕಾರವೇ ಕಾರಣವಾಗಿದೆಯೆಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದರು.

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಆರೋಗ್ಯ ಸಚಿವನಾಗಿ ಅಕಾರ ಸ್ವೀಕರಿಸಿದ ಬಳಿಕ ಭಾನುವಾರದಂದು ಪ್ರಥಮ ಬಾರಿಗೆ ತನ್ನ ಸ್ವಕ್ಷೇತ್ರಕ್ಕೆ ಮರಳಿದ ಅವರು ಉಳ್ಳಾಲದ ಸಯ್ಯದ್ ಮದನಿ ದರ್ಗಾ, ಚೀರುಂಭ ಭಗವತೀ ಕ್ಷೇತ್ರ ಹಾಗೂ ತೊಕ್ಕೊಟ್ಟುವಿನ ಸಂತ ಸೆಬಾಸ್ಟಿಯನ್ ಕ್ಷೇತ್ರಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೇ ನನ್ನ ಗುರಿ ಆಗಿದ್ದು, ನಾನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದ ಜನರು ಎಂದಿಗೂ ತಲೆ ತಗ್ಗಿಸದಂತೆ ಕಾರ್ಯ ನಿರ್ವಹಿಸುವುದು ನನ್ನ ಜವಬ್ದಾರಿಯಾಗಿದೆ. ಆರೋಗ್ಯ ಸಚಿವನಾಗಿ ಏನೆಲ್ಲಾ ಕೆಲಸ ಮಾಡಲು ಸಾಧ್ಯವೋ ಅದನ್ನು ಮೊದಲು ಕ್ಷೇತ್ರದಲ್ಲಿ ಮಾಡುತ್ತೇನೆ. ಇದುವರೆಗೆ ನನಗೆ ಸಿಕ್ಕಿದ ಪದವಿಗಳು ಕ್ಷೇತ್ರದ ಜನಸಾಮಾನ್ಯರಿಗೆ ಸಿಕ್ಕಿದ ಗೌರವ ಆಗಿದೆ. ಆಸ್ಪತ್ರೆಗಳಲ್ಲಿ ಯಾವುದೇ ರೀತಿಯ ಸಮಸ್ಯೆ ಬಾರದಂತೆ ಕೆಲಸ ನಿರ್ವಹಿಸುವ ಜವಾಬ್ದಾರಿ ನನ್ನದು. ಸರ್ಕಾರಿ ಆಸ್ಪತ್ರೆಗೆ ಮೂಲಭೂತ ಸೌಕರ್ಯ ಕೊರತೆ ಇದ್ದಲ್ಲಿ ಶೀಘ್ರ ಇತ್ಯರ್ಥ ಪಡಿಸಲಾಗುವುದೆಂದರು.



> **ಆರೋಗ್ಯ ಕ್ಷೇತ್ರದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ದೊಡ್ಡ ಮಟ್ಟದ ಆರೋಗ್ಯ ಯೋಜನೆಗಳ ಅನುಷ್ಠಾನದ ಕನಸಿದ್ದು, ಆರೋಗ್ಯ ಸೇವೆಯಲ್ಲಿ ಮಹತ್ವದ ಬದಲಾವಣೆ ತರಲು ಸರಕಾರವೂ ಬದ್ಧವಾಗಿದೆ. ಜನ ಸಾಮಾನ್ಯರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ನೂತನ ಯೋಜನೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳು ಮುಂದಿನ ದಿನಗಳಲ್ಲಿ ಅನುಷ್ಠಾನಗೊಳ್ಳಲಿವೆ.**
> ■ ಯು.ಟಿ.ಖಾದರ್ ಆರೋಗ್ಯ ಸಚಿವರು

ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್, ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ್, ಮುಖಂಡರಾದ ಮನ್ಸೂರ್ ಮಂಚಿಲ, ಗ್ಯಾರಂಟಿ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷರಾದ ಸುರೇಖಾ ಚಂದ್ರಹಾಸ್, ತಾಲೂಕು ಅಧ್ಯಕ್ಷ ರಫೀಕ್ ಅಂಬ್ಲಮೊಗರು, ಪ್ರಮುಖರಾದ ದೇವಕಿ ಉಳ್ಳಾಲ, ಪುರುಷೋತ್ತಮ ಶೆಟ್ಟಿ ಪಿಲಾರ್, ದಿನೇಶ್ ಕುಂಪಲ, ಚೀರುಂಭ ಭಗವತಿ ಕ್ಷೇತ್ರದ ಮಹಿಳಾ ವೇದಿಕೆಯ ಪ್ರಧಾನ ಸಂಚಾಲಕಿ ಮಾಧವಿ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು.

ಉಳ್ಳಾಲ ದರ್ಗಾಕ್ಕೆ ಭೇಟಿ ನೀಡಿದ ಸಚಿವ ಖಾದರ್ ಅವರನ್ನು ದರ್ಗಾ ಉಪಾಧ್ಯಕ್ಷ ಅಶ್ರಫ್ ರೈಟ್ ವೇ ಬರಮಾಡಿಕೊಂಡರು.ಈ ಸಂದರ್ಭದಲ್ಲಿ ದರ್ಗಾ ವತಿಯಿಂದ ಸಚಿವರನ್ನು ಸನ್ಮಾನಿಸಲಾಯಿತು.

ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರಕ್ಕೆ ಭೇಟಿ ನೀಡಿದ ಸಚಿವ ಖಾದರ್ ಅವರನ್ನು ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ ಅವರು ಸ್ವಾಗತಿಸಿದರು. ಈ ವೇಳೆ ಕ್ಷೇತ್ರದ ಪರವಾಗಿ ಸಚಿವರನ್ನು ಸನ್ಮಾನಿಸಲಾಯಿತು.

ತೊಕ್ಕೊಟ್ಟು ಸಂತ ಸೆಬಾಸ್ಟಿಯನ್ನರ ಕ್ಷೇತ್ರಕ್ಕೆ ಭೇಟಿ ನೀಡಿದ ಸಚಿವರನ್ನು ಚರ್ಚ್‌ನ ಧರ್ಮಗುರುಗಳಾದ ರೆ.ಫಾ.ಆಂಡ್ರ್ಯೂ ಲಿಯೊ ಡಿಸೋಜ ಅವರು ಸ್ವಾಗತಿಸಿ ಸನ್ಮಾನಿಸಿದರು.

ಜನಾರ್ದನ ಪೂಜಾರಿ ಭೇಟಿಯಾದ ಸಚಿವ ಖಾದರ್

ಬಂಟ್ವಾಳ; ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ, ಮಾಜಿ ಕೇಂದ್ರ ಸಚಿವ ಬಿ.ಜನಾರ್ದನ ಪೂಜಾರಿ ಅವರನ್ನು ಭಾನುವಾರ ಸಂಜೆ ಬಂಟ್ವಾಳದ ಬಸ್ತಿಪಡ್ಪುವಿನಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿದ ರಾಜ್ಯದ ನೂತನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ಸಚಿವ ಯು.ಟಿ.ಖಾದರ್ ಅವರು ಆಶೀರ್ವಾದ ಪಡೆದರು.

ಮಾಜಿಕೇಂದ್ರ ಸಚಿವ ಜನಾರ್ದನ ಪೂಜಾರಿಯವರಿಗೆ ರಾಜಕೀಯವಾಗಿ ಗುರುವಿನ ಸ್ಥಾನ ನೀಡಿರುವ ಸಚಿವ ಯು.ಟಿ.ಖಾದರ್ ಅವರು ಒಂದಷ್ಟು ಹೊತ್ತು ಕುಶಲೋಪಚರಿ ನಡೆಸಿ ಅವರ ಆರೋಗ್ಯ ವಿಚಾರಿಸಿ ಮಾರ್ಗದರ್ಶನ ಪಡೆದರು.

ರೈ ನಿವಾಸಕ್ಕೆ ಭೇಟಿ

ಇಲ್ಲಿಂದ ನೇರವಾಗಿ ಕಳ್ಳಿಗೆಯಲ್ಲಿರುವ ಮಾಜಿ ಸಚಿವ ರಮಾನಾಥ ರೈ ಅವರ ಮನೆಗೂ ಸಚಿವ ಯು.ಟಿ.ಖಾದರ್ ಅವರು ನೀಡಿ ಆಶೀರ್ವಾದ ಪಡೆದರಲ್ಲದೆ ರಾಜ್ಯ ಮತ್ತು ಜಿಲ್ಲಾ ರಾಜಕಾರಣದ ಬಗ್ಗೆಯು ಒಂದಷ್ಟು ಹೊತ್ತು ಚರ್ಚೆ ನಡೆಸಿದರು.

ಮೂಡ ಅಧ್ಯಕ್ಷ ಸದಾಶಿವ ಉಳ್ಳಾಲ, ಬಂಟ್ವಾಳ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್, ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ, ಜಿ.ಪಂ.ಮಾಜಿ ಸದಸ್ಯರಾದ ಚಂದ್ರಪ್ರಕಾಶ್ ಶೆಟ್ಟಿ, ಪದ್ಮಶೇಖರ ಜೈನ್, ಬೂಡಾ ಮಾಜಿ ಅಧ್ಯಕ್ಷ ಪಿಯೂಸ್ ಎಲ್. ರೋಡ್ರಿಗಸ್, ಬ್ಲಾಕ್ ಅಧ್ಯಕ್ಷರಾದ ಬಾಲಕೃಷ್ಣ ಅಂಚನ್, ಚಂದ್ರಶೇಖರ ಭಂಡಾರಿ, ತಾ.ಪಂ. ಮಾಜಿ ಅಧ್ಯಕ್ಷ ಪದ್ಮನಾಭ ರೈ, ಮಾಜಿ ಉಪಾಧ್ಯಕ್ಷ ಅಬ್ಬಾಸ್ ಅಲಿ, ಮಾಣಿ ಗ್ರಾ.ಪಂ.ನಿಕಟಪೂರ್ವ ಅಧ್ಯಕ್ಷ ಸುದೀಪ್ ಕುಮಾರ್ ರೈ, ಮಾಜಿ ಕಾರ್ಪೋರೇಟರ್ ಅಪ್ಪಿ , ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಇಬ್ರಾಹಿಂ ನವಾಜ್, ಸಾಮಾಜಿಕ ಜಾಲತಾಣ ಮುಖಂಡ ಪ್ರವೀಣ್ ರೋಡ್ರಿಗಸ್ ಮತ್ತಿತರ ಪಕ್ಷದ ಮುಖಂಡರು ಭಾಗವಹಿಸಿದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 29° 25° | ಉಡುಪಿ 29° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 08, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಹಳೆ ವಿದ್ಯಾರ್ಥಿಗಳಿಂದ 50 ವರ್ಷಗಳ ಬಳಿಕ 'ನೆನಪು ಮೆಲುಕು'


ಪುಟ 4
ಗಡಿನಾಡಿನಲ್ಲಿ ಕನ್ನಡ ಗ್ರಾಮದ ಪರಿಕಲ್ಪನೆ ಅಭಿನಂದನೀಯ

ಮಂಗಳೂರು ರಾಮಕೃಷ್ಣ ಮಿಷನ್‌ನಿಂದ ಸ್ಟೇಟ್‌ಬ್ಯಾಂಕ್ ಪರಿಸರ ಕ್ಲೀನ್ ಕ್ಲೀನ್...



ಮಂಗಳೂರಿನ ರಾಮಕೃಷ್ಣ ಮಿಷನ್ ವತಿಯಿಂದ ಸ್ವಚ್ಛ ಮಂಗಳೂರು ಅಭಿಯಾನದ ಭಾಗವಾಗಿ ಭಾನುವಾರ ಮಂಗಳೂರಿನ ಸ್ಟೇಟ್ ಬ್ಯಾಂಕ್ ಪರಿಸರದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ನೂರಾರು ಮಂದಿ ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡರು. ಬಸ್ ನಿಲ್ದಾಣದಲ್ಲಿ ಚದುರಿದ್ದ ಪ್ಲಾಸ್ಟಿಕ್ ತ್ಯಾಜ್ಯ, ಆಹಾರ ಪ್ಯಾಕೆಟ್‌ಗಳು, ಕಾಗದ ಹಾಗೂ ಇತರ ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.

ಸುತ್ತಮುತ್ತ

ಕರಾವಳಿಯಲಿ ಜೂ.10ರವರೆಗೆ ರೆಡ್ ಅಲರ್ಟ್

ಮಂಗಳೂರು: ಕಳೆದ ಎರಡು ದಿನಗಳಿಂದ ಎಡೆಬಿಡದೆ ಸುರಿದ ಮಳೆ ಭಾನುವಾರ ಕಡಿಮೆಯಾಗಿದೆ. ಕರಾವಳಿಯಲ್ಲಿ ಜೂ.8,9,10 ರವರೆಗೆ ಗುಡುಗು ಸಹಿತ ಉತ್ತಮ ಮಳೆಯಾಗಲಿದ್ದು ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಜೂ. 11ರಿಂದ 12ರವರೆಗೆ ಎಲ್ಲೋ ಅಲರ್ಟ್ ಇರಲಿದೆ. ಜು.14ರ ಬಳಿಕ ಮಳೆ ಮತ್ತೆ ಕಡಿಮೆಯಾಗುವ ಲಕ್ಷಣಗಳಿವೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಉಡುಪಿ-ಕಾರ್ಕಳ ಸೇರಿದಂತೆ ಜಿಲ್ಲಾದ್ಯಂತ ಉತ್ತಮ ಮಳೆ

ಉಡುಪಿ: ಉಡುಪಿ ಜಿಲ್ಲೆಯಾದ್ಯಂತ ಕಳೆದ 24 ಗಂಟೆಗಳಲ್ಲಿ ಸಾಧಾರಣದಿಂದ ಉತ್ತಮ ಮಳೆಯಾಗಿದ್ದು, ಜಿಲ್ಲೆಯ ಇಂದಿನ ಸರಾಸರಿ ಮಳೆ ಪ್ರಮಾಣ 16.4 ಮಿ.ಮೀ. ದಾಖಲಾಗಿದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸಾಧಾರಣ ಮಳೆಯಾಗಿದ್ದು, ಯಾವುದೇ ಭಾಗದಲ್ಲಿ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಕಾರ್ಕಳ ತಾಲೂಕಿನಲ್ಲಿ ಅತ್ಯಧಿಕ 25.8 ಮಿ.ಮೀ. ಮಳೆಯಾಗಿದ್ದರೆ, ಬೈಂದೂರು ತಾಲೂಕಿನಲ್ಲಿ 25.1 ಮಿ.ಮೀ. , ಕಾಪು ತಾಲೂಕಿನಲ್ಲಿ 22.3 ಮಿ.ಮೀ. ಮಳೆ ದಾಖಲಾಗಿದೆ. ಉಳಿದಂತೆ ಬ್ರಹ್ಮಾವರ ತಾಲೂಕಿನಲ್ಲಿ 13.1 ಮಿ.ಮೀ., ಕುಂದಾಪುರದಲ್ಲಿ 10.3 ಮಿ.ಮೀ. ಮತ್ತು ಉಡುಪಿ ತಾಲೂಕಿನಲ್ಲಿ 9.6 ಮಿ.ಮೀ. ಮಳೆಯಾಗಿದೆ. ಹೆಬ್ರಿ ತಾಲೂಕಿನಲ್ಲಿ ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಅಂದರೆ 5.7 ಮಿ.ಮೀ. ಮಳೆ ಬಿದ್ದಿದೆ.

ಶಿರಾಡಿ: ಹಗಲಿನಲ್ಲಿ ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಉಪ್ಪಿನಂಗಡಿ: ಶಿರಾಡಿ ಗ್ರಾಮದ ಕಳಪ್ಪಾರು ಎಂಬಲ್ಲಿ ಭಾನುವಾರ ಬೆಳಿಗ್ಗೆ ಮನೆಯ ಹಿಂಬಾಗಿಲ ಮೂಲಕ ಮನೆಯೊಳಗೆ ನುಗ್ಗಿ ಕಪಾಟಿನಲ್ಲಿದ್ದ ಚಿನ್ನಾಭರಣ ದೋಚಿರುವ ಘಟನೆ ನಡೆದಿದೆ. ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳಪ್ಪಾರು ನಿವಾಸಿ ಟಿ.ಜೆ. ಕುರಿಯಕೋಸ್ ಎಂಬವರ ಮನೆಯಲ್ಲಿ ಕೃತ್ಯ ನಡೆದಿದ್ದು, ಸುಮಾರು 10 ಗ್ರಾಂ ತೂಕದ ಚಿನ್ನದ ಸರ, 2 ಗ್ರಾಂ ತೂಕದ ಉಂಗುರ, 10 ಗ್ರಾಂ ತೂಕದ ಬಳೆ, 4 ಗ್ರಾಂ ತೂಕದ ನೆಕ್ಲೆಸ್, 8 ಗ್ರಾಂ ತೂಕದ ಎರಡು ಜೋಡಿ ಬೆಂಡೋಲೆಗಳು ಸೇರಿದಂತೆ ಒಟ್ಟು ಸುಮಾರು 34 ಗ್ರಾಂ ತೂಕದ ಚಿನ್ನಾಭರಣ ಕಳವು ಆಗಿರುವುದಾಗಿ ಅವರು ಉಪ್ಪಿನಂಗಡಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಭಾನುವಾರ ಬೆಳಿಗ್ಗೆ ಮನೆಗೆ ಬೀಗ ಹಾಕಿ ಚರ್ಚ್‌ಗೆ ತೆರಳಿದ ಸಂದರ್ಭ ಈ ಘಟನೆ ನಡೆದಿದೆ.

ಕಡಲತಡಿಯ ಜನತೆಗೆ ನಿದ್ರೆಯಿಲ್ಲದ ರಾತ್ರಿಗಳ ಆತಂಕ ಕಾದಿದೆಯೇ

ಕಡಲ್ಕೊರೆತಕ್ಕೆ ಕಡಿವಾಣ ಎಂದು?

ಮರೀಚಿಕೆಯಾಗಿಯೇ ಉಳಿದ ಶಾಶ್ವತ ಪರಿಹಾರದ ಭರವಸೆ

ಮಂಗಳೂರು: ಮಳೆಗಾಲ ಆರಂಭವಾಗಿದೆ. ಕಡಲ್ಕೊರೆತ ಎದುರಾಗುವ ಪ್ರದೇಶದ ಜನರಿಗೆ ಮಾತ್ರ ನಿದ್ರೆಯಿಲ್ಲದ ದಿನಗಳು ಕಳೆಯುವ ಆತಂಕ ಎದುರಾಗಿದೆ.

ಭಯದಲ್ಲೇ ರಾತ್ರಿ ಕಳೆಯಬೇಕಿದೆ

ಹೌದು, ಪ್ರತಿವರ್ಷ ಕಡಲ್ಕೊರೆತದ ಸಂದರ್ಭ ಕಡಲ ತೀರದತ್ತ ಜನಪ್ರತಿನಿಧಿಗಳ ತಿರುಗಾಟ ಇದ್ದೇ ಇರುತ್ತದೆ. ಆದರೆ ಕಡಲ ತೀರದ ಮಂದಿ ಮಾತ್ರ ಎರಡು ತಿಂಗಳು ನಿದ್ದೆ ಇಲ್ಲದ ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ಏಕೆಂದರೆ ಭೋರ್ಗರೆವ ಕಡಲು ಯಾವಾಗ ಉಕ್ಕಿ ಹರಿದು ಮನೆಯನ್ನು ಆಪೋಷನ ಪಡೆದುಕೊಳ್ಳುತ್ತದೋ ಎಂದು ಹೇಳಲಾಗದು. ಈ ಭೀತಿ ಇಲ್ಲಿನವರನ್ನು ಕಾಡುತ್ತಲೇ ಇರುತ್ತದೆ.


ಹೊಸ ಸಚಿವರು ಬಂದರೂ ಬದಲಾಗಿಲ್ಲ

ಇದುವರೆಗೆ ಅದೆಷ್ಟೋ ಸರ್ಕಾರಗಳು ಬದಲಾಗಿವೆ. ಸಚಿವರು ಬದಲಾಗುತ್ತಲೇ ಇದ್ದಾರೆ. ಆದರೆ ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಎಂಬುದು ಮಾತ್ರ ಮರೀಚಿಕೆಯಾಗಿಯೇ ಉಳಿದಿದೆ. ಇದೀಗ ಮತ್ತೆ ಯು.ಟಿ.ಖಾದರ್ ಅವರು ಮೂರನೇ ಬಾರಿಗೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ಬಾರಿಯಾದರೂ ತಮ್ಮೂರಿನ ಸಮಸ್ಯೆಗೆ ಪರಿಹಾರ ಸಿಕ್ಕೀತು ಎಂಬ ನಿರೀಕ್ಷೆಯಲ್ಲಿದ್ದಾರೆ ಉಳ್ಳಾಲ ತಾಲೂಕಿನ ಕಡಲ ತೀರದ ಜನತೆ.

ಭರವಸೆಯ ಮಾತುಗಳಿಂದ ಬೇಸೆತ್ತಿದ್ದಾರೆ

2024ರಲ್ಲಿ ರಾಜ್ಯ ಸರ್ಕಾರ ಕಡಲ್ಕೊರೆತ ಶಾಶ್ವತ ಪರಿಹಾರಕ್ಕಾಗಿಯೇ 80 ಕೋಟಿ ರೂಪಾಯಿ ಮೊತ್ತದ ಯೋಜನೆಯೊಂದನ್ನು ಸಿದ್ಧಪಡಿಸಿತ್ತು. ಆದರೆ ಯಾವುದೂ ಪರಿಪೂರ್ಣತೆ ಕಂಡಿಲ್ಲ. ಪ್ರತಿ ವರ್ಷ ಮಳೆಗಾಲ ಬಂದಾಗ ಕಡಲ್ಕೊರೆತ ಶಾಶ್ವತ ಕಾಮಗಾರಿಯ ಮಾತುಗಳು ಮುನ್ನೆಲೆಗೆ ಬರುತ್ತವೆ. ಕಡಲ ತೀರದ ನಿವಾಸಿಗಳಂತೂ ರಾಜಕಾರಣಿಗಳ ಭರವಸೆ ಮಾತುಗಳನ್ನು ಕೇಳಿ ಬೇಸತ್ತು ಹೋಗಿದ್ದಾರೆ.

ಫೈಲ್ ಚಿತ್ರ



ಕಳೆದ ವರ್ಷ ಕಡಲ್ಕೊರೆತದಿಂದ ತತ್ತರಿಸಿದ ಉಳ್ಳಾಲ ತಾಲೂಕಿನ ಮುಕ್ಕಚ್ಚೇರಿ ಪ್ರದೇಶ

ಕಡಲ್ಕೊರೆತದ ಸಮಸ್ಯೆಗಳು ಎಲ್ಲೆಲ್ಲಿ ಅಧಿಕ?

ಉಳ್ಳಾಲ ತಾಲೂಕು ವ್ಯಾಪ್ತಿಯ ಉಚ್ಚಿಲ, ಸೋಮೇಶ್ವರ ಉಳ್ಳಾಲ ಸೀ ಗ್ರೌಂಡ್. ಕೈಕೋ, ಮುಕ್ಕಚ್ಚೇರಿ ಹಾಗೂ ಸುತ್ತಲಿನ ಪ್ರದೇಶದ ಜನರಲ್ಲಿ ಕಡಲ್ಕೊರೆತ ಭೀತಿ ಕಳೆದ ಹಲವು ವರ್ಷಗಳಿಂದ ಕಾಡುತ್ತಲೇ ಇದೆ. ಪ್ರತಿ ಬಾರಿ ಕಡಲ್ಕೊರೆತದ ನೆಪದಲ್ಲಿ ಒಂದಷ್ಟು ಅನುದಾನ ಬಿಡುಗಡೆ ಗೊಂಡು ಕಾಟಾಚಾರಕ್ಕೆಂಬಂತೆ ಕಾಮಗಾರಿಗಳು ನಡೆಯುತ್ತವೆ. ಪ್ರತಿ ವರ್ಷವೂ ಇದು ಪುನರಾವರ್ತನೆಯಾಗುತ್ತಿದ್ದು, ಶಾಶ್ವತ ಪರಿಹಾರ ವಂತೂ ಸಿಕ್ಕಿಲ್ಲ ಎನ್ನುತ್ತಾರೆ ಸ್ಥಳೀಯರು. ಇನ್ನು ಉಡುಪಿ ಜಿಲ್ಲೆಯ ಮಲ್ಪೆ, ಪಡುಕರೆ, ಕೋಟೇಶ್ವರ, ಮರವಂತೆ, ಗಂಗೊಳ್ಳಿ ಮತ್ತು ಕಾಸರಗೋಡು ಜಿಲ್ಲೆಯ ಮಂಜೇಶ್ವರ ಉಪ್ಪಳ, ಮಂಗಲ್ಪಾಡಿ, ಬೇಕಲ್, ಉದುಮ, ಮೊಗ್ರಾಲ್ ಮುಂತಾದೆಡೆ ಕಡಲ್ಕೊರೆತ ಸಮಸ್ಯೆ ಕಾಡುತ್ತಲೇ ಇದೆ.

ಪ್ರತಿವರ್ಷ ಭರವಸೆ

ಜನರಲ್ಲಿ ಭರವಸೆ ತುಂಬುವ ರಾಜಕಾರಣಿಗಳು ಕಡಲ್ಕೊರೆತದ ಹೆಸರಿನಲ್ಲಿ ಕೋಟಿ ಕೋಟಿ ಹಣದ ಯೋಜನೆ ಸಿದ್ಧಪಡಿಸುತ್ತಾರೆ. ಆದರೆ ಇದುವರೆಗೆ ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಮಾತ್ರ ಸಿಕ್ಕೇ ಇಲ್ಲ. ಕಡಲ ತೀರಗಳಲ್ಲಿ ಒಂದಷ್ಟು ಕಲ್ಲಿನ ರಾಶಿ ಬಿಟ್ಟರೆ ಮತ್ತೇನು ಕಾಣಸಿಗುವುದಿಲ್ಲ. ಆದರೆ ಕೋಟಿ ಕೋಟಿ ಹಣ ಎಲ್ಲಿ ಹೋಯಿತು ಎಂದು ಲೆಕ್ಕವಿಟ್ಟವರಾರು?

ಭಯದಿಂದಲೇ ಮನೆಯನ್ನು ಬದಲಿಸುತ್ತಾರೆ

ಕಡಲ್ಕೊರೆತ ಜೋರಾಗಿ ಸಮುದ್ರ ಉಕ್ಕಿ ಹರಿದು ನೀರು ಮನೆಗೆ ನುಗ್ಗುವ ಭೀತಿಯಿಂದ ಕಡಲ ತೀರದಲ್ಲಿ ವಾಸ ಕಂಡುಕೊಂಡಿರುವ ಹಲವು ಮಂದಿ ಮಳೆಗಾಲ ಆರಂಭವಾಗುತ್ತಿದ್ದಂತೆ ತಾತ್ಕಾಲಿಕವಾಗಿ ಗುಳೇ ಹೋಗುವುದಿದೆ. ಅವರು ಎರಡು ತಿಂಗಳ ಕಾಲ ಸಂಬಂಧಿಕರ ಮನೆಯಲ್ಲಿ ಉಳಿದುಕೊಳ್ಳುವುದು ಮಾಮೂಲು. ಉಚ್ಚಿಲ, ಸೋಮೇಶ್ವರ, ಉಳ್ಳಾಲ ಸೀ ಗ್ರೌಂಡ್ ವ್ಯಾಪ್ತಿಯ ಮಂದಿ ಈ ಹಿಂದೆ ಹಲವು ಬಾರಿ ಮನೆ ಬದಲಿಸಿದ್ದಿದೆ. ಈ ಬಾರಿಯ ಮಳೆಗಾಲದಲ್ಲಿ ಪರಿಸ್ಥಿತಿ ಯಾವ ರೀತಿ ಎದುರಾಗುವುದೋ ಕಾದುನೋಡಬೇಕಿದೆ.

ಅಪಘಾತ ವಲಯವಾದ ರಾಷ್ಟ್ರೀಯ ಹೆದ್ದಾರಿ ಸೂರಿಕುಮೇರು ಕ್ರಾಸ್

ಹಂಪ್ಸ್ ನಿರ್ಮಾಣಕ್ಕೆ ಸಾರ್ವಜನಿಕರ ಆಗ್ರಹ

ಬಂಟ್ವಾಳ: ಬಿ.ಸಿ.ರೋಡ್ – ಅಡ್ಡಹೊಳೆ ರಾಷ್ಟ್ರೀಯ ಹೆದ್ದಾರಿ ಸೂರಿಕುಮೇರು ಅಪಘಾತಗಳ ವಲಯವಾಗಿ ಗುರುತಿಸಿದ್ದು, ಈಗಾಗಲೇ ಇಲ್ಲಿ ಹಲವಾರು ಅಪಘಾತಗಳು ಸಂಭವಿಸಿ ಸಾವು , ನೋವುಗಳು ಉಂಟಾಗಿರುವ ಹಿನ್ನಲೆಯಲ್ಲಿ ಆತಂಕಿತರಾಗಿರುವ ಸ್ಥಳೀಯರು ಸರ್ವಿಸ್ ರಸ್ತೆಗಳ ಆರಂಭ ಮತ್ತು ಕೊನೆಯಲ್ಲಿ ರಸ್ತೆ ಉಬ್ಬು (ಹಂಪ್ಸ್) ನಿರ್ಮಿಸುವಂತೆ ಆಗ್ರಹಿಸಿದ್ದಾರೆ.

ಅವಘಡಗಳು ನಡೆಯುತ್ತಿವೆ

ಜನನಿಬಿಡ ಪ್ರದೇಶವಾದ ಸೂರಿಕುಮೇರು ಅಪಘಾತ ವಲಯವಾಗಿ ಮಾರ್ಪಟ್ಟಿದ್ದು, ಕಳೆದ ವಾರವಷ್ಟೆ ಇಲ್ಲಿ ಹತ್ತರ ಹರೆಯದ ಬಾಲಕಿ ರಸ್ತೆ ಅಪಘಾತದಿಂದ ಮೃತಪಟ್ಟಿದ್ದು, ಇಲ್ಲಿ ಪ್ರತಿ ದಿನವೂ ಎಂಬಂತೆ ಸಣ್ಣ ಪುಟ್ಟ ಅಪಘಾತಗಳು ನಡೆಯುತ್ತಲೇ ಇರುತ್ತವೆ.



ಬೆಳಿಗ್ಗೆ ಸಂಜೆ ಭಾರಿ ಜನಜಂಗುಳಿ

ಒಂದು ಕಡೆ ಬರಿಮಾರು, ಬರೆಪ್ಪಾಡಿ, ಕಡಮಡಕ ಮೊದಲಾದ ಹಾಗೂ ಇನ್ನೊಂದು ಕಡೆ ಪಲ್ಲತ್ತಿಲ್ಲ ಭಾಗದ ಜನರು ಸೇರುವ ಸ್ಥಳವಿದು. ಉದ್ಯೋಗಿಗಳು, ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳಿಂದ ಇಲ್ಲಿ ಬೆಳಗ್ಗೆ ಮತ್ತು ಸಂಜೆ ಭಾರಿ ಜನಜಂಗುಳಿ ಇರುತ್ತದೆ. ಇಲ್ಲಿ ಸೂಕ್ತ ತಂಗುದಾಣ, ರಸ್ತೆ ಕ್ರಾಸಿಂಗ್ ವ್ಯವಸ್ಥೆ ಇಲ್ಲ. »» ಪುಟ 6

ವೇಗ ಮಿತಿಯೂ ಇಲ್ಲ

ದಾಸಕೋಡಿಯಿಂದ ಸರ್ವಿಸ್ ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳು ಬರಿಮಾರು ಕ್ರಾಸ್‌ನಲ್ಲಿ ಏಕಾಏಕಿ ಬ್ರೇಕ್ ಹಾಕುವಾಗ ಅವಘಡ ಸಂಭವಿಸುತ್ತವೆ. ಇಲ್ಲಿ ವೇಗ ಮಿತಿಯೂ ಅಳವಡಿಸಿಲ್ಲ, ಹಾಗಾಗಿ ಇಲ್ಲಿ ತುರ್ತಾಗಿ ಹಂಪ್ ನಿರ್ಮಿಸುವ ಅಗತ್ಯವಿದೆ ಎನ್ನುತ್ತಾರೆ ಸ್ಥಳೀಯರು.

ಬ್ಯಾನರ್‌ಗಳ ಹಾವಳಿ

ಹೆದ್ದಾರಿ- ಸರ್ವಿಸ್ ರಸ್ತೆ ನಡುವಣ ತಡೆಬೇಲಿಗೆ ಹಲವು ಜಾಹೀರಾತು ಬ್ಯಾನರ್ ಹಾಕಲಾಗುತ್ತಿದ್ದು, ಇದರಿಂದ ವಾಹನಗಳು ಬರುವುದು ಪ್ರಯಾಣಿಕರು, ಸವಾರರಿಗೆ ಕಾಣಿಸುವುದಿಲ್ಲ. ಇದು ಅಪಘಾತಕ್ಕೆ ಕಾರಣ ಆಗುತ್ತಿದ್ದು, ಬ್ಯಾನರ್‌ಗಳ ತೆರವುಗೊಳಿಸಿದರೂ ಮತ್ತೆ ಮತ್ತೆ ಅಳವಡಿಸಲಾಗುತ್ತಿದೆ ಎಂಬ ಆರೋಪ ವ್ಯಕ್ತವಾಗುತ್ತಿದೆ. ಸೂರಿಕುಮೇರು ಪೇಟೆಯಲ್ಲಿ ಫುಟ್‌ಪಾತ್‌ನ್ನು ವಾಹನಗಳು ಪಾರ್ಕಿಂಗ್‌ಗೆ ಆಕ್ರಮಿಸಿಕೊಂಡರೆ, ಇತರ ಕಡೆ ಫುಟ್ ಪಾತ್ ಅವ್ಯವಸ್ಥಿತವಾಗಿದೆ.

ಯುವಕರ ಶ್ರಮದಾನ: ಅಪಾಯಕಾರಿ ರೆಂಬೆಗಳ ತೆರವು



ಹಿರೇಬಂಡಾಡಿ-ಕೊಯಿಲ ರಸ್ತೆಯಲ್ಲಿ ಶಾಖೆಪುರದಿಂದ ಗಂಡಿಬಾಗಿಲು ತನಕ ಸುಮಾರು ಒಂದೂವರೆ ಕಿ.ಮೀ. ತೀರಾ ಕಿರಿದಾದ ರಸ್ತೆಯ ಇಕ್ಕೆಲಗಳಲ್ಲಿರುವ ಮರಗಳ ರೆಂಬೆ, ಕೊಂಬೆಗಳು ರಸ್ತೆಗೆ ಬಾಗಿಕೊಂಡಿದ್ದು ವಾಹನ ಸಂಚಾರಕ್ಕೆ ತೊಡಕು ಉಂಟು ಮಾಡುತ್ತಿದ್ದು ಅಪಘಾತಗಳಿಗೂ ಕಾರಣವಾಗುತ್ತಿತ್ತು. ಸಮಸ್ಯೆ ಗಂಭೀರತೆ ಅರಿತ ಗಂಡಿಬಾಗಿಲು ಪರಿಸರದ ಯುವಕರು ಮರದ ರೆಂಬೆ, ಕೊಂಬೆಗಳ ತೆರವು ಮಾಡಿ ಸಾಮಾಜಿಕ ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ.

ಶಂಕುಸ್ಥಾಪನೆಗೆ ಮಾತ್ರ ಸೀಮಿತವಾದ ಕರಿಂದಳ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಶೋಧನಾ ಕೇಂದ್ರ

ಶಿಲಾನ್ಯಾಸಗೊಂಡು ಬರೋಬ್ಬರಿ 7 ವರ್ಷವಾದರೂ ಆರಂಭವಾಗದ ಕಾಮಗಾರಿ!

ಕಾಸರಗೋಡು: ಜಿಲ್ಲೆಯ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯಾಗಿದ್ದ ಕರಿಂದಳ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಶೋಧನಾ ಕೇಂದ್ರ ಆರಂಭಕ್ಕೆ ಇನ್ನೂ ಕಾಲ ಕೂಡಿಬಂದಿಲ್ಲ. ಈ ಯೋಜನೆಗೆ ಶಿಲಾನ್ಯಾಸಗೊಂಡು ಬರೋಬ್ಬರಿ 7 ವರ್ಷಗಳೇ ಕಳೆದಿವೆ. ಆದರೆ ಇದುವರೆಗೆ ಯಾವುದೇ ಪ್ರಗತಿಯೂ ಕಂಡಿಲ್ಲ, ಅಂದು ಕಾಮಗಾರಿಯನ್ನು ಉದ್ಘಾಟಿಸಿದ ಶಿಲಾಫಲಕ ಕೂಡಾ ಪಂಚಾಯತ್ ಕಚೇರಿಯ ಒಂದು ಕೋಣೆಯಲ್ಲಿ ಇಡಲಾಗಿದೆ. ಈ ಯೋಜನೆ ಯಾವುದೇ ಕಾಮಗಾರಿ ನಡೆಸದೆ ಕಡತದಲ್ಲೇ ಉಳಿದಿರುವುದು ನಾಗರಿಕರಲ್ಲಿ ಆಕ್ರೋಶವನ್ನುಂಟುಮಾಡಿದೆ.

80 ಕೋಟಿ ರೂ.ವೆಚ್ಚದ ಯೋಜನೆ

80 ಕೋಟಿ ರೂ. ಅಂದಾಜು ವೆಚ್ಚದ ಈ ಯೋಜನೆಗೆ 2019ನೇ ಫೆಬ್ರವರಿ 3ರಂದು ಶಿಲಾನ್ಯಾಸ ಕಾರ್ಯ ವನ್ನು ನಡೆಸಲಾಗಿತ್ತು. ಅಂದಿನ ರಾಜ್ಯ ಆರೋಗ್ಯಸಚಿವೆ ಕೆ.ಕೆ.ಶೈಲಜಾ, ಕಂದಾಯ ಸಚಿವರಾಗಿದ್ದ ಇ.ಚಂದ್ರಶೇಖರನ್ ಮತ್ತಿತರ ಗಣ್ಯರು ಭಾಗವಹಿಸಿದ್ದ ಸಮಾರಂಭವು ಸಾರ್ವಜನಿಕರ ಭಾಗವಹಿಸುವಿಕೆಯೊಂದಿಗೆ ನಡೆಯಿತು. ಆದರೆ ಆ ಬಳಿಕ ಈ ಯೋಜನೆಯು ಮುಂದೆ ಸಾಗಲಿಲ್ಲ. ಅದಕ್ಕಾಗಿ ಜನಪ್ರತಿನಿಧಿಗಳು ಹೆಚ್ಚಿನ ಮುತುವರ್ಜಿ ವಹಿಸದಿರುವುದೇ ಯೋಜನೆ ಸ್ಥಗಿತಗೊಳ್ಳಲು ಕಾರಣ ಎಂದು ಸ್ಥಳೀಯರು ದೂರಿದ್ದಾರೆ.

ಯೋಜನೆಗಾಗಿ 15 ಎಕರೆ ಭೂಮಿ

ರಾಜ್ಯ ಸರ್ಕಾರವು ಕಿನಾನೂರು ಕರಿಂದಳ ಪಂಚಾಯತ್‌ನ ಕರಿಂದಳ ಗ್ರಾಮದಲ್ಲಿ ಮೀಸಲು ಸಂಖ್ಯೆ 89/1 ಗೆ ಸೇರಿದ ಥೋಲೇನಿ ಪ್ರದೇಶದಲ್ಲಿ 15 ಎಕರೆ ಭೂಮಿ ಈ ಯೋಜನೆಗಾಗಿ ಮಂಜೂರು ಮಾಡಿತ್ತು. 100 ಹಾಸಿಗೆಗಳನ್ನು ಹೊಂದಿರುವ ಆಧುನಿಕ ಆಸ್ಪತ್ರೆ ಸಂಕೀರ್ಣವನ್ನು 80 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು ಎಂದು ಘೋಷಿಸಲಾಗಿತ್ತು. ಅಲ್ಲದೆ ನಿರ್ಮಾಣವು ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದರು.



ಯೋಜನೆ ಸಾಕಾರಕ್ಕೆ ಸಹಕಾರ ಅತ್ಯಗತ್ಯ

ಯೋಜನೆಯ ಕಾಮಗಾರಿ ನಡೆಸದೆ ಕೇವಲ ಕಡತಕ್ಕೆ ಮಾತ್ರ ಸೀಮಿತಗೊಳಿಸಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಒಗ್ಗಟ್ಟಾಗಿ ಈ ಯೋಜನೆಯನ್ನು ಸಾಕಾರಗೊಳಿಸಲು ಸಹಕರಿಸಬೇಕಾಗಿದೆ.

● ಕುಂಞಿಕೃಷ್ಣನ್, ನಾಗರಿಕರು ಕರಿಂದಳ

ದುರದೃಷ್ಟಕರ

ಕರಿಂದಳವನ್ನು ರಾಷ್ಟ್ರೀಯ ಮಟ್ಟದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನಾಗಿ ಪರಿವರ್ತಿಸಬಹುದಾಗಿದ್ದ ಯೋಜನೆಯನ್ನು ಈ ರೀತಿ ಕಾಮಗಾರಿ ನಡೆಸದೆ ಸ್ಥಗಿತಗೊಂಡಿರುವುದು ದುರದೃಷ್ಟಕರ. ಇನ್ನಾದರೂ ಈ ಯೋಜನೆ ಆದಷ್ಟು ಬೇಗ ನನಸಾಗಿಸಲು ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳು ಮಧ್ಯಪ್ರವೇಶಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ಗುರಿ

ಯೋಗ – ಪ್ರಕೃತಿ ಚಿಕಿತ್ಸಾ ಪದ್ಧತಿ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಜನರಿಗೆ ಲಭ್ಯವಾಗುವಂತೆಮಾಡುವ ಗುರಿಯೊಂದಿಗೆ ಈ ಯೋಜನೆ ವಿನ್ಯಾಸಗೊಳಿಸಲಾಗಿತ್ತು. ಖಾಸಗಿ ವಲಯದಲ್ಲಿ ಯೋಗ, ಪ್ರಕೃತಿ ಚಿಕಿತ್ಸಾ ಪದ್ಧತಿಗೆ ಪ್ರತಿ ವ್ಯಕ್ತಿಗೆ ದಿನಕ್ಕೆ 2000 ರೂಗಳಿಗಿಂತ ಹೆಚ್ಚು ವೆಚ್ಚವಾಗುತ್ತದೆ. ಆದರೆ ಈ ಯೋಜನೆ ಕರಿಂದಳಂದಲ್ಲಿ ಜಾರಿಗೆ ತಂದರೆ 500 ರೂ. ದರದಲ್ಲಿ ಚಿಕಿತ್ಸೆ ನೀಡಬಹುದೆಂದು ಅಂದಾಜಿಸಲಾಗಿತ್ತು. ಆದರೆ ಸಂಬಂಧಪಟ್ಟವರು ಹೆಚ್ಚಿನ ಆಸಕ್ತಿ ತೋರದಿರುವುದೇ ಯೋಜನೆ ಕಾಮಗಾರಿ ಮುಂದುವರಿದಿಲ್ಲ ಎಂದು ನಾಗರಿಕರು ತಿಳಿಸಿದ್ದಾರೆ.

ನಮ್ಮ ದಕ್ಷಿಣ ಕನ್ನಡ

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಸೋಮವಾರ 08, ಜೂನ್ 2026

ಸುತ್ತಮುತ್ತ

ಸಮೀಕ್ಷಾ ಎನ್‌ಎಂಎಂಎಸ್ ತೇರ್ಗಡೆ



ನಿಡ್ಪಳ್ಳಿ: ಪಾಣಾಜೆ ಸುಬೋಧ ಪ್ರೌಢ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಸಮೀಕ್ಷಾ ಕೆ. 2025–2026ನೇ ಸಾಲಿನ ಎನ್.ಎಂ.ಎಂ.ಎಸ್. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ತೇರ್ಗಡೆಯಾಗಿ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆದಿದ್ದಾರೆ ಎಂದು ಶಾಲಾ ಸಂಚಾಲಕ ಗಿಳಿಯಾಲು ಮಹಾಬಲೇಶ್ವರ ಭಟ್ ತಿಳಿಸಿದ್ದಾರೆ. ಅವರು ಮಿತ್ತಡ್ಕ ಕುಶಾಲಪ್ಪ ಮತ್ತು ಕುಸುಮ ದಂಪತಿ ಪುತ್ರಿ.

ನಿಡ್ಪಳ್ಳಿ ಶಾಲಾ ಮಂತ್ರಿ ಮಂಡಲ ರಚನೆ

ನಿಡ್ಪಳ್ಳಿ: ಇಲ್ಲಿನ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯ 2026–27ನೇ ಶೈಕ್ಷಣಿಕ ವರ್ಷದ ಮಂತ್ರಿ ಮಂಡವನ್ನು ರಚಿಸಲಾಯಿತು. ಮುಖ್ಯ ಮಂತ್ರಿಯಾಗಿ ರೋಹಿತ್, ಉಪ ಮುಖ್ಯ ಮಂತ್ರಿಯಾಗಿ ಭವ್ಯಶ್ರೀ ಅವರನ್ನು ಆರಿಸಲಾಯಿತು.





ಗೃಹ ಮಂತ್ರಿಯಾಗಿ ಮನೀಷ, ಆರೋಗ್ಯ– ಸ್ನೇಹ, ತನುಶ್ರೀ, ಶಿಕ್ಷಣ– ವಿನೋದ್, ಪೃಥ್ವಿರಾಜ್, ಸ್ವಚ್ಛತೆ– ವರುಣ್, ಫಾಯಿಝ್, ವಾರ್ತಾ– ಸಫಾನ, ಮನೀಷ, ಸಾಂಸ್ಕೃತಿಕ– ಭವ್ಯಶ್ರೀ, ಆರತಿ, ಆಹಾರ ಜಶ್ವಿತ್ , ಚೇತನ್, ಗ್ರಂಥಾಲಯ– ವಿನೋದ್, ದಿಶಾಂಕ್, ಶಿಸ್ತು– ಸವಾದ್, ಮುಷಿ, ಕ್ರೀಡಾ– ತ್ವಾಹಿಬಾ, ಮೋಕ್ಷಿತ ಕೆ., ನೀರಾವರಿ– ರೋಹಿತ್, ಪೃಥ್ವಿರಾಜ್, ಕೃಷಿ– ಮನಸ್ವಿ ರಕ್ಷಣಾ– ತ್ವಾಹಿಬಾ, ವಿರೋಧ ಪಕ್ಷದ ನಾಯಕರಾಗಿ ವರುಣ್ ಅವರು ಆಯ್ಕೆಯಾದರು. ಮುಖ್ಯ ಗುರು ಹೇಮಾ ಎನ್. ಅವರ ನೇತೃತ್ವದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಅತಿಥಿ ಶಿಕ್ಷಕಿ ಸುಮಾ ಡಿ. ಸಹಕರಿಸಿದರು.

ಉಪ್ಪಿನಂಗಡಿ: ಟೀಂ ಅಘೋರ ಸಂಘದಿಂದ ರಕ್ತದಾನ ಶಿಬಿರ

ಉಪ್ಪಿನಂಗಡಿ: ಇಲ್ಲಿನ ಧಾರ್ಮಿಕ ಹಾಗೂ ಸಾಮಾಜಿಕ ಯುವ ಸಂಘಟನೆಯಾದ ಟೀಂ ಅಘೋರ ಉಬಾರ್ ಇದರ ವತಿಯಿಂದ ಭಾನುವಾರ ಉಪ್ಪಿನಂಗಡಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಕ್ತದಾನ ಶಿಬಿರ ನಡೆಯಿತು. ಮಂಗಳೂರು ಕೆಎಂಸಿ ಆಸ್ಪತ್ರೆಯ ಸಹಯೋಗದಲ್ಲಿ ನಡೆದ ಈ ಶಿಬಿರದಲ್ಲಿ 118 ಮಂದಿ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ ಜೀವ ಉಳಿಸುವ ರಕ್ತ ದಾನ ಮಹಾದಾನವಾಗಿದ್ದು ಭೇದಭಾವ ರಹಿತ , ಸಂಕುಚಿತತೆಯನ್ನು ಮೀರಿದ ದಾನವಾಗಿರುವ ಈ ರಕ್ತದಾನವನ್ನು ಆಯೋಜಿಸುವುದು ಮತ್ತು ಭಾಗವಹಿಸುವುದು ಎರಡೂ ಭಗವಂತನ ಮೆಚ್ಚುಗೆಯ ಕಾರ್ಯಗಳೆಂದರು. ಕಾರ್ಯಕ್ರಮದಲ್ಲಿ ಗಣ್ಯರಾದ ಡಾ. ರಾಜಾರಾಮ್ ಕೆ.ಬಿ. , ಮುರಳೀಧರ್ ರೈ ಮಟಂತಬೆಟ್ಟು, ವಿಕ್ರಂ ಶೆಟ್ಟಿ ಅಂತರ, ಉದ್ಯಮಿ ಸುದೇಶ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಟೀಂ ಅಘೋರಾದ ಗೌರವಾಧ್ಯಕ್ಷ ಸಂತೋಷ್, ಅಧ್ಯಕ್ಷ ಬ್ರಿಜೇಶ್ , ಸದಸ್ಯರಾದ ಸುರೇಶ್ ಶೆಟ್ಟಿ ಜಿತೇಶ್ ಶೆಟ್ಟಿ ಭವಿತ್, ರಕ್ಷಿತ್ ಶೆಟ್ಟಿ ರಕ್ಷಿತ್ ಶೆಟ್ಟಿ ಸಂಪತ್, ಧನುಶ್, ದರ್ಶನ್ ಶೆಟ್ಟಿ ಆಕಾಶ್ ಶೆಟ್ಟಿ ಇದ್ದರು. ಇದೇ ವೇಳೆ ಟೀಮ್ ಅಘೋರಾ ಉಬಾರ್ ಅರ್ಪಿಸುವ ಪಿಲಿಪಜ್ಜ ಸೀಸನ್ –2 ಮುಂಬರುವ ಅಕ್ಟೋಬರ್ 17, 18 ರಂದು ಆಯೋಜಿಸಲ್ಪಟ್ಟಿದ್ದು ಅದರ ದಿನಾಂಕ ಸಹಿತ ಲೋಗೋ ವನ್ನು ಶಾಸಕ ಅಶೋಕ್ ಕುಮಾರ್ ರೈ ಅನಾವರಣಗೊಳಿಸಿದರು.

ಬೆಟ್ಟಂಪಾಡಿ ಸರಕಾರಿ ಪ್ರೌಢಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ



ನಿಡ್ಪಳ್ಳಿ: ಬೆಟ್ಟಂಪಾಡಿ ಸರಕಾರಿ ಪ್ರೌಢಶಾಲಾ 2026–27ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಜೂ.1ರಂದು ನಡೆಯಿತು. ಶಾಲೆಗೆ ಹೊಸದಾಗಿ ದಾಖಲಾತಿ ಪಡೆದ 8ನೇ ಮತ್ತು 9ನೇ ತರಗತಿಯ ವಿದ್ಯಾರ್ಥಿಗಳನ್ನು ಬಹಳ ಸಂಭ್ರಮ ಸಡಗರದಿಂದ ಬ್ಯಾಂಡ್ ವಾದ್ಯಗಳ ಮೂಲಕ ಆರತಿ ಬೆಳಗಿಸಿ ಪುಷ್ಪಾರ್ಚನೆ ಮಾಡಿ ಬರ ಮಾಡಿಕೊಳ್ಳಲಾಯಿತು. ನಂತರ ನಡೆದ ಪೋಷಕರ ಸಭೆಯಲ್ಲಿ, ದೈಹಿಕ ಶಿಕ್ಷಣ ಶಿಕ್ಷಕಿ ಚಂದ್ರಕಲಾ ಕೆ.ವಿ. ಅವರು ವಿದ್ಯಾರ್ಥಿಗಳಿಗೆ ಶಾಲಾ ನೀತಿ ನಿಯಮಗಳ ಪಾಲನೆಯ ಬಗ್ಗೆ ತಿಳಿಸಿದರು. ಎಸ್‌ಡಿಎಂಸಿ ಕಾರ್ಯಾಧ್ಯಕ್ಷ ಮಾಧವ ಪೂಜಾರಿ ಶುಭ ಹಾರೈಸಿದರು. ಈ ಸಂದರ್ಭ ವಿದ್ಯಾರ್ಥಿಗಳಿಗೆ ಖ್ಯಾತ ವೈದ್ಯೆ ಡಾ. ಆಶಾ ಪುತ್ತೂರಾಯರ ಸಹೋದರ ಉದಯ ಕುಮಾರ್ ಅವರ ಪುತ್ರಿ ಕರ್ನಾಟಕ ಬ್ಯಾಂಕ್ ಉದ್ಯೋಗಿ ನಿಧಿ ಯು.ಆರ್. ವಿದ್ಯಾರ್ಥಿಗಳಿಗೆ ಬ್ಯಾಗ್‌ಗಳನ್ನು ಕೊಡುಗೆಯಾಗಿ ನೀಡಿದರು. ಇಲಾಖಾ ವತಿಯಿಂದ ನೀಡಿದ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ವಿತರಿಸಲಾಯಿತು. ವೇದಿಕೆಯಲ್ಲಿ ಎಸ್‌ಡಿಎಂಸಿ ಸದಸ್ಯರಾದ ಶಶಿಕಲಾ ಮತ್ತು ಶಿವಪ್ಪ ಗೌಡ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕ ವಿಜಯ ಕುಮಾರ್ ಎಂ. ಸ್ವಾಗತಿಸಿ, ಸಹ ಶಿಕ್ಷಕಿ ಮಂಜುಳಾ ಭಟ್ ವಂದಿಸಿದರು. ಶಿಕ್ಷಕಿ ಕುಮಾರಿ ಉಮಾ ಪಿ.ಆರ್. ಕಾರ್ಯಕ್ರಮ ನಿರ್ವಹಿಸಿದರು. ಸಹ ಶಿಕ್ಷಕಿಯರಾದ ಸಿಂಧು ಕೆ.ವಿ. ಮತ್ತು ವಿನುತ ಪಿ.ಕೆ. ಸಹಕರಿಸಿದರು.

ಮಂಗಳೂರು ವಿವಿ: 1974-76 ಬ್ಯಾಚ್ ಹಳೆ ವಿದ್ಯಾರ್ಥಿಗಳ ಸಮ್ಮಿಲನ, ಕಾಮರ್ಸ್ ಐ5 ಲ್ಯಾಬ್ ಉದ್ಘಾಟನೆ

ಹಳೆ ವಿದ್ಯಾರ್ಥಿಗಳಿಂದ 50 ವರ್ಷ ಬಳಿಕ ನೆನಪು ಮೆಲುಕು

ಕೊಣಾಜೆ: ಮಂಗಳಗಂಗೋತ್ರಿ ಕ್ಯಾಂಪಸ್ ನಲ್ಲಿ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದ 1974–76ರ ಬ್ಯಾಚ್ ನ ಹಳೆ ವಿದ್ಯಾರ್ಥಿಗಳ ಸಮ್ಮಿಳನ, ವಿದ್ಯಾರ್ಜನೆಯ ಐವತ್ತನೇ ವರ್ಷದ ನೆನಪಿಗಾಗಿ ಕೊಡುಗೆಯಾಗಿ ನೀಡಿದ 'ಕಾಮರ್ಸ್ ಐ5 ಲ್ಯಾಬ್' ಆಧುನಿಕ ಕಂಪ್ಯೂಟರ್ ಪ್ರಯೋಗಾಲಯದ ಉದ್ಘಾಟನಾ ಸಮಾರಂಭ ಶುಕ್ರವಾರ ನಡೆಯಿತು.



ಭಾವನಾತ್ಮಕ ಕ್ಷಣ

ಕಾಮರ್ಸ್ ಐ5 ಲ್ಯಾಬ್ ನ ಉದ್ಘಾಟನೆಯನ್ನು ವಹಿಸಿ ಮಾತನಾಡಿದ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಮಾತನಾಡಿ, ಭಾವನಾತ್ಮಕ ಕ್ಷಣಗಳಿಗೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ. ಸಂಬಂಧಗಳು ದೂರವಾಗುತ್ತಿರುವ ಕಾಲಘಟ್ಟದಲ್ಲಿ ಈ ಕೊಣಾಜೆಯ ಕ್ಯಾಂಪಸ್‌ನಲ್ಲಿ ಐವತ್ತು ವರ್ಷಗಳ ಹಿಂದೆ ಕಲಿತ ಹಳೆ ವಿದ್ಯಾರ್ಥಿಗಳು ಒಟ್ಟು ಸೇರುವುದರೊಂದಿಗೆ ಗೆಳೆಯರನ್ನು ಅನುಭವಗಳನ್ನು ನೆನಪಿಸುವ ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾದುದು ಮತ್ತು ಈಗಿನ ವಿದ್ಯಾರ್ಥಿಗಳಿಗೆ ಸ್ಪೂರ್ತಿಯಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ಕಂಪ್ಯೂಟರ್ ಲ್ಯಾಬ್ ಕೂಡಾ ಈ ಹಿರಿಯ ವಿದ್ಯಾರ್ಥಿಗಳು ಕೊಡುಗೆಯಾಗಿ ನೀಡಿರುವುದು ಕ್ಯಾಂಪಸ್‌ನೊಂದಿಗಿನ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಮಂಗಳೂರು ವಿವಿ ವಾಣಿಜ್ಯಶಾಸ್ತ್ರ ವಿಭಾಗದ ಅಧ್ಯಕ್ಷ ಪ್ರೊ. ಈಶ್ವರ್ ಮಾತನಾಡಿ,ಈ ಕಾರ್ಯಕ್ರಮವು ಹಳೆ ಬೇರು ಹೊಸ ಚಿಗುರುವಿನ ಕಾರ್ಯಕ್ರಮವಾಗಿದೆ. ಇವತ್ತು ಉದ್ಘಾಟನೆಗೊಂಡ ಪ್ರಯೋಗಾಲಯವನ್ನು ವಿದ್ಯಾರ್ಥಿಗಳು ಚೆನ್ನಾಗಿ ಬಳಸಿಕೊಂಡು ಮುನ್ನಡೆಯಿರಿ ಎಂದರು.

ಮಂಗಳೂರು ವಿವಿ ವಾಣಿಜ್ಯ ವಿಭಾಗದ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಡಾ. ಉಮಪ್ಪ ಪೂಜಾರಿ ಮಾತನಾಡಿದರು. ಹಳೆ ವಿದ್ಯಾರ್ಥಿ ತಂಡದ ರಿಚ್ಛಾರ್ಡ್ ಡಿಸೋಜಾ ಮಾತನಾಡಿ, ಯಾವುದೇ ವ್ಯಕ್ತಿಯ ಯಶಸ್ಸಿನ ಹಿಂದೆ ನಮ್ಮ ಪ್ರಾಮಾಣಿಕ ಪ್ರಯತ್ನದೊಂದಿಗೆ ನಮ್ಮ ಪಾಲಕರು ಹಾಗೂ ವಿದ್ಯೆ ಕಲಿಸಿದ ಗುರುಗಳ ಪಾತ್ರವೂ ಮಹತ್ತರವಾದದುದು ಎಂದರು. ಇದೇ ವೇಳೆ ತಾವು ವಿದ್ಯಾರ್ಥಿಗಳಾಗಿದ್ದ ಸಂದರ್ಭದ ಅನುಭವವನ್ನು ಹಂಚಿಕೊಂಡರು ಮತ್ತು ಐವತ್ತು ವರ್ಷಗಳ ನಂತರ ನಾವು ಒಟ್ಟು ಸೇರಿರುವುದು ನಮ್ಮ ಸೌಭಾಗ್ಯ ಎಂದರು.

> **ಸಸ್ಯಶ್ಯಾಮಲೆಯಾಗಿದೆ**
> ಆಗಿನ ಕಾಲದಲ್ಲಿ ಕೊಣಾಜೆಯ ಮೈಸೂರು ವಿವಿಯ ಕೇಂದ್ರವಾಗಿದ್ದ ಈ ಕ್ಯಾಂಪಸ್ ಗುಡ್ಡ ಪ್ರದೇಶವಾಗಿತ್ತು, ಇಲ್ಲಿಂದ ಮಂಗಳೂರಿಗೆ ಎರಡನೇ ಬಸ್ ಸಂಚರಿಸುತ್ತಿತ್ತು. ಗ್ರಂಥಾಲಯವೂ ಇರಲಿಲ್ಲ, ಯಾವುದೇ ಸೌಲಭ್ಯಗಳೂ ನಮಗಿರಲಿಲ್ಲ. ಆದರೆ ಈಗ ಬೋರುಗುಡ್ಡೆಯು ಸಸ್ಯಶ್ಯಾಮಲೆಯಾಗಿದೆ.
> ● ಲೀಲಾವತಿ, ಹಳೆವಿದ್ಯಾರ್ಥಿನಿ

ಕಾರ್ಯಕ್ರಮದಲ್ಲಿ 1974–76 ಬ್ಯಾಚ್ ಹಳೆ ವಿದ್ಯಾರ್ಥಿಗಳಾದ ನಿಂಗ ರೆಡ್ಡಿ, ಪುಟ್ಟಸ್ವಾಮಿ, ಸಣ್ಣ ಹನುಮಂತಪ್ಪ, ಲೀಲಾವತಿ, ಅರುಣ್ ಪೈ, ರವೀಂದ್ರನಾಥ್, ರಮಾನಂದ, ರಿಚ್ಚರ್ಡ್ ಡಿಸೋಜ, ಡಾ.ಗೋವಿಂದ ಭಟ್, ಈಶ್ವರಪ್ಪ, ಕರುಣಾಮಯ, ರಾಜ್ ಮೋಹನ್ ರಾವ್ ಭಾಗವಹಿಸಿದ್ದರು. ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಪ್ರೊ.. ಮುನಿಯಪ್ಪ ಪ್ರೊ. ವೇದವ, ಪ್ರೊ.ಪರಮೇಶ್ವರ, ಪ್ರೊ. ಪ್ರೀತಿ ಕೀರ್ತಿ ಡಿಸೋಜ ಮೊದಲಾದವರು ಇದ್ದರು. ಹಳೆ ವಿದ್ಯಾರ್ಥಿ ಈಶ್ವರಪ್ಪ ಸ್ವಾಗತಿಸಿದರು. ಡಾ.ರಾಜ್ ಮೋಹನ್ ರಾವ್ ವಂದಿಸಿದರು. ಎಂ.ಸಿ.ಲೀಲಾವತಿ ನಿರೂಪಿಸಿದರು.

ಶ್ರದ್ಧಾಂಜಲಿ ಸಮರ್ಪಣೆ

1974–76ರ ಈ ಬ್ಯಾಚ್‌ನಲ್ಲಿ 26 ವಿದ್ಯಾರ್ಥಿಗಳಿದ್ದರು. ಅವರಲ್ಲಿ 9 ಮಂದಿ ನಿಧನರಾಗಿದ್ದಾರೆ. ಕಾರ್ಯಕ್ರಮದಲ್ಲಿ 12 ಹಳೆ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಆರಂಭದಲ್ಲಿ ನಿಧನರಾದ ಹಳೆ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸತೀಶ್ ಭಟ್ ಕೊಳುವೈಲು ಅವರ ಷಷ್ಠ್ಯಬ್ದಪೂರ್ತಿ ಶಾಂತಿ

ಮಾನವೀಯ ಮೌಲ್ಯ ಅಳವಡಿಸಿಕೊಳ್ಳಿ: ಪೇಜಾವರ

ಮುಲ್ಕಿ: ಜೀವನದಲ್ಲಿ ಸಂಸ್ಕಾರ ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡರೆ ಸಾಧಕರಾಗಲು ಸಾಧ್ಯ ಎಂದು ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು



ಅವರು ಹಳೆಯಂಗಡಿಯ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುವೈಲು ರವರ ಷಷ್ಠ್ಯಬ್ದಪೂರ್ತಿ ಶಾಂತಿ ಕಾರ್ಯಕ್ರಮದಲ್ಲಿ ಸಂಸ್ಥಾನ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ದೇವರು ಕೊಟ್ಟ ಬದುಕು ಸಾರ್ಥಕವಾಗಬೇಕಾದರೆ ದಾನ ಧರ್ಮಗಳ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರೊರೆಸುವ ಕಾರ್ಯವಾಗಬೇಕು, ಅಂತಹ ಕಾರ್ಯಗಳು ಸತೀಶ್ ಭಟ್ ಹಾಗೂ ಅವರ ಪತ್ನಿ ಭಾರತಿ ಭಟ್ ರವರ ಸಾರ್ಥಕ ಬದುಕಿನಲ್ಲಿ ನಡೆದಿದ್ದು ಅಭಿನಂದನೀಯ. ತಮ್ಮ ಜೀವನದಲ್ಲಿ ತಮ್ಮ ನೋವನ್ನು ಅರಗಿಸಿಕೊಂಡು ಪರರ ಕಷ್ಟಸುಖಗಳಲ್ಲಿ ಸಹಭಾಗಿಯಾಗಿ ಉತ್ತಮ ಕಾರ್ಯವನ್ನು ಸಾಧಿಸಿದ್ದಾರೆ. ಅವರ ಬದುಕು ಇನ್ನಷ್ಟು ಉಜ್ವಲವಾಗಲಿ. ಅವರು ಮನಸ್ಸಿನಲ್ಲಿ ನೆನೆಸಿಕೊಂಡ ಕಾರ್ಯ ಸಿದ್ದಿಯಾಗಲಿ ಎಂದರು.

> ■ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕಣ್ಣೀರೊರೆಸುವ ಕಾರ್ಯವಾಗಬೇಕು
> ■ ಸತೀಶ್ ಭಟ್ ಹಾಗೂ ಅವರ ಪತ್ನಿ ಭಾರತಿ ಭಟ್ ಪರರ ಕಷ್ಟಸುಖಗಳಲ್ಲಿ ಸಹಭಾಗಿಯಾಗಿ ಉತ್ತಮ ಕಾರ್ಯ ಸಾಧಿಸಿದ್ದಾರೆ

ಮುಖ್ಯ ಅತಿಥಿಗಳಾಗಿ ಕಟೀಲು ಕ್ಷೇತ್ರದ ಅರ್ಚಕರಾದ ಕಮಲಾದೇವಿ ಪ್ರಸಾದ ಆಸ್ರಣ್ಣ ಶ್ರೀಹರಿನಾರಾಯಣದಾಸ ಆಸ್ರಣ್ಣ ವೇದಮೂರ್ತಿ ಕೃಷ್ಣ ಭಟ್ ಪಾವಂಜೆ, ಜ್ಯೋತಿಷಿ ವಾಸುದೇವ ಭಟ್ ಪಾವಂಜೆ, ಬಪ್ಪನಾಡು ಕ್ಷೇತ್ರದ ಅರ್ಚಕ ಶ್ರೀಪತಿ ಉಪಾಧ್ಯಾಯ, ಜ್ಯೋತಿಷಿ ವಿಶ್ವನಾಥ ಭಟ್, ವೇದಮೂರ್ತಿ ವಾದಿರಾಜ ಉಪಾಧ್ಯಾಯ ಕೊಲಕಾಡಿ, ಗಣೇಶ್ ಭಟ್ ಪಾವಂಜೆ, ಡಾ.ಶ್ರೀವತ್ಸ ಉಪಾಧ್ಯಾಯ ಕೊಲಕಾಡಿ, ಶಾಸಕ ಉಮಾನಾಥ ಕೋಟ್ಯಾನ್ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ, ಉದ್ಯಮಿ ಚೇತನ್ ಶೆಟ್ಟಿ ಬಿಸ್ಲೇರಿ, ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ, ಮುಲ್ಕಿ ವಿಜಯ ರೈತ ಸೊಸೈಟಿ ಅಧ್ಯಕ್ಷ ರಂಗನಾಥ ಶೆಟ್ಟಿ ಮುಲ್ಕಿ ವಿಜಯಾ ರೈತ ಸೊಸೈಟಿ ಅಧ್ಯಕ್ಷ ರಂಗನಾಥ ಶೆಟ್ಟಿ ವಿನೋದ್ ಸಾಲ್ಯಾನ್ ಬೆಳ್ಳಾಯರು, ಉದಯ ಸಸಿಹಿತ್ಲು, ವಿಸ್ಕೆಪಿನ ಮೋಹನ್ ರಾವ್, ಪ್ರೇಮಲತಾ ಯೋಗೀಶ್ ಮತ್ತಿತರರು ಉಪಸ್ಥಿತರಿದ್ದರು.

ಸುಳ್ಯ-ಪಾಟಾಳಿ ಯಾನೆ ಗಾಣಿಗ ಸಮಾಜ ಸೇವಾ ಸಂಘದ ಮಹಾಸಭೆ

ನೂತನ ಸಮಿತಿ ಪದಗ್ರಹಣ, ಉಪ ಸಮಿತಿ ರಚನೆ

ಸುಳ್ಯ: ಪಾಟಾಳಿ ಯಾನೆ ಗಾಣಿಗ ಸಮಾಜ ಸೇವಾ ಸಂಘದ ಮಹಾಸಭೆಯಲ್ಲಿ ಆಯ್ಕೆಯಾದ ನೂತನ ಕಾರ್ಯಕಾರಿ ಸಮಿತಿಯ ಪದಗ್ರಹಣ ಕಾರ್ಯಕ್ರಮ ಹಾಗೂ ಉಪಸಮಿತಿಗಳ ರಚನಾ ಕಾರ್ಯಕ್ರಮ ಸುಳ್ಯ ಕೇರ್ಪಳ ಸಂಧ್ಯಾರಶ್ಮಿ ಸಭಾಭವನದಲ್ಲಿ ನಡೆಯಿತು.



ನೂತನ ಕಾರ್ಯಕಾರಿ ಸಮಿತಿ ಅಧ್ಯಕ್ಷ ಸುರೇಶ್ ಕರ್ಲಪ್ಪಾಡಿ ನೇತೃತ್ವದ ಸಮಿತಿಯಲ್ಲಿ ಕಾರ್ಯದರ್ಶಿ ಗೋಪಾಲಕೃಷ್ಣ ಮೊರಂಗಲ್ಲು, ಕೋಶಾಧಿಕಾರಿ ರಾಧಾಕೃಷ್ಣ ಬೇರ್ಪಡ್ಕ, ಉಪಾಧ್ಯಕ್ಷೆ ಹೇಮಲತಾ ಕಲ್ಲುಗುಂಡಿ, ಜೊತೆ ಕಾರ್ಯದರ್ಶಿ ನಿತೀಶ್ ಎರ್ಮೆಟ್ಟಿ ಸಂಘಟನಾ ಕಾರ್ಯದರ್ಶಿ ವಿಜಯ ಕುಮಾರ್ ಎರ್ಮೆಟ್ಟಿ ಹಾಗೂ ನಿರ್ದೇಶಕರಾಗಿ ವೆಂಕಟ್ರಮಣ ಬೇರ್ಪಡ್ಕ, ಚಂದ್ರಶೇಖರ ಉದ್ದಂತಡ್ಕ, ಸಂಜಯ್ ನೆಟ್ಟಾರು, ಸಚಿತ್ ಕಲ್ಮಡ್ಕ, ಕೇಶವ ಮೊರಂಗಲ್ಲು, ಪ್ರವೀಣ್ ಕುಮಾರ್ ಜಯನಗರ, ಸೌಮ್ಯಾ ಇರಂತಮಜಲು, ಸತ್ಯಾ ಕೊಲ್ಲಮೊಗ್ರ ಕನಕಮಜಲು, ವಿಶಾಲಾಕ್ಷಿ ಮೊರಂಗಲ್ಲು ಹಾಗೂ ಸಂಘದ ಆಂತರಿಕ ಲೆಕ್ಕಪರಿಶೋಧಕರಾಗಿ ಮಹಾಲಿಂಗನ್ ಬಾಜತ್ತೊಟ್ಟಿ ಮತ್ತು ಸಂಘದ ಕಾನೂನು ಸಲಹೆಗಾರರಾಗಿ ವಕೀಲ ನಾರಾಯಣ ಕೆ. ಹಾಗೂ ಸಂಘದ ಗೌರವ ಸಲಹೆಗಾರರಾಗಿ ಶಂಕರ ಪಾಟಾಳಿ ಪರಿವಾರಕಾನ, ನಾರಾಯಣ ಪಾಟಾಳಿ ನಾವೂರು ಮತ್ತು ಚಂದ ಕುಡೆಕಲ್ಲು ಪದಗ್ರಹಣ ಸ್ವೀಕರಿಸಿದರು. ಪದಗ್ರಹಣ ಸಭೆಯ ಅಧ್ಯಕ್ಷತೆಯನ್ನು ನಿರ್ಗಮಿತ ಅಧ್ಯಕ್ಷ ವೆಂಕಟ್ರಮಣ ಬೇರ್ಪಡ್ಕ ವಹಿಸಿ ಪದಗ್ರಹಣ ನೆರವೇರಿಸಿದರು. ಸಂಜಯ್ ನೆಟ್ಟಾರು ಸ್ವಾಗತಿಸಿ, ಗೋಪಾಲಕೃಷ್ಣ ಮೊರಂಗಲ್ಲು ವಂದಿಸಿದರು. ಸಚಿತ್ ಕಲ್ಮಡ್ಕ ನಿರ್ವಹಿಸಿದರು.

> **ಗ್ರಾಮವಾರು ಸಮತಿಗೆ ನೇಮಕ**
> ಈ ಸಂದರ್ಭ ಸಂಘದ ಉಪಸಮಿತಿಗಳಾದ ಗ್ರಾಮವಾರು ಸಮಿತಿ ಹಾಗೂ ಮಹಿಳಾ ಸಮಿತಿಗಳನ್ನು ರಚಿಸಲಾಯಿತು. ನೂತನ ಗ್ರಾಮವಾರು ಸಮಿತಿಗೆ 23 ಮಂದಿ ಸದಸ್ಯರಾಗಿ, 22 ಮಂದಿ ಮಹಿಳಾ ಸಮಿತಿಯ ಸದಸ್ಯರಾಗಿ ಹಾಗೂ ಮಾಧ್ಯಮ ಸಮಿತಿ ಸದಸ್ಯರಾಗಿ ಮಿಥುನ್ ಕರ್ಲಪ್ಪಾಡಿ, ಸುಖೇಶ್ ಅಡ್ಕಾರ್ ಹಾಗೂ ಗಾಯತ್ರಿ ಪ್ರಶಾಂತ್ ಪೆರಾಜೆ ಅವರನ್ನು ಆಯ್ಕೆ ಮಾಡಲಾಯಿತು.

> **ಸಂಚಾಲಕರಾಗಿ ನೇಮಕ**
> ಗ್ರಾಮವಾರು ಸಮಿತಿ ಸಂಚಾಲರಾಗಿ ಉದಯರವಿ ಕಲ್ಚಾರು ಹಾಗೂ ಸಹ ಸಂಚಾಲಕರಾಗಿ ಸೀತಾರಾಮ ಕರ್ಲಪ್ಪಾಡಿ ಮಹಿಳಾ ಸಮಿತಿ ಸಂಚಾಲಕಿಯಾಗಿ ವಿಶಾಲಾ ಕರ್ಲಪ್ಪಾಡಿ ಹಾಗೂ ಸಹಸಂಚಾಲಕಿಯಾಗಿ ಪ್ರೇಮಾ ಚಂದ ಕುಡೆಕಲ್ಲು ಅವರನ್ನು ನೇಮಿಸಲಾಯಿತು.

ಹನ್ನೊಂದು ಮಂದಿ ವಿಕಲಚೇತನರ ಸಂಕಷ್ಟಕ್ಕೆ ಸ್ಪಂದಿಸಿದ ದಂತ ವೈದ್ಯರು

ಪುತ್ತೂರು: ನಗರದ ರೋಟರಿ ಕ್ಲಬ್ ಅಧ್ಯಕ್ಷ ಹಾಗೂ ದಂತ ವೈದ್ಯ ಡಾ. ಪ್ರಕಾಶ್ ಅವರು ಪುತ್ತೂರು ರೋಟರಿ ಕ್ಲಬ್ ಸಹಾಯ ಧನ ನಿಯಿಂದ 11 ಮಂದಿ ವಿಕಲಚೇತನರಿಗೆ ಸಾಧನ ಸಲಕರಣೆ ವಿತರಣೆ ಮಾಡಿದ್ದಾರೆ.



ಪುತ್ತೂರು ತಾಲೂಕು ಪಂಚಾಯತ್ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಕಲಚೇತನರ ಸೇವಾ ಕೇಂದ್ರ ಕಚೇರಿಯ ಪುತ್ತೂರು ತಾಲೂಕು ಪಂಚಾಯತ್ ವಿಶೇಷಚೇತನರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ನವೀನ್ ಕುಮಾರ್ ಅವರ ವಿಶೇಷಚೇತನರ ಮಾನವೀಯತೆ ನೆಲೆಯಲ್ಲಿ ಸಲ್ಲಿಸಿದ ಮನವಿ ಅರ್ಜಿಗೆ ಕೂಡಲೇ ಸ್ಪಂದಿಸಿದ ಪುತ್ತೂರು ರೋಟರಿ ಕ್ಲಬ್ ಅಧ್ಯಕ್ಷ ಡಾ. ಪ್ರಕಾಶ್ ಅವರು ಸಾಧನ ಸಲಕರಣೆ ವಿತರಣೆ ಮಾಡಿದರು.

ಎರಡು ಕಾಲು ಕಳೆದುಕೊಂಡ ತೀವ್ರತರದ ದೈಹಿಕವಾಗಿ ವಿಶೇಷಚೇತನರಾದ ಬಲ್ನಾಡು ಗ್ರಾಮದ ಚಣಿಲ ಮನೆ ನಿವಾಸಿ ಶ್ರೀಧರ್ ನಾಯ್ಕ, ಬೌದ್ಧಿಕ ವಿಶೇಷ ಚೇತನರಾದ ಕಡಬ ತಾಲೂಕು ಕುಟ್ರುಪ್ಪಾಡಿ ಗ್ರಾಮದ ಚಕ್ಕಿಹಿತ್ತುಲು ಮನೆ ನಿವಾಸಿ ಜೆಬಿನ್ ಪಿ.ಜಿ. ಅವರಿಗೆ ವೀಲ್ ಚೇರ್, ಪಡುವನ್ನೂರು ಗ್ರಾಮದ ಪದ್ಕ ಮನೆ ನಿವಾಸಿ ಬಿ. ಇಬ್ರಾಹಿಂ, ಪುತ್ತೂರು ಕಸಬಾ ಗ್ರಾಮದ ಕಲ್ಲಾರೆ ಮನೆಯ ರಮೇಶ್ ಪೈ, ಕಡಬ ತಾಲೂಕು ಬೆಳಿನೆಲೆ ಗ್ರಾಮದ ಅರಿಪ್ಪಡು ಮನೆ ನಿವಾಸಿ ಮೋನಾಕ್ಕ ಅವರಿಗೆ ಟ್ರೈಪಾಡ್ ವಾಕಿಂಗ್ ಸ್ಟಿಕ್, ಕಡಬ ತಾಲ್ಲೂಕು ಕೌಕ್ರಾಡಿ ಗ್ರಾಮದ ಮೂಡುಬೈಲು ಮನೆ ನಿವಾಸಿ ರೋಶನ್ ಡಿ'ಸೋಜಾ ಅವರಿಗೆ ಏರ್ ಬೆಡ್, ಕರ್ನೂರು ಬೆದ್ರಾಡಿ ಈಶ್ವರಮಂಗಳ ನಿವಾಸಿ ಮೊಹಮ್ಮದ್ ಬಿ. ವಾಕರ್, ಮನೆ ಉಪ್ಪಿನಂಗಡಿ ಗ್ರಾಮ ನಿವಾಸಿ ದಿಗಂತ್ ಬಿ., ಪಡುವನ್ನೂರು ಗ್ರಾಮ ಮೈಂದನಡ್ಕ ಮನೆ ನಿವಾಸಿ ಮಹಮ್ಮದ್ ಕುಂಞ್ ಅವರಿಗೆ ವಾಟರ್ ಬೆಡ್ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪುತ್ತೂರು ಎಂ.ವಿ. ಗ್ರೂಪ್ ಸ್ಥಾಪಕ ಅಧ್ಯಕ್ಷ ಹಾಗೂ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಮಾಜಿ ನೋಡೆಲ್ ಅಧಿಕಾರಿ ಸುಬ್ರಹ್ಮಣಿ ಸಹಕರಿಸಿದರು.

ಉಪ್ಪಿನಂಗಡಿಯಲ್ಲಿ ಪ್ರವಾಹ ವೇಳೆ ರಕ್ಷಣೆಗೆ ಗೃಹರಕ್ಷಕ ದಳ ಸಜ್ಜು



ಉಪ್ಪಿನಂಗಡಿ: ದ.ಕ. ಜಿಲ್ಲಾಧಿಕಾರಿ ನಿರ್ದೇಶನ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, ಗೃಹರಕ್ಷಕ ದಳದ ಪ್ರಭಾರ ಸಮಾದೇಷ್ಟ ಅನಿಲ್ ಕುಮಾರ್ ಎಸ್. ಬೂಮರೆಡ್ಡಿ ಆದೇಶದಂತೆ ಉಪ್ಪಿನಂಗಡಿಯಲ್ಲಿ ವಿಶೇಷ ಪ್ರವಾಹ ರಕ್ಷಣಾ ತಂಡವನ್ನು ರಚಿಸಲಾಗಿದೆ.

ಘಟಕಾಧಿಕಾರಿ ರಾಮಣ್ಣ ಆಚಾರ್ಯ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಲಿರುವ ಈ ತಂಡದಲ್ಲಿ ಸೆಕ್ಷನ್ ಲೀಡರ್ ದಿನೇಶ್ ಬೊಳ್ವಾರ್, ಸಹಾಯಕ ಸೆಕ್ಷನ್ ಲೀಡರ್ ಜನಾರ್ದನ ಆಚಾರ್ಯ ಹಾಗೂ ಗೃಹರಕ್ಷಕರಾದ ಸಮದ್, ವಸಂತ ಮತ್ತು ಸೋಮನಾಥ್ ಸೇವೆ ಸಲ್ಲಿಸಲಿದ್ದಾರೆ. ತಂಡದಲ್ಲಿ ತರಬೇತಿ ಪಡೆದ ಗೃಹರಕ್ಷಕರು, ಈಜುಗಾರರು, ಯಾಂತ್ರಿಕ ದೋಣಿ ಚಾಲಕ, ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಸಹಿತ ಒಟ್ಟು 6 ಮಂದಿ ಗೃಹರಕ್ಷಕರು ಕಾರ್ಯ ನಿರ್ವಹಿಸಲಿದ್ದಾರೆ. ಪುತ್ತೂರು ತಹಶೀಲ್ದಾರ್ ಅಧೀನದಲ್ಲಿ ಕಾರ್ಯ ನಿರ್ವಹಿಸಲಿರುವ ಈ ತಂಡದ ಉಸ್ತುವಾರಿಯನ್ನು ಉಪ್ಪಿನಂಗಡಿ ಉಪ ತಹಶೀಲ್ದಾರ್ ಕವಿತಾ ವಹಿಸಿಕೊಂಡಿದ್ದಾರೆ. ತಂಡವು ಯಾವುದೇ ತುರ್ತು ಪರಿಸ್ಥಿತಿಗೆ ತಕ್ಷಣ ಸ್ಪಂದಿಸಲು ಸರ್ವಸನ್ನದ್ಧವಾಗಿದೆ. ತಂಡದ ಬಳಿ ಎರಡು ರಬ್ಬರ್ ದೋಣಿಗಳು, ಲೈಫ್ ಜಾಕೆಟ್‌ಗಳು, ಲೈಫ್ ಬಾಯ್‌ಗಳು, ಜನರೇಟರ್, 2 ಯಾಂತ್ರಿಕ ದೋಣಿ ಇಂಜಿನ್, 2 ಮರ ಕತ್ತರಿಸುವ ಯಂತ್ರ, ಸರ್ಚ್‌ಲೈಟ್‌ಗಳು, ಸ್ಟ್ರೆಚರ್, ಟೆಂಟ್, ಮೆಗಾ ಫೋನ್, ಸೈರನ್ ಸಹಿತ ಎಲ್ಲಾ ರಕ್ಷಣಾ ಉಪಕರಣ ಸಜ್ಜುಗೊಳಿಸಲಾಗಿದೆ. ತಂಡ ರಚನೆ ವೇಳೆ ಉಪ ತಹಶೀಲ್ದಾರ್ ಕವಿತಾ, ಉಪ್ಪಿನಂಗಡಿ ಪೊಲೀಸ್ ಠಾಣೆಯ ಬರಹಗಾರ ಸತೀಶ್, ಮಾದರಿ ಶಾಲೆಯ ಮುಖ್ಯ ಗುರು ಹನುಮಂತಯ್ಯ ಉಪಸ್ಥಿತರಿದ್ದರು.

ಕಣ್ಣೂರು ವಾರ್ಡ್: 45 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 52ನೇ ಕಣ್ಣೂರು ವಾರ್ಡಿನ ಶ್ರೀ ವೈದ್ಯನಾಥ ದೇವಸ್ಥಾನದ ಬಳಿ ಕಾವೇರಂಗಡಿ ಯೋಗೀಶ್ ಮನೆಯವರೆಗೆ ರಸ್ತೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಾಗಿಯು 45 ಲಕ್ಷ ರೂ. ವಿಶೇಷ ಅನುದಾನದಲ್ಲಿ ನಡೆಯಲಿದ್ದು, ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಗುದ್ದಲಿ ಪೂಜೆಯು ನಡೆಯಿತು.

ನಂತರದ ಮಾತನಾಡಿದ ಶಾಸಕರು, ಇಲ್ಲಿನ ಸಾರ್ವಜನಿಕರ ಹಲವು ವರ್ಷಗಳ ಬೇಡಿಕೆಯಂತೆ ಸುಮಾರು 300 ಮೀಟರ್ ಉದ್ದದ ರಸ್ತೆ ಹಾಗೂ ಚರಂಡಿ ನಿರ್ಮಾಣವಾಗಲಿದ್ದು, ಸ್ಥಳೀಯ ನಿಕಟಪೂರ್ವ ಪಾಲಿಕೆ ಸದಸ್ಯರಾದ ಚಂದ್ರಾವತಿ ವಿಶ್ವನಾಥ್ ರವರ ವಿಶೇಷ ಪ್ರಯತ್ನದಿಂದ ಈ ಕಾಮಗಾರಿಯು ನಡೆಯಲಿದೆ ಎಂದರು.

> ■ ಸಾರ್ವಜನಿಕರ ಹಲವು ವರ್ಷಗಳ ಬೇಡಿಕೆಯಂತೆ 300 ಮೀ. ಉದ್ದದ ರಸ್ತೆ, ಚರಂಡಿ ನಿರ್ಮಾಣ

ಈ ಸಂದರ್ಭದಲ್ಲಿ ಮಾಜಿ ಮೇಯರ್ ಸುರೇಶ್ ಶೆಟ್ಟಿ ಕಣ್ಣೂರು, ಶ್ರೀ ವೈದ್ಯನಾಥ ದೈವಸ್ಥಾನದ ಕಮಿಟಿ ಸದಸ್ಯರಾದ ಸಂತೋಷ್ ಶೆಟ್ಟಿ ಹಾಗೂ ಚಂದಪ್ಪ ಸಪಲ್ಯ, ದೇವದಾಸ್ ಶೆಟ್ಟಿ ಚಂದ್ರಕಾಂತ್ ಸಪಲ್ಯ, ಪ್ರೇಮನಾಥ್ ಸಪಲ್ಯ, ವಿಕ್ರಂ ಶೆಟ್ಟಿ ಯೋಗೀಶ್, ವಿಜಯ್ ಕಾವೇರಗಡಿ, ಕಿರಣ್, ಮೇಘರಾಜ್ ಶೆಟ್ಟಿ ಯುವರಾಜ್ ಸುವರ್ಣ, ವಿವೇಕ್ ಸುವರ್ಣ, ಯಜ್ಞೇಶ್ ಉಪಸ್ಥಿತರಿದ್ದರು.

ಚೇತನಾ ಬಾಲವಿಕಾಸ ಕೇಂದ್ರದಲ್ಲಿ ಹಿರಿಯ ನಾಗರಿಕರಿಗಾಗಿ ಮೂಳೆ ತಪಾಸಣಾ ಶಿಬಿರ | ಡಾ.ಕೆ.ಆರ್.ಕಾಮತ್ ಸಲಹೆ

ಮೂಳೆ ಸವೆತ ಎನ್ನುವುದು ಸೈಲೆಂಟ್‌ಕಿಲ್ಲರ್, ಆರಂಭದಲ್ಲೇ ವೈದ್ಯಕೀಯ ಚಿಕಿತ್ಸೆ ಅಗತ್ಯ

ಮಂಗಳೂರು: ಮಂಗಳೂರು ಸೇವಾಭಾರತಿ ಇದರ ಸೇವಾ ಪ್ರಕಲ್ಪವಾದ 'ಅನಂತಸೌಖ್ಯ' ಹಾಗೂ ಕೆಎಂ.ಸಿ ಆಸ್ಪತ್ರೆ, ಮಂಗಳೂರು ಇವರ ಆಶ್ರಯದಲ್ಲಿ ಮತ್ತು ಅಸೋಸಿಯೇಷನ್ ಆಫ್ ಮೆಡಿಕಲ್ ಕನ್ಸಲ್ಟಂಟ್ ಟ್ರಸ್ಟ್, ಮಂಗಳೂರು ಇದರ ಸಹಯೋಗದೊಂದಿಗೆ, ಹಿರಿಯ ನಾಗರಿಕರಿಗಾಗಿ ಮೂಳೆ ಖನಿಜ ಸಾಂದ್ರತೆ ಮತ್ತು ರಕ್ತದೊತ್ತಡ ಹಾಗೂ ಸಕ್ಕರೆ ಪರೀಕ್ಷೆಗಳು ಸಹಿತ ಮೂಳೆ ತಪಾಸಣಾ ಶಿಬಿರವು, ವಿ.ಟಿ. ರಸ್ತೆಯಲ್ಲಿರುವ ಚೇತನಾ ಬಾಲವಿಕಾಸ ಕೇಂದ್ರದ ವಠಾರದಲ್ಲಿ ನಡೆಯಿತು.



ಮಂಗಳೂರು ಕೆ.ಎಂ.ಸಿ ಆಸ್ಪತ್ರೆ ಮೂಳೆ ಶಸ್ತ್ರಚಿಕಿತ್ಸಕ ಡಾ.ಕೆ.ಆರ್.ಕಾಮತ್ ಶಿಬಿರವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಮೂಳೆ ಸವೆತ ಎನ್ನುವುದು ಸೈಲೆಂಟ್‌ಕಿಲ್ಲರ್. ಅದನ್ನು ಪ್ರಾರಂಭದಲ್ಲೇ ಪತ್ತೆ ಹಚ್ಚಿ ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವುದು ಅಗತ್ಯ ಹೇಳಿದರು.

ಮೂಳೆಯ ಸವೆತದ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಅಲ್ಲಿ ನೆರೆದವರಿಗೆ ವೈದ್ಯರು ವಿವರಿಸಿದರು. ವಯಸ್ಸಾದಂತೆ ಸವೆತವು ಸಾಮಾನ್ಯ. ಆದರೆ ಆದನ್ನು ನಿಭಾಯಿಸುವಲ್ಲಿ ವೈದ್ಯರು ಹಾಗೂ ರೋಗಿಯಜವಾಬ್ದಾರಿಯನ್ನು ತಿಳಿ ಹೇಳಿದರು.

ಇದೇ ಸಂದರ್ಭದಲ್ಲಿ ಡಾ. ಮಿಥುನ್ ಪೈ ಅವರು ಮಾತನಾಡಿ, 45 ವರ್ಷದ ನಂತರಎಲ್ಲರೂ ಕೂಡಾ ಮೂಳೆ ತಪಾಸಣೆ ಮಾಡಿಸುವುದು ಅವಶ್ಯ ಮತ್ತು ಮುಂದೆತೊಂದರೆಯಾಗದಂತೆಆರಂಭಿಕಹಂತದಲ್ಲೇ ಅದಕ್ಕೆ ಸೂಕ್ತ ಚಿಕಿತ್ಸೆ ಮಾಡಬೇಕೆಂದು ತಿಳಿಸಿದರು.

> ■ ವಯಸ್ಸಾದಂತೆ ಸವೆತವು ಸಾಮಾನ್ಯ
> ■ 45 ವರ್ಷದ ನಂತರ ಎಲ್ಲರೂ ಕೂಡಾ ಮೂಳೆ ತಪಾಸಣೆ ಮಾಡಿಸುವುದು ಅವಶ್ಯ
> ■ ಮುಂದೆ ತೊಂದರೆ ಆಗದಂತೆ ಆರಂಭಿಕ ಹಂತದಲ್ಲೇ ಅದಕ್ಕೆ ಸೂಕ್ತ ಚಿಕಿತ್ಸೆ ಅಗತ್ಯ

ಮಂಗಳೂರು ಸೇವಾಭಾರತಿ ಗೌರವ ಕಾರ್ಯದರ್ಶಿ ಎಚ್. ನಾಗರಾಜ ಭಟ್‌ಸ್ವಾಗತಿಸಿ ಸೇವಾ ಭಾರತಿಯ ಸಮಾಜ ಮುಖಿ ಕಾರ್ಯಕ್ರಮಗಳನ್ನು ವಿವರಿಸಿದರು.

ವೇದಿಕೆಯಲ್ಲಿ 'ಅನಂತಸೌಖ್ಯ'ಸಂಚಾಲಕ ಉಮೇಶ್ ಶೆಣೈ, ಸೇವಾಭಾರತಿ ಮಂಗಳೂರು ವಿಶ್ವಸ್ಥರಾದ ವಿನೋದ್ ಶೆಣೈ ಉಪಸ್ಥಿತರಿದ್ದರು.ಶ್ರೀ ಉಮೇಶ್ ಶೆಣೈ ವಂದಿಸಿದರು.

ಉಮೇಶ್ ಶೆಣೈ ಅವರ ನೇತೃತ್ವದಲ್ಲಿನಡೆದ ಶಿಬಿರದಲ್ಲಿ ಡಾ.ಕೆ.ಆರ್.ಕಾಮತ್, ಡಾ.ಮಿಥುನ್ ಪೈ ಮತ್ತು ಕೆ.ಎಂ.ಸಿ, ಆಸ್ಪತ್ರೆ,ಮಂಗಳೂರು ಇದರ ವೈದ್ಯರು ಮತ್ತು ಸಿಬ್ಬಂದಿ, ಎ.ಎಂ.ಸಿ ಟ್ರಸ್ಟ್ ಸದಸ್ಯರು, ಚೇತನಾ ಬಾಲವಿಕಾಸಕೇಂದ್ರದ ಶಿಕ್ಷಕ,ಶಿಕ್ಷಕೇತರ ಸಿಬ್ಬಂದಿ, ಸೇವಾಭಾರತಿ,ಮಂಗಳೂರು ಇದರಸಿಬ್ಬಂದಿ ಹಾಗೂ ಸ್ವಯಂಸೇವಕರುಭಾಗವಹಿಸಿಸಹಕರಿಸಿದರು.

ತಪಾಸಣಾ ಶಿಬಿರವು ಉಚಿತವಾಗಿದ್ದುಒಟ್ಟು 135 ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು.

ಸುತ್ತ ಮುತ್ತ

ಕೋಟ ಪಂಚವರ್ಣ ಸಂಘಟನೆಗೆ ಗಿಡ ಹಸ್ತಾಂತರ

ಕೋಟ: ಮಣೂರು ಪಡುಕರೆಯ ಗೀತಾನಂದ ಫೌಂಡೇಶನ್ ವತಿಯಿಂದ ಮಣೂರು-ಪಡುಕರೆಯ ಕೆ. ಸಿ. ಕುಂದರ್ ಸ್ಮರಣಾರ್ಥ ಆನಂದೋತ್ಸವ ಕಾರ್ಯಕ್ರಮದಲ್ಲಿ ಆನಂದ್ ಸಿ. ಕುಂದರ್ ಅವರ ಸಹಸ್ರ ಗಿಡ ನಡುವ ಸಂಕಲ್ಪದ ಅಂಗವಾಗಿ ಕೋಟದ ಪಂಚವರ್ಣ ಸಂಘಟನೆಯ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ ಹಾಗೂ ಅಧ್ಯಕ್ಷ ಮನೋಹರ್ ಪೂಜಾರಿಯವರಿಗೆ ಕೋಟ ಸಿ ಎ ಬ್ಯಾಂಕ್ ಅಧ್ಯಕ್ಷ ಡಾ.ಕೃಷ್ಣ ಕಾಂಚನ್ ಅವರ ಮೂಲಕ ಹಸ್ತಾಂತರಿಸಲಾಯಿತು. ನಾಡೋಜ ಡಾ.ಜಿ ಶಂಕರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಸುಂಟಿಕೊಪ್ಪದಲ್ಲಿ ವಿಶ್ವ ಪರಿಸರ ದಿನಾಚರಣೆ

ಸುಂಟಿಕೊಪ್ಪ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಇಲ್ಲಿನ ಸಂತ ಮೇರಿ ಶಿಕ್ಷಣ ಸಂಸ್ಥೆ ವತಿಯಿಂದ ಪಟ್ಟಣದಲ್ಲಿ ಜಾಗೃತಿ ಜಾಥಾ ನಡೆಸಲಾಯಿತು. ಸಂತ ಮೇರಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ವಿವಿಧ ರೀತಿಯ ಭಿತ್ತಿ ಪತ್ರಗಳನ್ನು ಹಿಡಿದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ತೆರಳುವ ಮೂಲಕ ಜಲಮೂಲ, ಗಿಡ, ಮರ, ಜೀವ ಸಂಕುಲಗಳನ್ನು ಸಂರಕ್ಷಿಸುವ ಮೂಲಕ ಪರಿಸರವನ್ನು ಬೆಳೆಸುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕೆಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಈ ಸಂದರ್ಭ ಸಂತ ಮೇರಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಸೆಲ್ವರಾಜ್ ಮತ್ತು ಸಹಶಿಕ್ಷಕರು ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಕುಂದಾಪುರ: ಸೋಮವಾರದಂದು ಬೆಳಿಗ್ಗೆ 9.30 ರಿಂದ ಸಂಜೆ 5 ಗಂಟೆಯವರೆಗೆ ನಾವುಂದ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11ಕೆ.ವಿ. ಹೇರೂರು, ಕಿರಿಮಂಜೇಶ್ವರ, ಮರವಂತೆ, ಕಂಬದಕೋಣೆ ಹಾಗೂ 33 ಕೆ.ವಿ ಬೈಂದೂರು ಮತ್ತು 33ಕೆ.ವಿ ಕೊಲ್ಲೂರು ಮಾರ್ಗದಲ್ಲಿ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಸದರಿ ದಿನದಂದು 33/11 ಕೆ.ವಿ ಬೈಂದೂರು ಮತ್ತು ಕೊಲ್ಲೂರು ಉಪಕೇಂದ್ರದಿಂದ ಹೊರಡುವ 11ಕೆ.ವಿ ಫೀಡರುಗಳಾದ ಬೈಂದೂರು, ಉಪ್ಪುಂದ, ತಗ್ಗರ್ಸೆ, ಶಿರೂರು, ತೂದಳ್ಳಿ, ಗಂಗನಾಡು,ಯಳಜಿತ್, ಕೊಲ್ಲೂರು ಮತ್ತು ಮುದೂರು ಹಾಗೂ 110ಕೆ.ವಿ ನಾವುಂದ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11 ಕೆ.ವಿ ಹೇರೂರು, ಕಿರಿಮಂಜೇಶ್ವರ, ಮರವಂತೆ, ಕಂಬದಕೋಣೆ ಫೀಡರುಗಳಲ್ಲಿ ಬೈಂದೂರು, ಶಿರೂರು, ಪಡುವರಿ, ಉಪ್ಪುಂದ, ಯಡ್ತರೆ, ಬಿಜೂರು, ತಗ್ಗರ್ಸೆ,ಗಂಗನಾಡು, ಯಳಜಿತ್, ಮುದೂರು, ಕೊಲ್ಲೂರು, ನಾಯ್ಕನಕಟ್ಟೆ, ಕೆರ್ಗಾಲ್, ಅರೆಶಿರೂರು, ಗೋಳಿಹೊಳೆ, ಇಡೂರು, ಕಂಬದಕೋಣೆ,ಕಿರಿಮಂಜೇಶ್ವರ, ಮರವಂತೆ ಮತ್ತು ಹೇರೂರು ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ.

ಮಣಿಪಾಲ ವಿದ್ಯುತ್‌ಉಪಕೇಂದ್ರ, ಸೋಮವಾರ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ 110/33/11ಕೆವಿ ಮಣಿಪಾಲ ವಿದ್ಯುತ್‌ಉಪಕೇಂದ್ರದಿಂದ ಹೊರಡುವ 11 ಕೆವಿ ವಿ. ಪಿ. ನಗರ, ವಿ.ಆರ್.ನಗರ, ಅನಂತನಗರ, ರೋಯಲ್ ಎಂಬಸಿ , ಉದ್ಯಾವರ-2, ಫೀಡರ್ಗಳ ಮಾರ್ಗದಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಸಿಂಡಿಕೇಟ್ ಸರ್ಕಲ್, ಎಂ.ಜಿ.ಸಿ. ಸ್ಕೂಲ್, ಬಿ.ಎಸ್.ಎನ್.ಎಲ್. ಟೆಲಿಫೋನ್ ಎಕ್ಸ್‌ಚೇಂಜ್ ವಿದ್ಯಾರತ್ನ ನಗರ, ಡಿ.ಸಿ ಆಫೀಸ್, ಆರ್. ಟಿ.ಓ ಆಫೀಸ್, ಪೆರಂಪಳ್ಳಿ, ಸಗ್ರಿ ನೊಳೆ, ಹುಡ್ಕೋ, ಅನಂತನಗರ, ಕಲ್ಯಾಣನಗರ, ಸೋನಿಯಾ ಕ್ಲಿನಿಕ್, ರೋಯಲ್ ಎಂಬಸಿ, ಕೊರಂಗ್ರಪಾಡಿ, ಮಾರ್ಪಳ್ಳಿ ಕುಕ್ಕಿಕಟ್ಟೆ ಉದ್ಯಾವರ-2, ಕಟಪಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ ಎಂದು ಮೆಸ್ಕಾಂ ಇಲಾಖೆ ಪ್ರಕಟಣೆ ತಿಳಿಸಿದೆ.

ಸುಂಟಿಕೊಪ್ಪ ಶಾಲೆಯಲ್ಲಿ ಪರಿಸರ ದಿನಾಚರಣೆ

ಸುಂಟಿಕೊಪ್ಪ: ಇಲ್ಲಿನ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ ಆವರಣದಲ್ಲಿ ಶಾಲಾಭಿವೃದ್ಧಿ ಸಮಿತಿಯ ಗೌರವ ಅಧ್ಯಕ್ಷ ರಫೀಕ್ ಖಾನ್ ಅವರು ಗಿಡವನ್ನು ನೆಟ್ಟರು. ನಿಸರ್ಗ ಇಕೋ ಕ್ಲಬ್ ಹಾಗೂ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ವೈ.ಸಿ.ಕುಮಾರ್, ದೈಹಿಕ ಶಿಕ್ಷಣ ಶಿಕ್ಷಕ ಪಿ.ಇ.ನಂದ, ಸತೀಶ್, ಚಂದ್ರಾವತಿ ,ಉಷಾ, ವನಿತಾ, ಇಂದಿರಾ, ಹಸೀನಾ, ಮಮತಾ, ಜಸೀಲಾ ಹಾಗೂ ಶಾಲಾ ವಿದ್ಯಾರ್ಥಿಗಳು ಇದ್ದರು.

ಬನ್ನಡ್ಕ ಪ್ರದೇಶಕ್ಕೆ ದ. ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಭೇಟಿ | ಜನರ ಆಗ್ರಹಕ್ಕೆ ಸಿಕ್ಕಿತು ಸ್ಪಂದನೆ

ಸರ್ವಿಸ್ ರಸ್ತೆ, ಕ್ರಾಸಿಂಗ್ ಲೈನ್ ನಿರ್ಮಾಣದ ಭರವಸೆ

ಮೂಡುಬಿದಿರೆ: ವಾಹನ ಅಪಘಾತಗಳಾಗಿ ಹಲವು ಜನ ಪ್ರಾಣ ಕಳೆದುಕೊಂಡು ಇತ್ತೀಚಿನ ದಿನಗಳಲ್ಲಿ ಅಪಘಾತ ವಲಯವೆಂದೇ ಗುರುತಿಸಿಕೊಂಡಿರುವ ಬನ್ನಡ್ಕ ಪ್ರದೇಶಕ್ಕೆ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಭಾನುವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಸಂದರ್ಭದಲ್ಲಿ ಇಲಾಖೆಯು ಬನ್ನಡ್ಕದಲ್ಲಿ ಸರ್ವಿಸ್ ರಸ್ತೆಯನ್ನು ನಿರ್ಮಿಸದೆ ಇರುವುದರಿಂದ ಆಗಿರುವ ಸಮಸ್ಯೆಯ ಕುರಿತು ಸ್ಥಳೀಯರು ಸಂಸದರ ಗಮನಕ್ಕೆ ತಂದರು. ಈ ವೇಳೆ ಸರ್ವಿಸ್ ರಸ್ತೆ, ಕ್ರಾಸಿಂಗ್ ಲೈನ್ ಅಳವಡಿಸುವ ಭರವಸೆ ನೀಡಿದ ಅವರು, ಕಾಮಗಾರಿಯನ್ನು ಸೂಕ್ತ ರೀತಿಯಲ್ಲಿ ನಡೆಸುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಳಿಕ ಮಾತನಾಡಿದ ಅವರು, 600 ಮೀಟರ್ ಗ್ಯಾಪ್‌ನಲ್ಲಿ ಸರ್ವಿಸ್ ರಸ್ತೆ ನಿರ್ಮಿಸುವಂತೆ ಎಲ್ಲರ ಬೇಡಿಕೆ ಇತ್ತು. ಈ ನಿಟ್ಟಿನಲ್ಲಿ ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಇಲಾಖೆ ಸಚಿವರು ಹಾಗೂ ಬೆಂಗಳೂರಿನ



ಪ್ರಾದೇಶಿಕ ಕಚೇರಿ ಅಧಿಕಾರಿ ಯೊಂದಿಗೆ ಮಾತುಕತೆ ನಡೆಸಲಾಗಿದೆ. ಅಂದಾಜು ವೆಚ್ಚದ ಪಟ್ಟಿ ಸಿದ್ಧಪಡಿಸುವ ಕೆಲಸ ಪ್ರಾರಂಭವಾಗಿದ್ದು, ಪ್ರೊಸೀಜರಲ್ ಅನುಮೋದನೆ ಸಿಕ್ಕ ತಕ್ಷಣ ಸರ್ವಿಸ್ ರಸ್ತೆ ಕಾಮಗಾರಿ ಮಾಡಲಾಗುವುದು ಎಂದು ಹೇಳಿದರು.

ರಸ್ತೆ ದಾಟಲು ಕ್ರಾಸಿಂಗ್ ಲೈನ್ ವ್ಯವಸ್ಥೆ ಬೇಕೆಂಬುದು ಜನರ ಪ್ರಮುಖ ಬೇಡಿಕೆ ಇದ್ದು, ಶಾಸಕರು ಹಾಗೂ ಸಾರ್ವಜನಿಕರೊಂದಿಗೆ ಚರ್ಚಿಸಿ, ಮುಂದಿನ ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

> **ಎಚ್ಚರಿಕೆಯಿಂದ ಸಂಚರಿಸಿ**
> **ಈ ಹಿಂದೆ ಇದ್ದ ಹೆದ್ದಾರಿ ಚಿಕ್ಕದಾಗಿತ್ತು, ಈಗ ಅದು ನಾಲ್ಕು ಪಥಗಳ ದೊಡ್ಡ ಹೆದ್ದಾರಿಯಾಗಿ ಬದಲಾಗುತ್ತಿದೆ. ಕಾಮಗಾರಿ ನಡೆಯುವ ಸಂದರ್ಭ ಸಾರ್ವಜನಿಕರು ಎಚ್ಚರಿಕೆಯಿಂದ ಸಂಚರಿಸಬೇಕು. ಅಪಘಾತ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲಾ ಕಡೆಗಳಲ್ಲಿ ಸೈನ್ ಬೋರ್ಡ್‌ಗಳನ್ನು ಅಳವಡಿಸುವಂತೆ ಹೆದ್ದಾರಿ ಇಲಾಖೆ ಮತ್ತು ಕಾಂಟ್ರಾಕ್ಟರ್‌ಗಳಿಗೆ ಸೂಚಿಸಲಾಗಿದೆ.**
> ● ಕ್ಯಾ. ಬ್ರಿಜೇಶ್ ಚೌಟ, ಸಂಸದರು

ಎರಡು-ಮೂರು ಕಡೆಗಳಲ್ಲಿ ಭೂಸ್ವಾಧೀನದ ಸಮಸ್ಯೆ ಇದೆ. ಆದರೂ ಹಳೆಯ ಯೋಜನೆಯ ಅನುಗುಣವಾಗಿಯೇ ಕೆಲಸಗಳನ್ನು ಮಾಡಲಾಗುತ್ತದೆ ಎಂದು ಸಂಸದರು ಸ್ಪಷ್ಟಪಡಿಸಿದರು.

ಸರ್ವಿಸ್ ರಸ್ತೆ ಕೆಲಸವನ್ನು ಶೀಘ್ರ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದ ಅವರು, ಹೆದ್ದಾರಿ ಕಾಮಗಾರಿಯು ಆದಷ್ಟು ಬೇಗ ಪೂರ್ಣಗೊಳ್ಳಬೇಕೆಂದು ನಮ್ಮ ಇಚ್ಛೆಯಾಗಿದೆ ಎಂದರು.

ಆದಷ್ಟು ಬೇಗ ಸರ್ವಿಸ್ ರಸ್ತೆ ನಿರ್ಮಾಣ, ಕ್ರಾಸಿಂಗ್ ವ್ಯವಸ್ಥೆ, ಎಸ್‌ಕೆಎಫ್ ಬಳಿ ರಸ್ತೆಯನ್ನು ಸಮತಟ್ಟು ಮಾಡುವಂತೆ ಸ್ಥಳೀಯರಾದ ಸೂರಜ್ ಜೈನ್, ಅಕ್ಷಯ್ ಬನ್ನಡ್ಕ ಸಂಸದರಿಗೆ ಮನವಿ ನೀಡಿದರು. ಶಾಸಕ ಉಮಾನಾಥ ಎ. ಕೋಟ್ಯಾನ್, ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಯುವ ಮೋರ್ಚಾದ ಅಧ್ಯಕ್ಷ ಕುಮಾರ್ ಪ್ರಸಾದ್, ಭರತ್ ಶೆಟ್ಟಿ ಗೋಪಾಲ್ ಶೆಟ್ಟಿಗಾರ್, ಪಂಚಾಯತ್‌ನ ಮಾಜಿ ಸದಸ್ಯರುಗಳಾದ ನಿತಿನ್ ಕೋಟ್ಯಾನ್, ಟ್ರೆಸ್ಸಿನಾ ರೊಡ್ರಿಗಸ್, ಸ್ಥಳೀಯರಾದ ದಯಾನಂದ ಪೈ, ರಮೇಶ್ ಶೆಟ್ಟಿ ಮಾರ್ನಾಡ್, ಸತೀಶ್ ಭಟ್, ರಾಜೇಶ್ ಶೆಟ್ಟಿ ಅಕ್ಷಯ್ ಬನ್ನಡ್ಕ ಸಂತೋಷ್ ನಾಯ್ಕ್, ರೋಷನ್ ಕರ್ಕೇರಾ, ವೇಣುಗೋಪಾಲ ಶೆಟ್ಟಿ ರಾ. ಹೆ. ಯೋಜನಾ ನಿರ್ದೇಶಕ ಜಾವೆದ್ ಮತ್ತಿತರರು ಇದ್ದರು.

ಕ್ಷೇತ್ರದ ಜನರ ಸೇವೆಗೆ ಸದಾ ಸಿದ್ಧ: ಶಾಸಕ ಹರೀಶ್ ಪೂಂಜ



ಬೆಳ್ತಂಗಡಿ: ಪಡಂಗಡಿ ಗ್ರಾಮ ವ್ಯಾಪ್ತಿಯ ಬದ್ಯಾರ್ ಎಲ್. ಎಮ್. ಪಿಂಟೋ ಆಸ್ಪತ್ರೆ ರಸ್ತೆ, ಕಳೆಂಜಿರೋಡಿ ರಸ್ತೆ ಹಾಗೂ ನೈಕುಳಿ ಮಲ್ಲಿಪಾಡಿ ರಸ್ತೆಗಳ ಕಾಂಕ್ರೀಟೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರು ಭಾನುವಾರ ರಸ್ತೆಗಳ ಉದ್ಘಾಟನೆ ನೆರವೇರಿಸಿದರು.

1 ಕೋಟಿ 15 ಲಕ್ಷ ರೂ. ಅನುದಾನದಲ್ಲಿ ಈ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ರಸ್ತೆ ಉದ್ಘಾಟನೆಯ ಸಂದರ್ಭದಲ್ಲಿ ಬದ್ಯಾರ್ ಸಂತ ರಫಾಯೆಲ್ ದೇವಾಲಯ ಹಾಗೂ ಎಲ್. ಎಮ್. ಪಿಂಟೋ ಆಸ್ಪತ್ರೆ ವತಿಯಿಂದ ಶಾಸಕರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಬಳಿಕ ಮಾತನಾಡಿದ ಶಾಸಕರು, ಬದ್ಯಾರ್ ಆಸ್ಪತ್ರೆಗೆ ಬರುವ ರೋಗಿಗಳಿಗೆ ಹಾಗೂ ಈ ಭಾಗದ ಸಾರ್ವಜನಿಕರಿಗೆ ಸೂಕ್ತ ರಸ್ತೆ ಸಂಪರ್ಕದ ತೀವ್ರ ಅಗತ್ಯವಿತ್ತು. ಇದನ್ನು ಮನಗಂಡು ರಸ್ತೆಗಳನ್ನು ಕಾಂಕ್ರೀಟೀಕರಣಗೊಳಿಸಲಾಗಿದೆ. ಕ್ಷೇತ್ರದ ಜನರ ಸೇವೆಗೆ ನಾನು ಸದಾ ಸಿದ್ಧನಿದ್ದೇನೆ ಎಂದರು.

ಸಂತ ರಫಾಯೆಲ್ ದೇವಾಲಯದ ಧರ್ಮ ಗುರು, ಎಲ್. ಎಮ್. ಪಿಂಟೋ ಆಸ್ಪತ್ರೆಯ ಆಡಳಿತಾಧಿಕಾರಿ ವಂದನೀಯ ಫಾದರ್ ರೋಶನ್ ಕ್ರಾಸ್ತಾ ಮಾತನಾಡಿ, ಬಹು ಕಾಲದ ಬೇಡಿಕೆಯಾಗಿದ್ದ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸಿದ ಶಾಸಕರ ಕಾರ್ಯ ಶ್ಲಾಘನೀಯ. ಸಮಸ್ತ ಊರಿನ ಪರಮವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಮೀನಾಕ್ಷಿ, ಪಿ. ಎನ್. ವಸಂತಿ, ವನಜಾಕ್ಷಿ, ರಿಚರ್ಡ್ ಗೋವಿಯಸ್, ಸಂತೋಷ್ ಕುಮಾರ್ ಜೈನ್, ಬೆಥನಿ ಸಿಸ್ಟರ್ ಸುಪೀರಿಯರ್ ಸಿಸ್ಟರ್ ಜಾನೆಟ್, ಚರ್ಚ್ ಪಾಲನಾ ಮಂಡಳಿಯ ಉಪಾಧ್ಯಕ್ಷ ಶಾಂತಿ ಡಿಸೋಜ ಹಾಗೂ ಪಿಡಬ್ಲ್ಯೂಡಿ ಗುತ್ತಿಗೆದಾರ ರಫೀಕ್ ಮೊದಲಾದವರು ಉಪಸ್ಥಿತರಿದ್ದರು.

ಕರ್ಪೆ ಬಿಜೆಪಿ ಶಕ್ತಿ ಕೇಂದ್ರದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ



- ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕುರಿತು ಚರ್ಚೆ
- ಪಕ್ಷ ಸಂಘಟನೆಗೆ ಸೂಚನೆ

ಬಂಟ್ವಾಳ: ತಾಲೂಕಿನ ಸಂಗಬೆಟ್ಟು ಮಹಾಶಕ್ತಿ ಕೇಂದ್ರದ ಕರ್ಪೆ ಶಕ್ತಿ ಕೇಂದ್ರ ಸಭೆ ಕರ್ಪೆ ಸಮಾಜ ಮಂದಿರ ವಠಾರದಲ್ಲಿ ಶಕ್ತಿ ಕೇಂದ್ರ ಪ್ರಮುಖರಾದ ತೇಜಸ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬಿಜೆಪಿ ಮುಖಂಡರು, ಕರ್ಪೆ ಶಕ್ತಿ ಕೇಂದ್ರ ಪ್ರಭಾರಿ ಹರಿಕೃಷ್ಣ ಬಂಟ್ವಾಳ್ ಅವರು ಭಾಗವಹಿಸಿ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಬಗ್ಗೆ, ಬಿಎಲ್ 2ರವರ ಪಾತ್ರ, ಬೂತ್ ಅಧ್ಯಕ್ಷರ ಜವಾಬ್ದಾರಿ ಹಾಗೂ ತಿಂಗಳ ಕೊನೆಯ ಭಾನುವಾರ ನಡೆಯುವ ಪ್ರಧಾನಿಗಳ ಮನ್ ಕೀ ಬಾತ್ ಕಾರ್ಯಕ್ರಮ ವೀಕ್ಷಣೆ ಮಾಡುವುದು, ಬೂತ್ ಸಮಿತಿ ಸಭೆ ನಡೆಸುವುದಲ್ಲದೆ ಪಕ್ಷ ಸಂಘಟನೆ, ಬೂತ್ ಅಧ್ಯಕ್ಷರ, ಶಕ್ತಿ ಕೇಂದ್ರ ಪ್ರಮುಖ್‌ನ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರು. ಜೊತೆಗೆ ಮುಂಬರುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಸಂಘಟನೆ ಕಾರ್ಯ ನಡೆಸುವಂತೆ ಸೂಚಿಸಿದರು.

ತಾಲೂಕು ಪಂಚಾಯತ್ ಮಾಜಿ ಸದಸ್ಯ ಪ್ರಭಾಕರ ಪ್ರಭು ಸ್ವಾಗತಿಸಿ, ಶಕ್ತಿ ಕೇಂದ್ರ ಸಭೆಯ ಮಹತ್ವದ ಬಗ್ಗೆ ವಿವರಿಸಿದರು. ಸಭೆಯಲ್ಲಿ ಕರ್ಪೆ ಬೂತ್ ಅಧ್ಯಕ್ಷರುಗಳಾದ ಭಾಸ್ಕರ ಪ್ರಭು, ರಾಜೇಂದ್ರ ಪೂಜಾರಿ, ಕಾರ್ಯದರ್ಶಿ ಸದಾನಂದ ಪೂಜಾರಿ, ಮಂಡಲ ಕಾರ್ಯಕಾರಿಣಿ ಸದಸ್ಯ ಚಂದ್ರಶೇಖರ ಪೂವಳ,ಬೂತ್ ಪದಾಧಿಕಾರಿಗಳಾದ ರಾಮಕೃಷ್ಣ ನಾಯಕ್, ದಾಮೋದರ ಪೂಜಾರಿ, ಕೃಷ್ಣಪ್ಪ ಪೂಜಾರಿ, ಸಂಘದ ಹಿರಿಯರಾದ ಸುಬ್ರಮಣ್ಯ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಸರಪಾಡಿ ಶ್ರೀ ದೇಗುಲದಲ್ಲಿ ಬಾಲ ಸಂಸ್ಕಾರ ಕಾರ್ಯಕ್ರಮ



ಬಂಟ್ವಾಳ: ಸರಪಾಡಿ ಶ್ರೀ ಶರಭೇಶ್ವರ ದೇವಸ್ಥಾನದಲ್ಲಿ ಶ್ರೀ ಶರಭೇಶ್ವರ ಭಜನಾ ಮಂಡಳಿ ವತಿಯಿಂದ ಭಜನಾ ಪಟು ಮಕ್ಕಳಿಗೆ ಉಚಿತ ಬರೆಯುವ ಪುಸ್ತಕ ವಿತರಣೆ ಹಾಗೂ ಬಾಲ ಸಂಸ್ಕಾರ ಕಾರ್ಯಕ್ರಮ ಭಾನುವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವೇ.ಮೂ. ವಿಜಯ ಕೃಷ್ಣ ಐತಾಳ್ ಪುಂಜೂರು, ವಿದ್ಯೆ ಇದ್ದಾಗ ಮಕ್ಕಳಿಗೆ ವಿನಯ ಬರಲಿದ್ದು, ಸಮಾಜದಲ್ಲಿ ಗೌರವೂ ಸಿಗುತ್ತದೆ. ಪುರಾತನ ಭಾರತದಲ್ಲೇ ಶಿಕ್ಷಣಕ್ಕೆ ವಿಶೇಷ ಮಹತ್ವವಿದ್ದು, ಹಾದಿ ತಪ್ಪಿದ ವ್ಯವಸ್ಥೆ ಯನ್ನು ಸರಿ ದಾರಿಗೆ ತರಲು ಧರ್ಮ ಶಿಕ್ಷಣ ಅತಿ ಅಗತ್ಯವಾಗಿದೆ ಎಂದರು.

ಸನಾತನ ಧರ್ಮ ಶಿಕ್ಷಣದ ಡಾ. ವಿನಯ ಕುಮಾರ್ ಉಪನ್ಯಾಸ ನೀಡಿ, ಧರ್ಮ ಶಿಕ್ಷಣದ ಕೊರತೆಯ ಕಾರಣಕ್ಕೆ ಸಮಾಜದಲ್ಲಿ ಅಶಾಂತಿ ಸೃಷ್ಟಿಯಾಗುತ್ತಿದ್ದು, ಅಂತಹ ಶಿಕ್ಷಣ ದೊರೆತಾಗ ಬಲಿಷ್ಠ ಸಮಾಜ ನಿರ್ಮಾಣ ಸಾಧ್ಯ. ನಮ್ಮ ಒತ್ತಡದ ಬದುಕಿನಿಂದ ಮುಕ್ತಿ ಪಡೆಯಲು ಕುಲದೇವರ ಆರಾಧನೆ, ಭಗವಂತನ ದರುಶನ ಅಗತ್ಯ ಎಂದರು.

ದೇವಸ್ಥಾನ ಆಡಳಿತ ಸಮಿತಿಯ ಸದಸ್ಯ ವಿಠಲ್ ಎಂ.ಅರುಮುಡಿ, ಚಂದ್ರಹಾಸ ಶೆಟ್ಟಿ ಹೊಳ್ಳರಗುತ್ತು, ಶ್ರೀ ಗಣೇಶೋತ್ಸವ ಸಮಿತಿ ಅಧ್ಯಕ್ಷ ಚೇತನ್ ಬಜ ಉಪಸ್ಥಿತರಿದ್ದರು. ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ರಾಧಾಕೃಷ್ಣ ರೈ ಕೊಟ್ಟುಂಜ ಸ್ವಾಗತಿಸಿದರು. ಚಿಂತನ್ ದೇವಾಡಿಗ ವರದಿ ವಾಚಿಸಿದರು. ಯೋಗೀಶ್ ನೀರಪಲ್ಕೆ ವಿದ್ಯಾರ್ಥಿಗಳ ವಿವರ ನೀಡಿದರು. ಭಜನಾ ಸಮಿತಿಯ ಸಂಚಾಲಕಿ ರೋಹಿಣಿ ಮೋಹನ್ ಕಾರ್ಯಕ್ರಮ ನಿರ್ವಹಿಸಿದರು.


ಕಟೀಲು ಗಮಕ ಸಪ್ತಾಹದ ಸಮಾರೋಪ



ಕಟೀಲು: ಜ್ಞಾನ ಪರಂಪರೆಯಾಗಿ ಗಮಕ ಕಲೆಯನ್ನು ಉಳಿಸುವ ಕೆಲಸ ಅಗತ್ಯ. ಗಮಕ ಸಪ್ತಾಹ ಅಲ್ಲಲ್ಲಿ ಆಗಲಿ. ಜ್ಞಾನದಲ್ಲಿ ಎತ್ತರಕ್ಕೇರಿಸುವ, ಅಂತಃಚಕ್ಷುವನ್ನು ಉದ್ದೀಪನಗೊಳಿಸುವ ಕಲೆಯಾದ ಗಮಕ ಯಕ್ಷಗಾನಕ್ಕೂ ಪೂರಕ. ಕಟೀಲಿನಲ್ಲಿ ಮುಂದಿನ ದಿನಗಳಲ್ಲೂ ಗಮಕ ಕಾರ್ಯಕ್ರಮಗಳು ನಿರಂತರ ವಾಗಲಿ ಎಂದು ಕಟೀಲು ದೇಗುಲದ ಅರ್ಚಕ ಶ್ರೀ ಹರಿನಾರಾಯಣದಾಸ ಆಸ್ರಣ್ಣ ಹೇಳಿದರು.

ಅವರು ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇಗುಲದಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು ಮಂಗಳೂರು ತಾಲೂಕು ಘಟಕ ಆಯೋಜಿಸಿದ ಅಧಿಕಸ್ಯ ಅಧಿಕಂ ಫಲಂ ಶೀರ್ಷಿಕೆಯಲ್ಲಿ ಅಧಿಕ ಮಾಸದ ಗಮಕ ಸಪ್ತಾಹದ ಸಮಾ ರೋಪ ದಲ್ಲಿ ಮಾತನಾಡಿದರು.

ಶಾರದಾ ವಿದ್ಯಾಲಯದ ದಯಾನಂದ ಕಟೀಲು, ಗಮಕ ವಾಚನ ನಡೆಸಿದ ಡಾ. ಶ್ರೀಕೃಷ್ಣ ಸುಣ್ಣಂಗೋಳಿ, ವಿದ್ವಾನ್ ರವಿಶಂಕರ ಹೆಗ್ಡೆ ದೊಡ್ಡಳ್ಳಿ, ಮಂಗಳೂರು ತಾಲೂಕು ಗಮಕ ಕಲಾ ಪರಿಷತ್ತು ಅಧ್ಯಕ್ಷ ಸುರೇಶ್ ರಾವ್ ಅತ್ತೂರು, ಚಂದ್ರಿಕಾ ಸುರೇಶ್ ಮತ್ತಿತರರಿದ್ದರು.



ಕೋಟ ಗ್ರಾ. ಪಂ. ಸಭಾಂಗಣದಲ್ಲಿ ಪ್ಲಾಸ್ಟಿಕ್ ಮುಕ್ತ ಪರಿಸರ ಕಾರ್ಯಕ್ರಮ ನಡೆಯಿತು. ನಿವೃತ್ತ ಪ್ರಾಧ್ಯಾಪಕ ವೆಂಕಟೇಶ್ ಪೈ, ಉದ್ಯಮಿ ಆನಂದ್ ಸಿ. ಕುಂದರ್, ನಿವೃತ್ತ ಪಿ.ಡಿ.ಒ ಸುರೇಶ್ ಬಂಗೇರ, ಕೋಟ ಗ್ರಾ. ಪಂ. ಪಿ.ಡಿ.ಒ ಉಮೇಶ್, ಬ್ರಹ್ಮಾವರ ವಲಯ ಮೇಲ್ವಿಚಾರಕಿ ಸ್ವಾತಿ ಇದ್ದರು.

ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಚುನಾವಣೆ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿ.ಬಿ.ಎಸ್.ಇ. ಸಂಸ್ಥೆಯಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಚುನಾವಣೆ ನಡೆಯಿತು. ಶಾಲಾ ನಾಯಕನಾಗಿ 10ನೇ ತರಗತಿಯ ವಿದ್ಯಾರ್ಥಿ ಸಾತ್ವಿಕ್ ಜಿ. ಹಾಗೂ ಶಾಲಾ ನಾಯಕಿಯಾಗಿ ವಂಶಿಕಾ ಬಿ. ರೈ ನೇಮಕಗೊಂಡರು.

ವಿದ್ಯಾರ್ಥಿಗಳಿಗೆ ಜವಾಬ್ದಾರಿ

9ನೇ ತರಗತಿಯ ವಿದ್ಯಾರ್ಥಿಗಳಾದ ಶ್ರೀರಾಮ್ ಎಲ್. ಆಚಾರ್ಯ ಗೃಹ, ಆದ್ಯಾ ಶೆಣೈ ಶಿಸ್ತುಪಾಲನಾ, ಶ್ರೀನಿಕ್ ಎಸ್. ಆಚಾರ್ಯ ಕ್ರೀಡಾ ಮಂತ್ರಿಯಾಗಿ ಆಯ್ಕೆಗೊಂಡರು. 8ನೇ ತರಗತಿಯ ವಿದ್ಯಾರ್ಥಿಗಳಾದ ಶಿತಿಜ್ ಎಸ್. ಶಿಕ್ಷಣ, ಸಾನ್ವಿ ಜಿ. ಸಾಂಸ್ಕೃತಿಕ ಮತ್ತು ಸಂವಹನ. 7ನೇ ತರಗತಿಯ ವಿದ್ಯಾರ್ಥಿಗಳಾದ ಸ್ಪಂದನಾ ಭಟ್ ಎಂ. ಸ್ವಚ್ಛತಾ, ಸಂಹಿತ್ ಜೋಸ್ಸಿ ಲೋಬೊ ಆಹಾರ, ನೀರಾವರಿ ಹಾಗೂ ಇಂಧನಮಂತ್ರಿಯಾಗಿ ಆಯ್ಕೆಗೊಂಡರು.

ಮಾಲತಿ ಡಿ. ಚುನಾವಣೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ಸಲ್ಲಿಸಿ, ಜವಾಬ್ದಾರಿಯುತವಾಗಿ ತಮ್ಮ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿಕೊಂಡು ವಿದ್ಯಾಲಯದ ಶ್ರೇಯೋಭಿವೃದ್ಧಿಗೆ ಸಹಕರಿಸಿ, ನಾಯಕತ್ವದ ಗುಣವನ್ನು ತಮ್ಮಲ್ಲಿ ರೂಢಿಸಿಕೊಳ್ಳಬೇಕೆಂದು ತಿಳಿಸಿದರು.

ಸಮಾಜ ವಿಜ್ಞಾನ ಶಿಕ್ಷಕರಾದ ದೀಪ್ತಿ ಹಾಗೂ ರಮೇಶ್ ಅವರ ನೇತೃತ್ವದಲ್ಲಿ ಚುನಾವಣೆಯನ್ನು ಆಯೋಜಿಸಲಾಯಿತು.

ಉಪ್ಪಳ ಕೊಂಡೆವೂರು ಮಠಕ್ಕೆ ಶಾಸಕ ಎ.ಕೆ.ಎಂ.ಅಶ್ರಫ್ ಭೇಟಿ



ಮಂಜೇಶ್ವರ: ಮಂಜೇಶ್ವರ ಶಾಸಕ ಎಕೆಎಂ ಅಶ್ರಫ್ ಅವರು ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠಕ್ಕೆ ತೆರಳಿ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭ ಮಂಜೇಶ್ವರ ಕ್ಷೇತ್ರದ ಸಾಮಾಜಿಕ ಸಾಮರಸ್ಯ ಮತ್ತು ನಾಡಿನ ಪ್ರಗತಿ ಪರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶ್ರೀಗಳವರು ಉಪಯುಕ್ತ ಸಲಹೆ ಸಹಿತ ಮಾರ್ಗದರ್ಶನ ಇತ್ತರೆಂದು ತಿಳಿಸಿದರು.

ಕೆ.ಆರ್. ಟಿ. ಸಿ ಕುಂದಾಪುರ ಘಟಕದ ಬಸ್ ನಿಲ್ದಾಣದಲ್ಲಿ ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್ ಅವರು ಗಿಡ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಕುಂದಾಪುರ ಘಟಕದ ಡಿಪೋ ಮ್ಯಾನೇಜರ್ ಎ .ಉದಯ ಶೆಟ್ಟಿ ಮತ್ತು ಸಿಬ್ಬಂದಿಗಳು ಇದ್ದರು.



ಕಡಬದ ಪಿಜಕಳ ಗೊಡಾಲು-ಆರ್ತಿಲ ಕಾಂಕ್ರೀಟ್ ರಸ್ತೆ ಉದ್ಘಾಟನೆ | ತಾಲೂಕಿನ ಜನರ ಇನ್ನಷ್ಟು ಬೇಡಿಕೆಗಳಿಗೆ ಸ್ಪಂದಿಸುವ ಭರವಸೆ

ರಸ್ತೆ ಸಹಿತ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ: ಶಾಸಕಿ ಭಾಗೀರಥಿ ಮುರುಳ್ಯ

ಕಡಬ: ಹಳ್ಳಿಗಳ ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿಯಾಗಲು ಸಾಧ್ಯ. ಆದುದರಿಂದ ಗ್ರಾಮೀಣ ರಸ್ತೆಗಳು ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ ಎಂದು ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಅವರು ನುಡಿದರು.

ಅವರು ಭಾನುವಾರ 15 ಲಕ್ಷ ರೂ. ಶಾಸಕರ ವಿಶೇಷ ಅನುದಾನದಡಿ ಅಭಿವೃದ್ಧಿಗೊಂಡಿರುವ ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ಪಿಜಕಳ ಗೊಡಾಲು-ಆರ್ತಿಲ ಕಾಂಕ್ರೀಟ್ ರಸ್ತೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಸ್ಥಳೀಯ ನಿವಾಸಿಗಳಿಗೆ ಸಹಕಾರಿ

ರಸ್ತೆ ಅಭಿವೃದ್ಧಿಯಿಂದ ಸ್ಥಳೀಯ ನಿವಾಸಿಗಳು ಹಾಗೂ ವಾಹನ ಚಾಲಕರಿಗೆ ಅನುಕೂಲವಾಗಲಿದ್ದು,



ಹಲವು ವರ್ಷಗಳಿಂದ ಇದ್ದ ರಸ್ತೆ ಸಮಸ್ಯೆಗೆ ಪರಿಹಾರ ದೊರೆತಂತಾಗಿದೆ. ಪರಿಸರದಲ್ಲಿ ಇನ್ನಷ್ಟು ಅಭಿವೃದ್ಧಿ ಕಾರ್ಯಗಳಿಗೆ ಅನುದಾನಕ್ಕಾಗಿ ಬೇಡಿಕೆ ಇದ್ದು, ಆದ್ಯತೆಯ ಮೇಲೆ ಅವುಗಳಿಗೆ ಅನುದಾನ ಒದಗಿಸುವುದಾಗಿ ಅವರು ಭರವಸೆ ನೀಡಿದರು.

ಭೌಗೋಳಿಕವಾಗಿ ವಿಶಾಲ ಪ್ರದೇಶವನ್ನು ಹೊಂದಿರುವ ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ನದಿ, ತೋಡು, ತೊರೆಗಳು ಹಾದು ಹೋಗುತ್ತಿವೆ. ಆದರಿಂದಾಗಿ ರಸ್ತೆಗಳ ಅಭಿವೃದ್ಧಿಯ

> **ಶಾಲೆಗಳ ಅಭಿವೃದ್ಧಿಗೆ ಆದ್ಯತೆ**
> **ಶಾಲೆಗೆ ಹೋಗುವ ಮಕ್ಕಳ ಅನುಕೂಲಕ್ಕಾಗಿ ಕಿರು ಸೇತುವೆಗಳನ್ನು ರಚಿಸಲು ಅನುದಾನಗಳನ್ನು ನೀಡಲಾಗಿದೆ. ತರಗತಿ ಕೊಠಡಿಗಳ ಕೊರತೆ ಇರುವ ಶಾಲೆಗಳಿಗೆ ಆದ್ಯತೆಯ ಮೇಲೆ ಅನುದಾನ ಒದಗಿಸಿ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.**
> ● ಭಾಗೀರಥಿ ಮುರುಳ್ಯ, ಶಾಸಕಿ

ಜತೆಗೆ ಸೇತುವೆ, ಕಾಲು ಸಂಕಗಳಿಗೂ ಅನುದಾನ ಒದಗಿಸಬೇಕಾದ ಅನಿವಾರ್ಯತೆ ಇದೆ. ಈಗಾಗಲೇ ಬಹುತೇಕ ರಸ್ತೆಗಳಲ್ಲಿ ಸೇತುವೆಗಳು ಆಗಬೇಕಾದ ಕಡೆಗೆ ಅನುದಾನ ನೀಡಲಾಗಿದೆ. ಆದರೂ ಹೊಸ ಹೊಸ ಬೇಡಿಕೆಗಳು ಬರುತ್ತಿವೆ ಎಂದು ಹೇಳಿದರು.

ಈ ಸಂದರ್ಭ ಪಟ್ಟಣ ಪಂಚಾಯತ್ ಸದಸ್ಯರಾದ ಅಕ್ಷತಾ ಬಾಲಕೃಷ್ಣ ಗೌಡ, ಕುಸುಮ ಅಂಗಡಿಮನೆ , ಬಿಜೆಪಿ ಸುಳ್ಯ ಮಂಡಲದ ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ ಮನವಳಿಕೆ, ಕಡಬ ಶಕ್ತಿ ಕೇಂದ್ರದ ಕಾರ್ಯದರ್ಶಿ ಅಶೋಕ್ ಕುಮಾರ್ ಪಿ., ಪಿಜಕ್ಕಳ ಶ್ರೀ ಮಹಾವಿಷ್ಣು ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಕೃಷ್ಣಪ್ಪ ಗೌಡ ಪೂಜಾರಿ ಮನೆ, ಕಡಬ ಹಾಲು ಉತ್ಪಾದಕರ ಸಹಕಾರಿ ಸಂಘದ ನಿರ್ದೇಶಕಿ ಕುಸುಮಾವತಿ ಪೂಜಾರಿಮನೆ, ಪ್ರಮುಖರಾದ ದಯಾನಂದ ಗೌಡ ಆರಿಗ, ಕಿಶನ್ ಕುಮಾರ್‌ರೈ, ಗಿರಿಧರ ರೈ ಪಿಜಕ್ಕಳ, ರಸ್ತೆಗೆ ತನ್ನ ಸ್ವಂತ ಜಮೀನು ದಾನ ಮಾಡಿದ ಊರಿನ ಹಿರಿಯರಾದ ಹರಿಯಪ್ಪ ಗೌಡ ಗೊಡಾಲು,ಕೃಷ್ಣ ಆಲಂಗೂರು, ಗಣೇಶ್ ಕಳಾರ, ಪಿಜಕಳ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ವೆಂಕಟರಮಣ ಗೌಡ ಕೋಲ್ಪೆ, ಕಾರ್ತಿಕ್ ಪಿಜಕ್ಕಳ, ಆನಂದ ಗೌಡ ಕೊಂಕ್ಯಾಡಿ, ಅಜಿತ್ ಆಚಾರ್ಯ, ಅಶ್ವತ್ ಪಿ.ಕೆ.,ಗಣೇಶ್ ಗೌಡ ಪೊಯ್ಯತ್ತಡ್ಕ, ಸುಂದರ ಗೌಡ ಪಿ., ಗ್ರಾಮದ ಹಿರಿಯರು ಹಾಗೂ ರಸ್ತೆಯ ಫಲಾನುಭವಿಗಳು ಉಪಸ್ಥಿತರಿದ್ದರು.

ಬಿಜೆಪಿ ಕಡಬ ಮಹಾಶಕ್ತಿಕೇಂದ್ರದ ಅಧ್ಯಕ್ಷ ಪ್ರಕಾಶ್ ಎನ್. ಕೆ. ಸ್ವಾಗತಿಸಿ, ಪಟ್ಟಣ ಪಂಚಾಯತ್ ಸದಸ್ಯ ದಯಾನಂದ ಗೌಡ ಪೊಯ್ಯತ್ತಡ್ಕ ವಂದಿಸಿದರು.

ಕೊಡಗಿನ ಸಹಕಾರ ಸಂಘಗಳ ಸಿಬ್ಬಂದಿಗೆ ಜಿಎಸ್ಟಿ, ಆದಾಯ ತೆರಿಗೆ ಶಿಕ್ಷಣ | ರಾಬಿನ್ ದೇವಯ್ಯ ಸಲಹೆ

ಸಹಕಾರದ ಮಹತ್ವ ಅರಿತು ಸಿಬ್ಬಂದಿ ಕಾರ್ಯನಿರ್ವಹಿಸಬೇಕು

ಮಡಿಕೇರಿ: ಸಹಕಾರ ಕ್ಷೇತ್ರ ರೈತರ ಬೆನ್ನುಲುಬಾಗಿದ್ದು ಇಂತಹ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಕೆಲಸವನ್ನು ದೇಶ ಸೇವೆ ಎಂದು ಅರಿತು ತೃಪ್ತಿದಾಯಕವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ ಕರೆ ನೀಡಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಬೆಂಗಳೂರು, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಆಶ್ರಯದಲ್ಲಿ ಜಿಲ್ಲೆಯ ಪ್ಯಾಕ್ಸ್, ಪಿಕಾರ್ಡ್ ಬ್ಯಾಂಕ್, ಎಪಿಸಿಎಂಎಸ್, ಜೇನು ಸಹಕಾರ ಸಂಘ, ಪತ್ತಿನ ಹಾಗೂ ಮಾರಾಟ ಸಹಕಾರ ಸಂಘಗಳ ಲೆಕ್ಕಿಗರು, ಸಹಾಯಕ ಸಿಬ್ಬಂದಿಗೆ ಜಿಎಸ್‌ಟಿ ಮತ್ತು ಆದಾಯ ತೆರಿಗೆ ಕುರಿತು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಶಿಕ್ಷಣ ಕಾರ್ಯಕ್ರಮ ನಡೆಯಿತು.

ಮೊಟ್ಟ ಮೊದಲು ಗದಗ ಜಿಲ್ಲೆಯಲ್ಲಿ ಆರಂಭ ಕಂಡ ಸಹಕಾರ ಕ್ಷೇತ್ರ ಇಂದು ಬೃಹತ್ತಾಗಿ ಬೆಳೆದಿದೆ. ಕೇಂದ್ರ ಸರಕಾರ ಕೂಡ ರೈತರ ಅಭಿವೃದ್ಧಿಗಾಗಿ ಸಹಕಾರ ಖಾತೆಯನ್ನು ಸೃಷ್ಟಿಸಿದ್ದು 5 ವರ್ಷಗಳನ್ನು ಪೂರೈಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.



ಜಿಲ್ಲಾ ಕೇಂದ್ರ ಬ್ಯಾಂಕ್ ಮತ್ತು ಜಿಲ್ಲಾ ಯೂನಿಯನ್ ಮೂಲಕ ಉತ್ತಮ ಸಹಕಾರ ಸಂಘಗಳಿಗೆ ಪ್ರತಿ ವರ್ಷ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಇಂತಹ ಪ್ರತಿಷ್ಠಿತ ಪ್ರಶಸ್ತಿ ಪಡೆಯಲು ಅಲ್ಲಿನ ಸಿಬ್ಬಂದಿ ಅಳಿಲು ಸೇವೆಯೂ ಮುಖ್ಯವಾಗುತ್ತದೆ ಎಂಬುದನ್ನು ನೆನಪಿಡಬೇಕು ಎಂದು ಸಲಹೆ ನೀಡಿದರು.

6000 ತಿದ್ದುಪಡಿ

ಅತಿಥಿ ಉಪನ್ಯಾಸಕ, ಹಾಸನದ ಸನ್ನದ್ದು ಲೆಕ್ಕಿಗ ಸಿ.ಎ. ಶಂಭುಲಿಂಗಪ್ಪ ಜಿಎಸ್‌ಟಿ, ಆದಾಯ ತೆರಿಗೆ ವಿಚಾರಗಳ ಉಪನ್ಯಾಸ ನೀಡಿ, 2017ರಿಂದ ದೇಶದಲ್ಲಿ ಏಕರೂಪದ ತೆರಿಗೆ ಎಂಬ ನೀತಿಯ ಅಡಿಯಲ್ಲಿ ಜಿಎಸ್‌ಟಿಯನ್ನು ಜಾರಿಗೆ ತರಲಾಗಿದೆ. ಈ ನಿಯಮ ರೂಪಿಸುವ ವೇಳೆ ಕನಿಷ್ಠ 6 ಸಾವಿರ ತಿದ್ದುಪಡಿಗಳನ್ನು ಮಾಡಲಾಗಿದೆ. ಈ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಳ್ಳುವುದು ಕಷ್ಟಸಾಧ್ಯವಾದರೂ ಇದರ ಬಗ್ಗೆ ಸಹಕಾರ ಕ್ಷೇತ್ರದ ಪ್ರತಿ ಸಿಬ್ಬಂದಿಯೂ ಕನಿಷ್ಠ ಮಾಹಿತಿ ಕಡ್ಡಾಯವಾಗಿ ಹೊಂದಿರಬೇಕು ಎಂದರು.

> **ಕೊನೆಯ ದಿನಾಂಕಕ್ಕೆ ಕಾಯಬೇಡಿ**
>
> **ಸಹಕಾರ ಸಂಸ್ಥೆಗಳು 'ವಾರ್ಷಿಕ ಪಾವತಿ' ಕುರಿತು ಕೊನೆ ದಿನದವರೆಗೆ ಕಾಯಬಾರದು. ಸೂಕ್ತ ಸಮಯದಲ್ಲಿ ಎಲ್ಲಾ ಪಾವತಿಗಳನ್ನು ಪೂರ್ಣಗೊಳಿಸಬೇಕು. ಇದರಿಂದ ಪ್ರತಿ ದಿನದ ದುಬಾರಿ ದಂಡ ಮೊತ್ತದಿಂದ ಪಾರಾಗಲು ಸಹಾಯವಾಗಲಿದೆ**
>
> **● ಸಿ.ಎ. ಶಂಭುಲಿಂಗಪ್ಪ, ಸನ್ನದ್ದು ಲೆಕ್ಕಿಗ, ಹಾಸನ**

2010ರಲ್ಲಿ ಜಾರಿಯಲ್ಲಿದ್ದ 'ವ್ಯಾಟ್ ತೆರಿಗೆ ಪದ್ಧತಿ' ಇಂದು ರದ್ದುಗೊಂಡಿದ್ದು ಜಿಎಸ್ಟಿ ರೂಪದಲ್ಲಿ ಹೊಸ ತೆರಿಗೆ ನೀತಿ ಜಾರಿಯಲ್ಲಿದೆ. ಪೆಟ್ರೋಲಿಯಂ ಮತ್ತು ಮಾನವನ ಬಳಕೆಯ ಮದ್ಯವನ್ನು ಮಾತ್ರವೇ ಜಿಎಸ್ಟಿಯಿಂದ ಹೊರಗಿಡಲಾಗಿದ್ದು, ಉಳಿದಂತೆ ಎಲ್ಲವೂ ಜಿಎಸ್ಟಿ ವ್ಯಾಪ್ತಿಗೆ ಒಳಪಡುತ್ತದೆ ಎಂದು ವಿವರಿಸಿದರು. ಸಹಕಾರ ಸಂಸ್ಥೆ ರೈತ ಉಪಯೋಗಿ ವಸ್ತುಗಳನ್ನು ಡೀಲರ್‌ಗಳಿಂದ ಖರೀದಿಸುವ ಸಂದರ್ಭ ಎಸ್‌ಜಿಎಸ್‌ಟಿ, ಸಿಜಿಎಸ್‌ಟಿ ಸಹಿತ ಇನ್‌ವೈಸ್ ಬಿಲ್ ಹೊಂದುವುದು ಕಡ್ಡಾಯವಾಗಿದೆ. ಇಲ್ಲವಾದಲ್ಲಿ ಸಹಕಾರ ಸಂಸ್ಥೆಗಳು ತೆರಿಗೆಯ ನಷ್ಟವನ್ನು ಎದುರಿಸಬೇಕಾಗುತ್ತದೆ. ಜಿಎಸ್‌ಟಿ ನೋಂದಾಯಿತ ಡೀಲರ್‌ಗಳಿಂದ ಮಾತ್ರವೇ ಖರೀದಿ ವ್ಯವಹಾರ ನಡೆಸಬೇಕು. ಈ ನಿಟ್ಟಿನಲ್ಲಿ ಅಗತ್ಯವಾಗಿ ಜಾಗೃತಿ ವಹಿಸಬೇಕು ಎಂದು ಸಲಹೆ ನೀಡಿದರು.

ಜಿಎಸ್ಟಿ ಅರಿವು ಅಗತ್ಯ

ಇನ್‌ಪುಟ್ ಟ್ಯಾಕ್ಸ್, ಔಟ್‌ಪುಟ್ ಟ್ಯಾಕ್ಸ್, ಔಟ್‌ಪುಟ್ ಟ್ಯಾಕ್ಸ್ ಕ್ರೆಡಿಟ್, ರಿವರ್ಸ್ ಚಾರ್ಜ್ ಮೆಕಾನಿಸಂ ಮತ್ತಿತ್ತರ ವಿಚಾರಗಳ ಕುರಿತು ಸಹಕಾರ ಸಂಸ್ಥೆ ಸಿಬ್ಬಂದಿ ಅರಿವು ಹೊಂದಿರಬೇಕು. ಇಲ್ಲವಾದಲ್ಲಿ ಜಿಎಸ್‌ಟಿ ಪದ್ಧತಿಯ ಲಾಭದಿಂದ ಸಹಕಾರ ಸಂಸ್ಥೆಗಳು ಹೊರಗೆ ಉಳಿದು ಬಿಡುತ್ತವೆ ಎಂದು ಎಚ್ಚರಿಸಿದರು.

ವೇದಿಕೆಯಲ್ಲಿ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾದ ಎ.ಎಸ್. ಶ್ಯಾಂಚಂದ್ರ, ಎಂ.ಎಂ. ಶ್ಯಾಮಲಾ, ಎಂ.ಟಿ. ಸುಬ್ಬಯ್ಯ, ಸಿಇಒ ಧಿಕಾರಿ ಯೋಗೇಂದ್ರ ನಾಯಕ ಇದ್ದರು.

ಸುತ್ತಮುತ್ತ

ನಾಳೆ ವಿದ್ಯುತ್ ವ್ಯತ್ಯಯ

ಕಾರ್ಕಳ/ಕುಂದಾಪುರ: ಹಿರಿಯಡ್ಕದಿಂದ ಹೊರಡುವ ಅಜೆಕಾರು ಮತ್ತು ಹೆಬ್ರಿ ಮಾರ್ಗದಲ್ಲಿ ಫೀಡರ್ ಗಳ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜೂ. 9.06.2026 ರಂದು ಬೆಳಿಗ್ಗೆ 9ರಿಂದ ಸಂಜೆ 5:30 ಗಂಟೆಯವರೆಗೆ ಅಜೆಕಾರು ಮತ್ತು ಹೆಬ್ರಿ ಉಪವಿದ್ಯುತ್ ಸ್ಥಾವರದ ಎಲ್ಲಾ ಫೀಡರ್ ಗಳಲ್ಲಿ ಹೆಬ್ರಿ ತಾಲೂಕಿನ ಅಂಡಾರು, ಶಿರ್ಲಾಲು, ಮುಂಡ್ಲಿ ರೋಡ್, ಕಾಡುಹೊಳೆ, ಮುನಿಯಾಲು, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ, ಹೆಬ್ರಿ, ಹೆಬ್ರಿ ಪೇಟೆ, ತಾಣ, ಮುದ್ರಾಡಿ, ಮುನಿಯಾಲು, ಬಚ್ಚಪ್ಪು, ಕಬ್ಬಿನಾಲೆ, ಮುಂಡಾಡಿಜೆಡ್ಡು, ಕಬ್ಬೂರು, ಸಂತೆಕಟ್ಟೆ, ಕರ್ಜೆ, ಕುರ್ಪಾಡಿ, ಬೇಳಂಜೆ, ಮಡಾಮಕ್ಕಿ, ಕಾಸನಮಕ್ಕಿ, ಶಿವಪುರ, ಕೆರೆಬೆಟ್ಟು, ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ವರಂಗ, ಮಾತಿಬೆಟ್ಟು, ಪಡುಕುಡೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಕುಂದಾಪುರ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಜಪ್ತಿ, ಮೊಳಹಳ್ಳಿ ಮತ್ತು ಗುರುಕುಲ ಮಾರ್ಗಗಳಲ್ಲಿ ಟ್ರೀ ಟ್ರಿಮ್ಮಿಂಗ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಜಪ್ತಿ, ಮೊಳಹಳ್ಳಿ, ಆಸೋಡು, ಕೊರ್ಗಿ, ಹೊಂಬಾಡಿ-ಮಂಡಾಡಿ, ಕಾಳಾವರ, ಕೋಟೇಶ್ವರ, ವಕ್ವಾಡಿ, ಅಂಕದಕಟ್ಟೆ ಮತ್ತು ಯಡಾಡಿ-ಮತ್ಯಾಡಿ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಜೂ.9ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಮಾಡಲಾಗುತ್ತದೆ.

ನಿಡ್ಪಳ್ಳಿ ಮಹಿಳಾ ಗ್ರಾಮಸಭೆ

ನಿಡ್ಪಳ್ಳಿ: ನಿಡ್ಪಳ್ಳಿ ಗ್ರಾಮ ಪಂಚಾಯತ್ ಮಹಿಳಾ ಗ್ರಾಮ ಸಭೆ ಪಂಚಾಯತ್ ಆಡಳಿತಾಧಿಕಾರಿ ಚೇತನ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಪುತ್ತೂರು ಗ್ರಾಮಾಂತರ ಆರಕ್ಷಕ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸುಷ್ಮಾ ಜಿ. ಭಂಡಾರಿ, ಮಹಿಳೆ ಮತ್ತು ಕಾನೂನು, ಪೋಕ್ಸೋ ಕಾಯ್ದೆ ಆನ್ಲೈನ್ ಸ್ಕ್ಯಾಮ್, ಮಹಿಳಾ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ಕುರಿತಾದ ಕಾನೂನಿನ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಪೌಷ್ಟಿಕತೆ ಮತ್ತು ಮಹಿಳಾ ಆರೋಗ್ಯದ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಲಯ ಮೇಲ್ವಿಚಾರಕಿ ನಂದನ ಕುಮಾರಿ ಬಿ. ಮಾಹಿತಿ ನೀಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮಿಷನ್ ಶಕ್ತಿ ಯೋಜನೆಯ ಜಿಲ್ಲಾ ಕಾರ್ಯಕ್ರಮ ಸಂಯೋಜಕಿ ಅಶ್ವಿನಿ ಕೆ. ಮಹಿಳಾ ಸಬಲೀಕರಣ, ಮಹಿಳೆಯರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದು, ಉತ್ತಮ ಮಹಿಳೆಯಾಗಲು ಮಹಿಳೆ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಅಂಶಗಳ ಬಗ್ಗೆ, ಮಹಿಳೆ ತನ್ನ ಜೀವನಕ್ಕೆ ಹೇಗೆ ಒತ್ತುಕೊಡಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು. ಗಸ್ತು ಅರಣ್ಯಪಾಲಕ ಸುನೀಶ್ ಬಾಬು, ಬೆಟ್ಟಂಪಾಡಿ ಮೆಸ್ಕಾಂ ಕಿರಿಯ ಇಂಜಿನಿಯರ್ ಪುತ್ತು ಜೆ. ಮಾಹಿತಿ ನೀಡಿದರು.

ಪಿಡಿಒ ಜಯಪ್ರಕಾಶ್ ಎಂ., ಕಾರ್ಯದರ್ಶಿ ಶಿವರಾಮ ಮೂಲ್ಯ ಉಪಸ್ಥಿತರಿದ್ದರು.

ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಸದಸ್ಯರು, ತ್ಯಾಜ್ಯ ಘಟಕದ ಸಿಬ್ಬಂದಿ ಪಾಲ್ಗೊಂಡರು. ಗ್ರಂಥ ಪಾಲಕಿ ಪವಿತ್ರ ಜಿ. ನಿರ್ವಹಿಸಿದರು.

ಬಸವನಮೂಲೆ: ಬಸವೇಶ್ವರ ದೇವರ ಪ್ರತಿಷ್ಠಾ ವಾರ್ಷಿಕೋತ್ಸವ



ಸುಬ್ರಹ್ಮಣ್ಯ: ಇತಿಹಾಸ ಪ್ರಸಿದ್ಧ ಕುಲ್ಕುಂದ ಬಸವನ ಮೂಲೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ ಶನಿವಾರ ನಡೆಯಿತು. ಶ್ರೀ ದೇವಳದ ಪ್ರಧಾನ ಅರ್ಚಕ ಗಣೇಶ್ ಭಟ್ ವೈದಿಕ ವಿಧಿವಿಧಾನ ನೆರವೇರಿಸಿದರು. ಈ ನಿಮಿತ್ತ ಮಹಾಗಣಪತಿ ಹವನ, ಪರಿವಾರ ಸಾನಿಧ್ಯಗಳಲ್ಲಿ ತಂಬಿಲ ಸೇವೆ, ಬಸವೇಶ್ವರ ದೇವರಿಗೆ ಕಲಶ ಸಹಿತ ಏಕಾದಶ ರುದ್ರಾಭಿಷೇಕ ಸೇವೆ, ಮಧ್ಯಾಹ್ನ ಮಹಾಪೂಜೆ ಹಾಗೂ ಅನ್ನ ಸಂತರ್ಪಣೆ ನೆರವೇರಿತು. ಈ ಸಂದರ್ಭ ಶ್ರೀ ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ್ ಸ್ಕಂಧ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಬ್ಯಾಂಕ್ 50ನೇ ಸ್ವಚ್ಛತಾ ಶ್ರಮದಾನ | ಡಾ. ನಾಯರ್ ಅಭಿಪ್ರಾಯ

ಸ್ವಚ್ಛತೆ, ಪರಿಸರ ಜಾಗೃತಿ ನಾಗರಿಕ ಶಿಷ್ಟಾಚಾರದ ಭಾಗ

ಮಂಗಳೂರು: ನಮ್ಮ ನಮ್ಮ ಪರಿಸರದ ನಿರ್ವಹಣೆ, ಸ್ವಚ್ಛತೆ ಇದು ಕೇವಲ ಸರಕಾರ, ಸರಕಾರಿ ಯಂತ್ರಗಳು ಅಥವಾ ಸಾಮಾಜಿಕ ಸಂಘಟನೆಗಳು ಮಾಡುವ ಕಾರ್ಯವಲ್ಲ, ಇದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಸಮಾಜದಲ್ಲಿ ನಾಗರಿಕ ಶಿಷ್ಟಾಚಾರದ ಅರಿವು ಮೂಡಿಸಿ ಜಾಗ್ರತಗೊಳಿಸಿದಾಗ ಇದು ಸಾಧ್ಯವಾಗುತ್ತದೆ ಎಂದು ಪರಿಸರವಾದಿ ಡಾ.ರಾಧಾಕೃಷ್ಣ ನಾಯರ್ ಹೇಳಿದರು.



ಅವರು ವಿಶ್ವಕರ್ಮ ಸಹಕಾರ ಬ್ಯಾಂಕಿನ ಕಾರ್ ಸ್ಟ್ರೀಟ್ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ' ಧ್ಯೇಯದೊಂದಿಗೆ ಭಾನುವಾರ ನಡೆದ 50ನೇ ಸ್ವಚ್ಛತಾ ಶ್ರಮದಾನದ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಶ್ವಕರ್ಮ ಸಹಕಾರ ಬ್ಯಾಂಕಿನ ಅಧ್ಯಕ್ಷ ಎಸ್. ಆರ್. ಹರೀಶ್ ಆಚಾರ್ಯ ಮಾತನಾಡಿ, ಬ್ಯಾಂಕಿನ ಸ್ವರ್ಣ ಜಯಂತಿ ಸಂದರ್ಭದಲ್ಲಿ ಆಯೋಜಿಸುತ್ತಿರುವ ಸ್ವಚ್ಛತೆಯ ಮೂಲಕ ಸಮಾಜ ಜಾಗೃತಿಯನ್ನು ನಿರ್ಮಾಣ ಮಾಡುವ ಉದ್ದೇಶವನ್ನು ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಇದು 50 ನೇ ಕಾರ್ಯಕ್ರಮವಾಗುತ್ತಿದ್ದು, ಇದರ ಸಮಾರೋಪದ ಶ್ರಮದಾನ ಸ್ವಚ್ಛತಾ ಕಾರ್ಯಕ್ರಮವನ್ನು ನಮ್ಮ ಬ್ಯಾಂಕಿನ ಮಂಗಳೂರು, ಉಡುಪಿ, ಕಾರ್ಕಳ, ಉಜಿರೆ, ಮೆಲ್ಕಾರ್ ಶಾಖೆಗಳಲ್ಲಿ ಇಂದು ಏಕಕಾಲದಲ್ಲಿ ಏಕಕಾಲದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಂತರ ಪರಿಸರ ಸಂರಕ್ಷಕ ಡಾ.ರಾಧಾಕೃಷ್ಣ ನಾಯರ್, ಬ್ಯಾಂಕಿನ ಅಧ್ಯಕ್ಷ ಡಾ.ಎಸ್ ಆರ್ ಹರೀಶ್ ಆಚಾರ್ಯ, ವಲಯ ಅರಣ್ಯಾಧಿಕಾರಿ ರಾಜೇಶ್ ಬಳಿಗಾರ್, ರೋಟರಿ ಕ್ಲಬ್ ಮಂಗಳೂರು ಇದರ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ಅವೇಕ್ ಕುಡ್ಲಾ ಪರಿಕಲ್ಪನೆಯ ಉಮಾನಾಥ ಕೋಟೆಕಾರ್ ಗಿಡ ನೆಡುವ ಮೂಲಕ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮಂಗಳೂರಿನ ಬಿಇಎಂ ಶಾಲೆಯಲ್ಲಿ ಆವರಣದಲ್ಲಿ ಪರಿಸರ ದಿನದ ಆಚರಣೆ ಹಾಗೂ ನಂತರ ಕಾರ್ ಸ್ಟ್ರೀಟ್, ಡೊಂಗೆರಕೇರಿ ಸುತ್ತಮುತ್ತಲಿನ ಪರಿಸರಗಳಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶ್ರಮದಾನ ನಡೆಯಿತು. ಶ್ರೀಕಾಳಿಕಾಂಬ ವಿನಾಯಕ ದೇವಸ್ಥಾನದ ಆಡಳಿತ ಅಧಿಕಾರಿ ಉಮೇಶ್ ಆಚಾರ್ಯ, ಕಾರ್ಪೋರೇಟರ್ ಜಯಶ್ರೀ ಕುಡ್ವ, ಜಿಲ್ಲಾ ಚಿನ್ನದ ಕೆಲಸಗಾರರ ಸಂಘದ ಅಧ್ಯಕ್ಷ ಕೆ.ಎಲ್. ಹರೀಶ್, ಗುರುಸೇವಾ ಪರಿಷತ್ತಿನ ಗಣೇಶ್ ಕೆಮ್ಮಣ್ಣು, ವಿಶ್ವಕರ್ಮ ಕಲಾ ಪರಿಷತ್ ಅಧ್ಯಕ್ಷ ಡಾ.ಎಸ್ ಪಿ ಗುರುದಾಸ್, ಶ್ರೀ ಕಾಳಿಕಾಂಬ ಸೇವಾ ಸಮಿತಿ ಅಧ್ಯಕ್ಷ ಜಗದೀಶ್ ಸಿದ್ದಕಟ್ಟೆ, ವಿಶ್ವ ಬ್ರಾಹ್ಮಣ ಮಹಿಳಾ ಸಮಿತಿ ಅಧ್ಯಕ್ಷೆ ಅರುಣಾ ಸುರೇಶ್, ವಿಶ್ವಕರ್ಮ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಜಯಶ್ರೀ ಆಚಾರ್, ಗುರುಪ್ರಸಾದ್ ಶೆಟ್ಟಿ, ಪ್ರಶಾಂತ್ ಆಚಾರ್ಯ, ವ್ಯವಸ್ಥಾಪಕ ನಿರ್ದೇಶಕರಾದ ವಸಂತ ಅಡ್ಯಂತಾಯ, ಬಿ ಇ ಎಂ ಹೈಸ್ಕೂಲ್ ಮುಖ್ಯ ಶಿಕ್ಷಕ ಯಶವಂತ ಮಾಡ, ಬಿಇಎಂ ಪ್ರಾಥಮಿಕ ಶಾಲೆ ಶಿಕ್ಷಕಿ ವನಿತಾ ಸುರೇಶ್, ಸಂಚಾಲಕ ಪ್ರಕಾಶ್ ಹಲೇಜಿ, ಪ್ರಮುಖರಾದ ಕೆ ಜೆ ಗುರುರಾಜ್ ಇದ್ದರು. ಸಹಕರಿಸಿದ ಸಂಘ-ಸಂಸ್ಥೆಗಳಿಗೆ ಗೌರವಿಸಲಾಯಿತು. ಭರತ್ ನಿಡ್ಪಳ್ಳಿ ಕಾರ್ಯಕ್ರಮ ನಿರೂಪಿಸಿದರು.

ನವೀಕೃತಗೊಂಡಿದೆ ನಾವೂರು ಗಾಂಧಿನಗರ ಶ್ರೀ ಕಲ್ಕುಡ ದೇವಸ್ಥಾನ

ಜೂ. 15ರಿಂದ 18ರವರೆಗೆ ಪುನರ್ ಪ್ರತಿಷ್ಠಾ ಕಲಶ

ಸುಳ್ಯ: ಶ್ರೀ ಕಲ್ಕುಡ ದೇವಸ್ಥಾನ ನಾವೂರು ಗಾಂಧಿನಗರ ಇಲ್ಲಿನ ನವೀಕೃತ ಶಿಲಾಮಯ ಗುಡಿಯಲ್ಲಿ ಶ್ರೀ ಕಲ್ಕುಡ, ಕಲ್ಲುರ್ಟಿ ಹಾಗೂ ಗುಳಿಗ ದೈವದ ಕಟ್ಟೆ ಪುನರ್ ಪ್ರತಿಷ್ಠಾ ಕಲಶೋತ್ಸವವು ಜೂ. 15 ರಿಂದ 18ರ ತನಕ ನಡೆಯಲಿದೆ ಎಂದು ಪದಾಧಿಕಾರಿಗಳು ಮಾಹಿತಿ ನೀಡಿದರು.

ನೂತನ ಶಿಲಾಮಯ ಗುಡಿಯ ಬಳಿಯಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕೃಷ್ಣ ಕಾಮತ್ ಹಾಗೂ ಆಡಳಿತ ಧರ್ಮದರ್ಶಿ ಪಿ.ಕೆ. ಉಮೇಶ ಮಾತನಾಡಿ, ಶ್ರೀ ಚೆನ್ನಕೇಶವ ದೇವರ ರಥೋತ್ಸವದ ರಕ್ಷಕನಾಗಿ ಸುಮಾರು 300 ವರ್ಷಗಳಿಂದ ಆರಾಧಿಸಿಕೊಂಡು ಬರುತ್ತಿರುವ ಶ್ರೀ ಕಲ್ಕುಡ- ಕಲ್ಲುರ್ಟಿ ದೈವಗಳಿಗೆ ನೂತನ ಶಿಲಾಮಯ ಗುಡಿ ನಿರ್ಮಿಸಿ, ಗುಳಿಗ ದೈವಕ್ಕೆ ಕಟ್ಟೆ ನಿರ್ಮಿಸಲಾಗಿದೆ. ಸುಮಾರು 300 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಕಲ್ಕುಡ-ಕಲ್ಲುರ್ಟಿ-ಗುಳಿಗ ದೈವಗಳು ಇದ್ದು ಸಂಪೂರ್ಣವಾಗಿ ನಶಿಸಿ ಹೋಗಿದ್ದ ದೈವಸ್ಥಾನವನ್ನು 1985ರ ಅಂತ್ಯದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ.

ಅಂದಿನಿಂದ ದೈವಗಳಿಗೆ ನೇಮೋತ್ಸವ, ತಂಬಿಲ ಸೇವೆ ಹಾಗೂ ಸಂಕ್ರಮಣ ಪೂಜೆಗಳನ್ನು ನಿಯಮಿತವಾಗಿ ನಡೆಸಿಕೊಂಡು ಕ್ಷೇತ್ರವನ್ನು ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಬೆಳೆಸಿಕೊಂಡು ಬಂದಿದ್ದೇವೆ. ಪ್ರತಿಷ್ಠಾ ಕಲಶೋತ್ಸವ ಅಂಗವಾಗಿ ಜೂ. 15 ರಂದು 9ರಿಂದ ದಶಮ ಸ್ಕಂದ ಪಾರಾಯಣವನ್ನು ನಾರಾಯಣ ಮೂರ್ತಿ ಕಾಞಂಗಾಡ್ ಇವರಿಂದ ಆರಂಭಗೊಂಡು ಸಂಜೆ ತಂತ್ರಿಗಳ ಆಗಮನದ ಬಳಿಕ ವೈದಿಕ ಕಾರ್ಯಕ್ರಮಗಳು ನಡೆಯಲಿದೆ. ಜೂ. 16 ರಂದು ಗಣಪತಿ ಹೋಮದಿಂದ ವೈದಿಕ ಕಾರ್ಯಕ್ರಮಗಳು ಪ್ರಾರಂಭಗೊಂಡು ತದನಂತರ ಭಾಗವತದಶಮ ಸ್ಕಂದ ಪಾರಾಯಣ ಮುಂದುವರೆದು ಮುಕ್ತಾಯಗೊಳ್ಳಲಿದೆ. 17 ರಂದು ಭಜನೆ, ದೇವತಾ ಪ್ರಾರ್ಥನೆ, ರಾಕ್ಷೋಘ್ನ ಹೋಮ ವಾಸ್ತು ಹೋಮ ವಾಸ್ತು ಬಲಿ ಸೇರಿದಂತೆ ವಿವಿಧ ಹೋಮ ಹವನಗಳು ನಡೆಯಲಿದೆ. 18 ರಂದು ಪುನರ್ ಪ್ರತಿಷ್ಠಾ ಕಲಶಾಭಿಷೇಕ ನಡೆಯಲಿದ್ದು ಪ್ರಾ. 8ಕ್ಕೆ ಗಣಪತಿ ಹೋಮ, ಬ್ರಹ್ಮಕಲಶ ಪೂಜೆ, ಬೆಳಿಗ್ಗೆ ಗಂಟೆ 8.08 ರಿಂದ 9.06ರ ಕರ್ಕಾಟಕ ಲಗ್ನದ ಶುಭ ಮುಹೂರ್ತದಲ್ಲಿ ಶ್ರೀ ಕಲ್ಕುಡ, ಕಲ್ಲುರ್ಟಿ, ಗುಳಿಗ ದೈವಗಳಿಗೆ ಪುನರ್ ಪ್ರತಿಷ್ಠಾ ಕಲಶಾಭಿಷೇಕ ನಡೆಯಲಿದ್ದು ಆ ಬಳಿಕ ದೈವಗಳಿಗೆ ತಂಬಿಲ, ಮಹಾಪೂಜೆ, ನಿತ್ಯ ನೈಮಿತ್ಯಾದಿಗಳ ನಿರ್ಣಯಗಳ ಬಳಿಕ ಪ್ರಸಾದ ವಿತರಣೆ ನಡೆಯಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪಿ.ಕೆ. ಉಮೇಶ್ ಮಾತನಾಡಿ, ಈ ಕ್ಷೇತ್ರದ ಕಾರಣಿಕವು ಇಡೀ ಜಗತ್ತಿಗೆ ತಿಳಿದಿದೆ. ಪೋಲೀಸ್ ಇಲಾಖೆಯು ಅಭಿವೃದ್ಧಿಗೆ ಕೈ ಜೋಡಿಸಿದ್ದು ಇಲಾಖಾ ಸಿಬ್ಬಂದಿ ಸುಮಾರು 1.80 ಲಕ್ಷ ರೂಪಾಯಿಗಳನ್ನು ತಮ್ಮ ವೇತನದಿಂದ ಸಂಗ್ರಹಿಸಿ ದೈವಸ್ಥಾನಕ್ಕೆ ನೀಡಿದ್ದು ಇದೇ ಮಾದರಿಯಲ್ಲಿ ಹಲವಾರು ಜನರು ನೀಡಿದ್ದು, ನೀಡುತ್ತಲೂ ಇದ್ದಾರೆ ಎಂದು ತಿಳಿಸಿದರು. ಅಲ್ಲದೇ ಧಾರ್ಮಿಕ ಸಭೆಯನ್ನು ಆಯೋಜಿಸಿದ್ದು ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣ ಕಾಮತ್ ವಹಿಸಿಕೊಳ್ಳಲಿದ್ದಾರೆ. ಆಶೀರ್ವಚನವನ್ನು ಎಡನೀರು ಸಚ್ಚಿದಾನಂದ ಭಾರತಿ ಮಹಾ ಸ್ವಾಮೀಜಿ ನಡೆಸಲಿದ್ದು, ಗೌರವ ಉಪಸ್ಥಿತಿಯಲ್ಲಿ ದೇಲಂಪಾಡಿ ಗಣೇಶ ತಂತ್ರಿಗಳು ಉಪಸ್ಥಿತರಿರಲಿದ್ದಾರೆ. ಅತಿಥಿಗಳಾಗಿ ಶಾಸಕಿ ಭಾಗೀರಥಿ ಮುರುಳ್ಯ, ಡಾ.ಕೆವಿ ಚಿದಾನಂದ, ಡಾ.ಹರಪ್ರಸಾದ್ ತುದಿಯಡ್ಕ ಹಾಗೂ ಆಡಳಿತ ಧರ್ಮದರ್ಶಿ ಪಿ.ಕೆ. ಉಮೇಶ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಅಶೋಕ ಪ್ರಭು, ಕಾರ್ಯದರ್ಶಿ ದಿನೇಶ್ ಮಡಪ್ಪಾಡಿ, ಕೋಶಾಧಿಕಾರಿ ಅವಿನಾಶ್ ಕುರುಂಜಿ, ಮಾಧ್ಯಮ ಸಂಚಾಲಕ ಶಿವಪ್ರಸಾದ್ ಆಲೆಟ್ಟಿ, ಆಡಳಿತ ಸಮಿತಿ ಹಾಗೂ ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

ಗಿಡ ನೆಟ್ಟು ಹಸಿರು ದ.ಕ. ನಿರ್ಮಾಣ ಮಾಡೋಣ: ಚೌಟ



ಮೂಡುಬಿದಿರೆ: ಯುವಜನತೆ ತಾಯಿಯ ಹೆಸರಿನಲ್ಲಿ ದೇವಸ್ಥಾನ, ದೈವಸ್ಥಾನ ಹಾಗೂ ಮನೆಗಳಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಮೂಲಕ ಜಿಲ್ಲೆಯನ್ನು ಹಸಿರು ದಕ್ಷಿಣ ಕನ್ನಡವನ್ನು ನಿರ್ಮಾಣ ಮಾಡಬೇಕು ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಲ್ಪನೆಯ 'ಏಕ್ ಪೇಡ್ ಮಾ ಕೆ ನಾಮ್' ಕಾರ್ಯಕ್ರಮದಂಗವಾಗಿ ಮೂಡುಬಿದಿರೆ ಅರಣ್ಯ ಇಲಾಖೆಯ ನೇತೃತ್ವದಲ್ಲಿ ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನದ ಆವರಣದಲ್ಲಿ ಗಿಡ ನೆಟ್ಟು ಮಾತನಾಡಿದರು.

ತಾಯಿ ನಮ್ಮನ್ನು ಪೋಷಿಸಿ ಸಲಹಿದಂತೆ ನಾವೂ ಕೂಡಾ ಗಿಡಗಳನ್ನು ನೆಟ್ಟು ರಕ್ಷಿಸುವ ಸಂಕಲ್ಪದ ಅಭಿಯಾನದಲ್ಲಿ ಪಾಲ್ಗೊಳ್ಳಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ವಲಯ ಅರಣ್ಯಾಧಿಕಾರಿ ಕಿರಣ್ ಕುಮಾರ್ ಜಿ. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸುನೀಲ್ ಆಳ್ವ, ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಪ್ರಧಾನ ಕಾರ್ಯದರ್ಶಿ ರಂಜಿತ್ ಪೂಜಾರಿ, ಸಹಕಾರಿ ಧುರೀಣ ದಯಾನಂದ ಪೈ,ಯುವ ಮೋರ್ಚಾದ ಅಧ್ಯಕ್ಷ ಕುಮಾರ್ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಭರತ್ ಶೆಟ್ಟಿ, ಉಪಾಧ್ಯಕ್ಷ ಸಚಿನ್ ಪಣಪಿಲ, ಪುತ್ತಿಗೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾಗೇಶ್ ಇರುವೈಲು, ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷ ಶಶಿಧರ್ ಅಂಚನ್, ಉಪವಲಯಾರಣ್ಯಾಧಿಕಾರಿ ಗುರುಮೂರ್ತಿ, ಗಸ್ತು ಅರಣ್ಯ ಪಾಲಕರಾದ ಶಂಕರ ಗೌಡ, ಸಂದೇಶ್ ಮತ್ತು ದೇವಸ್ಥಾನದ ಮೆನೇಜರ್ ಉದಯಕುಮಾರ್ ಇದ್ದರು.

ಎಸ್ ಎಸ್ ಪಿಯು ಕಾಲೇಜಿನ ನಿವೃತ್ತ ಗ್ರಂಥಪಾಲಕರಿಗೆ ಬೀಳ್ಕೊಡುಗೆ, ಸನ್ಮಾನ



ಸುಬ್ರಹ್ಮಣ್ಯ: ಕರ್ತವ್ಯ ನಿಷ್ಠೆಯು ಸದಾ ಗೌರವಕ್ಕೆ ಪ್ರಾಪ್ತವಾಗುತ್ತದೆ ಎಂದು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್ ಇಂಜಾಡಿ ಹೇಳಿದರು.

ಎಸ್.ಎಸ್. ಪಿ.ಯು ಕಾಲೇಜಿನಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಬಾಬು ಎಚ್. ಹಾಸನಡ್ಕ ಅವರಿಗೆ ಶನಿವಾರ ಶ್ರೀ ದೇವಳದ ವಲ್ಲೀಶ ಸಭಾಭವನದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸೌಮ್ಯಾ ಭರತ್, ಪ್ರವೀಣ ರೈ ಮರುವಂಜ, ಲೀಲಾಮನಮೋಹನ್, ಅಜಿತ್ ಪಾಲೇರಿ, ನಿವೃತ್ತ ಗ್ರಂಥ ಪಾಲಕ ಬಾಬು.ಎಚ್.ಹಾಸನಡ್ಕ ಮುಖ್ಯ ಅತಿಥಿಗಳಾಗಿದ್ದರು. ಪ್ರಾಚಾರ್ಯ ಸೋಮಶೇಖರ್ ನಾಯಕ್, ಪ್ರೌಢಶಾಲಾ ಮುಖ್ಯಗುರು ನಂದಾ ಹರೀಶ್, ಹಿರಿಯ ಸಹಶಿಕ್ಷಕ ಎಂ.ಕೃಷ್ಣ ಭಟ್, ಶಿಕ್ಷಕ-ರಕ್ಷಕ ಸಂಘದ ಅಧ್ಯಕ್ಷೆ ತ್ರಿವೇಣಿ ದಾಮ್ಲೆ, ಸಾಂಸ್ಕೃತಿಕ ಸಂಘದ ಸಂಚಾಲಕಿ ರೇಖಾರಾಣಿ ಸೋಮಶೇಖರ್, ವಿದ್ಯಾರ್ಥಿ ಸರಕಾರದ ಸಂಚಾಲಕ ಜಯಪ್ರಕಾಶ್.ಆರ್, ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಲೋಕೇಶ್ ಬಿ.ಎನ್, ಶಿಕ್ಷಕರಕ್ಷಕ ಸಂಘದ ಉಪಾಧ್ಯಕ್ಷ ಗುಣವರ್ಧನ ಕೆದಿಲ, ಜತೆಕಾರ್ಯದರ್ಶಿ ಶಶಿಧರ ಕತ್ತಿಮಜಲು ಇದ್ದರು. ಪ್ರೌಢಶಾಲಾ ಮುಖ್ಯ ಗುರು ನಂದಾ ಹರೀಶ್ ಸ್ವಾಗತಿಸಿದರು. ಉಪನ್ಯಾಸಕಿ ರೇಖಾರಾಣಿ ಸೋಮಶೇಖರ್ ಅಭಿನಂದನಾ ಭಾಷಣ ಮಾಡಿದರು. ಉಪನ್ಯಾಸಕಿ ಜಯಶ್ರೀ ವಿ. ದಂಬೆಕೋಡಿ ಸನ್ಮಾನಪತ್ರ ವಾಚಿಸಿದರು. ಉಪನ್ಯಾಸಕಿ ಪೂರ್ಣಿಮಾ ವಂದಿಸಿದರು. ಜೀವಶಾಸ್ತ್ರ ಉಪನ್ಯಾಸಕಿ ಶ್ರುತಿ ಅಶ್ವತ್ಥ್ ಕಾರ್ಯಕ್ರಮ ನಿರೂಪಿಸಿದರು.

ದ.ಕ. ಗ್ಯಾರೇಜು ಮಾಲಕರ ಸಂಘ: ಬಂಟ್ವಾಳ ವಲಯದ ಪದಗ್ರಹಣ



ಬಂಟ್ವಾಳ: ದ.ಕ. ಜಿಲ್ಲಾ ಗ್ಯಾರೇಜು ಮಾಲಕರ ಸಂಘದ ಬಂಟ್ವಾಳ ವಲಯದ ಪದಗ್ರಹಣ ಸಮಾರಂಭ ಬಿ.ಸಿ.ರೋಡಿನ ಗಾಣದ ಪಡ್ಪುವಿನಲ್ಲಿರುವ ಆಟೋಲೈನ್ಸ್ ಸಭಾಂಗಣದಲ್ಲಿ ಭಾನುವಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಉದ್ಯಮಿ ಸಂದೇಶ್ ಶೆಟ್ಟಿ ಅರೆಬೆಟ್ಟು ಮಾತನಾಡಿದರು. ಜಿಲ್ಲಾ ಸಂಘದ ಉಪಾಧ್ಯಕ್ಷ ಸತೀಶ್ ಪೂಜಾರಿ ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಿದರು. ನಿರ್ಗಮನ ಅಧ್ಯಕ್ಷ ಸುಧೀರ್ ಪೂಜಾರಿ, ನೂತನ ಅಧ್ಯಕ್ಷ ಗಣೇಶ್ ಸುವರ್ಣ ಅನಿಸಿಕೆ ವ್ಯಕ್ತಪಡಿಸಿದರು. ಪ್ರತಿಭಾವಂತ ವಿದ್ಯಾರ್ಥಿಗಳಾದ ಯಶ್ವಿತ್ ಆರ್. ಪೂಜಾರಿ ಹಾಗೂ ತನ್ವಿ ಸುವರ್ಣ ಅವರನ್ನು ಅಭಿನಂದಿಸಲಾಯಿತು. ನಿರ್ಗಮನ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿಯನ್ನು ಅಭಿನಂದಿಸಲಾಯಿತು. ಗೌರವ ಸಲಹೆಗಾರ ಸುಧಾಕರ ಸಾಲ್ಯಾನ್ ಅವರನ್ನು ಗೌರವಿಸಲಾಯಿತು. ಸಂಘದ ಸದಸ್ಯ ದಯಾನಂದ ಮೊಗರ್ನಾಡು ಅವರ ವೈವಾಹಿಕ ಬೆಳ್ಳಿಹಬ್ಬದ ಪ್ರಯುಕ್ತ ದಂಪತಿಯನ್ನು ಅಭಿನಂದಿಸಲಾಯಿತು. ಜಿಲ್ಲಾ ಸಂಘದ ಕೋಶಾಧಿಕಾರಿ ಕಿರಣ್ ರಾಜ್ ಇದ್ದರು. ಬಂಟ್ವಾಳ ವಲಯದ ನಿಯೋಜಿತ ಉಪಾಧ್ಯಕ್ಷ ಪ್ರಶಾಂತ್ ಭಂಡಾರ್ಕಾರ್ ಸ್ವಾಗತಿಸಿದರು. ಕಾರ್ಯದರ್ಶಿ ರಾಜೇಶ್ ಕುಲಾಲ್ ವರದಿ ವಾಚಿಸಿದರು ಕುಲಾಲ್ ಲೆಕ್ಕ ಪತ್ರ ಮಂಡಿಸಿದರು. ನವೀನ್ ವಂದಿಸಿದರು. ಗೌರವ ಸಲಹೆಗಾರ ಸುಧಾಕರ ಸಾಲ್ಯಾನ್ ನಿರೂಪಿಸಿದರು.

ಮಣೂರು ಪಡುಕರೆಯ ಗೀತಾನಂದ ಫೌಂಡೇಶನ್ ನಿಂದ ಆನಂದೋತ್ಸವ | ಪ್ರೌಢಶಾಲಾ ಶಿಕ್ಷಕರಿಗೆ, ಶಾಲಾ ವಾಹನ ಚಾಲಕರಿಗೆ ಸನ್ಮಾನ

ಒಟ್ಟು 52 ಶಾಲೆಗಳ 6500 ಸಾವಿರ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರ ಹಸ್ತಾಂತರ, ಪ್ರತಿಭಾ ಪುರಸ್ಕಾರ

ಕೋಟ: ಮಣೂರು ಪಡುಕರೆಯ ಗೀತಾನಂದ ಫೌಂಡೇಶನ್ ವತಿಯಿಂದ ಮಣೂರು-ಪಡುಕರೆಯ ಕೆ.ಸಿ. ಕುಂದರ್ ಸ್ಮರಣಾರ್ಥ ಆನಂದೋತ್ಸವ ಕಾರ್ಯಕ್ರಮ ಶನಿವಾರ ಮಣೂರು ಪಡುಕರೆ ಗೀತಾನಂದ ವೇದಿಕೆಯಲ್ಲಿ ಜರುಗಿತು.

ಕಾರ್ಯಕ್ರಮವನ್ನು ಡಾ.ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್ ಮುಖ್ಯಸ್ಥ ನಾಡೋಜ ಡಾ.ಜಿ.ಶಂಕರ್ ಉದ್ಘಾಟಿಸಿದರು. ಸಂಸದ ಕೋಟ ಶ್ರೀನಿವಾಸ ಪೂಜಾರಿ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ನೋಟ್ ಬುಕ್ ಹಸ್ತಾಂತರಿಸಿ ಮಾತನಾಡಿದರು. ಕೋಟ ಸಿಎ ಬ್ಯಾಂಕ್ ಅಧ್ಯಕ್ಷ ಡಾ. ಕೆ. ಕೃಷ್ಣಕಾಂಚನ್ ಆನಂದ್ ಸಿ ಕುಂದರ್ ಸಹಸ್ರ ಗಿಡ ನೀಡುವ ಸಂಕಲ್ಪ ಕಾರ್ಯಕ್ರಮದ ಅಂಗವಾಗಿ ಗಿಡಗಳನ್ನು ಸ್ಥಳೀಯ ಸಂಘಸಂಸ್ಥೆಗಳಿಗೆ ಹಸ್ತಾಂತರಿಸಿದರು. ಮುಖ್ಯ ಅತಿಥಿಗಳಾಗಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹಾಗೂ ಗೋವೆನ್ ಫ್ರೆಶ್ ಮೇರಿನ್ ಪಾಲುದಾರ ಮಲ್ಪೆ ಆನಂದ್ ಪಿ ಸುವರ್ಣ ಕೋಟ ಮಣೂರು ಪಡುಕರೆ ಪಿಯು ಕಾಲೇಜಿಗೆ ವಾಹನದ ಕೀ ಅನ್ನು ಹಸ್ತಾಂತರಿಸಿದರು.



ಆನಂದೋತ್ಸವದಲ್ಲಿ ಒಟ್ಟು 52 ಶಾಲೆಗಳ 6500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್‌ಗಳನ್ನು ಸಾಂಕೇತಿಕವಾಗಿ ಆಯಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಸ್ತಾಂತರಿಸಲಾಯುತು.

ವಿದ್ಯಾರ್ಥಿವೇತನ ಮತ್ತು ಸಮವಸ್ತ್ರ ಪರಿಸರದ ಪ್ರತಿಭಾವಂತ ಹಾಗೂ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಸಮವಸ್ತ್ರ ವಿತರಣೆ ಗಣ್ಯರ ಸಮ್ಮುಖದಲ್ಲಿ ಜರಗಿತು. ಉಚ್ಚಿಲ ಮೊಗವೀರ ಮಹಾಜನ ಸಂಘದ ಅಧ್ಯಕ್ಷ ಜಯ ಸಿ ಕೋಟ್ಯಾನ್ ಶಾಲಾ ಮಕ್ಕಳಿಗೆ ಸಮವಸ್ತ್ರ ಹಸ್ತಾಂತರಿಸಿದರು.

ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ

2025-26ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿ (ಡಿಸ್ಟಿಂಕ್ಷನ್) ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ ಮಣೂರು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಹಾಗೂ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.

ವಿಶೇಷ ಸಾಧಕರಿಗೆ ಗೌರವ

ಎಸ್ಸೆಸ್ಸೆಲ್ಸಿಯಲ್ಲಿ 600ಕ್ಕೂ ಅಧಿಕ ಅಂಕ ಗಳಿಸಿದ ಮೈತ್ರಿ ಹಾಗೂ ಲಿಖಿತ ಅವರಿಗೆ ವಿಶೇಷ ಪ್ರತಿಭಾ ಪುರಸ್ಕಾರ ನೀಡಲಾಯಿತು. ರಾಷ್ಟ್ರೀಯ ವಿದ್ಯಾರ್ಥಿವೇತನ ಪಡೆದ ಸಾಧಕ ಛಾಯಾ ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಶಿಕ್ಷಕರಿಗೆ ಸನ್ಮಾನ

ಕೋಟ ಮಣೂರು ಪಡುಕರೆ ಸಂಯುಕ್ತ ಪ್ರೌಢಶಾಲಾ ಶಿಕ್ಷಕ ವೃಂದ, ಪಿಯು ಕಾಲೇಜಿನ ಶಿಕ್ಷಕ ವೃಂದದವರನ್ನು ಸನ್ಮಾನಿಸಲಾಯಿತು. ಅಲ್ಲದೆ ಶಾಲಾ ವಾಹನ ಚಾಲಕರನ್ನು ಗೌರವಿಸಲಾಯಿತು.

ರಾಷ್ಟ್ರಮಟ್ಟದ ಸಾಧಕ ಶಿಕ್ಷಕಿಯರಾದ ನಾಗರತ್ನ, ಲಕ್ಷ್ಮೀಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು. ಉಡುಪಿ ಜಿಲ್ಲಾಸ್ಪತ್ರೆಯ ಅಭಿವೃದ್ಧಿಗೆ ಗೀತಾನಂದ ಫೌಂಡೇಶನ್ 5 ಲಕ್ಷ ರೂ. ದೇಣಿಗೆಯನ್ನು ಜಿಲ್ಲಾಸ್ಪತ್ರೆಯ ಸರ್ಜನ್ ಅಶೋಕ್ ಇವರಿಗೆ ಹಸ್ತಾಂತರಿಸಿದರು. ಗೀತಾನಂದ ಫೌಂಡೇಶನ್‌ನ ಪ್ರವರ್ತಕ ಆನಂದ ಸಿ. ಕುಂದರ್ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಉಮಾ, ಖ್ಯಾತ ಮನೋವೈದ್ಯ ಡಾ. ಪ್ರಕಾಶ್ ತೋಳಾರ್, ಮೊಗವೀರ ಸಂಘಟನ ಜಿಲ್ಲಾಧ್ಯಕ್ಷ ರವಿಶ್ ಕೊರವಾಡಿ, ಕೋಟತಟ್ಟು ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಬಾರಿಕೇರೆ, ಪ್ರಾಂಶುಪಾಲರಾದ ಡಾ. ರಾಜೇಂದ್ರ ಎಸ್. ನಾಯಕ್, ಡೆನಿಸ್ ಬಾಂಜಿ ಕೆ., ಪ್ರಾಥಮಿಕ ವಿಭಾಗದ ವಿಜಯ ಅಲ್ಲೂರು, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಪ್ರೌಢವಿಭಾಗದ ನಾಗರಾಜ್, ಪ್ರಾಥಮಿಕ ವಿಭಾಗದ ವಿನಯ್ ಕುಮಾರ್, ವಾಹಿನಿ ಯುವಕ ಮಂಡಲದ ಅಧ್ಯಕ್ಷ ರಮೇಶ ಎಚ್ ಕುಂದರ್, ಗೀತಾನಂದ ಫೌಂಡೇಶನ್ ನಿರ್ದೇಶಕರಾದ ಗೀತಾ ಎ. ಕುಂದರ್, ವೈಷ್ಣವಿ ಆರ್. ಕುಂದರ್, ದಿವ್ಯಲಕ್ಷ್ಮೀ ಪಿ ಕುಂದರ್ ಇದ್ದರು. ವಿವೇಕಾನಂದ ಬಿ. ಗಾಂವ್ಕರ್ ಸ್ವಾಗತಿಸಿದರು. ಮಮತಾ ನಿರೂಪಿಸಿದರು. ರವಿಕಿರಣ್ ಕೋಟ ವಂದಿಸಿದರು. ಶ್ರೀನಿವಾಸ ಕುಂದರ್ ಸಹಕರಿಸಿದರು.

ಸುತ್ತ ಮುತ್ತ

ಚೂರಿಪ್ಪಳ್ಳದಲ್ಲಿ ಗಾನ ನೃತ್ಯ ವೈಭವ

ಕಾಸರಗೋಡು: ಆಶುಕವಿ ಕೀರ್ತಿಶೇಷ ಹಿರಿಯ ಕನ್ನಡ ಹೋರಾಟಗಾರರು ಪೊಟ್ಟಿಪ್ಪಳ್ಳ ನಾರಾಯಣ ಭಟ್ ಅವರ ಸ್ವಗೃಹ ಚೂರಿಪ್ಪಳ್ಳ ಶ್ರೀಗಿರಿ ಸದನದಲ್ಲಿ ಕಾಸರಗೋಡಿನಲ್ಲಿ ಕನ್ನಡ ಭಾಷೆಯನ್ನು ಪೋಷಣೆ ಮಾಡುವ ಉದ್ದೇಶದಿಂದ ಡಾ.ವಾಣಿಶ್ರೀ ಕಾಸರಗೋಡು ನೇತೃತ್ವದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ವತಿಯಿಂದ 221ನೇ ವೈವಿಧ್ಯಮಯ ನಿತ್ಯನೂತನ ಆತ್ಯಾಕರ್ಷಕ ಕನ್ನಡ ಸಾಹಿತ್ಯ ಗಾನ ನೃತ್ಯ ವೈಭವ ಕಾರ್ಯಕ್ರಮವು ಬಹಳ ವೈಭವದಿಂದ ಜರಗಿತು. ನಾರಾಯಣ ಭಟ್ ಅವರು ಹಾಕಿಕೊಟ್ಟ ಬುನಾದಿಯಲ್ಲಿ ಅವರ ಮಾರ್ಗದರ್ಶನದಂತೆ ಕನ್ನಡ ಕಾರ್ಯಕ್ರಮವನ್ನು ನಿರಂತರ ನಡೆಸುತ್ತಾ ಬಂದಿದ್ದೇವೆ ಎಂದು ಸಂಸ್ಥೆಯ ಅಧ್ಯಕ್ಷೆ ಡಾ.ವಾಣಿಶ್ರೀ ಅವರು ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದರು.

ಪೈವಳಿಕೆ ಗ್ರಾ.ಪಂ.ನಿಂದ ಬೀದಿ ದೀಪಗಳ ದುರಸ್ತಿ

ಕಾಸರಗೋಡು: ಪೈವಳಿಕೆ ಗ್ರಾಮ ಪಂಚಾಯತ್ 7ನೇ ವಾರ್ಡ್ ಪೆರ್ವೋಡಿ ವಾರ್ಡ್‌ನ ವಿವಿಧ ಭಾಗಗಳಲ್ಲಿ ವಿದ್ಯುತ್ ಕಂಬಕ್ಕೆ ಅಳವಡಿಸಿ ಉರಿಯದೆ ಇದ್ದ ಸುಮಾರು 32 ದಾರಿದೀಪಗಳನ್ನು ಪಂಚಾಯತ್ ವತಿಯಿಂದ ವಾರ್ಡ್ ಸದಸ್ಯ ರಾಮ ಏದರ್ ಅವರ ಸಮ್ಮುಖದಲ್ಲಿ ಸರಿಪಡಿಸಲಾಯಿತು. ನಾಗರಿಕರು ಈ ಸಂದರ್ಭದಲ್ಲಿ ಕಾಮಗಾರಿಗಳಿಗೆ ಜೊತೆಗೂಡಿದರು.

ಬೆದಿರ ಶಾಲೆಯ ಭಡ್ತಿಗೆ ಒತ್ತಾಯಿಸಿ ಶಿಕ್ಷಣ ಸಚಿವರಿಗೆ ಮನವಿ

ಕಾಸರಗೋಡು: ನಗರಸಭೆಯ 16ನೇ ವಾರ್ಡ್‌ನಲ್ಲಿ ಕಾರ್ಯಾಚರಿಸುವ ಬೆದಿರ ಪಿಟಿಎಂಎ ಯುಪಿ ಶಾಲೆಯನ್ನು ಹೈಸ್ಕೂಲ್ ಆಗಿ ಭಡ್ತಿಗೊಳಿಸಬೇಕೆಂದು ಒತ್ತಾಯಿಸಿ ವಾರ್ಡ್ ಕೌನ್ಸಿಲ್ ಹಾಗೂ ನಗರಸಭಾ ಚೆಯರ್‌ಪರ್ಸನ್ ಶಾಹಿದಾ ಸಲೀಂ ರಾಜ್ಯ ಸಾರ್ವಜನಿಕ ಶಿಕ್ಷಣ ಖಾತೆ ಸಚಿವರಿಗೆ ಮನವಿ ಸಲ್ಲಿಸಿದರು. ಕಳೆದ 50 ಹೆಚ್ಚು ವರ್ಷಗಳಿಂದ ಕಾರ್ಯಾಚರಿಸುತ್ತಿದ್ದ ಈ ಶಾಲೆಯಲ್ಲಿ ಪ್ರಸ್ತುತ 2000ಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಆದ್ದರಿಂದ ಈ ಶಾಲೆಯನ್ನು ಭಡ್ತಿಗೊಳಿಸಿದಲ್ಲಿ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಕಾರಿಯಾಗಲಿದೆ ಎಂದು ಸಚಿವರಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಲಾಗಿದೆ.

ಇಂದಿನಿಂದ ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ದೃಢಕಲಶ

ಕಾಸರಗೋಡು: ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ಜೂ.8 ಮತ್ತು 9ರಂದು ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ದೃಢ ಕಲಶಾಭಿಷೇಕ ವಿವಿಧ ವೈದಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಜೂ.8ರಂದು ಸಂಜೆ 5.30ಕ್ಕೆ ದೇವತಾ ಪ್ರಾರ್ಥನೆ, ಸ್ವಸ್ತಿಪುಣ್ಯಾಹ, ವಾಸ್ತುಪೂಜೆ, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಬಲಿ, ಮಹಾಪೂಜೆ ಜರಗಲಿದೆ. ಜೂ.9ರಂದು ಬೆಳಗ್ಗೆ 7.30ಕ್ಕೆ ಗಣಪತಿಹೋಮ, ಬಿಂಬಶುದ್ಧಿ ಕಲಶಾಭಿಷೇಕ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಅನ್ನ ಪ್ರಸಾದ ವಿತರಣೆ ನಡೆಯಲಿದೆ.

ಪಾರ್ಶ್ವವಾಯು ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗಳಲ್ಲಿ ಪ್ರತ್ಯೇಕ ಘಟಕ

ಕಾಸರಗೋಡು: ಪಾರ್ಶ್ವವಾಯು ಚಿಕಿತ್ಸೆಗಾಗಿ ರಾಜ್ಯದ ಜಿಲ್ಲಾಸ್ಪತ್ರೆಗಳಲ್ಲಿ ಪ್ರತ್ಯೇಕ ಘಟಕಗಳನ್ನು ಆರಂಭಿಸಲಾಗುವುದು ಎಂದು ರಾಜ್ಯ ಆರೋಗ್ಯ ಖಾತೆ ಸಚಿವ ಕೆ.ಮುರಳೀಧರನ್ ತಿಳಿಸಿದ್ದಾರೆ. ಕಾರುಣ್ಯ, ಮೆಡಿಸೆಪ್ ಸಹಿತ ಆರೋಗ್ಯ ವಿಮೆ ಯೋಜನೆಗಳ ಮೂಲಕ ಪಾರ್ಶ್ವವಾಯು ಚಿಕಿತ್ಸೆಗಾಗಿ ಐದು ಲಕ್ಷ ರೂ.ಗಳ ವಿಮೆ ಸೌಕರ್ಯ ಏರ್ಪಡಿಸುವ ವಿಷಯವೂ ಸರಕಾರದ ಪರಿಶೀಲನೆಯಲ್ಲಿದೆ. ಪಾರ್ಶ್ವವಾಯು ಚಿಕಿತ್ಸೆಗೆ ಎರಡೂವರೆ ಲಕ್ಷದಿಂದ ನಾಲ್ಕು ಲಕ್ಷ ರೂ. ತನಕ ವೆಚ್ಚ ತಗಲುತ್ತದೆ. ಇದನ್ನು ಪರಿಗಣಿಸಿ ಪಾರ್ಶ್ವವಾಯು ಚಿಕಿತ್ಸೆಗೂ ವಿಮೆ ಸೌಕರ್ಯ ಏರ್ಪಡಿಸುವ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು. ಪಾರ್ಶ್ವವಾಯುವಿನಿಂದ ಬಳಲುತ್ತಿರುವವರ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಟ್ರೋಕ್ ಪುನರ್ವಸತಿ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು. ಇನ್ನು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ರೋಬೋಟಿಕ್ ರಿ ಹ್ಯಾಬಿಲಿಟೇಷನ್ ಕೇಂದ್ರಗಳನ್ನು ಆರಂಭಿಸುವ ವಿಷಯವೂ ಸರಕಾರದ ಪರಿಗಣನೆಯಲ್ಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಕಾಸರಗೋಡಿನಲ್ಲಿ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಗೌರವ ಸ್ವೀಕರಿಸಿದ ಎಲ್.ಜಿ. ಜ್ಯೋತೀಶ್ವರ ಅಭಿಪ್ರಾಯ

ಗಡಿನಾಡಿನಲ್ಲಿ ಕನ್ನಡ ಗ್ರಾಮದ ಪರಿಕಲ್ಪನೆ ಅಭಿನಂದನೀಯ

ಕಾಸರಗೋಡು: ಕರ್ನಾಟಕದೊಳಗೆ ಎಲ್ಲೂ ಕಾಣಸಿಗದ ಕನ್ನಡ ಗ್ರಾಮ ಗಡಿನಾಡು ಕಾಸರಗೋಡಿನಲ್ಲಿದೆ ಶಿವರಾಮ ಕಾಸರಗೋಡು ಅವರ ಪರಿಕಲ್ಪನೆಯ ಈ ಕನ್ನಡ ಗ್ರಾಮ ಸಾಹಿತ್ಯ ಸಂಸ್ಕೃತಿ ಕಲೆಗಳಿಗೆ ಆಶ್ರಯ ಧಾಮವಾಗಿದೆ. ಕಾಸರಗೋಡಿನಲ್ಲಿ ಕನ್ನಡವನ್ನು ಉಳಿಸುವ ಬೆಳೆಸುವ ಯೋಜನೆಯನ್ನು ರೂಪಿಸಿ ಸಾಕಾರಗೊಳಿಸುತ್ತಿರುವ ಪ್ರಧಾನ ಕೇಂದ್ರವಾಗಿ ಕನ್ನಡ ಗ್ರಾಮ ಕಾರ್ಯಾಚರಿಸುತ್ತಿರುವುದು ಅಭಿನಂದನೀಯ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಎಲ್.ಜಿ. ಜ್ಯೋತೀಶ್ವರ ಬೆಂಗಳೂರು ಹೇಳಿದ್ದಾರೆ.

ಮೂರುವರೆ ದಶಕಗಳ ಇತಿಹಾಸವಿರುವ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಹಾಗೂ ಅಧ್ಯಕ್ಷ ಶಿವರಾಮ ಕಾಸರಗೋಡು ಅವರನ್ನು ಭೇಟಿಯಾಗಲು ಬಂದ ಜ್ಯೋತೀಶ್ವರ ದಂಪತಿಯವರನ್ನು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಕೇರಳ ರಾಜ್ಯ ಘಟಕ ಇದರ ವತಿಯಿಂದ ಕನ್ನಡ ಗ್ರಾಮದಲ್ಲಿ ಗೌರವಿಸಲಾಯಿತು.



ಕಾಸರಗೋಡು ಬಹುಭಾಷಾ ಸಂಸ್ಕೃತಿಯ ನಾಡು. ಭಾಷೆ ಉಳಿದರೆ ಸಂಸ್ಕೃತಿ ಉಳಿಯುತ್ತದೆ. ಭಾಷೆಗಳ ನಡುವೆ ಸೌಹಾರ್ದತೆಯನ್ನು ಕಾಯ್ದುಕೊಳ್ಳುವಲ್ಲಿ ನಾವೆಲ್ಲರೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗಿದೆ. ಆಂಗ್ಲ ಭಾಷಾ ವ್ಯಾಮೋಹವನ್ನು ಬದಿಗಿಟ್ಟು ಕಾಪಾಡುವ ಕೆಲಸ ನಮ್ಮದಾಗಬೇಕು ಎಂದು ಜ್ಯೋತೀಶ್ವರ ಹೇಳಿದರು.

ಕವಿ ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಭಿನಂದನೆ ಸಲ್ಲಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಜ್ಯೋತೀಶ್ವರ ಅವರ ಧರ್ಮಪತ್ನಿ ಬೆಂಗಳೂರು ಜೈನ್ ಕಾಲೇಜಿನ ಇಂಗ್ಲೀಷ್ ವಿಭಾಗದ ನಿವೃತ್ತ ಮುಖ್ಯಸ್ಥೆ ರಂಜನಿ ಜ್ಯೋತೀಶ್ವರ ಅವರನ್ನು ಗೌರವಿಸಲಾಯಿತು.

ಕನ್ನಡ ನಿಘಂಟಿನ ಪ್ರಥಮ ಸಂಪಾದಕ ಬಹುಭಾಷಾ ಪಂಡಿತ ಎಲ್.ಗುಂಡಪ್ಪ ಅವರ ಸುಪುತ್ರ ಎಲ್.ಜಿ. ಜ್ಯೋತೀಶ್ವರ ಅವರು ಜಾಹೀರಾತು ಬ್ರಾಂಡ್, ವೈದ್ಯಕೀಯ ಸಂವಹನ ಕ್ಷೇತ್ರಗಳಲ್ಲಿ 57 ವರ್ಷ ಅನುಭವ ಸಂಪನ್ನ ವ್ಯಕ್ತಿಯಾಗಿರುವವರು. ಕನ್ನಡ ಹಿಂದಿ ಇಂಗ್ಲಿಷ್ ಭಾಷೆಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಸಾಕ್ಷ್ಯ ಚಿತ್ರಗಳನ್ನು, ನುಡಿ ಚಿತ್ರಗಳನ್ನು ಜಾಹೀರಾತುಗಳಿಗೆ ನಿರೂಪಣ ಸಾಹಿತ್ಯವನ್ನು ರಚಿಸಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ, ಕಯ್ಯಾರ ಕಿಞ್ಞಣ್ಣ ರೈಗಳ ಬಗ್ಗೆ ಅಪಾರ ಅಭಿಮಾನವಿರುವ ಅವರು ರಾಷ್ಟ್ರ ಕವಿಗಳ ಮನೆಗಳಿಗೆ, ಐತಿಹಾಸಿಕ ಬೇಕಲ ಕೋಟೆಗೆ ಹಾಗೂ ಕಾಸರಗೋಡು ಪಿಲಿಕುಂಜೆಯ ಯಕ್ಷ ಪುತ್ಥಳಿ ಬೊಂಬೆ ಮನೆಗೆ ಭೇಟಿ ನೀಡಿದ್ದಾರೆ.

ಕನ್ನಡ ಸಮ್ಮೇಳನಕ್ಕೆ ಪ್ರಾಯೋಜಕತ್ವ

ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಮುಂದಿನ ನವೆಂಬರ್ 7 ಮತ್ತು 8ರಂದು ಕಾಸರಗೋಡು ಕನ್ನಡ ಗ್ರಾಮದಲ್ಲಿ ನಡೆಯುವ ಕೇರಳ ರಾಜ್ಯ 8ನೇ ಕನ್ನಡ ಸಮ್ಮೇಳನ – 2026 ಮತ್ತು ಕೇರಳ – ಕರ್ನಾಟಕ ಉತ್ಸವವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಬೆಂಗಳೂರಿನ ವಿವಿಧ ಸಂಘ – ಸಂಸ್ಥೆಗಳು ಟ್ರಸ್ಟ್‌ಗಳ ಪ್ರಾಯೋಜಕತ್ವ ನೀಡುವ ಮೂಲಕ ಆರ್ಥಿಕ ಸಹಾಯ ನೀಡಲಾಗುವುದೆಂದು ಎಲ್.ಜಿ. ಜ್ಯೋತೀಶ್ವರ ಅವರು ಘೋಷಿಸಿದರು.

ಭವನ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಕೆ

ಕಾಸರಗೋಡು ಕನ್ನಡ ಗ್ರಾಮದಲ್ಲಿ ಸುಮಾರು 6 ಕೋಟಿರೂಪಾಯಿವೆಚ್ಚದಲ್ಲಿನಿರ್ಮಾಣವಾಗಲಿರುವ ಕೇರಳ – ಕರ್ನಾಟಕ ಭವನ ಸಾಂಸ್ಕೃತಿಕ ಸಮುಚ್ಚಯದ ಯೋಜನೆಗಳಿಗೆ ಕರ್ನಾಟಕ ಸರಕಾರದ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ತಮ್ಮ ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿ ಚರ್ಚೆ ನಡೆಸಲಾಗುದೆಂದು ತಿಳಿಸಿದರು.

ಕೆ.ಕುಶಲಕುಮಾರ್ ಕನ್ನಡ ಗ್ರಾಮ ಶುಭಹಾರೈಸಿದರು. ಶ್ರೀ ರಾಮನಾಥ ಸಾಂಸ್ಕೃತಿಕ ಭವನ ಸಮಿತಿ ಪ್ರಧಾನ ಸಂಚಾಲಕ ಕೆ.ಗುರುಪ್ರಸಾದ್ ಕೋಟೆಕಣಿ ಸ್ವಾಗತಿಸಿ, ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಕೆ.ಜಗದೀಶ್ ಕೂಡ್ಲು ವಂದಿಸಿದರು.

ಚಿರಂಜೀವಿ ಕುಂಬಳೆ ವತಿಯಿಂದ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ



ಕುಂಬಳೆ: ಶಿಕ್ಷಣವೇ ಸಮಾಜದ ಪ್ರಗತಿಯ ಮೂಲಾಧಾರ ಎಂಬ ಧ್ಯೇಯದೊಂದಿಗೆ ಚಿರಂಜೀವಿ ಕುಂಬಳೆ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮವನ್ನು ಕುಂಬಳೆ ಗ್ರಾಮ ಪಂಚಾಯತ್ ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್ ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ 109 ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ವಿತರಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಇತರ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ 9 ಮಂದಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶಿಕ್ಷಣ ಸೇವೆ, ಪ್ರತಿಭಾ ಪ್ರೋತ್ಸಾಹ ಮತ್ತು ಸಾಮಾಜಿಕ ಬದ್ಧತೆಯ ಸುಂದರ ಸಮನ್ವಯವಾಗಿ ಮೂಡಿಬಂದ ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಹೊಸ ಉತ್ಸಾಹವನ್ನು ಮೂಡಿಸಿತು. ಕ್ಲಬ್ ಅಧ್ಯಕ್ಷ ಬಾಲಕೃಷ್ಣ ಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯ ಪೃಥ್ವಿರಾಜ್ ಶೆಟ್ಟಿ, ಗ್ರಾಮ ಪಂಚಾಯತ್ ಸದಸ್ಯರಾದ ರಮೇಶ ಭಟ್, ಸ್ನೇಹಾ, ಜಿಲ್ಲಾ ಕನ್ನಡ ಪತ್ರಕರ್ತರ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಎಂ.ನಾ.ಚಂಬಲ್ತಿಮಾರ್ ಮೊದಲಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯದರ್ಶಿ ಕೃಷ್ಣ ಗಟ್ಟಿ ಸ್ವಾಗತಿಸಿ, ಪ್ರಜೀಶ್ ಪೆರುವಾಡ್ ವಂದಿಸಿದರು. ಮಾಜಿ ಅಧ್ಯಕ್ಷ ಸಂತೋಷ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಕ್ಲಬ್ ಸದಸ್ಯರು, ಮಹಿಳಾ ವಿಭಾಗ ಪದಾಧಿಕಾರಿಗಳು ಸಹಕರಿಸಿದರು.

ವಿಶ್ವ ಆಹಾರ ಸುರಕ್ಷತಾ ದಿನಾಚರಣೆ: ಜಾಗೃತಿ ಮೂಡಿಸಲು ಸೈಕ್ಲೋಥಾನ್



ಕಾಸರಗೋಡು: ಸುರಕ್ಷಿತ ಆಹಾರ ಪದ್ಧತಿ ಮತ್ತು ಆರೋಗ್ಯ ರಕ್ಷಣೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಕಾಸರಗೋಡು ಜಿಲ್ಲಾ ಆಹಾರ ಸುರಕ್ಷತಾ ಇಲಾಖೆ ಮತ್ತು ಕಾಸರಗೋಡು ಪೆಡಲರ್ಸ್ ಕ್ಲಬ್ ಜಂಟಿಯಾಗಿ ಆಯೋಜಿಸಿದ್ದ ಸೈಕ್ಲೋಥಾನ್ ಯಶಸ್ವಿಯಾಗಿ ನಡೆಯಿತು.

ಭಾನುವಾರ ಕಾಞಂಗಾಡಿನ ಹಳೆಯ ಬಸ್ ನಿಲ್ದಾಣ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಞಂಗಾಡ್ ಕಂದಾಯ ವಿಭಾಗೀಯ ಅಧಿಕಾರಿ ಕೆ.ಆರ್.ಮನೋಜ್ ಚಾಲನೆ ನೀಡಿದರು. ಕಾಸರಗೋಡು ಆಹಾರ ಸುರಕ್ಷತಾ ಸಹಾಯಕ ಆಯುಕ್ತ ಸಂಗೀತ್ ಎಸ್. ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆಯಾದ್ಯಂತ ಆಹಾರ ಸುರಕ್ಷತಾ ಮಾನದಂಡಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಜನರಿಗೆ ಸುರಕ್ಷಿತ ಆಹಾರ ಆಯ್ಕೆಗಳನ್ನು ಒದಗಿಸಲು ಇಲಾಖೆಯು ಜಾರಿಗೆ ತರುತ್ತಿರುವ ವಿವಿಧ ಚಟುವಟಿಕೆಗಳ ಬಗ್ಗೆ ಅವರು ವಿವರಿಸಿದರು. ಕಾಸರಗೋಡು ಪೆಡಲರ್ಸ್ ಕ್ಲಬ್‌ನ ಹಲವಾರು ಸೈಕ್ಲಿಸ್ಟ್‌ಗಳು ಮತ್ತು ಸಾರ್ವಜನಿಕರು ಆಹಾರ ಸುರಕ್ಷತಾ ಸಂದೇಶಗಳನ್ನು ಹೊಂದಿರುವ ಫಲಕಗಳನ್ನು ಹಿಡಿದುಕೊಂಡು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ರಸಪ್ರಶ್ನೆ, ವಿಚಾರ ಸಂಕಿರಣ

ಜೂ.11ರಂದು ಸಿವಿಲ್ ಸ್ಟೇಷನ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ನಡೆಯಲಿರುವ ರಸಪ್ರಶ್ನೆ ಮತ್ತು ಪೋಸ್ಟರ್ ಪ್ರಸ್ತುತಿ ಸ್ಪರ್ಧೆಗಳು ಮತ್ತು ಜೂ.12ರಂದು ಜಿಲ್ಲಾ ಯೋಜನಾ ಕಚೇರಿ ಸಭಾಂಗಣದಲ್ಲಿ ನಡೆಯಲಿರುವ ಪ್ಯಾನಲ್ ಚರ್ಚೆ ಮತ್ತು ವಿಚಾರ ಸಂಕಿರಣದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ಆಹಾರ ಸುರಕ್ಷತಾ ಇಲಾಖೆಯು ತಿಳಿಸಿದೆ.

‘ಮರಕ್ಕೊಂದು ಪತ್ರ’: ಬಾನಂ ವಿದ್ಯಾರ್ಥಿಗಳ ವಿಶಿಷ್ಟ ಕಾರ್ಯಕ್ರಮ



ಕಾಸರಗೋಡು: ವಿಶ್ವ ಪರಿಸರ ದಿನವನ್ನು ಬಾನಂ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಮರಕ್ಕೊಂದು ಪತ್ರ ಎಂಬ ವಿಶಿಷ್ಟ ಕಾರ್ಯಕ್ರಮದೊಂದಿಗೆ ಆಚರಿಸಿಕೊಂಡಿದ್ದಾರೆ.

ಮರಕ್ಕೇ ಪತ್ರ ಬರೆಯುವ ಮೂಲಕ ವೃಕ್ಷದ ಮಹತ್ವವನ್ನು ಜನತೆಗೆ ಪ್ರೀತಿಯ ವೃಕ್ಷವೇ.. ನೀನು ಚೆನ್ನಾಗಿದ್ದೀಯಾ? ನೀನು ನನ್ನ ಜೀವನದ ಮೂಕ ಸ್ನೇಹಿತನಾಗಿರುವೆ. ಸುಡುವ ಬಿಸಿಲಿಗೆ ನೆರಳಾಗಿ, ತಾಜಾ ಗಾಳಿ ಬೀಸುತ್ತಾ, ಸಿಹಿ ಹಣ್ಣುಗಳನ್ನು ನೀಡುತ್ತಾ ನೀನು ಯಾವಾಗಲೂ ನಮ್ಮೊಂದಿಗಿದ್ದೀಯಾ. ಅನೇಕ ಪ್ರಾಣಿ, ಪಕ್ಷಿಗಳ ಆಶ್ರಯದಾತ ನೀನು... ಮಕ್ಕಳು ಮರಕ್ಕೆ ಬರೆದ ಪತ್ರದ ಸಾಲುಗಳು ಇವು. ಪರಿಸರ ಸಂರಕ್ಷಣೆಯ ಅಗತ್ಯವನ್ನು ಪತ್ರಗಳಲ್ಲಿನ ಒಕ್ಕಣೆ ಸ್ಪಷ್ಟವಾಗಿ ಸಾರುತ್ತಿತ್ತು.

ಇದೇ ಸಂದರ್ಭ ಸಸಿ ನೆಡುವಿಕೆ, ಪರಿಸರ ರಸಪ್ರಶ್ನೆ ಮತ್ತು ಪೋಸ್ಟರ್ ಬರವಣಿಗೆಯೂ ನಡೆಯಿತು. ರಾಷ್ಟ್ರೀಯ ಹಸಿರು ಕ್ರಿಯಾ ಸೇನೆ ಮತ್ತು ಪರಿಸರ ಕ್ಲಬ್ ಇವುಗಳ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೋಡೋಂ ಬೇಲೂರು ಗ್ರಾ.ಪಂ. ಸದಸ್ಯೆ ಬಿ.ಅಜಿತಾ ಉದ್ಘಾಟಿಸಿದರು. ಶಾಲಾ ಪಿಟಿಎ ಅಧ್ಯಕ್ಷ ಪಿ.ರಾಜೀವನ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಂಸಿ ಅಧ್ಯಕ್ಷ ಪಿ.ದಿವಾಕರನ್, ಮುಖ್ಯ ಶಿಕ್ಷಕಿ ಸಿ.ಕೋಮಲವಲ್ಲಿ, ಹಿರಿಯ ಸಹಾಯಕ ಪಿ.ಕೆ.ಬಾಲಚಂದ್ರನ್, ಸಿಬ್ಬಂದಿ ಕಾರ್ಯದರ್ಶಿ ಅನಿತಾ ಮೇಲತ್ ಮತ್ತು ರಾಷ್ಟ್ರೀಯ ಹಸಿರು ಕ್ರಿಯಾಸೇನೆಯ ಸಂಯೋಜಕ ಅನೂಪ್ ಪೆರಿಯಾಲ್ ಉಪಸ್ಥಿತರಿದ್ದರು.

ಕಾಸರಗೋಡು ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ವಾರ್ಷಿಕ ಮಹಾಸಭೆ



ಕಾಸರಗೋಡು: ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ವಾರ್ಷಿಕ ಮಹಾಸಭೆಯು ನೀರ್ಚಾಲು ಶ್ರೀ ಕುಮಾರಸ್ವಾಮಿ ಭಜನಾ ಮಂದಿರದ ಸಭಾಂಗಣದಲ್ಲಿ ಜರಗಿತು.

ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಸದಸ್ಯರು, ಕಲಾವಿದರು, ಪೋಷಕರು, ಹಿತೈಷಿಗಳು, ಪ್ರೋತ್ಸಾಹಕರು ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

ಮಹಾಸಭೆಯಲ್ಲಿ ಸಂಸ್ಥೆಯ ಮುಂದಿನ ಕಾರ್ಯಕ್ರಮಗಳ ಕುರಿತು ಚರ್ಚಿಸಲಾಯಿತು. ವಾರ್ಷಿಕ ಲೆಕ್ಕ ಪತ್ರಗಳನ್ನು ಮಂಡಿಸಲಾಯಿತು. ಸಂಸ್ಥೆಯ ಕಲಾವಿದರಿಗೆ ಮುಂದಿನ ದಿನಗಳಲ್ಲಿ ಕೊಡಮಾಡಲಿಚ್ಛಿರುವ ಹಲವಾರು ಸವಲತ್ತುಗಳನ್ನು ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು.

ಪದಾಧಿಕಾರಿಗಳ ಆಯ್ಕೆ

2026–27ನೇ ಸಾಲಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಗಣೇಶ್‌ಪ್ರಸಾದ್ ಆಳ್ವ, ಅಧ್ಯಕ್ಷರಾಗಿ ರಾಜೇಶ್ವರಿ ಎಂ.ಎ., ಉಪಾಧ್ಯಕ್ಷರಾಗಿ ಅಪ್ಪಣ್ಣ ಸೀತಾಂಗೋಳಿ, ಕಾರ್ಯದರ್ಶಿಯಾಗಿ ಗುರುರಾಜ್ ಎಂ.ಆರ್., ಜೊತೆ ಕಾರ್ಯದರ್ಶಿಯಾಗಿ ವರ್ಷಾ ಪಿ., ಕೋಶಾಧಿಕಾರಿಯಾಗಿ ಜಯಪ್ರಭಾ ವೈ., ಸದಸ್ಯರಾಗಿ ದೀಕ್ಷಾ ಕುಲಾಲ್, ಮಹೇಶ್ ಪುಣಿಯೂರು, ಬಾಲಕೃಷ್ಣ ನಾಯ್ಕ್ ಹೇರೂರು ಅವರನ್ನು ಆಯ್ಕೆ ಮಾಡಲಾಯಿತು.

ಸಂಸ್ಥೆಯ ಅಪ್ರತಿಮ ಕಲಾವಿದರು ಅವರ ಸಂಸ್ಥೆಯೊಂದಿಗಿನ ಒಂದು ವರ್ಷದ ಅನುಭವವನ್ನು ತುಂಬಾ ಹೆಮ್ಮೆಯಿಂದ ಹಂಚಿಕೊಂಡರು. ಮಾಸ್ಟರ್ ಹಸ್ತಿತ್ ಆಳ್ವ ಸ್ವಾಗತಿಸಿ, ನವ್ಯಶ್ರೀ ಕುಲಾಲ್ ವಂದಿಸಿದರು.

ಎಕೆಪಿಎ ವೆಸ್ಟ್ ಯೂನಿಟ್‌ನಿಂದ ಕಲಿಕೋಪಕರಣಗಳ ವಿತರಣೆ



ಕಾಸರಗೋಡು: ಆಲ್ ಕೇರಳ ಫೊಟೋಗ್ರಾಫರ್ಸ್ ಅಸೋಸಿಯೇಷನ್ ವೆಸ್ಟ್ ಯುನಿಟ್ ವತಿಯಿಂದ 2026–27ನೇ ಶೈಕ್ಷಣಿಕ ಶಾಲಾ ಪ್ರಾರಂಭೋತ್ಸವ ಪ್ರಯುಕ್ತ ಸದಸ್ಯರ ಮಕ್ಕಳಿಗೆ ಕಲಿಕೋಪಕರಣ ವಿತರಿಸಲಾಯಿತು.

ಮಕ್ಕಳಾದ ಮೌಶ್ಮಿ ಮಹೇಶ್ (ಎಲ್‌ಕೆಜಿ) ಅನ್ವಿಕ ಮುರಳಿ (ಎಲ್‌ಕೆಜಿ) ಮತ್ತು 1 ರಿಂದ 5ನೇ ತರಗತಿಯಲ್ಲಿ ಕಲಿಯುವ ಮಕ್ಕಳಾದ ಸಾನ್ವಿಕ ಎ., ಮಾನಸ್ವಿ ಯು., ಅದ್ವಿತ್ ಡಿ.ಎ., ಆಧೀಶ್ ಎಚ್., ತೃಷನ್ ಆಚಾರ್ಯ ಕೆ. ಅವರಿಗೆ ಕಲಿಕೋಪರಣ ವಿತರಿಸಲಾಯಿತು.

ನಗರಸಭಾ ಸದಸ್ಯರ ಶ್ಲಾಘನೆ

ಕಾರ್ಯಕ್ರಮವನ್ನು ಕಾಸರಗೋಡು ನಗರಸಭಾ ಸದಸ್ಯ ಕೆ.ಎನ್.ರಾಮಕೃಷ್ಣ ಹೊಳ್ಳ ಮಕ್ಕಳಿಗೆ ಬ್ಯಾಗ್ ನೀಡಿ ಉದ್ಘಾಟಿಸಿ ವಿದ್ಯಾಭ್ಯಾಸದ ಕುರಿತು ವಿಚಾರಗಳನ್ನು ತಿಳಿಸಿದರು ಹಾಗೂ ಯೂನಿಟ್‌ನಿಂದ ಮಾಡುವ ಈ ಕಾರ್ಯವನ್ನು ಪ್ರಶಂಸಿಸಿದರು.

ಯೂನಿಟ್ ಅಧ್ಯಕ್ಷ ವಸಂತ್ ಕೆರೆಮನೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಯೂನಿಟ್ ವತಿಯಿಂದ ಇಂತಹ ಚಟುವಟಿಕೆಯನ್ನು ಮಾಡಲು ಪದಾಧಿಕಾರಿಗಳ ಹಾಗೂ ಸದಸ್ಯರ ಬೆಂಬಲ ಕಾರಣವೆಂದು ನುಡಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಮಹೇಶ್ ಪರಕ್ಕಿಲ, ಉದಯ ಲಾವಣ್ಯ ಸ್ಟುಡಿಯೋ, ಮುರಳಿಕೃಷ್ಣ ಫೋಕಲ್ ಪೋಯಿಂಟ್, ದೀಪ್ತ್ ಎಲ್ಲೋರ ಸ್ಟುಡಿಯೋ, ಸುಪ್ರಿಯಾ ಹೇಮಂತ್ ಉಪಸ್ಥಿತರಿದ್ದರು.

ಕಾರ್ಯದರ್ಶಿ ಶಾಲಿನಿ ರಾಜೇಂದ್ರನ್ ಸ್ವಾಗತಿಸಿ, ಯೂನಿಟ್ ಸಮಿತಿ ಸದಸ್ಯ ರತೀಶ್ ರಾಮು ವಂದಿಸಿದರು.



ಇತಿಹಾಸ ಪ್ರಸಿದ್ಧ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಮಲಬಾರ್ ದೇವಸ್ವಂ ಮಂಡಳಿ ಅಧ್ಯಕ್ಷ ಒ.ಕೆ. ವಾಸು ಅವರು ಭೇಟಿ ನೀಡಿ ದೇಗುಲದ ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸಿದರು. ದೇವಾಲಯದ ಪರವಾಗಿ ಕಾರ್ಯ ನಿರ್ವಹಣಾಧಿಕಾರಿ ಕೆ.ರಾಜೇಶ್ ಅವರು ಒ.ಕೆ.ವಾಸು ಅವರನ್ನು ಶಾಲು ಗೌರವಿಸಿದರು.



ಮಧೂರು ಕ್ಷೇತ್ರದ ವಠಾರದಲ್ಲಿ ಪರಿಸರ ದಿನವನ್ನು ಆಚರಿಸಲಾಯಿತು. ಕ್ಷೇತ್ರದ ಪ್ರಧಾನ ಅರ್ಚಕ ಧನಂಜಯ ಪಿ.ಕೆ. ಸಸಿ ನೆಟ್ಟು ಉದ್ಘಾಟಿಸಿದರು. ಕ್ಷೇತ್ರದ ಕಾರ್ಯ ನಿರ್ವಹಣಾಧಿಕಾರಿ ರಾಜೇಶ್, ಮನೋಜ್, ಕೆ.ಪುಷ್ಪಾ ಮಾಧವ ಮೂಲ್ಯ, ಕೃಷ್ಣಭಟ್ ಮೊದಲಾದವರು ಉಪಸ್ಥಿತರಿದ್ದರು.

ಕುಳೂರು ಸಂತಡ್ಕ ಶ್ರೀ ಅರಸು ಸಂಕಲ ದೈವಕ್ಷೇತ್ರ ಮಾಡದ ಭೋಜನ ಶಾಲೆಯ ಉದ್ಘಾಟನೆ | ಗಿರಿಜಾ ಕಲ್ಯಾಣ ಮಹೋತ್ಸವ, ಧಾರ್ಮಿಕ ಸಭೆ

ಸನಾತನ ಧರ್ಮ ಹೇಗೆ ಇರಬೇಕು ಎನ್ನುವುದನ್ನು ನೋಡುವುದಕ್ಕೆ ಸಾಕ್ಷಿ ಸಂತಡ್ಕ: ಒಡಿಯೂರು ಶ್ರೀ

ಮಂಜೇಶ್ವರ: ಸನಾತನ ಧರ್ಮ ಹೇಗೆ ಇರಬೇಕು ಎನ್ನುವುದನ್ನು ನೋಡುವುದಕ್ಕೆ ಸಾಕ್ಷಿ ಸಂತಡ್ಕ. ಗಿರಿಜಾ ಕಲ್ಯಾಣವೆಂದರೆ ಲೋಕ ಕಲ್ಯಾಣ. ಹಿರಿಯರನ್ನು ಮರೆತರೆ ನಮ್ಮತನವನ್ನು ಮರೆತಂತೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದ್ದಾರೆ.

ಕುಳೂರು ಸಂತಡ್ಕ ಶ್ರೀ ಅರಸು ಸಂಕಲ ದೈವಕ್ಷೇತ್ರ ಮಾಡದ ಭೋಜನ ಶಾಲೆಯ ಉದ್ಘಾಟನಾ ಸಮಾರಂಭದ ಭಾಗವಾಗಿ ಹಮ್ಮಿಕೊಂಡ ರುದ್ರಯಾಗ ಹಾಗೂ ಗಿರಿಜಾ ಕಲ್ಯಾಣ ಮಹೋತ್ಸವದ ಸಭಾ ಕಾರ್ಯಕ್ರಮವನ್ನು ಭಾನುವಾರ ದೀಪ ಬೆಳಗಿಸಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಶ್ರದ್ಧೆ, ಭಕ್ತಿಯ ಬೀಜವನ್ನು ಬಿತ್ತಿ

ಹೃದಯದಲ್ಲಿ ಶ್ರದ್ಧೆ ಮತ್ತು ಭಕ್ತಿಯ ಬೀಜವನ್ನು ಬಿತ್ತಿದರೆ ಹೃದಯದಲ್ಲಿ ಮನಶಾಂತಿಯ ಫಲ ಸಿಗುತ್ತದೆ. ಜ್ಞಾನದ ಬುದ್ಧಿ ಭಗವಂತನನ್ನು ಆಕರ್ಷಿಸಬೇಕಾಗುತ್ತದೆ ಎಂದು ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿಯವರು ಆಶೀರ್ವಚನ ನೀಡಿದರು.





ಕಲಾ ಸೋಗಡಿಗೂ ಅವಕಾಶವಿರಲಿ

ಭೋಜನ ಶಾಲೆಯ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ಮಾನವ ಹಕ್ಕುಗಳ ಹಂಗಾಮಿ ಅಧ್ಯಕ್ಷ ಡಾ.ಟಿ. ಶ್ಯಾಮ್ ಭಟ್ ಉದ್ಘಾಟಿಸಿ, ಯಕ್ಷಗಾನ ಕಲೆಯನ್ನು ಹಲವಾರು ವರ್ಷಗಳ ಕಾಲ ಆರಾಧಿಸಿಕೊಂಡು ಬರುತ್ತಿರುವವರು ಸಂತಡ್ಕದ ಜನ. ಈ ಭೋಜನ ಶಾಲೆ ಅನ್ನ ದಾಸೋಹದೊಂದಿಗೆ ಕಲಾಸೊಗಡಿಗೂ ತೆರೆದಿರಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭ ಗಣ್ಯರ ಸಮಕ್ಷಮ ಆಡಳಿತ ಮಂಡಳಿಯ ವತಿಯಿಂದ ಡಾ.ಶ್ಯಾಮ್ ಭಟ್ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಡಾ.ಶ್ರೀಧರ ಭಟ್ ಉಪ್ಪಳ ಅಧ್ಯಕ್ಷತೆ ವಹಿಸಿದ್ದರು.

■ ಧಾರ್ಮಿಕ ಸಭೆಯಲ್ಲಿ ಆಡಳಿತ ಮಂಡಳಿಯ ವತಿಯಿಂದ ಡಾ.ಶ್ಯಾಮ್ ಭಟ್‌ಗೆ ಸನ್ಮಾನ

■ ಲೋಕಕಲ್ಯಾಣಾರ್ಥ ರುದ್ರಯಾಗ ಹಾಗೂ ಗಿರಿಜಾ ಕಲ್ಯಾಣೋತ್ಸವ

ವೇದಿಕೆಯಲ್ಲಿ ಕುಡುಪು ಬ್ರಹ್ಮಶ್ರೀ ಕೃಷ್ಣರಾಜ ತಂತ್ರಿ, ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರ ನಾರಾಯಣ ಹೆಗ್ಡೆ ಕೋಡಿಬೈಲು, ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಆದಿಶಕ್ತಿ ಗೋಪಾಲಕೃಷ್ಣ ಕ್ಷೇತ್ರ ಸುಣ್ಣಾರಬೀಡಿನ ಅಧ್ಯಕ್ಷ ಹರೀಶ್ ಉಳ್ಳಾಲ, ಕರ್ನಾಟಕ ಲೋಕಾಯುಕ್ತ ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಸರಕಾರಿ ಅಭಿಯೋಜಕರು ರವೀಂದ್ರ ಮುನ್ನಿಪ್ಪಾಡಿ, ಧಾರ್ಮಿಕ ಮುಂದಾಳು ಕೃಷ್ಣಪ್ಪ ಪೂಜಾರಿ ದೇರಂಬಳ, ಬಾಲಕೃಷ್ಣ ಭಂಡಾರಿ ಕೆ. ದಡ್ಡಂಗಡಿ ಉಪಸ್ಥಿತರಿದ್ದರು.

ತೇಜಶ್ರೀ ಸಂತಡ್ಕ ಪ್ರಾರ್ಥಿಸಿದರು. ದಡ್ಡಂಗಡಿ ಅರವಿಂದಾಕ್ಷ ಭಂಡಾರಿ ಸ್ವಾಗತಿಸಿ, ರಾಮಕೃಷ್ಣ ಎಸ್. ವಂದಿಸಿದರು. ಜಯಪ್ರಕಾಶ್ ಶೆಟ್ಟಿ ಅಂಗಡಿದಾರು ಕಾರ್ಯಕ್ರಮ ನಿರೂಪಿಸಿದರು.

ಯೋಗೀಶ್ ಕುಳೂರು ಅವರ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ವೇದಮೂರ್ತಿ ಅನಂತನಾರಾಯಣ ಭಟ್ಟ ಪರಕ್ಕಜೆ ಅವರ ನೇತೃತ್ವದಲ್ಲಿ ಲೋಕಕಲ್ಯಾಣಾರ್ಥ ರುದ್ರಯಾಗ ಹಾಗೂ ಗಿರಿಜಾ ಕಲ್ಯಾಣೋತ್ಸವ ಜರಗಿತು.

ಸುತ್ತ ಮುತ್ತ

ಕಾಪು ಮೊಗವೀರ ಮಹಾಸಭಾದ ನೂತನ ಪದಾಧಿಕಾರಿಗಳ ನೇಮಕ



ಕಾಪು: ಕಾಪು ಮೊಗವೀರ ಮಹಾಸಭಾ, ಕಾಪು ಇದರ ಮಹಾಸಭೆ ಭಾನುವಾರ ಕುಶ ಸಾಲ್ಯಾನ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್ ಉಪಸ್ಥಿತರಿದ್ದರು. ಸಭೆಯಲ್ಲಿ ನೂತನ ಪದಾಧಿಕಾರಿಗಳ ನೇಮಕ ಮಾಡಲಾಯಿತು.

ಅಧ್ಯಕ್ಷರಾಗಿ ಸುಜಿತ್ ಕುಮಾರ್ ಸುವರ್ಣ, ಉಪಾಧ್ಯಕ್ಷ ನವೀನ್ ಅಮೀನ್, ಪ್ರಧಾನ ಕಾರ್ಯದರ್ಶಿ ಮುರಲಿ ಪುತ್ರನ್, ಕೋಶಾಧಿಕಾರಿ ಹೇಮನಾಥ್ ಕೋಟ್ಯಾನ್, ಜತೆ ಕಾರ್ಯದರ್ಶಿ ಸಂದೇಶ್ ಮೆಂಡನ್ , ಜತೆ ಕೋಶಾಧಿಕಾರಿ : ಚಂದ್ರಶೇಖರ ಸುವರ್ಣ, ಸಮಿತಿಯ ಸದಸ್ಯರಾಗಿ: ಮೋನಪ್ಪ ಸುವರ್ಣ, ಸದಾಶಿವ ಶ್ರೀಯಾನ್, ಶಿವಾಜಿ ಕೋಟ್ಯಾನ್, ಧೀರೇಶ್ ತಿಂಗಳಾಯ, ಲೆಕ್ಕ ಪರಿಶೋಧಕರು: ಆನಂದ ಶ್ರೀಯಾನ್, ಜಗದೀಶ ಮೆಂಡನ್ ಆಯ್ಕೆಗೊಂಡಿದ್ದಾರೆ.

ಪುರುಷೋತ್ತಮ ಯೋಗ: ಪಾರಾಯಣಕ್ಕೆ ಆಹ್ವಾನ

ಉಡುಪಿ: ಶ್ರೀ ಪುತ್ತಿಗೆ ಮಠಾಧೀಶರಾದ ವಿಶ್ವಮಾನ್ಯ ಯತಿಕುಲ ಚಕ್ರವರ್ತಿ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಮತ್ತು ಅವರ ಶಿಷ್ಯ ಶ್ರೀಸುಧೀಂದ್ರ ತೀರ್ಥ ಶ್ರೀಪಾದರ ಶುಭಾಶೀರ್ವಾದಗಳೊಂದಿಗೆ ಅಧಿಕ ಮಾಸದ ಅಧಿಕ ಫಲ ಸಂಪಾದನೆ ಮತ್ತು ಲೋಕಕಲ್ಯಾಣಕ್ಕಾಗಿ ಶ್ರೀ ಮದ್ಭಗವದ್ಗೀತೆಯ 15 ನೇ ಅಧ್ಯಾಯವನ್ನು 33 ಬಾರಿ ಸಾಮೂಹಿಕವಾಗಿ ಪಾರಾಯಣ ಮಾಡಲು ಸಂಕಲ್ಪಿಸಲಾಗಿದೆ.
ಜೂ.12ರಂದು ಅಪರಾಹ್ನ 2 ರಿಂದ ಶ್ರೀಕೃಷ್ಣ ಮಠಕ್ಕೆ ಸನಿಹದಲ್ಲಿರುವ ಗೀತಾ ಮಂದಿರದ ಶ್ರೀ ಪುತ್ತಿಗೆ ನೃಸಿಂಹ ಆಡಿಟೋರಿಯಂನಲ್ಲಿ ಈ ಪುಣ್ಯಪ್ರದ ಕಾರ್ಯಕ್ರಮ ನಡೆಯಲಿದೆ. ಸಾಮೂಹಿಕ ಪಾರಾಯಣ – ಶಾಸ್ತ್ರೀಯ ನೃತ್ಯಾಭಿವ್ಯಕ್ತಿ ಮತ್ತು ಕಿರು ನಿರೂಪಣಾ ವ್ಯಾಖ್ಯಾನಗಳೊಂದಿಗೆ ಹಿತಮಿತ ಹಿಮ್ಮೇಳವಾದ್ಯಗಳನ್ನು ಬಳಸಿಕೊಂಡು ವೈಶಿಷ್ಟಪೂರ್ಣವಾಗಿ ಸಂಯೋಜಿಸಲಾಗಿದೆ. ಆಸಕ್ತ ಭಗವದ್ಭಕ್ತರು ಮುಕ್ತವಾಗಿ ಭಾಗವಹಿಸಿ ಶ್ರೀಕೃಷ್ಣಾನುಗ್ರಹಕ್ಕೆ ಪಾತ್ರರಾಗಬಹುದು .
ವಿಶ್ವ ಗೀತಾ ಪರ್ಯಾಯದ ಅವಧಿಯಲ್ಲಿ ಶ್ರೀಪುತ್ತಿಗೆ ಶ್ರೀಗಳ ಸಂಕಲ್ಪ ಮತ್ತು ಉಪಸ್ಥಿತಿಯೊಂದಿಗೆ ನಡೆದ ಅಪೂರ್ವ ಲಕ್ಷ ಕಂಠ ಗೀತಾಪಾರಾಯಣದಲ್ಲಿ ರಾಷ್ಟ್ರದ ಪ್ರಧಾನಿ ನರೇಂದ್ರ ಮೋದೀಜಿ ಭಾಗವಹಿಸಿ ಇವೇ 20 ಶ್ಲೋಕಗಳ ಪಠಣ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಆನ್‌ಲೈನ್ ನಲ್ಲಿ ಭಾಗವಹಿಸಲು ಅವಕಾಶವಿದ್ದು, ಈ ಕೆಳಗಿನ ಲಿಂಕ್ ಕ್ಲಿಕ್ ಮಾಡಿ ನೋಂದಾಯಿಸಿಕೊಳ್ಳಬಹುದು.
https://forms.gle/WHVDbW3Y-Q6crNU6W8 ಅಧಿಕ ಮಾಸದ ವಿಶೇಷ ರಿಯಾಯಿತಿಯ ಗ್ರಂಥ ದಾನ ಸೇವೆ,ನೋಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ 879215 8946 9880605691, 9663891702, 988649869 ಸಂಪರ್ಕಿಸಬಹುದೆಂದು ಮಠದ ಪ್ರಕಟಣೆ ತಿಳಿಸಿದೆ.

ಸಮವಸ್ತ್ರ ವಿತರಣೆ

ಕೋಟ: ಶ್ರೀ ಕ್ಷೇತ್ರ ಸಾಸ್ತಾನದ ಪಾಂಡೇಶ್ವರ ಕಳಿಬೈಲ್‌ನಲ್ಲಿ ಕೊರಗ ಜನಾಂಗದಲ್ಲಿ ಸಂಪ್ರದಾಯಕ ಡೋಲುವಾದಿಸುವ ಸ್ವಾಮಿ ತನಿಯ ಸಾಸ್ತಾನ ಬಳಗಕ್ಕೆ ಉತ್ತಮ ಗುಣಮಟ್ಟದ ಸಮವಸ್ತ್ರ ವಿತರಿಸಲಾಯಿತು.
ಸಮವಸ್ತ್ರವನ್ನು ವರಾಹ ಕೇಟರಿಂಗ್ ಪಾಂಡೇಶ್ವರದಿಂದ ದಿನೇಶ್ ಬಾಂಧವ್ಯ ಪ್ರಾಯೋಜಕತ್ವದಲ್ಲಿ ವಿತರಿಸಲಾಯಿತು. ಶ್ರೀಶ ಉಪಾಧ್ಯ ಹಂಗಾರಕಟ್ಟೆ, ಕೌಶಿಕ್ ಕುಮಾರ್ ಡಿ.ಎಸ್ ಮೈಸೂರ್, ಕಳಿಬೈಲ್‌ನ ಧರ್ಮದರ್ಶಿ ಅಭಿಜಿತ್, ನವೀನ್ ಪಾತ್ರಿ ಕುಂಜಿಬೆಟ್ಟು ,ಎಂ ಸಿ ಚಂದ್ರಶೇಖರ್, ಸುದರ್ಶನ್ ಪೂಜಾರಿ, ದಿನೇಶ್ ಪಾಂಡೇಶ್ವರ ಮತ್ತಿತರರಿದ್ದರು.

ಮೊದಲನೇ ಪುಟದಿಂದ

ಆಗ್ರಹ

ಎರಡೂ ಸರ್ವಿಸ್ ರಸ್ತೆಗಳಲ್ಲೂ ಅಡ್ಡಾದಿಡ್ಡಿ ವಾಹನಗಳ ನಿಲುಗಡೆಯಿಂದ ವಾಹನ ಸವಾರರು, ಪಾದಚಾರಿಗಳು ನಿತ್ಯ ಸಂಕಷ್ಟ ಅನುಭವಿಸುತ್ತಾರೆ. ಕಲ್ಲಡ್ಕ ದಾಸಕೋಡಿ ಕಡೆಯಿಂದ ಬರುವವರಿಗೆ ಬರಿಮಾರು ರಸ್ತೆ ಕ್ರಾಸ್ ಇರುವುದು ಸಮೀಪಕ್ಕೆ ಬಂದ ಬಳಿಕವಷ್ಟೇ ಗೊತ್ತಾಗುತ್ತದೆ. ಅಷ್ಟರಲ್ಲಿ ವೇಗವಾಗಿ ಬಂದ ವಾಹನಗಳು ಚಾಲಕರ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿರುತ್ತವೆ.
ರಸ್ತೆ ಉಬ್ಬು ನಿರ್ಮಿಸಿದರೆ ಇಲ್ಲಿ ಸಂಚರಿಸುವ ವಾಹನ, ಸಾರ್ವಜನಿಕರಿಗೂ ಅನುಕೂಲವಾದೀತುಬೆಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.

23.54 ಕೋಟಿ ರೂ. ವೆಚ್ಚದ ಅಂಬಲಪಾಡಿ ಮೇಲ್ಸೇತುವೆ ಕಾಮಗಾರಿ ಅಂತಿಮ ಹಂತಕ್ಕೆ

ತಾಂತ್ರಿಕ ಸುರಕ್ಷತೆ ಪರಿಶೀಲನೆಗೆ ಹಿತರಕ್ಷಣಾ ವೇದಿಕೆ ಆಗ್ರಹ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66ರ ಅಂಬಲಪಾಡಿಯಲ್ಲಿ ಸುಮಾರು 23.54 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ ಕಾಮಗಾರಿಯು ಇದೀಗ ಅಂತಿಮ ಹಂತವನ್ನು ತಲುಪಿದೆ. ಜೂನ್ 15 ರಿಂದ 20 ರ ಒಳಗಿನ ಅವಧಿಯಲ್ಲಿ ಈ ಮೇಲ್ಸೇತುವೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಉದ್ದೇಶಿಸಲಾಗಿದೆ ಎಂದು ಇತ್ತೀಚೆಗೆ ಸಂಬಂಧಪಟ್ಟ ಇಲಾಖಾ ಪ್ರಕಟಣೆಗಳು ತಿಳಿಸಿವೆ. ಆದರೆ, ಕಾಮಗಾರಿ ಪೂರ್ಣಗೊಳ್ಳುತ್ತಿರುವ ಬೆನ್ನಲ್ಲೇ ಇಲ್ಲಿನ ತಾಂತ್ರಿಕ ವಿನ್ಯಾಸ , ಸಂಚಾರ ಸುರಕ್ಷತೆಯ ಕುರಿತು' ರಾಷ್ಟ್ರೀಯ ಹೆದ್ದಾರಿ 66 ಅಂಬಲಪಾಡಿ ಬಳಕೆದಾರರ ಹಿತರಕ್ಷಣಾ ವೇದಿಕೆ' ತಾಂತ್ರಿಕ ಲೋಪದೋಷಗಳನ್ನು ಸರಿಪಡಿಸುವಂತೆ ಆಗ್ರಹಿಸಿದೆ

ತಾಂತ್ರಿಕ ಸಮಸ್ಯೆಗಳ ಬಗ್ಗೆ ಬೇಕಿದೆ ಗಮನ

ಯೂ-ಟರ್ನ್ ಹಾಗೂ ಸುರಕ್ಷಿತ ಸಂಚಾರಕ್ಕೆ ಅಗತ್ಯವಿರುವ ಕೆಲವು ಮೂಲಭೂತ ಸೌಕರ್ಯಗಳು ಇಲ್ಲಿ ಸಮರ್ಪಕವಾಗಿ ಮೂಡಿಬಂದಿಲ್ಲ ಎಂದು ವೇದಿಕೆ ತಿಳಿಸಿದೆ. ಮುಖ್ಯವಾಗಿ ಉಡುಪಿಯಿಂದ



ಮಂಗಳೂರು ಕಡೆಗೆ ಸಾಗುವ ರಸ್ತೆ ಮತ್ತು ಶ್ಯಾಮಪ್ರಸಾದ್ ಮುಖರ್ಜಿ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ಪ್ರವೇಶ ಕಲ್ಪಿಸುವ ಜಂಕ್ಷನ್ ಭಾಗದಲ್ಲಿ ರೇವ್‌ಮೆಂಟ್ ವಾಲ್ ಹಾಗೂ ರಾಂಪ್‌ಗಳನ್ನು ನಿರ್ಮಿಸಿರುವ ಶೈಲಿಯು ಅವೈಜ್ಞಾನಿಕವಾಗಿದೆ ವಾಹನಗಳು ತಿರುವು ತೆಗೆದುಕೊಳ್ಳುವಾಗ ಮತ್ತು ಹೆದ್ದಾರಿಗೆ ಪ್ರವೇಶಿಸುವಾಗ ಇರಬೇಕಾದ ನಿಗದಿತ ಎತ್ತರ, ರಸ್ತೆಯ ವಿಸ್ತಾರದಲ್ಲಿ ವ್ಯತ್ಯಾಸಗಳಿರುವುದರಿಂದ, ಇದು ಸಾಮಾನ್ಯ ವಾಹನ ಸವಾರರ ದೈನಂದಿನ ಸಂಚಾರಕ್ಕೆ ತೊಂದರೆ ಉಂಟು ಮಾಡುವ ಸಾಧ್ಯತೆಯಿದೆ ಎಂದು ವಿವರಿಸಲಾಗಿದೆ.

ಪರಿಶೀಲನೆಗೆ ಆಗ್ರಹ

ಅಂಬಲಪಾಡಿ ಜಂಕ್ಷನ್ ಸದಾ ವಾಹನ ದಟ್ಟಣೆಯಿಂದ ಕೂಡಿರುವ ಪ್ರದೇಶವಾಗಿರುವುದರಿಂದ, ಹೆದ್ದಾರಿ ಪ್ರಾಧಿಕಾರವು ತರಾತುರಿಯಲ್ಲಿ ಸಂಚಾರ ಮುಕ್ತಗೊಳಿಸುವ ಮುನ್ನ ಇಲ್ಲಿನ ಸುರಕ್ಷತೆ ಖಚಿತಪಡಿಸಿಕೊಳ್ಳಬೇಕಿದೆ. ಕಾಮಗಾರಿಯಲ್ಲಿ ಕಂಡು ಬರುತ್ತಿರುವ ತಾಂತ್ರಿಕ ಕೊರತೆ ಮರೆಮಾಚುವ ಬದಲು, ಅನುಭವಸ್ಥ ಇಂಜಿನಿಯರ್‌ಗಳು ಹಾಗೂ ಸ್ವತಂತ್ರ ತಾಂತ್ರಿಕ ತಜ್ಞರ ತಂಡದಿಂದ ಒಮ್ಮೆ ಸಮಗ್ರ ಸುರಕ್ಷತಾ ಪರಿಶೀಲನೆ ನಡೆಸಬೇಕು. ಆ ಮೂಲಕ ದೋಷ ಸರಿಪಡಿಸಿ, ಸಂಪೂರ್ಣ ಸುರಕ್ಷತೆ ಖಾತ್ರಿಪಡಿಸಿದ ನಂತರವೇ ಓವರ್ ಪಾಸ್ ಅನ್ನು ಸಾರ್ವಜನಿಕ ಬಳಕೆಗೆ ನೀಡಬೇಕು ಎಂದು ಅಂಬಲಪಾಡಿ ಹಿತರಕ್ಷಣಾ ವೇದಿಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನು ಕಟ್ಟುನಿಟ್ಟಾಗಿ ಆಗ್ರಹಿಸಿದೆ.

ತೀರಾ ಇಕ್ಕಟ್ಟಿನಲ್ಲಿ ರೇವ್‌ಮೆಂಟ್ ವಾಲ್, ರಾಂಪ್ ವಿನ್ಯಾಸ

ಉಡುಪಿಯಿಂದ ಮಂಗಳೂರು ಕಡೆಗೆ ಸಾಗುವ ಹೆದ್ದಾರಿ ಮತ್ತು ಶ್ಯಾಮಪ್ರಸಾದ್ ಮುಖರ್ಜಿ ರಸ್ತೆಯಿಂದ ವಾಹನಗಳು ಮೇಲ್ಸೇತುವೆಗೆ ಪ್ರವೇಶಿಸುವ ಪ್ರಮುಖ ಜಂಕ್ಷನ್ ಭಾಗದಲ್ಲಿ ನಿರ್ಮಿಸಲಾಗಿರುವ ರೇವ್‌ಮೆಂಟ್ ವಾಲ್ (ತಡೆಗೋಡೆ), ರಾಂಪ್‌ಗಳ ವಿನ್ಯಾಸ ತೀರಾ ಇಕ್ಕಟ್ಟಾಗಿದೆ ಎಂದು ಹಿತರಕ್ಷಣಾ ವೇದಿಕೆ ಬೊಟ್ಟು ಮಾಡಿದೆ.

ತರಾತುರಿಯ ಉದ್ಘಾಟನೆಗೆ ಮುನ್ನ ಸುರಕ್ಷತಾ ಆಡಿಟ್‌ಗೆ ಆಗ್ರಹ

ಅಂಬಲಪಾಡಿ ಜಂಕ್ಷನ್ ಸದಾ ಅತಿ ಹೆಚ್ಚು ವಾಹನ ದಟ್ಟಣೆಯಿಂದ ಕೂಡಿರುವ ಸೂಕ್ಷ್ಮ ಪ್ರದೇಶವಾಗಿದೆ. ಇಂತಹ ಪ್ರಮುಖ ಜಾಗದಲ್ಲಿ ನಿರ್ಮಾಣವಾಗಿರುವ ಓವರ್ ಪಾಸ್ ಅನ್ನು ಕೇವಲ ಸಂಚಾರ ದಟ್ಟಣೆ ನಿವಾರಣೆಯ ನೆಪವೊಡ್ಡಿ ತರಾತುರಿಯಲ್ಲಿ ಉದ್ಘಾಟಿಸುವುದು ಸರಿಯಲ್ಲ ಎಂದು ವೇದಿಕೆ ಹೇಳಿದೆ.
ಜೂನ್ 15-20 ರ ಒಳಗೆ ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸುವ ಮುನ್ನ, ಅನುಭವಸ್ಥ ಇಂಜಿನಿಯರ್‌ಗಳು ಹಾಗೂ ಸ್ವತಂತ್ರ ತಾಂತ್ರಿಕ ತಜ್ಞರ ತಂಡದಿಂದ ಸಮಗ್ರ ಸುರಕ್ಷತಾ ಆಡಿಟ್ (ಪರಿಶೀಲನೆ) ನಡೆಸಿ, ಲೋಪದೋಷಗಳನ್ನು ಸಂಪೂರ್ಣ ಸರಿಪಡಿಸಬೇಕು ಎಂಬುದು ಹಿತರಕ್ಷಣಾ ವೇದಿಕೆಯ ಮುಖ್ಯ ಆಗ್ರಹವಾಗಿದೆ.

6 ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು: ಡಾ.ಪ್ರಕಾಶ್ ಭಟ್



ಶಿರ್ವ: ಇಂದಿನ ಸ್ಥಿತಿಗತಿಯಲ್ಲಿ ಪ್ರತೀ ಆರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಆರೋಗ್ಯ ಕಾಪಾಡುವುದರ ಜೊತೆಗೆ ಪ್ರಕೃತಿ ಸಮತೋಲನದಲ್ಲಿಇಟ್ಟುಕೊಳ್ಳುವುದುನಮ್ಮ ಗುರುತರ ಜವಾಬ್ದಾರಿಯೂ ಆಗಿದೆ. ಎಂದು ಹಿರಿಯ ವೈದ್ಯ ಆರ್ಥೋಪೆಡಿಕ್ ಸ್ಪೆಷಲಿಸ್ಟ್ ಡಾ.ಪ್ರಕಾಶ್ ಭಟ್ ಉಡುಪಿ ಹೇಳಿದ್ದಾರೆ.
ಅವರು ಭಾನುವಾರ ಶಂಕರಪುರ ಸಮೀಪದ ಸಾಲ್ಮರ ಕೃಷ್ಣವೇಣಿ ಆಯುರ್ವೇದ, ಚಿಕಿತ್ಸಾ – ಸ್ವಾಸ್ಥ್ಯ ಕೇಂದ್ರ, ಜೇಸಿಐ ಶಂಕರಪುರ ಜಾಸ್ಮಿನ್, ಗಾಯತ್ರಿ ವೃಂದ ಬಂಟಕಲ್ಲು ಇದರ ಸಂಯುಕ್ತ ಆಶ್ರಯದಲ್ಲಿ ಸಾಲ್ಮರ ಕೃಷ್ಣವೇಣಿ ಆಯುರ್ವೇದ, ಚಿಕಿತ್ಸಾಲಯದಲ್ಲಿ ಏರ್ಪಡಿಸಿದ ಉಚಿತ ಆರೋಗ್ಯ ತಪಾಸಣಾ, ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.
ಹಿರಿಯ ಆಯುರ್ವೇದ ಸರ್ಜನ್ ಡಾ. ಸುಕೇಶ್ ಎ. ಮೂಡಬಿದ್ರೆ ಮಾತನಾಡಿದರು. ಸಾಲ್ಮರ ಗೋವಿಂದ ಭಟ್ ಫ್ಯಾಮಿಲಿ ಟ್ರಸ್ಟ್ ಶಂಕರಪುರ ಇದರ ಟ್ರಸ್ಟಿ ಹರಿದಾಸ್ ಭಟ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಜೇಸಿಐ ನಾಯಕರಾದ ನವೀನ್ ಅಮೀನ್ ಶಂಕರಪುರ, ಜೇಸಿಐ ಅಧ್ಯಕ್ಷ ರಾಜೇಶ್ ಆಚಾರ್ಯ, ಕಾರ್ಯದರ್ಶಿ ಭವ್ಯ ಸುವರ್ಣ, ಬಂಟಕಲ್ಲು ಗಾಯತ್ರಿ ವೃಂದದ ಅಧ್ಯಕ್ಷೆ ವಿದ್ಯಾ ಹರೀಶ್, ಕೃಷ್ಣವೇಣಿ ಆಯುರ್ವೇದ ಮತ್ತು ಆಶ್ರಯಧಾಮದ ಟ್ರಸ್ಟಿ ಪದ್ಮನಾಭ ಭಟ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ರಮೇಶ್ ಮಿತ್ತಾಂತಾಯ ವೇದಿಕೆಯಲ್ಲಿದ್ದರು.
ಮುಖ್ಯ ವೈದ್ಯಾಧಿಕಾರಿ ಡಾ.ಕೆ.ಲಕ್ಷ್ಮೀಶ ಉಪಾಧ್ಯ, ಶುಶ್ರೂಷಕಿ ಜ್ಯೋತಿ , ಶುಶ್ರೂಷಕಿ ನಾಗವೇಣಿ ಆರ್ ಶೆಟ್ಟಿ , ಡಾ. ಅನುಪಮಾ, ಭಾರತಿ, ಸರಸ್ವತಿ, ಅಭಿಷೇಕ್ ಶ್ರೀದೇವ್ ಮತ್ತಿತರರು ಉಪಸ್ಥಿತರಿದ್ದರು.


> **ತಪಾಸಣೆ ಮಾಡಿಸಿ**
> **ಕಾಯಿಲೆ ಬಂದಾಗ ಮಾತ್ರ ವೈದ್ಯರ ಕಾಣುವುದಲ್ಲ, ಆಗಾಗ ಆರೋಗ್ಯ ತಪಾಸಣೆ ಮಾಡುವುದೂ ಅಗತ್ಯ.**
> ● ಸುಕೇಶ್ ಎ. ಮೂಡಬಿದ್ರೆ

ಕೆಸಿಇಟಿ ಫಲಿತಾಂಶ: ಕಾರ್ಕಳ ಕ್ರಿಯೇಟಿವ್ ಕಾಲೇಜ್ ವಿದ್ಯಾರ್ಥಿಗಳ ಉತ್ತಮ ಸಾಧನೆ



ಕಾರ್ಕಳ: ಕೆ.ಸಿ.ಇ.ಟಿ ಪರೀಕ್ಷೆಯಲ್ಲಿ ಪ್ರಸ್ತುತ ಇಂಜಿನಿಯರಿಂಗ್, ಕೃಷಿವಿಜ್ಞಾನ, ಪಶು ವೈದ್ಯಕೀಯ ಸೇರಿದಂತೆ ಹಲವು ಕೋರ್ಸ್‌ಗಳಿಗೆ ಸೇರಲು ನಡೆಯುವ ರಾಜ್ಯಮಟ್ಟದ ಪ್ರವೇಶ ಪರೀಕ್ಷೆಯಲ್ಲಿ, ಇಂಜಿನಿಯರಿಂಗ್ ವಿಭಾಗದಲ್ಲಿ ನಾಗದೇವ್ ಎಂ.ಜಿ. 28ನೇ ರ್‍ಯಾಂಕ್ ಪಡೆದುಕೊಂಡು ಸಾಧನೆಗೈದಿದ್ದಾರೆ.
ವಿದ್ಯಾರ್ಥಿಗಳಾದ ಸಂವಿತ್ ಅಮಿತ್ 55, ಧ್ರುವ ವಿ.ಬಿ. 71, ತೇಜಸ್ ಆರ್.ಬಿ. 82, ನಮಿತ್ ಕೆ. ಹೆಗಡೆ 199, ತೇಜಸ್ ಹೆಗಡೆ ಎಚ್.ಡಿ. 236, ಸುಕ್ಷಿತ್ ಗಿರೀಶ್ ಗೌಡ 238, ನಿನಾದ್ ರಾಜೇಶ್ ನಾಯ್ಕ್ 395, ಪ್ರಣಮ್ಯಾ ಭಟ್ 490, ಲೇಖನ್ ಕಾರಿಯಪ್ಪ 493, ಧನುಷ್ ಎ. 496 ರ್‍ಯಾಂಕ್ ಗಳಿಸಿದ್ದಾರೆ. ಇಂಜಿನಿಯರಿಂಗ್ ವಿಭಾಗದಲ್ಲಿ 22ವಿದ್ಯಾರ್ಥಿಗಳು 1000 ರ್‍ಯಾಂಕ್‌ನೊಳಗೆ, 43 ವಿದ್ಯಾರ್ಥಿಗಳು 2000 ರ್‍ಯಾಂಕ್‌ನೊಳಗೆ ಇದ್ದು ಕಾಲೇಜಿಗೆ ಕೀರ್ತಿತಂದಿದ್ದಾರೆ.
ಕೃಷಿ ವಿಭಾಗದಲ್ಲಿ ಧ್ರುವ ವಿ.ಬಿ. 11, ತೇಜಸ್ ಆರ್.ಬಿ. 17, ತೇಜಸ್ ಹೆಗಡೆ ಎಚ್.ಡಿ. 53, ಲೇಖನ್ ಕಾರಿಯಪ್ಪ 69, ಪ್ರಣಮ್ಯಾ ಭಟ್ 90, ಮೋಕ್ಷ ವಿ.ಎಂ. 108, ಶ್ರಾವ್ಯ ಬಾಲಕೃಷ್ಣ 148, ಬಗನಾಲ್ ಆಶ್ರೀತ್ ನಂದನ್ 205, ನಟರಾಜ್ 261,ಆರ್ಯ ವಿ. 269, ಕೆವಿನ್ ರಾಘವೇಂದ್ರ 303, ಸೃಜನಾ ಎಸ್. 345, ತರುಣ್ ಸಾಗರ್ 369, ಅನುಷ್ಕಾ ಜನಾರ್ 436, ಹಿತರ್ಶ 443 ರ್‍ಯಾಂಕ್ ಪಡೆದಿದ್ದಾರೆ.
ಪಶು ವೈದ್ಯಕೀಯದಲ್ಲಿ ತೇಜಸ್ ಆರ್.ಬಿ. 102, ಧ್ರುವ ವಿ.ಬಿ. 120, ಮೋಕ್ಷ ವಿ.ಎಂ. 197, ವಿ.ಆರ್. ಗಣೇಶ್ 230, ಲೇಖನ್ ಕಾರಿಯಪ್ಪ 248, ರಿಶಿತ್ ಎಂ. ಶೆಟ್ಟಿ 441 ರ್‍ಯಾಂಕ್ ಪಡೆದಿದ್ದಾರೆ. ನರ್ಸಿಂಗ್ ವಿಭಾಗದಲ್ಲಿ ತೇಜಸ್ ಆರ್.ಬಿ. 102, ಧ್ರುವ ವಿ.ಬಿ. 121, ಮೋಕ್ಷ ವಿ.ಎಂ. 198, ವಿ.ಆರ್. ಗಣೇಶ್ 231, ಲೇಖನ್ ಕಾರಿಯಪ್ಪ 249, ರಿಶಿತ್ ಎಂ. ಶೆಟ್ಟಿ 442 ರ್‍ಯಾಂಕ್ ಪಡೆದಿದ್ದಾರೆ. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರಿಯೇಟಿವ್ ಕಾಲೇಜಿನ 30 ಮಂದಿ 100 ರ್‍ಯಾಂಕ್‌ನೊಳಗೆ, 290 ಮಂದಿ 1000 ರ್‍ಯಾಂಕ್‌ನೊಳಗೆ, 521 ವಿದ್ಯಾರ್ಥಿಗಳು 2000 ರ್‍ಯಾಂಕ್‌ನೊಳಗೆ ಸ್ಥಾನಗಳಿಸಿದ್ದಾರೆ.

ಯುಜಿಸಿಇಟಿ ಫಲಿತಾಂಶ: ಕುಂದಾಪುರ ಶ್ರೀ ವೆಂಕಟರಮಣ ಕಾಲೇಜು ಸಾಧನೆ



ಕುಂದಾಪುರ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಯುಜಿಸಿಇಟಿ)ಯಲ್ಲಿ ಕುಂದಾಪುರ ಶ್ರೀ ವೆಂಕಟರಮಣ ಪ.ಪೂ. ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.
ಭವಿಷ್ ಜಯರಾಜ್ ಹೆಗ್ಡೆ 2133 (ಇಂಜಿನಿಯರಿಂಗ್), ವಸಂತ್ ಭಟ್-2313 (ಇಂಜಿನಿಯರಿಂಗ್), ಸೃಜನ್ ಎಸ್.ಪೂಜಾರಿ -2513 (ಇಂಜಿನಿಯರಿಂಗ್), 1015 (ಬಿ.ಎಸ್ಸಿ ಅಗ್ರಿಕಲ್ಚರ್), ತರುಣ್ ಎನ್. ಶೆಟ್ಟಿ - 2568 (ಇಂಜಿನಿಯರಿಂಗ್), ಸಮರ್ಥಿತ್ ಸುಧಾಕರ್ -2798 (ಇಂಜಿನಿಯರಿಂಗ್), ಅಕ್ಷಯ್ ಅಶ್ವಿನ್ ಪೈ - 3773 (ಇಂಜಿನಿಯರಿಂಗ್), ವೈಷ್ಣವಿ - 4136 (ಇಂಜಿನಿಯರಿಂಗ್) 1491 (ಬಿ. ಎಸ್ಸಿ ಅಗ್ರಿಕಲ್ಚರ್), ಧನ್ವಿ ಪೈ -4393 (ಇಂಜಿನಿಯರಿಂಗ್), ಕಿಶನ್ - 4603 (ಇಂಜಿನಿಯರಿಂಗ್), ತರುಣ್ ಪ್ರಭು -4856 (ಇಂಜಿನಿಯರಿಂಗ್), ಇಂಚರ ಸಿ. ಪೂಜಾರಿ - 5594 (ಇಂಜಿನಿಯರಿಂಗ್), ಶ್ರೀರಕ್ಷಾ ಶೆಣೈ -5858 (ಇಂಜಿನಿಯರಿಂಗ್), ಪ್ರತಿಕ್ಷಿತಾ -6020 (ಇಂಜಿನಿಯರಿಂಗ್), ವೈಭವ್ ಮೆಲಡಿ 6145 (ಇಂಜಿನಿಯರಿಂಗ್), ಪ್ರಥಮ್ ಕಾಮತ್ - 6189 (ಇಂಜಿನಿಯರಿಂಗ್), ಸಾತ್ವಿಕ್ ಎಸ್. ಪೂಜಾರಿ -6725 (ಇಂಜಿನಿಯರಿಂಗ್), ಕೌಸ್ತುಭಾ 6913 (ಇಂಜಿನಿಯರಿಂಗ್), 305 (ಡಿ. ಫಾರ್ಮ್), ದೀಕ್ಷಾ ವಿ. ಕಾಮತ್ -7149 (ಇಂಜಿನಿಯರಿಂಗ್) 1268 (ಡಿ. ಫಾರ್ಮ್), ಅನಘಾ ಕಾರಂತ್ -7487 (ಇಂಜಿನಿಯರಿಂಗ್), ವಿಭಾ -8133 (ಇಂಜಿನಿಯರಿಂಗ್), ಪ್ರವೀಣಾ ಪೈ -8417 (ಇಂಜಿನಿಯರಿಂಗ್), ಕ್ಷಿಪಾಲಿ -8760 (ಇಂಜಿನಿಯರಿಂಗ್), ಶಾಂಭವಿ ದೇವಾಡಿಗ - 9962 (ಇಂಜಿನಿಯರಿಂಗ್) ಅತ್ಯುತ್ತಮ ರ್‍ಯಾಂಕ್‌ನ್ನು ಪಡೆದುಕೊಂಡಿದ್ದಾರೆ.
ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಗಳು ಅಭಿನಂದನೆ ಸಲ್ಲಿಸಿದ್ದಾರೆ.

ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಬ್ಯಾಂಕಿಂಗ್ ಸೇವೆ ಮಾಹಿತಿ ಕಾರ್ಯಾಗಾರ



ಕುಂದಾಪುರ: ಬ್ಯಾಂಕಿಂಗ್ ಕ್ಷೇತ್ರದಲ್ಲಿ ಏ.1 ರಿಂದ ಆಗಿರುವ ಬದಲಾವಣೆ, ಪರಿಷ್ಕರಣೆ ಬಗ್ಗೆ ವಿದ್ಯಾರ್ಥಿಗಳು ಅರಿತು ಕೊಳ್ಳಬೇಕಾದುದು ಬಹಳ ಮುಖ್ಯ. ಡಿಜಿಟಲ್ ಬ್ಯಾಂಕಿಂಗ್ ಮತ್ತು ಆಧುನಿಕ ಬ್ಯಾಂಕ್ ಸೇವೆಗಳು ಜನ ಜೀವನದಲ್ಲಿ ಮುಂದೆ ಬಹಳ ಪ್ರಾಮುಖ್ಯತೆ ಪಡೆಯುತ್ತದೆ ಎಂದು ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಡೆಪ್ಯೂಟಿ ಮೆನೇಜರ್, ಕಾನೂನು ತಜ್ಞ ವಿ. ಮೋಹನ್ ರಾವ್ ಹೇಳಿದ್ದಾರೆ.
ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಆರ್. ಎನ್. ಶೆಟ್ಟಿ ಸಭಾಂಗಣದಲ್ಲಿ ನಡೆದ ನೂತನ ಬ್ಯಾಂಕಿಂಗ್ ಸೇವೆ ಬಗ್ಗೆ ವಿದ್ಯಾರ್ಥಿಗಳಿಗೆ ಅವರು ಮಾಹಿತಿ ನೀಡಿ ಮಾತನಾಡಿದರು.
ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್ ಬಗ್ಗೆ, ಈ ಕಾರ್ಡ್‌ಗಳನ್ನು ಪಡೆಯುವ ಬಗ್ಗೆ ಉಪಯೋಗಿಸುವ ಬಗ್ಗೆ ಮಾಹಿತಿ ನೀಡಿ, ಓಇಈಖಿ, ಖಿಖಿಉಖಿ ಸೇವೆ ಬಗ್ಗೆಯೂ ವಿವರಿಸಿದ ಅವರು, ಡಿಜಿಟಲ್ ಸೇವಿಂಗ್ಸ್ ಬ್ಯಾಂಕ್ ಅಕೌಂಟ್, ಡಿಜಿಟಲ್ ಲೋನ್ ಅಕೌಂಟ್ ಬಗ್ಗೆಯೂ ಅರಿವು ಮೂಡಿಸಿದರು.

ಒಟಿಪಿ ವ್ಯವಸ್ಥೆ, ಆಧಾರ್ ಮಾಹಿತಿ

ಬ್ಯಾಂಕಿಂಗ್ ಸೇವೆ ಬಗ್ಗೆ ಸ್ಕ್ರೀನ್‌ಶಾಟ್ ಪಡೆಯುವುದು, ರೆಕಾರ್ಡಿಂಗ್‌ಮಾಡುವುದು, ಬ್ಯಾಂಕಿಂಗ್ ಆ್ಯಪ್‌ಉಪಯೋಗಿಸುವುದು, ಡುಪ್ಲಿಕೇಟ್ ಬ್ಯಾಂಕಿಂಗ್ ಆ್ಯಪ್‌ಗಳ ಬಳಕೆ, ಒಟಿಪಿ ವ್ಯವಸ್ಥೆ, ಆಧಾರ್ ಮತ್ತು ಇತರ ಮಾಹಿತಿಗಳು, ಎಟಿಎಂ ಹಾಗೂ ಯುಪಿಐ ಸೌಲಭ್ಯ ಬಳಕೆ ಬಗ್ಗೆ ತಿಳುವಳಿಕೆ, ಹತ್ತು ಲಕ್ಷಕ್ಕೂ ಹೆಚ್ಚು ಮೊತ್ತ ಠೇವಣಿ ಬಗ್ಗೆ ಆದಾಯ ತೆರಿಗೆ ನೀಡಬೇಕಾದ ಮಾಹಿತಿ ಮುಂತಾದ ವಿಚಾರಗಳ ಬಗ್ಗೆ ತಿಳಿಸಿದರು.
ಕಾಮರ್ಸ್ ವಿಭಾಗದ ಮುಖ್ಯಸ್ಥ ಅರುಣ್ ಎ. ಎಸ್. ಸ್ವಾಗತಿಸಿದರು. ಕಾಮರ್ಸ್ ಅಸೋಸಿಯೇಶನ್ ಕೋ-ಆರ್ಡಿನೇಟ್ ಮಮತಾ ಅತಿಥಿಯನ್ನು ಪರಿಚಯಿಸಿದರು. ಕಾರ್ಯಕ್ರಮ ಸಂಯೋಜಕ ಗಣೇಶ್ ಕುಮಾರ್ ವಂದಿಸಿದರು.

ಕಾಪು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸ್ನೇಹ ಸಂಗಮ 2026 ಸಮಾರಂಭ



ಪಡುಬಿದ್ರಿ : ಆಳ ಮತ್ತು ವಿಸ್ತಾರತೆಯೊಂದಿಗೆ ಕವಿ ಮತ್ತು ರವಿ ಇಬ್ಬರೂ ಕಾಣದ್ದನ್ನು ಪತ್ರಕರ್ತರು ಕಾಣುತ್ತಿದ್ದಾರೆ. ಹಾಗಾಗಿ ಅತ್ಯಂತ ಗೌರವ ಮತ್ತು ಘನತೆಯ ಸೇವೆ ಪತ್ರಕರ್ತರದ್ದು ಎಂದು ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಹೇಳಿದ್ದಾರೆ.
ಅವರು ಶನಿವಾರ ಪಡುಬಿದ್ರಿ ವ್ಯವಸಾಯಿಕ ಸಹಕಾರಿ ಸೊಸೈಟಿ ಸಭಾಂಗಣದಲ್ಲಿ ಕಾಪು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸ್ನೇಹ ಸಂಗಮ -2026 ಸಮಾರಂಭ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಪಿಯುಸಿಯಲ್ಲಿ ಉಡುಪಿ ಜಿಲ್ಲೆ ರಾಜ್ಯದಲ್ಲಿ ನಂ.1. ಎಸ್ಸೆಸ್ಸೆಲ್ಸಿಯಲ್ಲಿ ನಂ.2 ಆಗಿದೆ. ಆದರೆ ದುರದೃಷ್ಟವಶಾತ್ ಮಾದಕ ವಸ್ತು ಸೇವನೆಯಲ್ಲಿ ನಂ. 3 ಆಗಿರುವುದು ಖೇದಕರ. ಕಾಲೇಜು ಕ್ಯಾಂಪಸ್‌ನಲ್ಲಿ ಹೆಚ್ಚು ಹರಿದಾಡುತ್ತಿರುವುದು ಚಿಂತನೆ ಮಾಡಬೇಕಾದ ವಿಷಯವಾಗಿದೆ ಎಂದರು.
ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ಮಾತನಾಡಿ, ನಮಗೆ ಎಲ್ಲವನ್ನೂ ಕೊಟ್ಟಿರುವ ಪ್ರಕೃತಿ ಆದರಮೇಲಾಗುತ್ತಿರುವಪ್ರಹಾರದಿಂದ ಮುನಿಯುತ್ತಿರುವ ಘಟನೆಗಳು ಹೆಚ್ಚುತ್ತಿದೆ. ಆ ನಿಟ್ಟಿನಲ್ಲಿ ಮನುಷ್ಯ ತಾನು ಬದುಕುವ ಜೊತೆಗೆ ಇತರೇ ಜೀವಿಗಳು ಪ್ರಕೃತಿಯೊಡನೆ ಸಹ್ಯ ಜೀವನ ನಡೆಸುವಂತೆ ಮನುಷ್ಯರ ಕಾರ್ಯಚಟುವಟಿಕೆ ನಡೆಯಬೇಕಿದೆ ಎಂದರು.
ಸದಸ್ಯರ ಪ್ರತಿಭಾನ್ವಿತ ಮಕ್ಕಳಾದ ಎಸ್ಸೆಸ್ಸೆಲ್ಸಿ ಸಾಧಕರಾದ ಅನಿಶಾ ಆಚಾರ್ಯ ಉಚ್ಚಿಲ, ಎಚ್. ಪವನ್, ಪಿಯುಸಿ ಸಾಧಕ ಯಶಸ್ ಪಿ. ಸುವರ್ಣ, ಮಾಜಿ ಅಧ್ಯಕ್ಷ ಹರೀಶ್ ಹೆಜಮಾಡಿ ದಂಪತಿಯನ್ನು ಸನ್ಮಾನಿಸಲಾಯಿತು.
ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಜಿ. ಕುರ್ಯ, ಪ್ರಧಾನ ಕಾರ್ಯದರ್ಶಿ ನಜೀರ್ ಪೊಲ್ಯ, ಸುರೇಶ್ ಎರ್ಮಾಳು, ಸಂತೋಷ್ ನಾಯ್ಕ್ ಇದ್ದರು. ಕಾಪು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಬ್ದುಲ್ ಹಮೀದ್ ಸ್ವಾಗತಿಸಿ, ರಾಕೇಶ್ ಕುಂಜೂರು ಸನ್ಮಾನ ಪತ್ರ ವಾಚಿಸಿದರು. ಪುಂಡಲೀಕ ಮರಾಠೆ ವಂದಿಸಿ, ರಾಮಚಂದ್ರ ಆಚಾರ್ಯ ನಿರೂಪಿಸಿದರು.



ಕೊಲ್ಲೂರು ವ್ಯವಸಾಯ ಸೇವಾ ಸಹಕಾರಿ ಸಂಘದ ನೂತನ ಮುಖ್ಯ ಕಾರ್ಯನಿರ್ವಾಣಾಧಿಕಾರಿಯಾಗಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ವಲಯ ಮೇಲ್ವಿಚಾರಕ ಶಿವರಾಂ ಪೂಜಾರಿ ಯಾಡ್ತರೆ ಜವಾಬ್ದಾರಿ ವಹಿಸಿಕೊಂಡರು. ಈ ಮೊದಲಿನ ಮುಖ್ಯ ಕಾರ್ಯ ನಿರ್ವಣಾಧಿಕಾರಿ ಗಣೇಶ್ ಶ್ಯಾನುಭೋಗ್ ನಿವೃತ್ತಿ ಹೊಂದಿದ್ದು ಹೊಸ ಸಿಇಓಗೆ ಅಧಿಕಾರ ಹಸ್ತಾಂತರಿಸಿದರು. ಈ ಹಿಂದೆ ಶಿವರಾಂ ಪೂಜಾರಿ ಅವರು 10 ವರ್ಷಗಳ ಕಾಲ ಮುಖ್ಯ ಕಾರ್ಯನಿರ್ವಾಣಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಸಂಘವನ್ನು ಯಶಸ್ವಿಯಾಗಿ ಮುನ್ನಡೆಸಿದ್ದರು. ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಉಪಸ್ಥಿತರಿದ್ದರು.

ಪಂಚವರ್ಣ ಸಂಘಟನೆ ' ಹಸಿರು ಹೆಜ್ಜೆ ಹಸಿರು ಉಸಿರಿನ ಹೆಜ್ಜೆಯ ಪಥ' 304ನೇ ಭಾನುವಾರದ ಪರಿಸರಸ್ನೇಹಿ ಅಭಿಯಾನಕ್ಕೆ ಚಾಲನೆ

'ಹಸಿರು ಅಭಿಯಾನ' ಕಾರ್ಯಕ್ರಮ ಪ್ರತಿ ಭಾಗದಲ್ಲೂ ನಡೆಯಲಿ: ಖುಷಿರಾಜ್ ಸಾಸ್ತಾನ

ಕೋಟ: ಪ್ರಸ್ತುತ ತಾಪಮಾನಕ್ಕೆ ಇಡೀ ಮನುಕುಲ ಕಂಗೆಟ್ಟು ಕೂರುವಂತಾಗಿದೆ ಇದಕ್ಕೆ ಕಾರಣಿಕರ್ತರು ನಾವುಗಳೇ, ಏಕೆಂದರೆ ಕಾಡು ಕಡಿದು ನಾಡು ಮಾಡುವ ತವಕದಲ್ಲಿ ಹಸಿರನ್ನೇ ಮರೆತುಬಿಟ್ಟದ್ದೇವೆ ಈ ದಿಸೆಯಲ್ಲಿ ಪ್ರತಿ ಭಾಗದಲ್ಲೂ ಹಸಿರು ಅಭಿಯಾನಗಳು ರೂಪುಗೊಳ್ಳಬೇಕು ತನ್ಮೂಲಕ ವಾತಾವರಣ ವೈಪರೀತ್ಯ ತಡೆಯುವ ಕಾರ್ಯ ಮಾಡಬೇಕಿದೆ ಎಂದು ಸಾಮಾಜಿಕ ಚಿಂತಕ ಖುಷಿರಾಜ್ ಸಾಸ್ತಾನ ನುಡಿದರು.
ಪರಿಸರಪ್ರೇಮಿ ಕೊರವಡಿ ಶ್ವೇತ ಶ್ರೀನಿಧಿ ಉಪಾಧ್ಯಾಯರ ಮನೆಯಂಗಳದಿ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ನೇತೃತ್ವದಲ್ಲಿ ವೇತ್ರಿ ಅನ್ನಪೂರ್ಣ ನರ್ಸರಿ, ಗೀತಾನಂದ ಫೌಂಡೇಶನ್ ಮಣೂರು, ಸುವರ್ಣ ಎಂಟರ್‌ಪ್ರೈಸಸ್ ಸಹಯೋಗದೊಂದಿಗೆ



ಹಸಿರು ಹೆಜ್ಜೆ ಹಸಿರು ಉಸಿರಿನ ಹೆಜ್ಜೆಯ ಪಥ, ಪಂಚವರ್ಣದ ಪ್ರಕೃತಿ ರಥ ಶೀರ್ಷಿಕೆಯಡಿ 304ನೇ ಭಾನುವಾರದ ಪರಿಸರಸ್ನೇಹಿ ಅಭಿಯಾನಕ್ಕೆ ಚಾಲನೆ ನೀಡಿ ಪಂಚವರ್ಣದ ಪ್ರಕೃತಿ ಆರಾಧನೆ ಅತ್ಯಂತ ಮುಕ್ತ ಕಂಠದಿಂದ ಶ್ಲಾಘಿಸಿದರು.
ಗಿಡ ನೆಡುವ ಕಾರ್ಯಕ್ರಮವನ್ನು ಗ್ರಾಮದ ಹಿರಿಯ ಶತಾಯುಷಿ ನಿವೃತ್ತ ಶಿಕ್ಷಕ ವಿಷ್ಣುಮೂರ್ತಿ ಹತ್ವಾರ್ ಗಿಡ ನಡುವ ಮೂಲಕ ಚಾಲನೆ ನೀಡಿದರು.

ಪ್ರತಿಜ್ಞಾವಿಧಿ ಭೋದನೆ

ಮನೆ ಮನೆಗೆ ಪಾರಿಜಾತ ಮತ್ತು ಲಕ್ಷ್ಮಣಫಲ ಎಂಬ ಧ್ಯೇಯದೊಂದಿಗೆ ಆರಂಭಗೊಂಡ ಈ ಅಭಿಯಾನದಲ್ಲಿ ಪರಿಸರ ಜಾಗೃತಿಯ ಬಿತ್ತಿಪತ್ರವನ್ನು ಖುಷಿರಾಜ್ ಸಾಸ್ತಾನ ಬಿಡುಗಡೆಗೊಳಿಸಿದರು.ಅಲ್ಲದೆ ಪಂಚವರ್ಣದ ಸದಸ್ಯ ಮಹೇಶ್ ಬೆಳಗಾವಿ ಪ್ರತಿಜ್ಞಾವಿಧಿ ಭೋಧಿಸಿ ನೆರಿದ್ದ ಮಕ್ಕಳಿಗೆ ಪರಿಸರ ಜಾಗೃತಿ ಸಂದೇಶ ನೀಡಿದರು.
ಅಧ್ಯಕ್ಷತೆಯನ್ನು ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಕೆ.ಮನೋಹರ್ ಪೂಜಾರಿ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ನಿವೃತ್ತ ಶಿಕ್ಷಕ ರಾಮಚಂದ್ರ ಉಪಾಧ್ಯಾಯ ಕೊರವಡಿ, ಕಸ್ತೂರಿ ಆರ್ ಉಪಾಧ್ಯಾಯ, ರೋಟರಿ ಸಮುದಾಯ ದಳ ಕೊರವಡಿ ಕಾರ್ಯದರ್ಶಿ ಗಣೇಶ್ ಭಟ್ , ಪಂಚವರ್ಣ ಯುವಕ ಮಂಡಲದ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಗ್ರಾಮದ ಪ್ರಮುಖರಾದ ನಾರಾಯಣ ಹೆಬ್ಬಾರ್, ಉಪಸ್ಥಿತರಿದ್ದರು. ನಿ.ಪೂ. ಅಧ್ಯಕ್ಷ ಅಜಿತ್ ಆಚಾರ್ ಸ್ವಾಗತಿಸಿದರು. ಮಹಿಳಾ ಮಂಡಲ ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್ ನಿರೂಪಿಸಿದರು.ಸದಸ್ಯರಾದ ಪ್ರಭಾಕರ್ ಮಣೂರು ವಂದಿಸಿದರು. ರವೀಂದ್ರ ಕೋಟ ಕಾರ್ಯಕ್ರಮ ಸಂಯೋಜಿಸಿದರು.
ಕಾರ್ಯಕ್ರಮಕ್ಕೆ ಸಮುದ್ಯತಾ ಗ್ರೂಪ್ಸ್ ಕೋಟ,ಕೋಟ ಸಿ ಎ ಬ್ಯಾಂಕ್, ಮಣೂರು ಫ್ರೆಂಡ್ಸ್, ಹಂದಟ್ಟು ಮಹಿಳಾ ಬಳಗ ಕೋಟ,ಗೆಳೆಯರ ಬಳಗ ಕಾರ್ಕಡ,ಜೆಸಿಐ ಕೋಟ ಸಿನಿಯರ್ ಲಿಜನ್,ಕೋಟ , ಕೋಟತಟ್ಟು ಗ್ರಾ.ಪಂ., ಸಾಲಿಗ್ರಾಮ ಪ.ಪಂ., ಕೋಡಿ, ತೆಕ್ಕಟ್ಟೆ ಪಂಚಾಯತ್,ಪಾಂಡೇಶ್ವರ, ಐರೋಡಿ ಪಂಚಾಯತ್ ಸಹಕಾರ ನೀಡಿತು.

> **ಪರಿಸರಪ್ರೇಮಿ ಉಪಾಧಾಯರ ಮನೆತನಕ್ಕೆ ಸರ್ಮಪಣೆ**
> **ಪಂಚವರ್ಣದ ಹಸಿರು ಹೆಜ್ಜೆ ಮೂರು ತಿಂಗಳುಗಳ ಕಾಲ ಕುಂದಾಪುರ , ಬ್ರಹ್ಮಾವರ ತಾಲೂಕು ವ್ಯಾಪ್ತಿಯಲ್ಲಿ ಆಯೋಜನೆಗೊಳ್ಳಲಿದ್ದು ಈ ಹಿನ್ನಲೆಯಲ್ಲಿ ಸೋಮವಾರ ಹುಟ್ಟುಹಬ್ಬ ಆಚರಿಸಿಕೊಳ್ಳುವ ಪರಿಸರಪ್ರೇಮಿ ಶ್ವೇತಾ ಶ್ರೀನಿಧಿ ಉಪಾಧ್ಯಾಯರ ಪುತ್ರಿ ಸಿರಿ ಶ್ರೀ ಉಪಾಧ್ಯಾಯರಿಗೆ ಪಂಚವರ್ಣ ಸಂಘಟನೆ ಸಮರ್ಪಿಸಿಕೊಂಡಿತು. ಕಾರ್ಯಕ್ರಮದಲ್ಲಿ ಮನೆ ಮನೆಗೆ ತೆರಳಿ ಪಾರಿಜಾತ ಹಾಗೂ ಲಕ್ಷ್ಮಣಫಲ ಗಿಡವನ್ನು ನೆಟ್ಟು ಹುಟ್ಟುಹಬ್ಬವನ್ನು ಅರ್ಥಪೂರ್ಣಗೊಳಿಸಲಾಯಿತು.**